ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ

ಭಾನುವಾರ, 22 ಫೆಬ್ರವರಿ 2026

ಸಂಪುಟ 15, ಸಂಚಿಕೆ 335, ಪುಟಗಳು 14

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/ 2011/64413

hosadigantha.com

epaper.hosadigantha.com

Hosadigantha Digital



ಅಜೇಯ ಭಾರತಕ್ಕೆ ದ.ಆಫ್ರಿಕಾ ಸವಾಲು

ಟಿ 20 ವಿಶ್ವಕಪ್ ಸೂಪರ್ 8 ಹಂತ

ಪಂದ್ಯ ಆರಂಭ: ಸಂಜೆ 7 ಗಂಟೆ

| ೧೧



ಭಾರತ-ಬ್ರೆಜಿಲ್ ವ್ಯಾಪಾರ ಒಪ್ಪಂದ ಮತ್ತೊಂದು ಹಂತಕ್ಕೆ

| ೦೭

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಅಶ್ವಿನಿ

ದಿನದ ಮಾತು

ಕಾಲವೇ ನಮ್ಮನ್ನು ದುಡಿಸುವ ದೈತ್ಯ. ಶಿಷ್ಯನಾದವನು ಎಂದೂ ಉಪಾಧ್ಯಾಯನಾಗಲಾರ.

▲ ಲೋಕೋಕ್ತಿ

ಮಗುವನ್ನು ಮಲಗಿಸುವುದೆಂದರೆ...

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಆತ್ಮಾಹುತಿ ಬಾಂಬ್ ದಾಳಿಗೆ ಲಷ್ಕರೆ, ಜೈಶ್ ಸಿದ್ಧತೆ: ಶಂಕೆ

• **ಹೊಸದಿಲ್ಲಿ:** ಪಾಕ್ ಬೆಂಬಲಿತ ಭಯೋತ್ಪಾದಕ ಸಂಘಟನೆಗಳಾದ ಲಷ್ಕರ್ ಮತ್ತು ಜೈಶ್ ಮೊಹಮ್ಮದ್ ಉಗ್ರರು ಕಾಶಿ ವಿಶ್ವನಾಥ ದೇಗುಲ, ಅಕ್ಷರಧಾಮಸಹಿತ ದಿಲ್ಲಿ ಮತ್ತು ಉತ್ತರಪ್ರದೇಶಗಳ ಪ್ರಮುಖ ದೇಗುಲಗಳ ಮೇಲೆ ಐಇಡಿ ದಾಳಿ ಸಹಿತ ಆತ್ಮಾಹುತಿ ದಾಳಿ ನಡೆಸುವ ಸಂಭಾವ್ಯತೆ ಇದೆ. ಮಾರ್ಚ್-ಏಪ್ರಿಲ್‌ನಲ್ಲಿ ನಡೆವ, ಅಪಾರ ಭಕ್ತರು ಸೇರುವ ಹೋಳಿ, ರಾಮನವಮಿಯಂತಹ ಉತ್ಸವಗಳ ಸಂದರ್ಭದಲ್ಲೇ ಬಾಂಬ್ ದಾಳಿ ನಡೆಸುವ ಆತಂಕವಿದೆ ಎಂದು ಗುಪ್ತಚರ ಮೂಲಗಳು ಎಚ್ಚರಿಸಿವೆ.

• ಪುಟ ೭

ಭಾರತದಲ್ಲಿನ ವೀಸಾ ಸೇವೆ ಪುನರಾರಂಭಿಸಿದ ಬಾಂಗ್ಲಾ

• **ಹೊಸದಿಲ್ಲಿ:** ಪ್ರಮುಖ ರಾಜತಾಂತ್ರಿಕ ಬೆಳವಣಿಗೆಯೊಂದರಲ್ಲಿ, 2 ತಿಂಗಳ ನಿಷೇಧ ಕೊನೆಗೊಳಿಸಿ ಭಾರತದಲ್ಲಿನ ತನ್ನೆಲ್ಲಾ ವೀಸಾ ಸೇವೆಗಳನ್ನು ಬಾಂಗ್ಲಾದೇಶ ಪುನರಾರಂಭಿಸಿದೆ. ತಾರಿಕ್ ರೆಹಮಾನ್ ಅವರು ಅಧಿಕಾರ ಸ್ವೀಕರಿಸುತ್ತಲೇ ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಈ ನಿಲುವು ತಳೆದಿದೆ.

• ಪುಟ ೭

ಮಾರ್ಚ್ ಅಂತ್ಯಕ್ಕೆ ನಕ್ಸಲ್‌ವಾದ ಕೊನೆ

• ಪುಟ ೭

ರಾಮಲಲಾ ದರ್ಶನ ಪಡೆದ ಗಯಾನಾ ಉಪರಾಷ್ಟ್ರಪತಿ

• ಪುಟ ೭

ದಿಲ್ಲಿ ಘೋಷಣೆ ಅಂಗೀಕಾರ

• ಪುಟ ೭

ರಾಜ್ಯದೆಲ್ಲೆಡೆ ಬಿಜೆಪಿ ಪ್ರತಿಭಟನೆ

• ಪುಟ ೫



ರಾ.ಹೆದ್ದಾರಿಗಳಲ್ಲಿ ಜೇನು ಕಾರಿಡಾರ್

• ಪುಟ ೭

ಸುದ್ದಿ ಸಮಗ್ರ

ಜಾಗತಿಕವಾಗಿ ಶೇ.10, ಮತ್ತೆ ಶೇ.5 ಸುಂಕ ಹೇರಿಕೆ | 24ರಿಂದ ಜಾರಿ

ಸುಂಕ ಶೇ.15ಕ್ಕೇರಿಕೆ!





ಭಾರತದ ಮೇಲೇನು ಪರಿಣಾಮ?

ಅಮೆರಿಕದ ಸುಪ್ರೀಂ ತೀರ್ಪು, ಸದ್ಯ ಭಾರತೀಯ ರಫ್ತುದಾರರಿಗೆ ಶೇ.3 ಸುಂಕ ರಿಯಾಯಿತಿ ಸಿಕ್ಕಂತಾಗಿದೆ. ಹಿಂದಿನ ಶೇ.18 ಸುಂಕವು ಶೇ.15ಕ್ಕೆ ಇಳಿಕೆಯಾಗಿದೆ. ಸುಪ್ರೀಂ ಕೋರ್ಟ್ ತೀರ್ಪು ಮತ್ತು ಈ ಅನಿರೀಕ್ಷಿತ ಬೆಳವಣಿಗೆಯು ಭಾರತೀಯ ರಫ್ತುದಾರರಲ್ಲಿ ತಾತ್ಕಾಲಿಕವಾಗಿ ನಿರಾಳ ಭಾವ ಮೂಡಿಸಿದೆ. ಆದರೂ ಜಾಗತಿಕ ಮಟ್ಟದಲ್ಲಿ ಟ್ರಂಪ್ ಸುಂಕ ವ್ಯವಸ್ಥೆ ಆರ್ಥಿಕ ಅಸ್ಥಿರತೆ ಸೃಷ್ಟಿಸುವ ಆತಂಕವಿದೆ.

• **ವಾಷಿಂಗ್ಟನ್:** ಸುಪ್ರೀಂಕೋರ್ಟ್‌ನ ತೀರ್ಪಿನಿಂದ ಅವಮಾನಿತರಾದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮತ್ತೆ ಜಾಗತಿಕವಾಗಿ ಸುಂಕ ಸಮರವನ್ನೇ ಶುರುಮಾಡಿದ್ದಾರೆ. ಶುಕ್ರವಾರ ರಾತ್ರಿ ಸುಪ್ರೀಂ ತೀರ್ಪಿನ ಬಳಿಕ ಶೇ.10 ಸುಂಕ ಘೋಷಣೆ ಮಾಡಿದ್ದ ಅವರು, ಶನಿವಾರ ರಾತ್ರಿ ಇದನ್ನು ಶೇ.15ಕ್ಕೆ ಏರಿಸಿ ಆಘಾತ ನೀಡಿದ್ದಾರೆ.

ಟ್ರಂಪ್ ಅವರ ಈ ಹೊಸ ಸುಂಕ ಫೆ.24ರಿಂದ ಜಾರಿಗೆ ಬರಲಿದ್ದು, ಭಾರತೀಯ ರಫ್ತಿನ ಮೇಲೆ ಹೇಗೆ ಪರಿಣಾಮ ಬೀರಲಿದೆ ಎಂಬ ಕುರಿತು ಅಧ್ಯಯನ ನಡೆಸುವುದಾಗಿ ಕೇಂದ್ರ ಸರ್ಕಾರ ಮೊದಲ ಪ್ರತಿಕ್ರಿಯೆ ನೀಡಿದೆ.

ಹಲವು ರಾಷ್ಟ್ರಗಳ ಮೇಲೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇರಿದ್ದ ಪ್ರತಿಸುಂಕ ಏಕಪಕ್ಷೀಯ ಮತ್ತು ಅಧ್ಯಕ್ಷ ಟ್ರಂಪ್ ಫೆಡರಲ್ ತೆರಿಗೆ ಕಾನೂನುಗಳನ್ನು ಉಲ್ಲಂಘಿಸಿರುವುದಾಗಿ ಸುಪ್ರೀಂ ಕೋರ್ಟ್ ನ್ಯಾಯಪೀಠ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿತ್ತು. ಇದರಿಂದ ಜಾಗತಿಕ ಸುಂಕ ಸಮರ ಆರಂಭಿಸಿದ್ದ ಟ್ರಂಪ್‌ಗೆ ತಮ್ಮ ದೇಶದ ನ್ಯಾಯಾಲಯದಲ್ಲೇ ಮುಖಭಂಗವಾಗಿದೆ.

ಮತ್ತೆ ಸುಂಕ ಏರಿಸಿದ ಟ್ರಂಪ್: ಸುಪ್ರೀಂ ಕೋರ್ಟ್‌ನ ಐತಿಹಾಸಿಕ ತೀರ್ಪು ಹಿನ್ನೆಲೆ ಶುಕ್ರವಾರ ತಡರಾತ್ರಿ ಅಧ್ಯಕ್ಷ ಟ್ರಂಪ್ ಹೊಸ ಜಾಗತಿಕ ತೆರಿಗೆ ದರಗಳನ್ನು ಘೋಷಿಸಿದ್ದಾರೆ. ತೆರಿಗೆ ಕಾಯ್ದೆ 1974ರ ಸೆಕ್ಷನ್ 122ರನ್ವಯ ಜಾಗತಿಕವಾಗಿ ಶೇ.10ರಷ್ಟು ಸುಂಕ ಹೇರುವುದಾಗಿ ಘೋಷಿಸಿದ್ದಾರೆ.

ನಾಚಿಕೆಗೇಡು ಎಂದ ಟ್ರಂಪ್: ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಬಲವಾದ ಖಂಡನೆ ವ್ಯಕ್ತಪಡಿಸಿದ ಅಧ್ಯಕ್ಷ ಟ್ರಂಪ್, ಇದೊಂದು ಅವಮಾನಕರ ಮತ್ತು ಮುಜುಗರಕ್ಕೀಡುಮಾಡುವಂತಹ ತೀರ್ಪು ಎಂದು ಹೇಳಿಕೊಂಡಿದ್ದಾರೆ.

➡ ಪುಟ ೪

ಸುಂಕ ಅಸ್ಥಿರತೆ (2025-26)

- ಏ.2, 2025: ಭಾರತೀಯ ರಫ್ತುಗಳ ಮೇಲೆ ಶೇ.26 ಸುಂಕ ಹೇರಿದ ಅಮೆರಿಕ (ಶೇ.10 ಸುಂಕ + ಶೇ.16 ಪ್ರತಿಸುಂಕ)
- ಏ.9, 2025: ಶೇ.16 ಪ್ರತಿಸುಂಕದಲ್ಲಿ 90 ದಿನಗಳ ವಿನಾಯಿತಿ, ಮುಂದುವರಿದ ಶೇ.10 ಸುಂಕ
- ಜು.31, 2025: ಭಾರತೀಯ ಸರಕುಗಳ ಮೇಲೆ ಶೇ.25 ಹೊಸ ಸುಂಕ ಹೇರಿದ ಅಮೆರಿಕ, ಆ.7ರಿಂದ ಜಾರಿ
- ಆ.6, 2025: ರಷ್ಯಾದಿಂದ ತೈಲ ಖರೀದಿ ಹಿನ್ನೆಲೆ ಭಾರತದ ಮೇಲೆ ಶೇ.25 ದಂಡ, ಒಟ್ಟು ಸುಂಕ ಶೇ.50ಕ್ಕೆ ಏರಿಕೆ
- ಫೆ.2, 2026: ಶೇ.25 ದಂಡ ರದ್ದು, ಸುಂಕ ಶೇ.18ಕ್ಕೆ ಇಳಿಕೆ
- ಫೆ.20, 2026: ಶೇ.3 ಇಳಿಕೆ. ಈಗ ಇರುವ ಸುಂಕ ಶೇ.15 ಮಾತ್ರ

ಎಲ್ಲವೂ ಗಮನದಲ್ಲಿದೆ: ಭಾರತ ಪ್ರತಿಕ್ರಿಯೆ

ತುರ್ತು ಅಧಿಕಾರ ಬಳಸಿ ಜಾಗತಿಕವಾಗಿ ಒಟ್ಟಾರೆ ತೆರಿಗೆ ಹೇರುವ ಯಾವುದೇ ಕಾನೂನುಬದ್ಧ ಅಧಿಕಾರ ಟ್ರಂಪ್ ಆಡಳಿತಕ್ಕಿಲ್ಲ. ವಿವಿಧ ಕಾರಣ ಮುಂದಿಟ್ಟು ಟ್ರಂಪ್ ಹೇರಿದ ತೆರಿಗೆ ಅಸಾಂವಿಧಾನಿಕವೆಂಬ ಅಮೆರಿಕದ ಸುಪ್ರೀಂಕೋರ್ಟ್ ತೀರ್ಪು ಮತ್ತು ಇದಕ್ಕೆ ಟ್ರಂಪ್ ಪ್ರತಿಕ್ರಿಯೆ ಸಹಿತ ಎಲ್ಲಾ ಬೆಳವಣಿಗೆಗಳನ್ನು ತಾನು ಗಮನಿಸುತ್ತಿರುವುದಾಗಿ ಭಾರತ ಸರಕಾರ ಪ್ರತಿಕ್ರಿಯಿಸಿದೆ. ಅಮೆರಿಕ ದಲ್ಲಿನ ಪ್ರಸ್ತುತ ವಿದ್ಯಮಾನಗಳು ಸೃಜಿಸಲಿರುವ ತೊಡಕುಗಳ ಪರಾಮರ್ಶೆಯಲ್ಲಿ ತಾನು ತೊಡಗಿರುವುದಾಗಿ ಕೇಂದ್ರ ಸರಕಾರ ಹೇಳಿದೆ.


➡ ಪುಟ ೪

ಜಾಗತಿಕ ಸುಂಕ ಶೇ.15ಕ್ಕೆ ನಿಗದಿ

ಶುಕ್ರವಾರ ತಡರಾತ್ರಿ, ಶೇ.10 ಜಾಗತಿಕ ಸುಂಕವನ್ನು ಘೋಷಿಸಿದ್ದ ಅಮೆರಿಕ ಅಧ್ಯಕ್ಷ ಟ್ರಂಪ್, ಶನಿವಾರ ಅದನ್ನು ಶೇ.15ಕ್ಕೆ ಹೆಚ್ಚಿಸಿದ್ದಾರೆ. ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪು ಅಮೆರಿಕ ವಿರೋಧಿ ಎಂದು ಟ್ರಂಪ್ ಕಿಡಿಕಾರಿದ್ದಾರೆ.

1000 ಮಂದಿಗೆ ಸಿಎಂರಿಂದ ನೇಮಕ ಪತ್ರ

ವೈದ್ಯ ಲೋಕದಲ್ಲಿರಲಿ ಮಾನವೀಯ ಮುಖ



• **ಬೆಂಗಳೂರು:** ವೈದ್ಯಕೀಯೇತರ ಸಿಬ್ಬಂದಿ ವೈದ್ಯರಷ್ಟೇ ಪ್ರಮುಖರು. ಆರೋಗ್ಯ ಕ್ಷೇತ್ರದ ಕೆಲಸ ಕಾರ್ಯಗಳಲ್ಲಿ ಜಾತಿ ಧರ್ಮಗಳ ಭೇದ ಮೀರಿ ಮಾನವೀಯತೆಯಿಂದ ಸೇವೆ ಸಲ್ಲಿಸುವುದು ಮುಖ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ವಸಂತನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಅಭಯಹಸ್ತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಹಾರ ಸುರಕ್ಷತೆ, ಔಷಧ ಆಡಳಿತದ ವೃಂದಗಳ ನೇಮಕಾತಿ ಆದೇಶಗಳ ವಿತರಣೆ ಕಾರ್ಯಕ್ರಮದಲ್ಲಿ 1000 ಜನರಿಗೆ ನೇಮಕಾತಿ ಆದೇಶಗಳನ್ನು ವಿತರಿಸಿ ಮಾತನಾಡಿದ ಅವರು, ಇದು ಕೇವಲ ವೃತ್ತಿಯಲ್ಲ, ಜೀವ ಉಳಿಸುವ, ರೋಗ ತಡೆಯುವ ಸಾರ್ಥಕ ಕಾರ್ಯವನ್ನೊಳಗೊಂಡಿದೆ ಎಂದರು.

➡ ಪುಟ ೪

> ನಮ್ಮ ಸರ್ಕಾರ 2ನೇ ಬಾರಿ ಅಧಿಕಾರಕ್ಕೆ ಬಂದ ನಂತರ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುತ್ತಿದೆ. 2.5 ಲಕ್ಷಕ್ಕೂ ಹೆಚ್ಚು ಹುದ್ದೆಗಳು ವಿವಿಧ ಇಲಾಖೆಗಳಲ್ಲಿ ಖಾಲಿಯಿದ್ದು, ಹಂತ ಹಂತವಾಗಿ ಭರ್ತಿ ಮಾಡಲಾಗುವುದು.
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರತ್ಯೇಕ ನೇಮಕಾತಿ ಮಂಡಳಿ ಚಿಂತನೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೇಮಕಾತಿಗಳಿಗೆ ಒಂದು ಪ್ರತ್ಯೇಕ ನೇಮಕಾತಿ ಮಂಡಳಿ ರಚನೆ ಮಾಡಲು ಯೋಜಿಸಿದ್ದು, ಮುಖ್ಯಮಂತ್ರಿಗಳಿಗೆ ಈ ಕುರಿತು ಮನವಿ ಸಲ್ಲಿಸಲಾಗಿದೆ. ನಿವೃತ್ತರಾದ ತಕ್ಷಣ ನೇಮಕಾತಿ ಪ್ರಕ್ರಿಯೆ ನಡೆದರೆ ಮಾನವ ಸಂಪನ್ಮೂಲದ ಕೊರತೆ ಉಂಟಾಗುವುದಿಲ್ಲ. ಇದರಿಂದ ಆರೋಗ್ಯ ಸೇವೆಗೆ ಮಾನವ ಸಂಪನ್ಮೂಲದ ಕೊರತೆ ತಡೆಯಲು ಸಹಾಯಕವಾಗಲಿದೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ನೇಪಾಳ ದಂಗೆ ಮಾದರಿ ದೊಡ್ಡ ಷಡ್ಯಂತ್ರ: ದಿಲ್ಲಿ ಪೊಲೀಸ್

ಪ್ರತಿಭಟನೆ; ಕೈಗೆ ಜೆನ್ ಝಿ ಸ್ಫೂರ್ತಿ

• **ಹೊಸದಿಲ್ಲಿ:** ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಯುವ ಕಾಂಗ್ರೆಸ್ (ಐವೈಸಿ) ಕಾರ್ಯಕರ್ತರ ಗುಂಪೊಂದು ನಡೆಸಿದ ಅರೆಬೆತ್ತಲೆ ಪ್ರತಿಭಟನೆ, ನೇಪಾಳ ಸರ್ಕಾರವನ್ನು ಕಿತ್ತೊಗೆದ ಜೆನ್ ಝಿ ದಂಗೆಯಿಂದ ಸ್ಫೂರ್ತಿಯಾಗಿತ್ತೆಂಬ ಆತಂಕಕಾರಿ ವಿಷಯ ಬೆಳಕಿಗೆ ಬಂದಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಇಮೇಜ್ ಹಾಳು ಮಾಡುವುದಕ್ಕಾಗಿ ಜೆನ್ ಝಿ ಮಾದರಿ ಪ್ರತಿಭಟನೆ ನಡೆಸಲು ಯುವ ಕಾಂಗ್ರೆಸ್ ಕಾರ್ಯಕರ್ತರ ಷಡ್ಯಂತ್ರ ಬಯಲಾಗಿದೆ. ನೇಪಾಳದ ಜೆನ್ ಝಿ ದಂಗೆಯಿಂದ ಸ್ಫೂರ್ತಿ ಪಡೆದು ಯುವ ಕಾಂಗ್ರೆಸ್ ಕಾರ್ಯಕರ್ತರು ಅರೆಬೆತ್ತಲೆ ಪ್ರತಿಭಟನೆ ನಡೆಸಿದ್ದರೆಂದು ಪಟಿಯಾಲಾ ಹೌಸ್ ಕೋರ್ಟ್‌ಗೆ ದಿಲ್ಲಿ ಪೊಲೀಸರು ತಿಳಿಸಿದ್ದಾರೆ.

ಊಹೆಗೂ ಮೀರಿದ ಷಡ್ಯಂತ್ರ: ಜಾಗತಿಕ ನಾಯಕರು ಮತ್ತು ತಂತ್ರಜ್ಞಾನ (ಟೆಕ್) ದೈತ್ಯರು ಭಾಗಿಯಾಗಿದ್ದ ಅಂತಾರಾಷ್ಟ್ರೀಯ ಮಟ್ಟದ ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆಯು ಊಹೆಗೂ ಮೀರಿದ ದೊಡ್ಡ ಷಡ್ಯಂತ್ರದ ಭಾಗವಾಗಿತ್ತೆಂದು ತಿಳಿದುಬಂದಿದೆ.

➡ ಪುಟ ೪



5 ದಿನಗಳ ಕಸ್ಟಡಿ ಸೇರಿದ ನಾಲ್ವರು

ದಿಲ್ಲಿಯ ಪಟಿಯಾಲಾ ಹೌಸ್ ನ್ಯಾಯಾಲಯವು ನಾಲ್ವರು ಪ್ರತಿಭಟನಾಕಾರರಿಗೆ ಜಾಮೀನು ನಿರಾಕರಿಸಿದ್ದು, ಆರೋಪಿಗಳನ್ನು 5 ದಿನಗಳ ಕಾಲ ದಿಲ್ಲಿ ಪೊಲೀಸರ ಕಸ್ಟಡಿಗೆ ಒಪ್ಪಿಸಿದೆ.

➡ ಪುಟ ೪

ಕೈ ನಡೆಗೆ ವಿಪಕ್ಷಗಳಿಂದಲೇ ಆಕ್ಷೇಪ • ಪುಟ ೭

ಶುಲ್ಕ, ಪೂರ್ವಾನುಮತಿ ಕಡ್ಡಾಯ: ಮುಜರಾಯಿ ಇಲಾಖೆ

ದೇಗುಲಗಳಲ್ಲಿ ವಿಡಿಯೋ ನಿರ್ಬಂಧ

• **ಬೆಂಗಳೂರು:** ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಾಲಯಗಳಲ್ಲಿ ಸಿನಿಮಾ, ಧಾರಾವಾಹಿ, ಸಾಕ್ಷ್ಯಚಿತ್ರ, ಸುದ್ದಿ ವಾಹಿನಿಗಳು ಹೀಗೆ ಯಾವುದೇ ತರಹದ ವಿಡಿಯೋ ರೆಕಾರ್ಡಿಂಗ್ ಮಾಡಲು ನಿರ್ಬಂಧವಿದ್ದು, ವಿಡಿಯೋ ಮಾಡಲೇಬೇಕೆಂದರೆ ಮುಜರಾಯಿ ಇಲಾಖೆ ನಿಗದಿಪಡಿಸಿದ ಶುಲ್ಕ ಹಾಗೂ ಪೂರ್ವಾನುಮತಿ ಪಡೆಯುವ ನಿಯಮವು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ.

ಈ ಬಗ್ಗೆ ಮಾತನಾಡಿದ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಮುಜರಾಯಿ ಅಧೀನದ ದೇವಾಲಯಗಳಲ್ಲಿ ಯಾವುದೇ ವಾಣಿಜ್ಯ ಉದ್ದೇಶಿತ ಚಿತ್ರೀಕರಣಕ್ಕೆ ಈಗಾಗಲೇ ನಿರ್ಬಂಧವಿದ್ದು, ನಿಗದಿತ ಶುಲ್ಕ ಹಾಗೂ ಪೂರ್ವಾನುಮತಿ ಪಡೆಯುವುದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ ಎಂದರು.

ದೇವಾಲಯಗಳಲ್ಲಿ ಚಿತ್ರೀಕರಣಕ್ಕೆ ಶುಲ್ಕ ಪಡೆಯುವುದು 2012ರಿಂದಲೂ ಜಾರಿಯಲ್ಲಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಮನಬಂದಂತೆ ರೀಲ್ಸ್, ಸಿನಿಮಾ, ಧಾರಾವಾಹಿಗಳ ಚಿತ್ರೀಕರಣ ಹೆಚ್ಚುತ್ತಿದೆ.

➡ ಪುಟ ೪



ಶುಲ್ಕ ಎಷ್ಟು ನಿಗದಿ

ಬೆಂಗಳೂರು ನಗರದ ದೇವಸ್ಥಾನಗಳಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ 15 ಸಾವಿರ ರೂ. ಹಾಗೂ ಇತರೆ ಪ್ರದೇಶಗಳ ದೇವಸ್ಥಾನಗಳಲ್ಲಿ 10 ಸಾವಿರ ರೂ.ಮತ್ತು ಧಾರಾವಾಹಿ/ ಸಾಕ್ಷ್ಯಚಿತ್ರ/ ವಾಣಿಜ್ಯ ಉದ್ದೇಶಗಳ ಚಿತ್ರೀಕರಣಕ್ಕೆ ದಿನಕ್ಕೆ 5 ಸಾವಿರ ರೂ.

➡ ಪುಟ ೪

ಶಾಸಕ ಚಂದ್ರು ಲೋಕಾ ಬಲೆಗೆ

• **ಗದಗ:** ಗುತ್ತಿಗೆದಾರನಿಂದ 5 ಲಕ್ಷ ರೂ.ಲಂಚ ಪಡೆಯುತ್ತಿದ್ದ ವೇಳೆ ಶಿರಹಟ್ಟಿ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಅವರ ಇಬ್ಬರು ಆಪ್ತ ಸಹಾಯಕರು ಶನಿವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗೆ ಸಂಬಂಧಿಸಿದಂತೆ ಡಾ.ಚಂದ್ರು ಲಮಾಣಿ ಗುತ್ತಿಗೆದಾರನ ಬಳಿ 11 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ತಾಲೂಕಿನ ಚಿಂಚಲಿ ಗ್ರಾಮದ ಕ್ಲಾಸ್-1ಗುತ್ತಿಗೆದಾರ ವಿಜಯ್ ಪೂಜಾರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.



ಶನಿವಾರ ಮಧ್ಯಾಹ್ನ 2.15ರ ಸುಮಾರಿಗೆ ಲಕ್ಷ್ಮೇಶ್ವರ ಪಟ್ಟಣದ ಬಾಲಾಜಿ ಆಸ್ಪತ್ರೆಯಲ್ಲಿ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಅವರ ಇಬ್ಬರು ಆಪ್ತ ಸಹಾಯಕ ಮಂಜುನಾಥ ವಾಲ್ಮೀಕಿ ಮತ್ತು ಗುರು ನಾಯಕ್ ರೂ.5 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

➡ ಪುಟ ೪

ಆಳ್ವಾಸ್ ಶಾಲೆಗೆ ವಿದ್ಯಾರ್ಥಿಸಾಗರ!

ಕನ್ನಡ ಮಾಧ್ಯಮ ಶಾಲೆಗೆ 22 ಸಾವಿರಕ್ಕೂ ಹೆಚ್ಚು ಅರ್ಜಿ, ಇಂದು ಪ್ರವೇಶ ಪರೀಕ್ಷೆ



ದಿಗಂತ ವಿಶೇಷ

▸ ಹರೀಶ್ ಕೆ.ಆದೂರು

• **ಮೂಡುಬಿದಿರೆ:** ಒಂದೆಡೆ ಸರಕಾರದ ಅಧೀನದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳು ಒಂದರ ಹಿಂದೆ ಒಂದರಂತೆ ಮುಚ್ಚುತ್ತಿದ್ದರೆ, ಮೂಡುಬಿದಿರೆಯಲ್ಲಿರುವ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಪ್ರಾಯೋಜಕತ್ವದ ಕನ್ನಡ ಮಾಧ್ಯಮ ಶಾಲೆಗೆ ರಾಜ್ಯದ ವಿವಿಧೆಡೆಯ ವಿದ್ಯಾರ್ಥಿಗಳು ನಾ ಮುಂದು ತಾಮುಂದು ಎಂದು ಬರುತ್ತಿದ್ದಾರೆ. ಭಾನುವಾರ (ಫೆ.22) ನಡೆಯುವ ಪ್ರವೇಶ ಪರೀಕ್ಷೆಗೆ ಆಕಾಂಕ್ಷಿಗಳಾಗಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಒಟ್ಟಾರೆ 22,874 ಅರ್ಜಿಗಳು ಸಲ್ಲಿಕೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಎರಡೂವರೆ ಸಾವಿರದಷ್ಟು ಹೆಚ್ಚುವರಿ ಅರ್ಜಿಗಳು ಬಂದಿವೆ.

➡ ಪುಟ ೪


ಗಾಂಧಿ ಭೇಟಿ ನೀಡಿದ ಸ್ಥಳದಲ್ಲಿ ನಿರ್ಮಾಣ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಹೊಣೆ

87 ಕಡೆ ಗಾಂಧಿ ಸ್ತಂಭ

▸ ಮಹೇಶ್ ಹೆಗಡೆ

ದಿಗಂತ ವಿಶೇಷ

• **ಬೆಂಗಳೂರು:** ಕರ್ನಾಟಕದೊಂದಿಗಿನ ಮಹಾತ್ಮ ಗಾಂಧಿಗೆ ನಂಟಿರುವ ಐತಿಹಾಸಿಕವಾದ ಆಯ್ದ 87 ಸ್ಥಳಗಳಲ್ಲಿ ಗಾಂಧಿ ಸ್ತಂಭಗಳನ್ನು ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಅಯೋಧ್ಯೆಯ ರಾಮನ ವಿಗ್ರಹದ ರೂವಾರಿ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಸ್ತಂಭಗಳ ನಿರ್ಮಾಣದ ಜವಾಬ್ದಾರಿ ವಹಿಸಲಾಗಿದೆ. ಮಹಾತ್ಮ ಗಾಂಧಿಯವರು ತಮ್ಮ ಜೀವಿತಾವಧಿಯಲ್ಲಿ ಕರ್ನಾಟಕದ ವಿವಿಧ ಭಾಗಗಳಿಗೆ ಭೇಟಿ ನೀಡಿದ್ದು, ಅದರ ನೆನಪಿಗಾಗಿ ಸ್ತಂಭ ಗಳನ್ನು ನಿರ್ಮಿಸಲಾಗುತ್ತಿದೆ. ಮಹಾತ್ಮ ಗಾಂಧಿಯವರು ಒಟ್ಟು 87 ಬಾರಿ ಕರ್ನಾಟಕದ ವಿವಿಧೆಡೆ ಭೇಟಿ ನೀಡಿದ್ದು, ಅಲ್ಲೆಲ್ಲ ಈ ಸ್ತಂಭಗಳು ತಲೆಯೆತ್ತಲಿವೆ.



ರಾಮನ ವಿಗ್ರಹ ರೂವಾರಿಗೆ ಕೆತ್ತನೆ ಹೊಣೆ: ಅಯೋಧ್ಯೆಯ ರಾಮಲಲಾ ಮೂರ್ತಿಯನ್ನು ಕೆತ್ತಿದ ಅರುಣ್ ಯೋಗಿರಾಜ್ ಅವರ ಕಲಾ ನೈಪುಣ್ಯವನ್ನು ಗುರುತಿಸಿರುವ ರಾಜ್ಯ ಸರ್ಕಾರ, ಯೋಜನೆಯ ಜವಾಬ್ದಾರಿಯನ್ನು ಅವರಿಗೆ ವಹಿಸಿದೆ.

➡ ಪುಟ ೪

ರಾಜ್ಯದ ಎಲ್ಲೆಲ್ಲಿ ಸ್ತಂಭ ನಿರ್ಮಾಣ? • ಪುಟ ೪



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,75,000** (2,70,000) ಅಪರಂಜಿ ಚಿನ್ನ: **1,59,280** (1,57,370) ಆಭರಣ ಚಿನ್ನ: **1,46,000** (1,44,250) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹90.99

ಕಿರುಸುದ್ದಿ

ಅಧ್ಯಕ್ಷರಾಗಿ ನೇಮಕ



◆**ಕುಂದಗೋಳ:** ಜಾತ್ಯತೀತ ಜನತಾದಳ (ಜೆಡಿಎಸ್) ಪಕ್ಷದ ಕುಂದಗೋಳ ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಯರಿನಾರಾಯಣಪುರ ಗ್ರಾಮದ ಶಂಕರಗೌಡ ದೊಡ್ಡಮನಿ ಅವರನ್ನು ನೇಮಕ ಮಾಡಲಾಗಿದೆ. ಧಾರವಾಡ ಜಿಲ್ಲಾ ಗ್ರಾಮೀಣ ಘಟಕದ ಅಧ್ಯಕ್ಷ ಬಿ. ಗುಂಗಾಧರಮಠ ಅವರು ನೇಮಕಾತಿ ಆದೇಶ ಹೊರಡಿಸಿದ್ದಾರೆ. ಪಕ್ಷದ ಸಂಘಟನೆಯನ್ನು ಬಲಪಡಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ತಮ್ಮ ನೇಮಕಾತಿಗೆ ಹರ್ಷ ವ್ಯಕ್ತಪಡಿಸಿ ಪ್ರತಿಕ್ರಿಯಿಸಿದ ಶಂಕರಗೌಡ ದೊಡ್ಡಮನಿ ಅವರು, ಜಿಲ್ಲಾ ಗ್ರಾಮೀಣ ಅಧ್ಯಕ್ಷರು ನನ್ನ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿದ್ದಾರೆ. ಕಾರ್ಯಕರ್ತರನ್ನು ಒಗ್ಗೂಡಿಸಿ ತಾಲೂಕಿನಾದ್ಯಂತ ಪಕ್ಷವನ್ನು ಬಲಪಡಿಸುವುದಾಗಿ ಹೇಳಿದರು.

ಬೃಹತ್ ಸಮಾವೇಶ ಇಂದು

◆**ಹುಬ್ಬಳ್ಳಿ:** ಗುರು ವಧು-ವರರ ಮಾಹಿತಿ ಹಾಗೂ ಸೇವಾ ಕೇಂದ್ರದಿಂದ ಫೆ.22ರಂದು ಇಲ್ಲಿನ ಕಡಪಾ ಮೈದಾನದ ಎದುರಿನ ಕೆಸಿಸಿ ಬ್ಯಾಂಕ್ ಸಭಾಭವನದಲ್ಲಿ ರಾಜ್ಯಮಟ್ಟದ ವೀರಶೈವ ಲಿಂಗಾಯತ ಮತ್ತು ಎಲ್ಲ ಒಳಪಂಗಡಗಳ ವಧು-ವರ ಹಾಗೂ ಪಾಲಕರ ಪರಸ್ಪರ ಬೃಹತ್ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕ ಕಿ.ರಾ.ದುಂಡಪ್ಪನವರ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಯಿಂದ ಸಮಾವೇಶ ನಡೆಯಲಿದ್ದು, ಸಂದರ್ಶನದಲ್ಲಿ ಪಾಲ್ಗೊಳ್ಳಲು ಲಿಂಗರಾಜನಗರದ ಸಮುದಾಯ ಭವನದ ಹತ್ತಿರದ ಸೇವಾಕೇಂದ್ರ ಸಂಪರ್ಕಿಸಬಹುದಾಗಿದೆ ಎಂದರು.

ಸರ್ವೆ ಅಧಿಕಾರಿಗೆ ಜೈಲು

◆**ಧಾರವಾಡ:** ಲಂಚದ ಆರೋಪ ಸಾಬೀತಾದ ಹಿನ್ನೆಲೆ ಕುಂದಗೋಳ ಭೂಮಾಪನ ಇಲಾಖೆ ಸರ್ವೆಯರ್ ರಾಘವೇಂದ್ರ, ಶಂಕರರಾವ್ ಕುಲಕರ್ಣಿಗೆ 3ನೇ ಅಧಿಕ ಜಿಲ್ಲಾ ಸತ್ರ ಮತ್ತು ವಿಶೇಷ ನ್ಯಾಯಾಲಯ 4 ವರ್ಷ ಜೈಲು ಹಾಗೂ ರೂ.20 ಸಾವಿರ ದಂಡ ವಿಧಿಸಿ ಆದೇಶ ಹೊರಡಿಸಿದೆ.

ಕುಂದಗೋಳ ತಾಲೂಕಿನ ಶಿರೂರ ಗ್ರಾಮದ ಸರ್ವೆ ನಂ 83/1, 83/1ಅ, 83/1ಬ ಆಸ್ತಿಯಲ್ಲಿ 9 ಎಕರೆ 8 ಗುಂಟೆ ಜಮೀನು, 3 ಎಕರೆ 30 ಗುಂಟೆ, 3 ಎಕರೆ 30 ಗುಂಟೆ 1 ಎಕರೆ 28 ಗುಂಟೆ ಉತಾರ ಪ್ರತ್ಯೇಕ ಮಾಡಲು ಮಲ್ಲಿಕಾರ್ಜುನ ಪಾಟೀಲ ಅರ್ಜಿ ಸಲ್ಲಿಸಿದ್ದರು. ಉತಾರಗಳ ಪ್ರಕಾರ ಜಮೀನು ಅಳತೆ ಮಾಡಿಕೊಡಲು ಸರ್ವೆಯರ್ ರಾಘವೇಂದ್ರ ಕುಲಕರ್ಣಿ ರೂ.15 ಸಾವಿರಕ್ಕೆ ಲಂಚದ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಪಾಟೀಲ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಈ ಲಂಚದ ಹಣ ಪಡೆಯುವಾಗ ಅಧಿಕಾರಿಗಳು ವಶಕ್ಕೆ ಪಡೆದು ಬಂಧಿಸಿದ್ದರು. ತನಿಖಾಧಿಕಾರಿ ಬಿ.ಎ.ಜಾಧವ ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪಣ ಪಟ್ಟಿ ಹಾಗೂ ಸಾಕ್ಷಿ ವಿಚಾರಣೆ ನಡೆಸಿದ 3ನೇ ಅಧಿಕ ಜಿಲ್ಲಾ ಸತ್ರ-ವಿಶೇಷ ನ್ಯಾಯಾಲಯ ರಾಘವೇಂದ್ರ ಕುಲಕರ್ಣಿ ಆರೋಪಿ ಎಂದು ಪರಿಗಣಿಸಿ, 4 ವರ್ಷ ಜೈಲು ಹಾಗೂ ರೂ.20 ಸಾವಿರ ದಂಡ ವಿಧಿಸಿದೆ. ಸರ್ಕಾರದ ಪರವಾಗಿ ಅಭಿಯೋಜಕ ಎಸ್.ಎಸ್.ಶಿವಳ್ಳಿ ವಾದ ಮಂಡಿಸಿದರು.

ನಾಟಕ ಪ್ರದರ್ಶನ ನಾಳೆ

◆**ಕಲಘಟಗಿ:** ಮಲಕನಕೊಪ್ಪ ಗ್ರಾಮದಲ್ಲಿ ಮಲ್ಲಿಕಾರ್ಜುನ ನವತರುಣ ನಾಟ್ಯ ಸಂಘದ ಕಲಾವಿದರಿಂದ ಫೆ.23ರಂದು ಶ್ರೀಕಂಠ ಶಾಸ್ತ್ರಿಗಳು ಬರೆದ ಜಗಜ್ಯೋತಿ ಬಸವೇಶ್ವರ ಐತಿಹಾಸಿಕ ನಾಟಕ ಪ್ರದರ್ಶನ ಗೊಳ್ಳಲಿದೆ. ಗ್ರಾಮದ ಗುರುಹಿರಿಯರ ಕುರಿ ಹಾಗೂ ಸಹೋದರರ ಜಾಗದಲ್ಲಿ ವೆಂಕಟೇಶ್ವರ ಡ್ರಾಮಾ ಸೀನ್ ಭಾನುವಾರ ಹಾಕುವ ನಾಟಕ ಸಂಚಿಕೆಯಲ್ಲಿ ಅಂದು ರಾತ್ರಿ 10.30ಕ್ಕೆ ಆರಂಭವಾಗಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ನಾಟಕ ಉದ್ಘಾಟಿಸುವರು. ಕಾರ್ಮಿಕ ಸಚಿವ ಸಂತೋಷ್ ಲಾಡ್ ಜ್ಯೋತಿ ಬೆಳಗಿಸುವವರು. ಬಸಲಿಂಗಪ್ಪ ದೇಸಾಯಿ ಅಧ್ಯಕ್ಷತೆ ವಹಿಸುವರು. ಜಿ.ಪಂ. ಮಾಜಿ ಸದಸ್ಯ ಸಿ.ಎಫ್. ಪಾಟೀಲ ಹಾಗೂ ಸಾನ್ನಿಧ್ಯ ಬಸವಣ್ಣಯ್ಯ ಹಿರೇಮಠ ಹಾಗೂ ಇನ್ನಿತರ ಗಣ್ಯರು, ಗ್ರಾಮದ ಗುರು ಹಿರಿಯರು ಉಪಸ್ಥಿತರಿರಲಿದ್ದಾರೆ ಎಂದು ಸಮಿತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆಯಿಂದ ಆಯ್ಕೆ

◆**ಧಾರವಾಡ:** ಭಾರತೀಯ ಕ್ರೀಡಾ ಪ್ರಾಧಿಕಾರದಿಂದ ನಡೆಯುವ ನಗರದ ಕ್ರೀಡಾ ವಸತಿ ನಿಲಯಕ್ಕೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಫೆ.23, 24 ಮತ್ತು 25ರಂದು ನಡೆಯಲಿದೆ. ಫೆ.23ರಂದು ಬಾಸ್ಕೆಟ್ ಬಾಲ್ ಮತ್ತು ಕುಸ್ತಿ ಕ್ರೀಡಾಪಟುಗಳ ಆಯ್ಕೆ ಜರುಗಲಿದ್ದು, 13ರಿಂದ 16 ವರ್ಷದೊಳಗಿನ ಕ್ರೀಡಾಪಟುಗಳು ಆಯ್ಕೆ ಪ್ರಕ್ರಿಯೆಲ್ಲಿ ಪಾಲ್ಗೊಳ್ಳಲು ಅರ್ಹರಿದ್ದಾರೆ.

ಫೆ.24 ಮತ್ತು 25ರಂದು ಕಬಡ್ಡಿ ಕ್ರೀಡಾಪಟುಗಳ ಆಯ್ಕೆ ಜರುಗಲಿದೆ. 13ರಿಂದ 16 ವರ್ಷದೊಳಗಿನ ಕ್ರೀಡಾಪಟುಗಳು ಪಾಲ್ಗೊಳ್ಳಬಹುದು. ಬಾಸ್ಕೆಟ್ ಬಾಲ್ ಕ್ರೀಡಾಪಟು 178 ಸೆಂ.ಮೀ. ಎತ್ತರ, ಕುಸ್ತಿ ಕ್ರೀಡಾಪಟು 40 ಕೆಜಿ ತೂಕ ಹೊಂದಿರಬೇಕು. ಇನ್ನೂ ಕಬಡ್ಡಿ ಕ್ರೀಡಾಪಟುಗಳು ಸಹ ಮ್ಯಾಟ್ ಶೂ ತರುವುದು ಕಡ್ಡಾಯವಿದೆ. ಆಯ್ಕೆ ಪ್ರಕ್ರಿಯೆಗೆ ಬರುವಾಗ ಜನ್ಮದಾಖಲೆ, ಆಧಾರ್ ಪ್ರತಿ, ಎಸ್ಸೆಸ್ಸೆಲ್ಸಿ ಅಂಕಪಟ್ಟಿ, 4 ಭಾವಚಿತ್ರ, ಕ್ರೀಡಾಪಟಗಳ ಆಟದ ಪ್ರಮಾಣ ಪತ್ರ, ವೈದ್ಯರ ಸದೃಢ ಪ್ರಮಾಣ ಪತ್ರದ ಜೊತೆ ಕ್ರೀಡಾ ಸಮವಸ್ತ್ರದೊಂದಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಮಾಹಿತಿಗೆ ರಂಗನಾಥ (ಕಬಡ್ಡಿ) ಮೊ:9740888020, ಶಂಕ್ರಯ್ಯ (ಕುಸ್ತಿ) ಮೊ:7019911347ಕ್ಕೆ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.



ಧಾರವಾಡ: ತಾಲೂಕಿನ ತಡಕೋಡ ಗ್ರಾಮದ ಹರಿಜನಕೇರಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಉಳಿಸಲು ಒತ್ತಾಯಿಸಿ ಎಐಡಿಎಸ್ಒ ಸಂಘಟನೆ ಗ್ರಾಮಸ್ಥರು ಹಾಗೂ ಮಕ್ಕಳೊಂದಿಗೆ ಶನಿವಾರ ಪ್ರತಿಭಟನೆ ನಡೆಸಿದರು.

ಬೃಹತ್ ಹಿಂದೂ ಸಮ್ಮೇಳನ ಇಂದು

◆**ಉಪ್ಪಿನಬೆಟಗೇರಿ:** ಗ್ರಾಮದಲ್ಲಿ ಹೋಬಳಿ ಮಟ್ಟದಿಂದ ಫೆ.22 ರಂದು ಬೃಹತ್ ಹಿಂದೂ ಸಮ್ಮೇಳನ ಏರ್ಪಡಿಸಲಾಗಿದೆ. ಉಪ್ಪಿನಬೆಟಗೇರಿ, ಹಾರೋಬೆಳವಡಿ, ಯಾದವಾಡ ಮಂಡಲಗಳ ಸುಮಾರು ಐದು ಸಾವಿರಕ್ಕೂ ಅಧಿಕ ಹಿಂದೂ ಬಾಂಧವರು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮ್ಮೇಳನ ಅಂಗವಾಗಿ ಫೆ.22ರಂದು ಮಧ್ಯಾಹ್ನ 1 ಗಂಟೆಗೆ ಗ್ರಾಮದ ಹೊಸಪೇಟಿ ಮಠ ಓಣಿಯಲ್ಲಿರುವ ರೇಣುಕಾ ಯಲ್ಲಮ್ಮ ದೇವಸ್ಥಾನದಿಂದ ಬೃಹತ್ ಶೋಭಾಯಾತ್ರೆ ಆರಂಭವಾಗುವುದು. ಉಪ್ಪಿನಬೆಟಗೇರಿ ಮಾರ್ಕೆಟ್ ರಸ್ತೆ, ಆಂಜನೇಯ ದೇವಸ್ಥಾನ, ಹನುಮನಕೊಪ್ಪ, ಜೈನ್ ಗಲ್ಲಿ, ಹದಿಮೂರಕೇರಿ ಓಣಿ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಶೋಭಾಯಾತ್ರೆ ಜರುಗಿ ಸ್ಥಳೀಯ ಶ್ರೀಗುರು ವಿರೂಪಾಕ್ಷೇಶ್ವರ ಪದವಿಪೂರ್ವ ಮಹಾವಿದ್ಯಾಲಯಕ್ಕೆ ಆಗಮಿಸುವುದು. ಅಂದು ಸಂಜೆ 5 ಗಂಟೆಗೆ ಎಸ್.ಜಿ.ವಿ ಹೈಸ್ಕೂಲ್ ಮೈದಾನದಲ್ಲಿ ಸಾರ್ವಜನಿಕ ಕಾರ್ಯಕ್ರಮ ಏರ್ಪಡಿಸಿದ್ದು, ಸಾನ್ನಿಧ್ಯ ಹಾಗೂ ಆಶೀರ್ವಚನವನ್ನು ಸ್ಥಳೀಯ ವಿರೂಪಾಕ್ಷೇಶ್ವರ ಮೂರುಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ ನೀಡಲಿದ್ದಾರೆ. ದಿಕ್ಸೂಚಿ ಭಾಷಣಕಾರರಾಗಿ ಸಂಸ್ಕೃತ ಭಾರತಿ ಪ್ರಾಂತ ಮಂತ್ರಿ, ಕರ್ನಾಟಕ ಉತ್ತರ ಪ್ರಾಂತದ ಶ್ರೀಕಾಂತ ಕುಲಕರ್ಣಿ ಆಗಮಿಸಲಿದ್ದಾರೆ. ಹಿಂದೂ ಸಮ್ಮೇಳನ ಆಯೋಜನಾ ಸಮಿತಿ ಉಪ್ಪಿನಬೆಟಗೇರಿ ಹೋಬಳಿ ಅಧ್ಯಕ್ಷ ಕಲ್ಲಯ್ಯ ವಿಭೂತಿಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಹನುಮನಕೊಪ್ಪ ಗ್ರಾಮದ ವೇ.ಮೂ. ಮೃತ್ಯುಂಜಯ ಯರಗಂಬಳಿಮಠ ಸ್ವಾಮೀಜಿ ಹಾಗೂ ಮಡಕಲಕಟ್ಟಿ ಗ್ರಾಮದ ಆಧ್ಯಾತ್ಮಿಕ ಚಿಂತಕ ಈರಣ್ಣ ಸತ್ಯಣ್ಣವರ ಅವರ ಗೌರವ ಉಪಸ್ಥಿತಿ ಇರಲಿದೆ ಎಂದು ಆಯೋಜನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.



ನವಲಗುಂದ: ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ-3ರ ಎಸ್.ಡಿ.ಎಂ.ಸಿ ಅಧ್ಯಕ್ಷರಾಗಿ ಕಾಶೀಮಸಾಬ ಮಚಲಿಬಂದರ ಹಾಗೂ ಉಪಾಧ್ಯಕ್ಷರಾಗಿ ಶಶಿಕಲಾ ಪಾಟೀಲ್ ಆಯ್ಕೆಯಾಗಿದ್ದಾರೆ. ದೇವೇಂದ್ರಪ್ಪ ಹಳ್ಳದ, ಅಡಿವೆಪ್ಪ ಶಿರಸಂಗಿ, ಬಸವರಾಜ ಹಳ್ಳದ, ಮಾಬುಸಾಬ ಯರಗುಪ್ಪಿ, ಮಹಮ್ಮದಲಿ ಮಿರ್ಜಿ, ಪ್ರಧಾನ ಗುರು ಎಸ್. ಎಸ್. ಜೋಶಿ, ಎಸ್.ಡಿ.ಎಂ.ಸಿ ಸದಸ್ಯರಾದ ಮುತ್ತಪ್ಪ ಬಿಸನಾಳ, ಬಸವರಾಜ ಮಡಿವಾಳರ, ಶಿವಾನಂದ ಜಾಲಗಾರ, ಭಾರತಿ ಮಲ್ಲಾಡಿ, ಬೀಬಿಜಾನ ಕುಂದಗೋಳ, ರೇಷ್ಮಾ ಕರಸೇಶಿ, ಶಬೀನಾಬಾನು ಮಿರ್ಜಿ, ಸುಜಾತಾ ಬಿಸಲಳ್ಳಿ, ಮಮತಾಜ ಕುರಹಟ್ಟಿ, ಸಂಗೀತಾ ಸುಣಗಾರ ಇತರರಿದ್ದರು.

ಆರ್‌ಎಸ್‌ಎಸ್ ಅಳಿಸಲು ಬಂದವರೇ ಅಳಿದು ಹೋದರು: ತಲೆಗೇರಿ

ಮಹನೀಯರ ಆದರ್ಶ ಪಾಲಿಸಿ



◆**ನವಲಗುಂದ:** ಹಿಂದೂ ಧರ್ಮವನ್ನು ಒಗ್ಗೂಡಿಸಿದ ಕೀರ್ತಿ ಶಿವಾಜಿ ಮಹಾರಾಜರದ್ದು. ಒಬ್ಬರೇ ಮುಸ್ಲೀಂ ಮತಾಂತರ ವಿರುದ್ಧ ಹೋರಾಡಲು ಕಾಡು ಜನಗಳನ್ನೇ ಮನ ಪರಿವರ್ತನೆ ಮಾಡಿ ಬಲಿಷ್ಠ ಸೈನಿಕರನ್ನಾಗಿ ಮಾಡಿ 1674ರಲ್ಲಿ ಹಿಂದೂ ಹಿಂದೂ ಸ್ವರಾಜ್ಯ ಎಂದು ಸ್ಥಾಪಿಸಿದರು. ನೂರಾರು ರಾಷ್ಟ್ರಗಳಿವೆ ಆ ರಾಷ್ಟ್ರಗಳ ಆರಂಭ ಗೊತ್ತಿದೆ. ಆದರೆ ಭಾರತ ದೇಶಕ್ಕೆ ಗೊತ್ತಿಲ್ಲ. ಏಕೆಂದರೆ ಇದು ದೇವರು ಸೃಷ್ಟಿ ಮಾಡಿದ ರಾಷ್ಟ್ರ. ಎಲ್ಲಿ ಮಹಿಳೆಯರನ್ನು ಪೂಜಿಸುತ್ತೇವೆ ಅಲ್ಲಿ ದೇವರು ನೆಲೆಸಿರುತ್ತಾನೆ. ಹಿಂದೂ ಧರ್ಮವನ್ನೂ ಸಹ ದೇವರೇ ನೀಡಿದ್ದಾನೆ ಎಂದು ವಿಶ್ವ ಹಿಂದೂ ಪರಿಷತ್ ಕರ್ನಾಟಕ ಉತ್ತರ ಪ್ರಾಂತ ಸಹ ಕಾರ್ಯದರ್ಶಿ ವಿನಾಯಕ ತಲಗೇರಿ ಹೇಳಿದರು.

ತಾಲೂಕಿನ ಮೊರಬ, ತಲೆಮೊರಬ, ಗುಮ್ಮಗೋಳ, ಶಿರೂರ ಹಾಗೂ ಆಯಟ್ಟಿ ಗ್ರಾಮಗಳ ಸಂಯೋಗದಲ್ಲಿ ಮೊರಬ ಮಂಡಲದ ಹಿಂದೂ ಸಮ್ಮೇಳನ ಸಮಿತಿಯು ಮೊರಬದ ಪೇಟೆ ಆವರಣದಲ್ಲಿ ವಿರಾಟ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ಮಾತನಾಡಿ, ಆರ್‌ಎಸ್‌ಎಸ್ ಹಾಗೂ ಸನಾತ ಧರ್ಮ ನಾಶ ಮಾಡುತ್ತೇನೆ ಎಂಬುವವರೇ ನಾಶವಾಗುತ್ತಿದ್ದಾರೆ. ನಾವು ರಾಮನ ಭಕ್ತ ಹನುಮಾನ್‌ನಂತೆ ಹಿಂದೂ ಧರ್ಮದ ಕೆಲಸ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಅನೇಕ ವೀರರು ಹಾಗೂ ಸಾಧು ಸಂತರು ಸಾಕಷ್ಟು ಆದರ್ಶ ಮಾರ್ಗಗಳನ್ನು ನಮಗೆ ನೀಡಿದ್ದಾರೆ. ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳಬೇಕಾಗಿದೆ ಎಂದರು.

ಸಾನ್ನಿಧ್ಯವನ್ನು ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಹಾಗೂ ಓಂ ಶಾಂತಿ ಜಯಕ್ಕ ಅಕ್ಕನವರು ವಹಿಸಿದ್ದರು. ದೇವರಾಜ ದಾಡಿಬಾವಿ, ರುದ್ರಪ್ಪ ಕೇರಿವುನಿ, ಎಸ್. ಎನ್. ಬಾಳನಗೌಡ್ರ, ಷಣ್ಮುಖ ಇಂಡಿ, ಬಸನಗೌಡ ಗುರನಗೌಡ್ರ, ಪ್ರಕಾಶ ಮಾನಶೆಟ್ಟಿ, ಗಿರೀಶ ಮಾಸ್ತಿ, ಕುಮಾರ ಪಾಟೀಲ್, ಮಂಜು ಕಾಲವಾಡ, ಶಂಕರಗೌಡ್ರ, ರಾಯನಗೌಡ್ರ, ಬಸುರಾಜ್ ಗಾಣಿಗೇರ, ಬಾಳಪ್ಪ ಮಂಟೂರ, ಅಶೋಕ ಹೂಲಿ, ಬಸುರಾಜ್ ಬ್ಯಾಹಟ್ಟಿ, ಷಣ್ಮುಖ ಕರಸಿರಿ, ಸಂತೋಷ ಗರಗ ನಿಂಗಪ್ಪ ಬೆಟಸೂರ, ಗೌಡಪ್ಪ ಗೌಡ್ರ ಪಾಟೀಲ್, ಸಂಗಮೇಶ ಮುತ್ತಗಿ ಇತರರಿದ್ದರು.

- ಮನೆಗಳಲ್ಲಿ ಮಕ್ಕಳಿಗೆ ತಿ ಸಂಸ್ಕಾರ ಳಿಸಿ
- ಮನೆಗಳಲ್ಲಿ ಸ್ವದೇಶಿ ವಸ್ತುಗಳನ್ನು ಬಳಕೆ ಮಾಡಿ
- ವಿಷಪೂರಿತ ಗೊಬ್ಬರ ಜಮೀನುಗಳಿಗೆ ಹಾಕದಿರಿ
- ರೈತರು ಸಾವಯುವ ಗೊಬ್ಬರ ಬಳಸಿ ಜಾಗೃತರಾಗಲಿ
- ಹಿಂದೂ ಹೆಣ್ಣು ಮಕ್ಕಳು ವಂಚನೆಗೆ ಒಳಗಾಗುತ್ತಿದ್ದು, ಲವ್ ಜಿಹಾದ್ ತಡೆಗಟ್ಟಬೇಕಿದೆ
- ಗೋ ಹತ್ಯೆ ಮಾಡುವುದನ್ನು ನಿಲ್ಲಿಸಲಿ
- ಹಿಂದೂಗಳು ಪರಸ್ಪರ ಒಬ್ಬರಿಗೊಬ್ಬರು ಬದುಕಬೇಕು ಎಂದ ವಿನಾಯಕ ತಲಗೇರಿ

ಹಿಂದೂ ಧರ್ಮ ಯಾವುದೇ ಒಂದು ಮತವಲ್ಲ, ಅದು ಜೀವನ ಶೈಲಿ, ಸಹಿಷ್ಣುತೆ, ಸತ್ಯ, ಅಹಿಂಸೆ ಮತ್ತು ಸಹಬಾಳ್ವೆ ಕಲಿಸುವ ಮಹಾ ಪರಂಪರೆ ನಮ್ಮ ಧರ್ಮ ಹೇಳುತ್ತದೆ. ನಾವು ಯಾರ ಮೇಲೂ ದ್ವೇಷ ಮಾಡಬೇಕೆಂದು ಕಲಿಸಲಿಲ್ಲ.
■ ಮಡಿವಾಳಪ್ಪ ಸಂಕದ, ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷ

ಗಮನ ಸೆಳೆದ ಶೋಭಾಯಾತ್ರೆ

ಗ್ರಾಮದ ಅಡವಿ ಸ್ವಾಮಿ ಮಠದಿಂದ ನಡೆದ ಶೋಭಾಯಾತ್ರೆಯಲ್ಲಿ ವಿವಿಧ ಗ್ರಾಮಗಳ ಕಲಾತಂಡ, ಪೂರ್ಣಕುಂಭ, ಚಕ್ಕಡಿ ಮೆರವಣಿಗೆ, ಮಕ್ಕಳು ವೇಷಭೂಷಣಗಳೊಂದಿಗೆ ಸಂಚರಿಸಿ ಗಮನ ಸೆಳೆಯಿತಲ್ಲದೆ, ಪೇಟೆಯ ಬಯಲಿನಲ್ಲಿ ಹಿಂದೂ ಸಮ್ಮೇಳನ ಕಾರ್ಯಕ್ರಮಕ್ಕೆ ತಲುಪಿತು.

ಸಾಮಾಜಿಕ ನ್ಯಾಯ ಕೊಡಿಸಲು ಶ್ರಮ: ಲಾಡ್

◆**ಹುಬ್ಬಳ್ಳಿ:** ಬುದ್ಧ, ಬಸವ, ಅಂಬೇಡ್ಕರ್ ಸೇರಿದಂತೆ ಮುಂತಾದ ಸಮಾಜ ಸುಧಾರಕರು ಸಮಾಜದಲ್ಲಿ ದೊಡ್ಡ ಬದಲಾವಣೆ ತಂದಿದ್ದಾರೆ. ಅಲೆಮಾರಿ ಜನಾಂಗದವರಿಗೆ ಸಾಮಾಜಿಕ ನ್ಯಾಯ ಕೊಡಿಸಲು ಶ್ರಮಿಸಲಾಗುವುದು. ಅಲೆಮಾರಿ ಜನಾಂಗದವರ ಬೆಳವಣಿಗೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಶನಿವಾರ ನಗರದ ಸವಾಯಿ ಗಂಧರ್ವ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಒಕ್ಕೂಟದಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಮತ್ತು ಸಾಹಿತ್ಯ ಸಾಂಸ್ಕೃತಿಕ ಕಲೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ,

ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಲ್ಲಿ ಸುಮಾರು 42 ಪಂಗಡಗಳಿವೆ. ಅಂಬೇಡ್ಕರ್ ಕಾರ್ಮಿಕ ಸಹಾಯಹಸ್ತ ಯೋಜನೆ ಕಾರ್ಯಕ್ರಮದಲ್ಲಿ 102 ಪಂಗಡಗಳನ್ನು ಗುರುತಿಸಲಾಗಿದೆ. ಎಲ್ಲ ಪಂಗಡಗಳ ಸಮಾಜದವರು ಒಗ್ಗಟ್ಟಾಗಿ ಬಂದರೆ ನನ್ನ ಕೈಲಾದ ಸಹಾಯ ಮಾಡುತ್ತೇನೆ. ರಾಜ್ಯ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ದೊರಕಿಸಿ ಕೊಡಲಾಗುವುದು. ಸುಮಾರು ಶೇ.60 ರಷ್ಟು ಹಿಂದುಳಿದ ವರ್ಗಗಳ ಜನರು ಅಸಂಘಟಿತ ವಲಯದಲ್ಲಿದ್ದಾರೆ. ರಾಜ್ಯದಲ್ಲಿ 102 ಅಲೆಮಾರಿ ಪಂಗಡಗಳ ಸುಮಾರು 1.30 ಕೋಟಿ ಕುಟುಂಬಗಳಿವೆ. ಅವರಿಗೆ ರಾಜ್ಯ ಸರ್ಕಾರದಿಂದ ಸಾಕಷ್ಟು ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದರು.

ವಿಧಾನ ಪರಿಷತ ಸದಸ್ಯ ಎಫ್.ಎಚ್. ಜಕ್ಕಪ್ಪನವರ ಮಾತನಾಡಿ, ಸಾಮಾಜಿಕ ನ್ಯಾಯಕ್ಕೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ್ ಅರಸ್ ಅವರು ಭದ್ರ ಬುನಾದಿ ಹಾಕಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳ ಜನಾಂಗದವರ ಏಳಿಗೆಗೆ ಸಾಕಷ್ಟು ಶ್ರಮಿಸುತ್ತಿದ್ದಾರೆ. ಅಲೆಮಾರಿ ಜನಾಂಗದವರು ಮುನ್ನೆಲೆಗೆ ಬರಬೇಕು. ಅಲೆಮಾರಿ ಜನಾಂಗದವರಿಗೆ ಶಿಕ್ಷಣ ಬಹಳ ಅವಶ್ಯಕವಾಗಿದ್ದು, ಧಾರವಾಡದ ಬುದ್ಧ ರಕ್ಷಿತ ವಸತಿ ಶಾಲೆಗೆ ನಿಮ್ಮ ಮಕ್ಕಳನ್ನು ಸೇರಿಸಬೇಕು. ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ಸಹಾಯ ಮಾಡುತ್ತೇನೆ ಎಂದರು. ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಯಾದಗಿರಿಯ ಜಗದ್ಗುರು ವೇದ ವ್ಯಾಸಪೀಠ ಕರತಳ್ಳಿಯ ಬ್ರಹ್ಮರ್ಷಿ ರಾಜು ಗುರು ಸ್ವಾಮೀಜಿ, ಹುಬ್ಬಳ್ಳಿಯ ಅಮ್ಮಾ ಆರೂಢ ಗುರುಪೀಠ ಯೋಗಾಶ್ರಮದ ಪೀಠಾಧಿಪತಿ ರಾಘವೇಂದ್ರ ಗುರುಜೀ ಸಾನ್ನಿಧ್ಯ ವಹಿಸಿದ್ದರು. ಶಿವಾಜಿ ಡಿ.ಮಧೂರಕರ ಅಧ್ಯಕ್ಷತೆ ವಹಿಸಿದ್ದರು. ದಶರಥ ಎಂ. ವಾಲಿ ಪ್ರಾಸ್ತಾವಿಸಿದರು. ಸಾಧಕರನ್ನು ಸನ್ಮಾನಿಸಲಾಯಿತು. ಕೆ.ರವೀಂದ್ರಶೆಟ್ಟಿ ಉಳಿದೊಟ್ಟು, ಪ್ರಕಾಶ ಎಂ., ಪ್ರತಾಪ್ ಕುಮಾರ ಜೋಗಿ, ಹುಲ್ಲಪ್ಪ ಅಪ್ಪಣ್ಣ ಜಾಡರ, ಶ್ರೀನಿವಾಸ ಕಟ್ಟಿಮನಿ, ನಾಗರಾಜ ಗಬ್ಬೂರ, ಹರೀಶ ಜಂಗ್ಲಿ, ಕಿರಣ ಕೆ.ಗುರು ಇದ್ದರು.



ಕುಡಿಯುವ ನೀರಿಗೆ ಕೊಳಬಾವಿ ಶೋಧ: ಸಿಇಒ



◆**ಧಾರವಾಡ:** ಬೇಸಿಗೆ ಆರಂಭವಾಗಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುವ 117 ಗ್ರಾಮಗಳನ್ನು ಗುರುತಿಸಿ, ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭುವನೇಶ ಪಾಟೀಲ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕುಡಿಯುವ ನೀರಿನ ಸಮಸ್ಯೆ ಎದುರಿಸುವ 117 ಗ್ರಾಮಗಳ ಪೈಕಿ 4 ಗ್ರಾಮಕ್ಕೆ ಕೊಳಬಾವಿ ನೀರು ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ. ಉಳಿದ ಗ್ರಾಮಗಳಲ್ಲಿ ಖಾಸಗಿ ಕೊಳಬಾವಿ ಶೋಧ ನಡೆಸಲಾಗಿದೆ ಎಂದರು.

ಧಾರವಾಡದ ಮನಗುಂಡಿ, ಮಂಡಿಹಾಳ, ಕುಂದಗೋಳ ತಾಲೂಕಿನ ಕಮಡೊಳ್ಳಿ, ಹಿರೇಬೂದಿಹಾಳ ಹಾಗೂ ಗುಂಜಳ ಗ್ರಾಮಗಳ ಕುಡಿಯುವ ನೀರು ಪೂರೈಕೆಗಾಗಿ ಖಾಸಗಿ ಕೊಳಬಾವಿ ಹುಡುಕಾಟ ನಡೆಸಲಾಗಿದೆ. ಹುಬ್ಬಳ್ಳಿ ತಾಲೂಕಿನ ನೂಲ್ವಿ, ಹೊಸಟ್ಟಿ, ಬಂಡಿವಾಡ ಮತ್ತು ಮಂಟೂರ ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆಗಾಗಿ ಖಾಸಗಿ ಕೊಳಬಾವಿ ವ್ಯವಸ್ಥೆ ಮಾಡಲಾಗಿದೆ. ಶೀಘ್ರ ಉಳಿದ ಗ್ರಾಮಗಳಿಗೆ ನೀರು ಪೂರೈಕೆ ವ್ಯವಸ್ಥೆ ಮಾಡುವುದಾಗಿ ಹೇಳಿದರು.

ಕಠಿಣ ಕ್ರಮ ಜಾರಿ: ಜಿಲ್ಲೆಯ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೌಟಾಣ ಜಾಗ ಅತಿಕ್ರಮಣ ಮಾಡಿದ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ಈಗಾಗಲೇ ಮನೆ ನಿರ್ಮಿಸಿಕೊಂಡ ವ್ಯಕ್ತಿಗಳಿಗೆ ನೋಟಿಸ್ ನೀಡಿ, ತೆರವುಗೊಳಿಸುವುದಾಗಿ ತಿಳಿಸಿದರು. ಗೋಮಾಳ ಜಾಗದಲ್ಲಿ ಮನೆ ನಿರ್ಮಿಸಿದ ವ್ಯಕ್ತಿಗಳಿಗೆ ಮೂರು ಸಲ ನೋಟಿಸ್ ಜಾರಿಗೊಳಿಸಿ, ಮನೆ ತೆರವು ಮಾಡಲಿದೆ. ಬಳಿಕ ಇವರಿಗೆ ರಾಜೀವಗಾಂಧಿ ವಸತಿ ಯೋಜನೆಯಡಿ ಮನೆ ನಿರ್ಮಿಸಲು ಗ್ರಾಪಂ ಪಿಡಿಒಗೆ ಸೂಚಿಸುವುದಾಗಿ ಹೇಳಿದರು.

ಇಂದು ಶ್ವಾನ ಪ್ರದರ್ಶನ

ಧಾರವಾಡ: ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಪಶು ಸಂಗೋಪನಾ ಇಲಾಖೆ ಸಹಯೋಗದಲ್ಲಿ ಶ್ವಾನಗಳ ಪ್ರದರ್ಶನ ಹಾಗೂ ಬೀದಿ ನಾಯಿ ಮರಿಗಳ ದತ್ತು ಯೋಜನೆ ಫೆ.22ಕ್ಕೆ ಹಮ್ಮಿಕೊಂಡಿದ್ದಾಗಿ ಜಿಪಂ ಸಿಇಒ ಭುವನೇಶ ಪಾಟೀಲ ಹೇಳಿದರು. ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಸಾರ್ವಜನಿಕರಲ್ಲಿ ನಾಯಿಗಳ ಬಗ್ಗೆ ಅರಿವು ಮೂಡಿಸಲು ಶ್ವಾನಪ್ರದರ್ಶನ ಮತ್ತು ದತ್ತು ಯೋಜನೆ ರೂಪಿಸಿದ್ದು, ಅಂದು ಬೆಳಗ್ಗೆ 9ಕ್ಕೆ ಕರ್ನಾಟಕ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ಜರುಗಲಿದೆ. ಪ್ರದರ್ಶನಕ್ಕೆ ವಿವಿಧ ತಳಿಗಳ 150ಕ್ಕೂ ಹೆಚ್ಚು ಶ್ವಾನಗಳ ಮಾಲೀಕರು ನೋಂದಣಿ ಮಾಡಿಸಿದ್ದಾರೆ. ಬೆಳಗ್ಗೆ 9ರಿಂದ ಸಂಜೆ 4ರವರೆಗೂ ಕೂಡ ಶ್ವಾನಗಳ ಪ್ರದರ್ಶನ ನಡೆಯಲಿದೆ. ವಿಜೇತ ಶ್ವಾನ ತಳಿಗಳಿಗೆ ಒಂಬತ್ತು ಬಹುಮಾನ ನೀಡಲಾಗುವುದು ಎಂದರು. ಜಿಲ್ಲೆಯ ಕೆಲವು ಎನ್‌ಜಿಒಗಳು ಬೀದಿ ನಾಯಿ ಮರಿಗಳನ್ನು ಸಂಗ್ರಹಿಸಿದ್ದು, ಈ ಮರಿಗಳ ದತ್ತು ಯೋಜನೆ ಜರುಗಲಿದೆ. ಇದಕ್ಕಾಗಿ 30 ಜನರು ನೋಂದಾಣಿ ಮಾಡಿಸಿದ್ದಾರೆ. ಬೀದಿ ನಾಯಿ ನಿಯಂತ್ರಣ ದತ್ತು ಯೋಜನೆ ಮುಖ್ಯ ಉದ್ದೇಶ. ಈ ಯೋಜನೆಯಡಿ ಬೀದಿ ನಾಯಿಮರಿ ಪಡೆದರೆ, ಅವುಗಳಿಗೆ ಉಚಿತ ರೇಬಿಸ್, ಸಂತಾನ ಹರಣ ಚಿಕಿತ್ಸೆ ನೀಡಲಾಗುವುದು. ಸಾಕಷ್ಟು ಅನುದಾನವಿದ್ದು, ಗ್ರಾಮ ಮಟ್ಟದಲ್ಲೂ ಬೀದಿ ನಾಯಿ ನಿಯಂತ್ರಣಕ್ಕೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಕೈಗೊಳ್ಳುವುದಾಗಿ ಹೇಳಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಹಾಗೂ ಕೌಶಲ್ಯಾಭಿವೃದ್ಧಿ ಇಲಾಖೆ ವತಿಯಿಂದ ಖಾದಿ ಉತ್ಪನ್ನಗಳ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

ಫೆ.24ಕ್ಕೆ ಬೃಹತ್ ಉದ್ಯೋಗ ಮೇಳ: 13 ಸಾವಿರ ಅಭ್ಯರ್ಥಿಗಳು ನೋಂದಣಿ



◆**ಧಾರವಾಡ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯಮಶೀಲತೆ-ಜೀವನೋಪಾಯ ಇಲಾಖೆ ಸಹಯೋಗದಲ್ಲಿ ಫೆ.24ಕ್ಕೆ ಇಲ್ಲಿನ ಕರ್ನಾಟಕ ಮಹಾವಿದ್ಯಾಲಯ ಮೈದಾನದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಜಿಪಂ ಸಿಇಒ ಭುವನೇಶ ಪಾಟೀಲ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಅಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೂ ಉದ್ಯೋಗ ಮೇಳ ಜರುಗಲಿದೆ. 18ರಿಂದ 45 ವರ್ಷಗಳ ಎಸ್ಸೆಸ್ಸೆಲ್ಸಿ, ಪಿಯುಸಿ, ಯಾವುದೇ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದನಿರುದ್ಯೋಗಿಗಳು ಪಾಲ್ಗೊಳ್ಳಬೇಕು. 2026ನೇ ಸಾಲಿನ ಉದ್ಯೋಗ ಮೇಳಕ್ಕೆ 151 ಕಂಪನಿ ಪಾಲ್ಗೊಳ್ಳಲಿದ್ದು, ಈವರೆಗೂ 13 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ನೋಂದಾಯಿಸಿದ್ದಾರೆ. ಇದರಲ್ಲಿ 2500ಕ್ಕೂ ಅಧಿಕ ಯುವನಿಧಿ ಫಲಾನುಭವಿಗಳು ಇರುವುದಾಗಿ ಹೇಳಿದರು.

ಒತ್ತಡ ಹಾಕಿಲ್ಲ

ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ಕಂಪನಿಗಳಿಗೆ ಒತ್ತಡ ಹೇರುವ ಆರೋಪದ ಪ್ರಶ್ನೆಗೆ ಉತ್ತರಿಸಿದ ಜಿಪಂ ಸಿಇಒ ಭುವನೇಶ ಪಾಟೀಲ, ಹುದ್ದೆಗಳು ಖಾಲಿ ಇರದಿದ್ದರೂ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ಯಾವುದೇ ಕಂಪನಿಗಳಿಗೆ ಒತ್ತಡ ಹಾಕಿಲ್ಲ. ಇಂತಹ ಪ್ರಕರಣಗಳ ಬಗ್ಗೆ ಕಂಪನಿಗಳು ಲಿಖಿತ ದೂರು ನೀಡಿದರೆ, ಕ್ರಮ ಕೈಗೊಳ್ಳುವೆ ಎಂದರು.

ಅಗತ್ಯ ಸೌಕರ್ಯ

2026ನೇ ಸಾಲಿನ ಉದ್ಯೋಗ ಮೇಳಕ್ಕೆ ಮೂರು ಬ್ಲಾಕ್, 21 ಕೊಠಡಿ, ಎಂಟು ಸಹಾಯಕ ಡೆಸ್ಕ್‌ಗಳು, 20 ನೋಂದಣಿ ಕೇಂದ್ರಗಳ ವ್ಯವಸ್ಥೆ ಮಾಡಿದೆ. ಅಲ್ಲದೇ, 200 ಕಂಪನಿಗಳಿಗೆ ಸ್ಥಳದ ವ್ಯವಸ್ಥೆಯೂ ಮಾಡಿದೆ. ಅಗತ್ಯ ಮೂಲಸೌಕರ್ಯ ಸಹ ಒದಗಿಸಲಿದೆ ಎಂದು ಜಿಪಂ ಸಿಇಒ ಭುವನೇಶ ಪಾಟೀಲ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದ ಶ್ರೀಗಳು: ಶಿವಾನಂದ ಹೂಗಾರ

◆**ಉಪ್ಪಿನಬೆಟಗೇರಿ:** ಮಠದ ಶ್ರೀಗಳು ಉತ್ತಮ ಸಂಸ್ಕಾರದೊಂದಿಗೆ ಗ್ರಾಮಾಂತರ ಮಕ್ಕಳಿಗೆ ಆಂಗ್ಲ ಮಾಧ್ಯಮ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದು ಕೆಸಿಸಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶಿವಾನಂದ ಹೂಗಾರ ಹೇಳಿದರು.

ಅವರು ಸ್ಥಳೀಯ ಶ್ರೀಗುರು ವಿರೂಪಾಕ್ಷೇಶ್ವರ ಕಲ್ಯಾಣ ಮಂಟಪದ ಆವರಣದಲ್ಲಿ ನಡೆದ ಶ್ರೀ ಕುಮಾರೇಶ್ವರ ಶಿಕ್ಷಣ ಸಂಸ್ಥೆಯ ಎಸ್.ಜಿ.ವಿ.ಕನ್ನಡ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮವನ್ನು ಜ್ಯೋತಿ ಬೆಳಗುಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಮಠಗಳು ಬೆಳೆಯಬೇಕಾದರೆ ಗುರುಗಳು ಬಹಳ ಮುಖ್ಯ.ಅವರು ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಿಕ್ಷಣ ಜೊತೆಗೆ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದ್ದಾರೆ. ಸಾಧನೆ ಮಾಡುವ ಛಲ ಪ್ರತಿಯೊಬ್ಬ ವಿದ್ಯಾರ್ಥಿಗೆ ಬರಬೇಕು ಎಂದರು.

ಮೂರು ಸಾವಿರ ವಿರಕ್ತಮಠದ ಶ್ರೀ ಕುಮಾರ ವಿರೂಪಾಕ್ಷ ಸ್ವಾಮೀಜಿ ಮಾತನಾಡಿ, ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆಯಬೇಕಾದರೆ ವಿದ್ಯಾರ್ಥಿಗಳು ಶ್ರಮ ವಹಿಸಿ ಓದಬೇಕು ಎಂದರು. ಧಾರವಾಡ ಕ್ಷೇತ್ರ ಸಮನ್ವಯ ಅಧಿಕಾರಿ ಕೆ.ಎಫ್ ಕುಮಾರ, ಶಿಕ್ಷಣ ಸಂಯೋಜಕ ಎ.ಎಚ್ ನದಾಫ, ಕೆಸಿಸಿ ಬ್ಯಾಂಕ್ ನಿವೃತ್ತ ಅಧಿಕಾರಿ ಎಸ್.ಕೆ ಪಾಟೀಲ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಮೊರಬ ಹಿರಿಯ ಪ್ರಾಥಮಿಕ ಶಾಲಾ ಪ್ರಧಾನ ಗುರುಮಾತೆ ಸುಜಾತಾ ಹೂಗಾರ, ಸಂಸ್ಥೆಯ ಆಡಳಿತ ಮಂಡಳಿ ಅಧಿಕಾರಿ ರಮೇಶ ಮಡಿವಾಳರ, ನ್ಯಾಯವಾದಿ ಶ್ರೀಶೈಲ ಸಂಕಣ್ಣವರ, ಆಡಳಿತ ಮಂಡಳಿ ಸದಸ್ಯೆ ಮಂಜುಳಾ ಯಲಿಗಾರ ಹಾಗೂ ಮಲ್ಲಿಕಾರ್ಜುನ ಸಲಕಿ, ಮಹೇಶ ಹಿರೇಮಠ, ಶಾಲಾ ಪಾಲಕರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಸೇರಿದ್ದರು. ಆಂಗ್ಲ ಮಾಧ್ಯಮ ಪ್ರದಾನ ಗುರುಮಾತೆ ಅಗ್ನಿಹೋತ್ರಿ, ಎಸ್.ಕೆ. ಕೊಡಿ ಕಾರ್ಯಕ್ರಮ ನಿರ್ವಹಿಸಿದರು.



ರಾಜ್ಯ ಸರ್ಕಾರದ ಸಾಧನೆ ಜನರಿಗೆ ತಿಳಿಸಿ



◆**ಕುಂದಗೋಳ:** ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು, ಸರ್ಕಾರದ ಸಾಧನೆಯನ್ನು ಮತದಾರರಿಗೆ ಮನವರಿಕೆ ಮಾಡಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಲು ಕಾರ್ಯಕರ್ತರು ಸಿದ್ಧಗೊಳ್ಳಬೇಕೆಂದು ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಪಕ್ಷದ ಜಿಲ್ಲಾ ಪ್ರಚಾರ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಜುಟ್ಟಲ್ ಹೇಳಿದರು.

ಅವರು ಪಟ್ಟಣದ ಪ್ರವಾಸಿ ಮಂದಿರ ಹತ್ತಿರ ಇರುವ ಮರಾಠ ಭವನದಲ್ಲಿ ಕಾಂಗ್ರೆಸ್ ಬ್ಲಾಕ್ ಬಿಎಲ್‌ಎ-2, ಪಶ್ಚಿಮ ಪದವಿದರ ಕ್ಷೇತ್ರದ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳೂಂದಿಗೆ ವಸತಿ ಯೋಜನೆ ಸೇರಿದಂತೆ ಅನೇಕ ಜನಪ್ರಿಯ ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುತ್ತಿದ್ದು, ಕಾರ್ಯಕರ್ತರು ಇದರ ಬಗ್ಗೆ ಮತದಾರರಲ್ಲಿ ಜಾಗೃತಿ ಮೂಡಿಸಬೇಕೆಂದು ಹೇಳಿದರು.

ಪದವಿದರರ ಕ್ಷೇತ್ರದ ಅಭ್ಯರ್ಥಿ ಮೋಹನ ಲಿಂಬಿಕಾಯಿ ಮಾತನಾಡಿ, ಚುನಾವಣೆಯಲ್ಲಿ ಬಿಎಲ್‌ಎ ಅವರ ಪಾತ್ರ ಬಹುಮುಖ್ಯವಾಗಿದ್ದು, ಬೂತ್ ಮಟ್ಟದಲ್ಲಿ ಕಾರ್ಯಕರ್ತರು ಸಂಘಟಿಸಿ ಪಕ್ಷದ ಏಳಿಗೆಗೆ ಮಿಸುವಂತೆ ಹೇಳಿದರು.

ಮಾಜಿ ಶಾಸಕ ಎಂ.ಎಸ್. ಅಕ್ಕಿ, ಜಿಲ್ಲಾಧ್ಯಕ್ಷ ಅನೀಲಕುಮಾರ ಪಾಟೀಲ,ಕೆಪಿಸಿಸಿ ಸದಸ್ಯ ಅರವಿಂದ ಕಟಗಿ, ಜಗದೀಶ ಉಪ್ಪಿನ, ಧೃತಿ ಸಾಲಮನಿ ಮಾತನಾಡಿದರು. ಮುಖಂಡರಾದ ಜಗನಾಥಗೌಡ ಸಿದ್ದನಗೌಡ್ರ, ಸಲೀಂ ಕ್ಯಾಲಕೊಂಡ, ಸತೀಶ ಕೊಬ್ಬಯ್ಯನವರ, ನೆಹರು ಪಾಟೀಲ್, ರಾಜೇಸಾಬ ಕಳ್ಳಿಮನಿ, ಹೊನ್ನಪ್ಪ ದೊಡಮನಿ ಇತರರಿದ್ದರು.

ಕಲ್ಲು ಎಸೆತ ಘಟನೆ ಖಂಡಿಸಿ ಮನವಿ

◆**ಅಳ್ನಾವರ:** ಇತ್ತೀಚೆಗೆ ಬಾಗಲಕೋಟದಲ್ಲಿ ಛತ್ರಪತಿ ಶಿವಾಜಿ ಜಯಂತಿ ಮೆರವಣಿಗೆಯ ಸಮಯದಲ್ಲಿ ಕಲ್ಲು ತೂರಾಟ ನಡೆಸಿರುವ ಘಟನೆಯನ್ನು ಖಂಡಿಸಿರುವ ಇಲ್ಲಿನ ಸಾರ್ವಜನಿಕರು, ಈ ಕೃತ್ಯದಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಸ್ಥಳೀಯ ಹಿಂದೂ ಸಮಾಜದವರು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸಮಾಜದ ಮುಖಂಡ ಮಹಾದೇವ ಸಾಗರೇಕರ ಹಾಗೂ ನಾರಾಯಣ ಮೋರೆ ಮಾತನಾಡಿ, ಒಂದು ಧರ್ಮದವರು ಶಿವಾಜಿ ಮೆರವಣಿಗೆಯ ಮೇಲೆ ಕಲ್ಲು ಮತ್ತು ಚಪ್ಪಲಿ ತೂರಿ ಸಮಾರಂಭವನ್ನು ಹಾಳು ಮಾಡುವ ಪ್ರಯತ್ನ ಮಾಡಿರುವುದು ಖಂಡನೀಯ. ಇದೊಂದು ಧರ್ಮ ವಿರೋಧಿ ಮತ್ತು ದೇಶ ವಿರೋಧಿ ಭಾವನೆಯಾಗಿದ್ದು, ಸಮಾಜವನ್ನು ಹಾಳು ಮಾಡುವ ಪ್ರಯತ್ನ ಇದಾಗಿದೆ. ಇದಕ್ಕೆ ಆಸ್ಪದೆ ನೀಡದೆ ಘಟನೆಯಲ್ಲಿ ಭಾಗಿಯಾದವರು ಅಲ್ಪಸಂಖ್ಯಾತರು ಎನ್ನುವ ಕಾರಣ ಕೊಟ್ಟು ಪ್ರಕರಣವನ್ನು ಮುಚ್ಚಿ ಹಾಕದೆ ಕೂಡಲೇ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದರು.

ಉಪ ತಹಶೀಲ್ದಾರ್ ಮಲ್ಲಿಕಾರ್ಜುನ ಬಿರಾದಾರ ಮನವಿ ಸ್ವೀಕರಿಸಿ, ಸರ್ಕಾರಕ್ಕೆ ಕಳುಹಿಸುವ ಭರವಸೆ ನೀಡಿದರು. ಪುಂಡಲೀಕ ಪಾರ್ದಿ, ವಿಷ್ಣು ಕೇಸರೇಕರ, ವಿಜಯ ಕೌಜಲಗಿ, ಪ್ರವೀಣ ಪವಾರ, ಯಲ್ಲಪ್ಪ ತೇರಗಾಂವಕರ, ರಮೇಶ ಬಿದ್ರೋಳಕರ, ಪರಶುರಾಮ ಕಾಕತ್ಕರ, ಅಜಿತ ಬೆಟದೂರ, ಶ್ರೀಧರ ಸುಣಗಾರ, ಶಾಹು ಶಿಂಧೆ, ಪ್ರಭಾಕರ ಜಳಗೇಕರ, ಶಿವಾಜಿ ಡೊಳ್ಳಿನ, ವಿನಾಯಕ ದುಲಬಾಜಿ, ಇತರರಿದ್ದರು.



ಕಾನೂನು ಸುವ್ಯವಸ್ಥೆಯ ವೈಫಲ್ಯ



◆**ಹುಬ್ಬಳ್ಳಿ:** ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆಯ ಮೇಲೆ ಕಲ್ಲು ಮತ್ತು ಚಪ್ಪಲಿ ತೂರಾಟ ನಡೆಸಿರುವುದು ಕೇವಲ ಒಂದು ಅಹಿತಕರ ಘಟನೆಯಲ್ಲ, ಬದಲಾಗಿ ಇದು ರಾಜ್ಯದ ಕಾನೂನು ಸುವ್ಯವಸ್ಥೆಯ ಸಂಪೂರ್ಣ ವೈಫಲ್ಯದ ಸಂಕೇತವಾಗಿದೆ ಎಂದು ಬಿಜೆಪಿ ಯುವ ಮುಖಂಡ ವೆಂಕಟೇಶ್ ಕಾಟವೆ ಆರೋಪಿಸಿದ್ದಾರೆ.

ಈ ಘಟನೆಯ ಹಿಂದೆ ಕಾಂಗ್ರೆಸ್ ಸರ್ಕಾರದ ಅತಿಯಾದ ಓಲೈಕೆ ರಾಜಕಾರಣವು ಸ್ಪಷ್ಟವಾಗಿ ಎದ್ದು ಕಾಣುತ್ತಿದ್ದು, ಒಂದು ವರ್ಗವನ್ನು ಸಮಾಧಾನಪಡಿಸುವ ಭರದಲ್ಲಿ ಸಮಾಜಘಾತಕ ಶಕ್ತಿಗಳಿಗೆ ಮಣೆ ಹಾಕುತ್ತಿರುವುದು ದುರದೃಷ್ಟಕರ. ಹಿಂದೂಗಳ ಧಾರ್ಮಿಕ ಭಾವನೆಗಳು ಮತ್ತು ರಾಷ್ಟ್ರಪುರುಷರ ಅಸ್ಮಿತೆಯ ಮೇಲೆ ಪದೇ ಪದೆ ಇಂತಹ ದಾಳಿಗಳು ನಡೆಯುತ್ತಿದ್ದರೂ ಸರ್ಕಾರವು ಕಣ್ಣುಮುಚ್ಚಿ ಕುಳಿತಿರುವುದು ದುಷ್ಕರ್ಮಿಗಳಿಗೆ ಪರೋಕ್ಷವಾಗಿ ಬೆಂಬಲ ನೀಡಿದಂತಿದೆ. ಪೊಲೀಸ್ ಇಲಾಖೆಯ ಮೇಲೆ ಸರ್ಕಾರಕ್ಕೆ ಹಿಡಿತವಿಲ್ಲದಿರುವುದು ಮತ್ತು ರಾಜಕೀಯ ಹಸ್ತಕ್ಷೇಪದಿಂದಾಗಿ ಇಂತಹ ದೇಶದ್ರೋಹಿ ಕೃತ್ಯವೆಸಗುವವರಿಗೆ ಯಾವುದೇ ಭಯವಿಲ್ಲದಂತಾಗಿದೆ. ಹಿಂದೂ ಸಮಾಜವನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಈ ಸರಣಿ ಘಟನೆಗಳನ್ನು ಹತ್ತಿಕ್ಕುವ ಬದಲು, ಅಪರಾಧಿಗಳ ವಿರುದ್ಧ ಮೃದು ಧೋರಣೆ ತಳೆಯುತ್ತಿರುವ ಸರ್ಕಾರದ ನಿಲುವು ಖಂಡನೀಯ ಎಂದರು.

ರಾಷ್ಟ್ರದ ಹೆಮ್ಮೆಯ ಸಂಕೇತವಾದ ಶಿವಾಜಿ ಮಹಾರಾಜರ ಮೆರವಣಿಗೆಗೆ ಅವಮಾನ ಮಾಡುವುದೆಂದರೆ ಅದು ಇಡೀ ಭಾರತೀಯ ಸಂಸ್ಕೃತಿಗೆ ಮಾಡಿದ ದ್ರೋಹವಾಗಿದೆ. ಕಾಂಗ್ರೆಸ್ ಸರ್ಕಾರವು ತನ್ನ ವೋಟ್ ಬ್ಯಾಂಕ್ ರಾಜಕಾರಣವನ್ನು ಬದಿಗಿಟ್ಟು ತಕ್ಷಣವೇ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯದ ಶಾಂತಿ ಮತ್ತು ಸೌಹಾರ್ದತೆ ಸಂಪೂರ್ಣವಾಗಿ ಹದಗೆಡಲು ನೇರ ಹೊಣೆಯಾಗಬೇಕಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿದ್ಯುತ್ ದರ ಹೆಚ್ಚಳಕ್ಕೆ ಕೆಸಿಸಿಐ ವಿರೋಧ

◆**ಹುಬ್ಬಳ್ಳಿ:** ವಿದ್ಯುತ್ ಸರಬರಾಜು ಕಂಪನಿಗಳು ವಿದ್ಯುತ್ ದರ ಹೆಚ್ಚಿಸಲು ಮುಂದಾಗಿರುವುದನ್ನು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ನಷ್ಟದಲ್ಲಿರುವ ವಿದ್ಯುತ್ ಸರಬರಾಜು ಕಂಪನಿಗಳನ್ನು ಸರಿದೂಗಿಸಲು ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಪ್ರತಿ ಯುನಿಟ್ ವಿದ್ಯುತ್ ಬೆಲೆ ಸರಾಸರಿ 12 ರಿಂದ 15ಪೈಸೆ ಹೆಚ್ಚಳವಾಗುವ ಸಾಧ್ಯತೆ ಇದ್ದು, ಈ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ ನಂತರ ಪರಿಷ್ಕೃತ ವಿದ್ಯುತ್ ದರ ಪ್ರಕಟವಾಗಲಿದೆ ಎಂಬ ಪ್ರಸ್ತಾವನೆ ಸಲ್ಲಿಸಿರುವುದು ಸರಿಯಲ್ಲ ಎಂದಿದ್ದಾರೆ.

ಇತ್ತೀಚೆಗೆ ಕೆಇಆರ್‌ಸಿ ಚೇರಮನ್ನ ಪಿ.ರವಿಕುಮಾರ ಅವರು ಮುಂದಿನ ವರ್ಷದವರೆಗೆ ಯಾವುದೇ ವಿದ್ಯುತ್ ದರ ಹೆಚ್ಚಳವಿರುವುದಿಲ್ಲವೆಂದು ಸ್ಪಷ್ಟೀಕರಿಸಿ, ರಾಜ್ಯದ 5 ಎಸ್ಕಾಂಗಳು ಸಲ್ಲಿಸಿರುವ ವಿದ್ಯುತ್ ದರ ಏರಿಕೆ ಪ್ರಸ್ತಾವನೆ ತಿರಸ್ಕರಿಸಿ, ವಿದ್ಯುತ್ ದರ ಏರಿಕೆ ಪ್ರಸ್ತಾವನೆಗಳನ್ನು ಕೈಬಿಟ್ಟಿದ್ದರು. ಈಗ ರಾಜ್ಯದ 5ಎಸ್ಕಾಂಗಳು ದರ ಹೆಚ್ಚಳ ಮಾಡುವ ಪ್ರಸ್ತಾವನೆ ಸಲ್ಲಿಸಿರುವುದು ಸಮಂಜಸವಲ್ಲ. ಕೈಗಾರಿಕೆಗಳು, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ವ್ಯಾಪಾರ ವಲಯ, ಕೃಷಿ ಕ್ಷೇತ್ರ ಮತ್ತು ಸಾಮಾನ್ಯ ಗೃಹ ಬಳಕೆದಾರರು ಇಂಧನ, ಕಚ್ಚಾ ವಸ್ತುಗಳು, ಸಾರಿಗೆ ಮತ್ತು ಬ್ಯಾಂಕಿಂಗ್ ವೆಚ್ಚಗಳ ಏರಿಕೆಯಿಂದಲೇ ಸಂಕಷ್ಟ ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ವಿದ್ಯುತ್ ದರ ಏರಿಕೆ ಮಾಡುವುದು ಉದ್ಯಮ ವಲಯದ ಮೇಲೆ ಮತ್ತಷ್ಟು ಭಾರ ಹಾಕಲಾಗುತ್ತಿದೆ ಎಂದು ತಿಳಿಸಿದ್ದಾರೆ. ಗೃಹ ಬಳಕೆದಾರರ ದೃಷ್ಟಿಯಿಂದಲೂ ವಿದ್ಯುತ್ ದರ ಏರಿಕೆ ಕುಟುಂಬಗಳ ಮಾಸಿಕ ಖರ್ಚು ಹೆಚ್ಚಿಸುವುದರೊಂದಿಗೆ ಜೀವನಮಟ್ಟದ ಮೇಲೆ ನೇರ ಪರಿಣಾಮ ಬೀರುತ್ತದೆ. ರೈತರು ಹಾಗೂ ನೀರಾವರಿ ಪಂಪ್‌ಸೆಟ್ ಬಳಕೆದಾರರಿಗೂ ಈ ಕ್ರಮ ಹೆಚ್ಚುವರಿ ಹೊರೆ ಆಗಲಿದೆ ಎಂದು ತಿಳಿಸಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ಸಮಗ್ರ, ಅಭಿವೃದ್ಧಿ, ಹೂಡಿಕೆ ವಾತಾವರಣ ಹಾಗೂ ಉದ್ಯೋಗ ಸೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ವಿದ್ಯುತ್ ದರ ಏರಿಕೆ ಪ್ರಸ್ತಾವನೆಯನ್ನು ಕೈಬಿಟ್ಟು ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದು ಸಂಸ್ಥೆಯು ವ್ಯಾಪಾರಸ್ಥರ ಉದ್ದಿಮೆದಾರರ ಹಾಗೂ ಜನತೆಯ ಪರವಾಗಿ ಆಯೋಗವನ್ನು ವಿನಂತಿಸಿಕೊಳ್ಳುತ್ತದೆ ಎಂದು ಗೌರವ ಕಾರ್ಯದರ್ಶಿ ಉದಯ ರೇವಣಕರ ತಿಳಿಸಿದ್ದಾರೆ.

JAMBAGI SUPERSPECIALITY EYE INSTITUTE
World-Class Eye Care. Guided by Compassion.

BELAGAVI LASER AND CONTACT LENS CLINIC



ಅತ್ಯಾಧುನಿಕ ತಂತ್ರಜ್ಞಾನದ ನೇತ್ರ ಚಿಕಿತ್ಸೆಗೆ ಮುನ್ನುಡಿ ಹಾಡಿದ ಡಾ.ಅಮೋಘ ಜಂಬಗಿ

ಸಾಮಾಜಿಕ ಸೇವೆಯೇ ಮುಖ್ಯ; ಅಂಧತ್ವ ನಿವಾರಣೆಯೇ ಪ್ರಾಮುಖ್ಯ

▸ ಸುನೀಲ್ ಮಲ್ಲಪ್ಪ ಕಬ್ಬೂರ

ಹಾರೂಗೇರಿ: ಸಮಾಜದ ಸೇವೆಯನ್ನು ಯಾವುದಾದರೊಂದು ನೆಪದಲ್ಲಿ ಮಾಡಲೇಬೇಕು ಎಂದುಕೊಂಡವರಿಗೆ ಡಾ.ಅಮೋಘ ಎಲ್ ಜಂಬಗಿ ಅವರು ಉದಾಹರಣೆ. ಬಡತನ ಕುಟುಂಬದ ಹಾಗೂ ಸರ್ಕಾರದ ಯೋಜನೆಗಳಿಗೆ ಒಳಪಟ್ಟಂತಹ ಕಣ್ಣು ದೋಷ ಹೊಂದಿರುವ ಜನತೆಗೆ ಇದೊಂದು ಬೆಳಕಿನ ಭಾಗ್ಯ.



ಬೆಳಗಾವಿ ಮಹಾನಗರದ ಹಾಸ್ಪಿಟಲ್ ಹಬ್ ಎಂದೇ ಕರೆಸಿಕೊಳ್ಳುವ ಕೊಲ್ಹಾಪುರ ಸರ್ಕಲ್, ನೆಹರೂ ನಗರದಲ್ಲಿ ವಿನೂತನವಾಗಿ ಹಾಗೂ ಸಂಪೂರ್ಣ ವೈಶಿಷ್ಟ್ಯದಿಂದ ಕೂಡಿರುವ ಅತ್ಯಾಧುನಿಕ ತಂತ್ರಜ್ಞಾನದ ಮಷಿನ್‌ಗಳನ್ನ ಅಳವಡಿಕೊಂಡಿರುವ ಸುಸಜ್ಜಿತ ಸ್ವಂತ ಕಟ್ಟಡದಲ್ಲಿ ಅಮೋಘವಾಗಿ ಪ್ರಾರಂಭವಾಗುತ್ತಿದೆ ಡಾ.ಅಮೋಘ ಎಲ್ ಜಂಬಗಿ ಅವರ ನೇತ್ರ ಆಸ್ಪತ್ರೆ. ಇಲ್ಲಿ ದೇಶ, ವಿದೇಶದಲ್ಲಿಯೂ ವಿರಳವಾಗಿರುವ ಅತ್ಯಾಧುನಿಕ ಕಣ್ಣಿನ ಯಂತ್ರಗಳಿದ್ದು ಕೇವಲ 6 ಸೆಕೆಂಡುಗಳಲ್ಲಿ ಕಣ್ಣಿನ ದೋಷ ಪರಿಹರಿಸುವ ವಿಶಿಷ್ಟ ಸಾಮರ್ಥ್ಯ ಇಲ್ಲಿದೆ.

ನೇತ್ರ ಚಿಕಿತ್ಸೆ ಎಂಬುದು ಕೇವಲ ಶಸ್ತ್ರಚಿಕಿತ್ಸೆ ಅಥವಾ ಚಿಕಿತ್ಸೆ ಮಾತ್ರವಲ್ಲ; ಅದು ವ್ಯಕ್ತಿಯ ಆತ್ಮವಿಶ್ವಾಸವನ್ನು ಮರಳಿ ನೀಡುವ ಕಾರ್ಯ. ಅತ್ಯಾಧುನಿಕ ತಂತ್ರಜ್ಞಾನ, ಸೂಕ್ಷ್ಮ ಶಸ್ತ್ರಚಿಕಿತ್ಸಾ ಕೌಶಲ್ಯ ಮತ್ತು ರೋಗಿಯ ಮೇಲಿನ ಮಾನವೀಯತೆ. ಈ ಮೂರನ್ನೂ ಸಮನ್ವಯಗೊಳಿಸುವ ವಿಶಿಷ್ಟ ಕ್ಷೇತ್ರವೇ ನೇತ್ರವಿಜ್ಞಾನ. ಡಾ.ಅಮೋಘ ಅವರ ದೃಷ್ಟಿಕೋನವು ಸ್ಪಷ್ಟವಾಗಿದೆ.

ನಮ್ಮ ಪ್ರದೇಶದ ಜನರಿಗೆ ವಿಶ್ವಮಟ್ಟದ, ಸಮಗ್ರ ಮತ್ತು ನೈತಿಕ ನೇತ್ರ ಚಿಕಿತ್ಸೆಯನ್ನು ಲಭ್ಯವಾಗುವಂತೆ ಮಾಡುವುದಲ್ಲದೆ, ಸಾಮಾಜಿಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಕತ್ತಲೆ ತುಂಬಿರುವ, ಕಣ್ಣಿಲ್ಲದ ರೋಗಿಗಳ ಆಶಾಕಿರಣವಾಗಿ ಬದುಕಿಗೆ ಬೆಳಕಾಗಲಿದ್ದಾರೆ.

ಬಡವರಿಗೆ ಉಚಿತ ಯೋಜನೆ ಹಾಗೂ ಕ್ಯಾಂಪ್:

ಅತ್ಯಂತ ಕಡು ಬಡತನದ ಕುಟುಂಬದವರು ಇಲ್ಲಿ ಉಚಿತವಾಗಿ ಚಿಕಿತ್ಸೆ ಪಡೆಯಬಹುದು ಸ್ವಂತ 16 ಸೀಟಿನ ಆಂಬ್ಯುಲೆನ್ಸ್ ಮೂಲಕ ಕ್ಯಾಂಪ್ ಮಾಡಿ ಆಸ್ಪತ್ರೆಗೆ ಕರೆದುಕೊಂಡು ಬಂದು ಉಚಿತ ಚಿಕಿತ್ಸೆ ನೀಡಿ ಮತ್ತೆ ಅವರನ್ನು ಮನೆಗೆ ತಲುಪಿಸುವ ಎಲ್ಲ ಕಾರ್ಯಗಳೂ ಉಚಿತವಾಗಿರುತ್ತವೆ. ಸರ್ಕಾರದ ಯಶಸ್ವಿನಿ, ಆರೋಗ್ಯ ಯೋಜನೆಗಳೂ ಇಲ್ಲಿ ಲಭ್ಯವಿದೆ. ಸಾಮಾನ್ಯರಿಂದ ಅಸಮಾನ್ಯ ಜನತೆಯವರೆಗೆ ಎಲ್ಲ ತರಹದ ಕಣ್ಣಿನ ಆರೈಕೆಯ ಸೇವೆಗಳು ಇಲ್ಲಿ ಲಭ್ಯವಾಗುತ್ತವೆ. ಅಲ್ಲದೆ ವಿಶೇಷವೆಂದರೆ ಮೊದಲೆಲ್ಲ ಇವತ್ತು ಆಸ್ಪತ್ರೆಗೆ ಬಂದರೆ ವಾರಗಟ್ಟಲೆ ಅಲ್ಲಿಯೇ ಅಡ್ಮಿಟ್ ಆಗುವ ಪರಿಸ್ಥಿತಿ ಇತ್ತು ಆದರೆ ಇದೀಗ ಆ ತೊಂದರೆ ಇಲ್ಲ, ಇವತ್ತು ಬಂದವರು ಸಾಯಂಕಾಲ ತಮ್ಮ ಚಿಕಿತ್ಸೆ ಮುಗಿಸಿಕೊಂಡು ಮನೆಗೆ ಹೋಗಬಹುದು.

ಅದೆಂಥದ್ದೇ ದೃಷ್ಟಿ ದೋಷ ಇರಲಿ ಇಲ್ಲಿ ಕ್ಷಣ ಮಾತ್ರದಲ್ಲಿ ನಿವಾರಣೆಯಾಗುವಂಥ ಅತ್ಯಾಧುನಿಕ ಮಶಿನರಿಗಳು ಇಲ್ಲಿ ಲಭ್ಯವಿದೆಯಲ್ಲದೆ, ನುರಿತ ನೇತ್ರ ತಜ್ಞರು ಇಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಹೈದ್ರಾಬಾದ್‌ನ ಎಲ್.ವಿ.ಪ್ರಸಾದ್ ಆಸ್ಪತ್ರೆಯೊಂದಿಗೆ ಟ್ಯಾಗ್ ಆಗಿರುವ ಈ ಆಸ್ಪತ್ರೆ ಅನೇಕ ತಂತ್ರಜ್ಞಾನಗಳನ್ನು, ಗುಣಮಟ್ಟದ ನೇತ್ರತಜ್ಞರ ಸಲಹೆಗಳನ್ನು ಹೊಂದಿದೆ. ಹೀಗಾಗಿ ಇಲ್ಲಿ ಬರುವ ಎಂಥದ್ದೇ ನೇತ್ರ ರೋಗಿ ಆಗಿರಲಿ ಕತ್ತಲೆಯಿಂದ ಬೆಳಕಿಗೆ ಬರಲೇಬೇಕು.



- 6 ಸೆಕೆಂಡುಗಳಲ್ಲಿ ಕಣ್ಣಿನ ದೋಷ ಪರಿಹರಿಸುವ ವಿಶಿಷ್ಟ ಸಾಮರ್ಥ್ಯ
- ಬಡವರಿಗೆ ಉಚಿತ ಚಿಕಿತ್ಸೆ
- ಎಲ್ಲ ತರಹದ ಕಣ್ಣಿನ ಆರೈಕೆಯ ಸೇವೆಗಳು ಲಭ್ಯ
- ಕಣ್ಣಿಲ್ಲದ ರೋಗಿಗಳ ಆಶಾಕಿರಣ
- ಆಸ್ಪತ್ರೆಯಲ್ಲಿ ನುರಿತ ತಜ್ಞ ವೈದ್ಯರ ತಂಡ

ನುರಿತ ತಜ್ಞ ವೈದ್ಯರ ತಂಡ

ಜಂಬಗಿ ಸೂಪರ್‌ಸ್ಪೆಷಾಲಿಟಿ ಐ ಹಾಸ್ಪಿಟಲ್‌ನಲ್ಲಿನ ವೈದ್ಯ ಸಂಕುಲ: ಡಾ.ಅಮೋಘ ಎಲ್. ಜಂಬಗಿ MBBS, MS (Ophthalmology) (RIO Chennai) FCRS, FAICO (Cornea) Medical Director, Cornea, Cataract & Refractive Surgeon ಡಾ. ಜಗದೀಶ ಬಿ. ಪಾಟೀಲ MBBS, DOMS, FGO, PHACO Surgeon ಡಾ. ಹೇಮಂತ ಆರ್. MBBS, MS (JIPMER), DNB, FVR (Sankara), FAICO Vitreoretinal Surgeon ಡಾ. ಸ್ನೇಹಾ ಎ. ಬಾಂದುರ್ಘೆ MBBS, DOMS, DNB (Aravind Eye Hospital), FICO (U.K.), Fellow in Glaucoma (Aravind Hospital), Glaucoma, Oculoplasty Surgeon ಡಾ. ಮಿತಾಲಿ ಶಹಾ MBBS, DOMS, MS. Fellow in Pediatric Ophthalmology (LV Prasad Eye Hospital, Hyd.) Paediatric Ophthalmology & Squint Surgeon

ಉಚಿತ ಸೇವೆಗಾಗಿ ಆಂಬ್ಯುಲೆನ್ಸ್





ಶಿಕ್ಷಣ ಸಾಧನೆ

ಹಾರೂಗೇರಿಯಲ್ಲಿಯೇ ಶ್ರೀ ಸಿದ್ಧಿವಿನಾಯಕ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ನರ್ಸಿಂಗ್ ಕಾಲೇಜುಗಳನ್ನ ಸ್ಥಾಪಿಸುವುದರ ಮೂಲಕ ಅನೇಕ ಯುವಕ, ಯುವತಿಯರಿಗೆ ಉದ್ಯೋಗ ನೀಡಿದ್ದಲ್ಲದೇ, ಉತ್ತಮ ಕಲಿಕೆಯ ವಾತಾವರಣ, ನುರಿತ ಶಿಕ್ಷಕ ವೃಂದ, ಸುಸಜ್ಜಿತ ಕಟ್ಟಡದಲ್ಲಿ ಅನೇಕ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದಾರೆ.ಬೆಳಗಾವಿಯಲ್ಲಿ ಜಂಬಗಿ ವಿಜ್ಞಾನ ಪಿಯು ಕಾಲೇಜು ಸ್ಥಾಪಿಸಿ ಅಲ್ಲಿಯೂ ಛಾಪು ಮೂಡಿಸಿರುವ ಇವರ ಶಿಕ್ಷಣದ ಆಸಕ್ತಿ ನಿಜಕ್ಕೂ ಶ್ಲಾಘನೀಯ.

ಡಾ.ಅಮೋಘ ಎಲ್ ಜಂಬಗಿ ಅವರ ಸಾಧನಾ ಪಥ

ಡಾ.ಅಮೋಘ ಎಲ್ ಜಂಬಗಿ ಅವರು ಬರೀ ನೇತ್ರ ತಜ್ಞರಾಗಿರದೆ ದೇಶ ವಿದೇಶಗಳ ಹಲವಾರು ಪ್ರಶಸ್ತಿಗಳನ್ನ ತಮ್ಮದಾಗಿಸಿಕೊಂಡಿದ್ದು, ನಮ್ಮ ನಾಡಿನ ನಾಡಿ ಬಡಿತದಲ್ಲಿ ಇಂತಹ ನೇತ್ರ ಕಾಳಜಿಯ ತುಡಿತದ ಹೃದಯ ಸಿಕ್ಕಿದ್ದು ಭಾಗ್ಯವೇ ಸರಿ.

ಅವರಿಗೆ ಸಂದ ಗೌರವ, ಮಾನ ಸನ್ಮಾನಗಳು: Vos Excellence 34 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ನೇತ್ರ ಚಿಕಿತ್ಸೆ ಕ್ಷೇತ್ರದಲ್ಲಿ ನವೀನತೆಗೆ ಪ್ರಶಸ್ತಿ, 2025 (Best paper of the session) - APACRS, 2025, ಉತ್ತಮ ಪ್ರಬಂಧ ಅಧಿವೇಶನ, ಕ್ಯಾಟರಾಕ್ಟ್ (Best paper session, Cata ಮದಾಬಾದ್, 2025, ನವದೆಹಲಿ, (Best physical poster, comprehensive) AIOC, 2025, ರನ್ನರ್-ಅಪ್, ಇ.ಟಿ. ಸೆಲ್ವಂ ಕ್ವಿಜ್ – 2021, ಮದ್ರಾಸ್, ICON, 2021ರ ಮದ್ರಾಸ್ ICON ಆಯೋಜನಾ ಸಮಿತಿಯ ಸದಸ್ಯರು, ರನ್ನರ್ ಅಪ್ ಅತ್ಯುತ್ತಮ ಪ್ರಕರಣ ಪ್ರಸ್ತುತಿಕೆ – (Best case presentation) 2021, TANEYEQUEST ರನ್ನರ್–ಅಪ್, RADNET ಕ್ವಿಜ್ – 2021 (Student Editor) 2020–2021, TJOSR ಪ್ರಥಮ ಬಹುಮಾನ, MCOA ಕ್ವಿಜ್ 2019.

ಮುಂದಿನ ದಿನಗಳಲ್ಲಿ

ನಾನು ಆದರೆ ಕಣ್ಣಿನ ವೈದ್ಯನೇ ಆಗುವೆ ಏಕೆಂದರೆ ಸಂಪೂರ್ಣವಾಗಿ ಸಮಾಜ ಬೆಳಕು ಕಾಣಬೇಕು. ಅಂಧತ್ವ ಮುಕ್ತ ಸಮಾಜ ನಿರ್ಮಾಣ ಆಗಬೇಕು ಎಂಬ ಮಹದುದ್ದೇಶದಿಂದ ಈ ನೇತ್ರ ವಿಭಾಗ ಆಯ್ಕೆ ಮಾಡಿಕೊಂಡ ಇವರು ಮುಂದಿನ ದಿನಗಳಲ್ಲಿ ತಮ್ಮ ಹುಟ್ಟೂರಾದ ಹಾಗೂ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆದಿರುವ ಹಾರೂಗೇರಿಯಲ್ಲಿ ಒಂದು ಬೃಹತ್ ಕಣ್ಣಿನ ಆಸ್ಪತ್ರೆ ತೆಗೆದು ಅಲ್ಲಿ ಖಾಯಂ ಆಗಿ ಓರ್ವ ನೇತ್ರ ತಜ್ಞರನ್ನು ನೇಮಿಸಿ, ವಾರಕ್ಕೊಮ್ಮೆ ಇಲ್ಲಿ ವಿಸಿಟ್ ಮಾಡುವ ಮೂಲಕ ಹಳ್ಳಿಯ ಪ್ರದೇಶದಲ್ಲಿಯೂ ತಮ್ಮ ಸೇವೆಗೆ ಲಭ್ಯವಾಗಲಿದ್ದಾರೆ ಡಾ.ಅಮೋಘ ಅವರು. ಈಗಾಗಲೇ ಹಾರೂಗೇರಿಯಲ್ಲಿ ಆಸ್ಪತ್ರೆ ಕಟ್ಟಡ ಪ್ರಾರಂಭವಾಗಿದ್ದು ಇನ್ನೇನು ಕೆಲವೇ ದಿನಗಳಲ್ಲಿ ಬೆಳಕು ಕಾಣಲಿದೆ.

ರೆಡಿಯಾಲಜಿಸ್ಟ್ ಡಾ.ಪ್ರೇರಣಾ ಅ.ಜಂಬಗಿ

ಇಲ್ಲಿನ ರೋಗಿಗಳಿಗೆ ಅನುಕೂಲ ಆಗಬೇಕು. ಒಂದೇ ಸೂರಿನಡಿಯಲ್ಲಿ ಎಲ್ಲಾ ಸೌಲಭ್ಯಗಳು ಸಿಗಬೇಕು ಎಂಬ ಉದ್ದೇಶದಿಂದ ಡಾ.ಅಮೋಘ ಅವರ ಧರ್ಮಪತ್ನಿಯವರಾದ ಡಾ.ಪ್ರೇರಣಾ ಅವರು ರೇಡಿಯಾಲಜಿ, ಸಿಟಿ ಸ್ಕ್ಯಾನಿಂಗ್, ಎಂ.ಆರ್.ಐ. ಕೇಂದ್ರವನ್ನು ಇದೇ ಆಸ್ಪತ್ರೆಯಲ್ಲಿ ಪ್ರಾರಂಭಿಸಲಿದ್ದಾರೆ. ಇದು ದೃಷ್ಟಿ ದೋಷದ ರೋಗಿಗಳಿಗೆ ಮತ್ತಷ್ಟು ಸಹಾಯಕಾರಿಯಾಗಲಿದೆ.



ಡಾ. ವರ್ಷಾ ಎಲ್ ಜಂಬಗಿ

ಡಾ. ಲಕ್ಷ್ಮಣ ಜಂಬಗಿ ಅವರ ಅದೃಷ್ಟದ ಬಾಗಿಲು ತೆರೆದ ಅವರ ಧರ್ಮಪತ್ನಿ ಡಾ.ವರ್ಷಾ ಅವರು ಮಹಿಳೆಯರ ಪ್ರಸೂತಿ ತಜ್ಞರಾಗಿ ಅನೇಕ ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಇಂತಹ ಜಾಣ ಜ್ಞಾನಿ ಧರ್ಮಪತ್ನಿಯನ್ನು ಕೈ ಹಿಡಿದು ಇಂದು ವೈದ್ಯಕೀಯ, ಶಿಕ್ಷಣ ರಂಗದಲ್ಲಿ ರಾಷ್ಟ್ರವೇ ಹುಬ್ಬೇರಿಸುವಂಥ ಸಾಧನೆಯ ಮೆಟ್ಟಿಲೇರಿದ್ದಾರೆ ಡಾ.ಜಂಬಗಿಯವರು.

ನೇತ್ರ ತಜ್ಞರಾಗಿ ಸುಪುತ್ರ ಡಾ.ಅಮೋಘ ಜಂಬಗಿ

ತಮ್ಮಂತೆಯೇ ಮಗನೂ ಕೂಡ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂಬ ಹಂಬಲದಿಂದ ಡಾ.ಜಂಬಗಿ ದಂಪತಿಗಳು ತಮ್ಮ ಮಗನನ್ನು ದೇಶದ ಪ್ರತಿಷ್ಠಿತ Regional institute of opthalmology Chennai ನಲ್ಲಿ ಅಧ್ಯಯನ ಮಾಡಿ NEET ಪರೀಕ್ಷೆಯಲ್ಲಿ 73ನೆಯ ರ್‍ಯಾಂಕ್ ಪಡೆದು, ಇಂದು ಬೆಳಗಾವಿ ಮಹಾನಗರದಲ್ಲಿ ಸ್ವಂತದಾದ ದೊಡ್ಡ ಪ್ರಮಾಣದ ಮಲ್ಟಿಸ್ಪೇಷಾಲಿಟಿ ಆಸ್ಪತ್ರೆ ನಿರ್ಮಿಸಿ ನೇತ್ರ ಚಿಕಿತ್ಸೆಯಲ್ಲಿ ಅಮೋಘವಾಗಿ ಕಾರ್ಯನಿರ್ವಹಿಸುವಂತೆ ಮಗ ಅಮೋಘನಿಗೆ ಮಾರ್ಗವಾಗಿದ್ದಾರೆ.

ಅತ್ಯಾಧುನಿಕ AI ತಂತ್ರಜ್ಞಾನದ ನೂತನ ಹೆಜ್ಜೆ

ಆಸ್ಪತ್ರೆಯಲ್ಲಿ ಲಭ್ಯವಿರುವ ಅತ್ಯಾಧುನಿಕ ಮಷಿನ್‌ಗಳು



ಕ್ಯಾಟರಾಕ್ಟ್ ಚಿಕಿತ್ಸೆಗಾಗಿ ಅತ್ಯಂತ ವೇಗದ ಹಾಗೂ ಪರಿಪೂರ್ಣವಾದ (SLACS) (ಅಲ್ಕಾನ್ ಯುನಿಟಿ) ರೊಬೋಟಿಕ್ 4ಈ (Pacho) ಮಷಿನ್, ವಿಶ್ವದ ಅತಿ ವೇಗದ ಲೇಸರ್ ಹಾಗೂ ಕನ್ನಡಕ ಮುಕ್ತಗೊಳಿಸುವ ಚಿಕಿತ್ಸಾ ಮಷಿನ್ Zeiss Mel 90 ಬೆಳಗಾವಿಯಲ್ಲಿ ಮೊಟ್ಟ ಮೊದಲ ಬಾರಿಗೆ Trans PRK ,LASIK ಮತ್ತು SMILE ಶಸ್ತ್ರಚಿಕಿತ್ಸೆಗಳಲ್ಲಿ ಅತ್ಯುನ್ನತ ನಿಖರತೆಯ ಚಿಕಿತ್ಸೆ. ವಿಶ್ವದರ್ಜೆಯ ಚಿಕಿತ್ಸೆಗಳ ಮೂಲಕ ಬೆಳಗಾವಿಯಲ್ಲಿ ಮೊದಲ ಬಾರಿಗೆ ಅತ್ಯುತ್ತಮ ಹಾಗೂ ಅತ್ಯುನ್ನತ ನೇತ್ರ ಸೇವೆಗಳನ್ನು ಹೊರತರುತ್ತಿರುವ ಡಾ.ಅಮೋಘ ಎಲ್ ಜಂಬಗಿ ಅವರ ಕಾರ್ಯ ನಿಜಕ್ಕೂ ಶ್ಲಾಘನೀಯ ಹಾಗೂ ಸೀಮಾತೀತ.

ಸಾರ್ಥಕ ಬದುಕಿನತ್ತ ಡಾ.ಜಂಬಗಿ ದಂಪತಿಗಳು

ಪ್ರಸಿದ್ಧ ಹೃದಯ ತಜ್ಞ ಡಾ.ಎಲ್ ಎಸ್ ಜಂಬಗಿ

ಡಾ.ಲಕ್ಷಣ ಎಸ್ ಜಂಬಗಿಯವರಿಗೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನೇಕ ಅವಕಾಶಗಳಿದ್ದರೂ ಕೂಡ ನಮ್ಮ ಜನ ಆಕಡೆ, ಈ ಕಡೆ ಹೋಗಬಾರದು ಅವರಿದ್ದಲ್ಲೇ ವೈದ್ಯಕೀಯ ಸೇವೆ ಸಿಗಬೇಕು ಎಂಬ ಉದ್ದೇಶದಿಂದ ಇಲ್ಲಿಯೇ ಆಸ್ಪತ್ರೆ ಪ್ರಾರಂಭಿಸಿ ಮಾನವೀಯತೆ ಮೆರೆದಿದ್ದಾರೆ. ಬರೀ ಹೃದಯ ರೋಗ ತಜ್ಞರಾಗಿರದೆ ಸಾವಿರಾರು ಸಂಖ್ಯೆಯಲ್ಲಿ ಹಾವು ಕಡಿತದಿಂದ ನರಳಾಡುವ ಸಾವಿರಾರು ರೋಗಿಗಳನ್ನು ರಕ್ಷಿಸಿದ ಇವರ ಕಾರ್ಯ ನಿಜಕ್ಕೂ ಶ್ಲಾಘನೀಯ. ಎಂಥದ್ದೇ ಹಾವು ಕಚ್ಚಿರಲಿ ಆ ರೋಗಿಯನ್ನು ರಕ್ಷಿಸಿಯೇ ಬಿಡುತ್ತಾರೆ ಡಾ.ಎಲ್. ಎಸ್. ಜಂಬಗಿ ಅವರು.

ವಿಶೇಷ ಕಾರ್ಯಕ್ರಮ ಮನೆ ಭೇಟಿ ಸೇವೆ

- ದೃಷ್ಟಿದೋಷ ಸರಿಪಡಿಸುವ ಶಸ್ತ್ರಚಿಕಿತ್ಸೆ (ರಿಪ್ರ್ಯಾಕ್ಟಿವ್ ಸರ್ಜರಿ)
- ರೆಟಿನಾ ಶಸ್ತ್ರಚಿಕಿತ್ಸೆ
- ಮಕ್ಕಳ ಕ್ಯಾಟರಾಕ್ಟ್ (ಪಿಡಿಯಾಟ್ರಿಕ್ ಕ್ಯಾಟರಾಕ್ಟ್)
- ಸ್ಕ್ವಿಂಟ್ (ಕಣ್ಣು ವಕ್ರತೆ) ಶಸ್ತ್ರಚಿಕಿತ್ಸೆ.
- ಕಾಂಟಾಕ್ಟ್ ಲೆನ್ಸ್ ಕ್ಲಿನಿಕ್
- ಡ್ರೈ ಐ (ಒಣ ಕಣ್ಣು) ಕ್ಲಿನಿಕ್ ಔಷಧಾಲಯ (ಫಾರ್ಮಸಿ)
- ಟೆಲಿ-ಆಫ್ತಾಲ್ಮಾಲಜಿ
- ನಗದು ರಹಿತ ಸೌಲಭ್ಯ (ಕ್ಯಾಶ್ಲೆಸ್ ಫೆಸಿಲಿಟಿ)

ನೇತ್ರ ಆಸ್ಪತ್ರೆಯ ವಿಶೇಷ ಸೌಲಭ್ಯಗಳು

- ಕ್ಯಾಟರಾಕ್ಟ್ (ಮೋತಿಬಿಂದು) ಶಸ್ತ್ರಚಿಕಿತ್ಸೆ
- ಕಾರ್ನಿಯಾ ಸೇವೆಗಳು
- ಗ್ಲಾಕೋಮಾ (ಕಣ್ಣಿನ ಒತ್ತಡ) ನಿರ್ಣಯ ಮತ್ತು ಶಸ್ತ್ರಚಿಕಿತ್ಸೆ
- ಒಕ್ಯುಲೋಪ್ಲಾಸ್ಟಿ ಮತ್ತು ಕಣ್ಣಿನ ಕ್ಯಾನ್ಸರ್ (ಒಕ್ಯುಲರ್ ಆಂಕಾಲಜಿ)
- ಆಪ್ಟಿಕಲ್ಸ್
- ಐ ಬ್ಯಾಂಕ್ (ನೇತ್ರ ದಾನ ಕೇಂದ್ರ)
- ಲ್ಯಾಬ್ ಸೇವೆಗಳು

ನೇತ್ರ ಚಿಕಿತ್ಸೆಗಾಗಿ ಶಿಕ್ಷಣ; ನೇತ್ರ ಶಿಕ್ಷಣಕ್ಕಾಗಿ ಜಂಬಗಿ ಆಡಿಟೋರಿಯಂ

ಬೆಳಗಾವಿಯ ವಿಶಾಲವಾದ ಈ ಆಸ್ಪತ್ರೆಯ ಮೇಲ್ಭಾಗದಲ್ಲಿ ನೇತ್ರ ಚಿಕಿತ್ಸಾ ತರಬೇತಿ ಶಿಕ್ಷಣಕ್ಕಾಗಿ ಸಭಾಂಗಣವು ನಿರ್ಮಾಣವಾಗಿದ್ದು ಸದ್ಯದಲ್ಲಿಯೇ ಅದೂ ಕೂಡ ಪ್ರಾರಂಭವಾಗಲಿದೆ.ಒಟ್ಟಾರೆ ಉತ್ತರ ಕರ್ನಾಟಕದ ಅತ್ಯಂತ ದೊಡ್ಡ ಹಾಗೂ ಎಲ್ಲಾ ಸೌಲಭ್ಯಗಳನ್ನು ಒಂದೇ ಕಡೆಯಲ್ಲಿ ಹೊಂದಿರುವ ನಮ್ಮ ಹೆಮ್ಮೆಯ ಜಂಬಗಿ ನೇತ್ರ ಆಸ್ಪತ್ರೆಗೆ ಅಭಿನಂದನೆಗಳು.

॥ ಶ್ರೀ ಸಿದ್ಧಿವಿನಾಯಕ ಪ್ರಸನ್ ॥

JAMBAGI SUPERSPECIALITY EYE INSTITUTE
World-Class Eye Care. Guided by Compassion.

ಆಮಂತ್ರಣ

BELAGAVI LASER AND CONTACT LENS CLINIC

ಶ್ರೀ. ಎಸ್. ಎಸ್. ಜಂಬಗಿ ಮೆಮೊರಿಯಲ್ ಎಜ್ಯುಕೇಶನ್ & ಚಾರಿಟೇಬಲ್ ಟ್ರಸ್ಟನ
ಬೆಳಗಾವಿ ನಗರದಲ್ಲಿ
ಅತ್ಯಾಧುನಿಕ ಸೌಲಭ್ಯಗಳೊಂದಿಗೆ ನಿರ್ಮಿತವಾದ
ಜಂಬಗಿ ಸೂಪರ್ ಸ್ಪೆಷಾಲಿಟಿ ನೇತ್ರ ಸಂಸ್ಥೆ
ಮತ್ತು
ಬೆಳಗಾವಿ ಲೇಸರ್ ಮತ್ತು ಕಾಂಟ್ಯಾಕ್ಟ್ ಲೆನ್ಸ್ ಕ್ಲಿನಿಕ್
ಬೆಳಗಾವಿ
ಇದರ ಪ್ರಾರಂಭೋತ್ಸವ
ರವಿವಾರ, ದಿನಾಂಕ 22/02/2026
ಸಮಯ : ಮುಂಜಾನೆ 10:30 ಗಂಟೆಗೆ
ಸರ್ವರಿಗೂ ಸುಸ್ವಾಗತ

ಕನ್ಸಲ್ಟಿಂಗ ವೈದ್ಯರು

ಡಾ॥ ಅಮೋಘ ಎಲ್. ಜಂಬಗಿ
MBBS, MS (Ophthalmology) (RIO Chennai) FCRS, FAICO (Cornea)
Medical Director, Cornea, Cataract & Refractive Surgeon

ಡಾ॥ ಜಗದೀಶ ಬಿ. ಪಾಟೀಲ
MBBS, DOMS, FGO, PHACO Surgeon

ಡಾ॥ ಹೇಮಂತ ಆರ್.
MBBS, MS (JIPMER), DNB, FVR (Sankara), FAICO
Vitreoretinal Surgeon

ಡಾ॥ ಸ್ನೇಹಾ ಎ. ಬಾಂದುರ್ಘೆ
MBBS, DOMS, DNB (Aravind Eye Hospital), FICO (U.K.),
Fellow in Glaucoma (Aravind Hospital),
Glaucoma, Oculoplasty Surgeon

ಡಾ॥ ಮಿತಾಲಿ ಶಹಾ
MBBS, DOMS, MS.
Fellow in Pediatric Ophthalmology
(LV Prasad Eye Hospital, Hyd.)
Paediatric Ophthalmology & Squint Surgeon

ನೆಹರು ನಗರ, ಕೋಲ್ಹಾಪೂರ ಸರ್ಕಲ್ ಹತ್ತಿರ,
ಬೆಳಗಾವಿ – 590 010. (ಕರ್ನಾಟಕ)
+91 822 900 8221, +91 822 900 8225
helpdesk@jambagieyeinstitute.com
www.jambagieyeinstitute.com



ಯುವಕರಿಗೆ ಕೌಶಲ ತರಬೇತಿ ಅನಿವಾರ್ಯ: ವಿವೇಕ್

ಶಿಕಾರಿಪುರ: ಯುವ ಪೀಳಿಗೆ ಕೇವಲ ಉನ್ನತ ಶೈಕ್ಷಣಿಕ ಫಲಿತಾಂಶಕ್ಕೆ ಮಾತ್ರ ತೃಪ್ತಿರಾಗದೆ ಎಲ್ಲ ಕ್ಷೇತ್ರ ಗಳಲ್ಲಿನ ವೇಗದ ಬದಲಾವಣೆಯ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸಿ ಪೂರಕವಾಗಿ ಕೌಶಲ್ಯಗಳನ್ನು ಪಡೆ ಯುವ ಅನಿವಾರ್ಯತೆ ಇದೆ. ಬದ್ಧತೆ, ಆತ್ಮವಿಶ್ವಾಸ, ಸಮಯಪ್ರಜ್ಞೆಯ ಮನೋಭಾವವನ್ನು ಅಳವಡಿಸಿ ಕೊಂಡು ನಿರಂತರವಾಗಿ ಪ್ರಯತ್ನಿಸಬೇಕು ಎಂದು ಮೂಡಬಿದರೆ ಆಳ್ವಾಸ್ ಫೌಂಡೇಶನ್ ಟ್ರಸ್ಟಿ ವಿವೇಕ್ ಆಳ್ವ ಸಲಹೆ ನೀಡಿದರು

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಆವರಣ ದಲ್ಲಿ ಸತತ 2 ದಿನಗಳ ಕಾಲ ನಡೆದ ಬೃಹತ್ ಉದ್ಯೋಗ ಮೇಳದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಸ್ಥಳೀಯ ಯುವಕ ಯುವತಿಯರ ಮತ್ತು ಪೋಷಕರ ಕನಸು ನನಸಾಗಿಸುವಲ್ಲಿ ಉದ್ಯೋಗ ಮೇಳ ಯಶಸ್ವಿ ಯಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಗ್ರಾಮೀಣ ಪ್ರದೇಶ ಹೆಚ್ಚಿರುವ ತಾಲೂಕಿನಲ್ಲಿನ ಉದ್ಯೋಗಾಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮೇಳದಲ್ಲಿ ಭಾಗವಹಿಸಿ 83ಕ್ಕಿಂತ ಹೆಚ್ಚಿನ ಕಂಪನಿಗಳ ಸಂದರ್ಶನ ಎದುರಿಸಿ ಧನಾತ್ಮಕ ಅನುಭವ ಗಳನ್ನು ಹೊತ್ತು ಉದ್ಯೋಗ ಭರವಸೆಯ ಆತ್ಮವಿಶ್ವಾಸದಲ್ಲಿದ್ದಾರೆ. ಸಂಸದ ರಾಘವೇಂದ್ರ, ಶಾಸಕ ವಿಜಯೇಂದ್ರ ನೇತೃತ್ವದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಜನ್ಮದಿನದ ಅಂಗವಾಗಿ ನಡೆದ ಮೇಳದ ಯಶಸ್ಸಿಗೆ ಕಳೆದ 2 ತಿಂಗಳಿನಿಂದ ಉದ್ಯೋಗಾಕಾಂಕ್ಷಿಗಳಿಗೆ ಶಿರಾಳಕೊಪ್ಪ ಮತ್ತು ಶಿಕಾರಿಪುರದಲ್ಲಿ ಐದು ಹಂತದಲ್ಲಿ ಮಾಹಿತಿ ಶಿಬಿರ ಆಯೋಜಿಸಿ ಆತ್ಮವಿಶ್ವಾಸವನ್ನು ತುಂಬುವ ಮೂಲಕ 2 ಸಾವಿರಕ್ಕಿಂತ ಹೆಚ್ಚು ಅಭ್ಯರ್ಥಿಗಳಿಗೆ ಸೂಕ್ತ ರೀತಿಯ ಮಾರ್ಗದರ್ಶನದಿಂದ ಮೇಳದಲ್ಲಿ ಭಾಗವಹಿಸಲು ಪ್ರೇರೇಪಣೆ ದೊರೆತಿತ್ತು ಎಂದು ತಿಳಿಸಿದರು.

ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ಒಟ್ಟು 1363 ಉದ್ಯೋಗಾಕಾಂಕ್ಷಿಗಳು ಸಂದರ್ಶನ ಎದುರಿಸಿ 1181 ಅಭ್ಯರ್ಥಿ ವಿವಿಧ ಕಂಪನಿಯ ಆಯ್ಕೆ ಹಂತಕ್ಕೆ ಪರಿಗಣಿಸಿ ಅಂತಿಮ ಹಂತದಲ್ಲಿ 351 ಅಭ್ಯರ್ಥಿಗಳಿಗೆ ನೇಮಕಾತಿ ಅಂತಿಮಗೊಳಿಸಲಾಗಿದೆ ಎಂದ ಅವರು, ಮೇಳ ಹೆಚ್ಚಿನ ಯುವಕ ಯುವತಿಯರಿಗೆ ಉದ್ಯೋಗ ದೊರಕಿಸಿಕೊಡುವ ಭರವಸೆಯನ್ನು ನೀಡುತ್ತದೆ ಎಂದು ಆಶಯ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಸಂಸ್ಥೆ ಅಧ್ಯಕ್ಷ ಶಿವಕುಮಾರ್, ಆಡಳಿತ ಸಮನ್ವಯಾಧಿಕಾರಿ ಕುಬೇರಪ್ಪ, ಶ್ರವಣ, ಬಸವರಾಜ ಮಠದ್, ಪ್ರಾಚಾರ್ಯ ಡಾ.ರವೀಂದ್ರ, ಡಾ.ವೀರೇಂದ್ರ, ವಿದ್ಯಾಶಂಕರ್, ವಿಶ್ವನಾಥ, ಪ್ರಶಾಂತ್ ಕುಬಸದ್ ಇತರರು ಉಪಸ್ಥಿತರಿದ್ದರು.



ನಿರಂತರ ಪರಿಶ್ರಮ ದೇಶದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಗುರುತಿಸಿಕೊಂಡ ಆಳ್ವಾಸ್ ಶಿಕ್ಷಣ ಸಂಸ್ಥೆ ನಮ್ಮ ಸಂಸ್ಥೆಯೊಂದಿಗೆ ಕೈ ಜೋಡಿಸಿ ಕಳೆದ ಎರಡೂವರೆ ತಿಂಗಳಿನಿಂದ ವಿವೇಕ್ ಆಳ್ವಾ ನಿರಂತರ ಪರಿಶ್ರಮ ಮತ್ತು ಸತತ ಮಾರ್ಗದರ್ಶನದಿಂದ ಮೇಳ ಯಶಸ್ವಿಯಾಗಿದೆ. ಇದರಿಂದಾಗಿ ಸ್ಥಳೀಯ ಹಲವು ಯುವಕ ಯುವತಿಯರಿಗೆ ಉದ್ಯೋಗ ದೊರೆಯುವಂತಾಗಿದೆ ಎಂದು ಪ್ರಾಚಾರ್ಯ ಡಾ.ಶಿವಕುಮಾರ್ ತಿಳಿಸಿದರು.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಾವು ಮಾತನಾಡುವಾಗ ಇಂಗ್ಲಿಷ್ ಬೆರೆಸುವುದೇ ದೊಡ್ಡ ಗೌರವ ಎಂದುಕೊಳ್ಳುತ್ತಿರುವುದು ವಿಷಾದದ ಸಂಗತಿ
- ಡಾ.ಬಾಲಮುಕುಂದ ಪಾಂಡೆ

- ಇಂಗ್ಲಿಷರು ಹೋದರೂ ಇಂಗ್ಲಿಷರ ಭಾಷೆ, ವೇಷ, ಹುಟ್ಟುಹಬ್ಬಕ್ಕೆ ದೀಪ ಬೆಳಗಿಸುವ ಬದಲು ದೀಪ ಆರಿಸುವಂತಹ ಆಚರಣೆಗಳು ಆದರ್ಶ ಅಂತ ಆಗುತ್ತಿವೆ. ಇಂಗ್ಲಿಷರು ಇನ್ನೂ ಇರುತ್ತಿದ್ದರೆ ನಿಜವಾಗಿಯೂ ನಮ್ಮ ಮಂದಿ ಇನ್ನೂ ಬಹಳ ಬಹಳ ಮುಂದುವರಿದವರಾಗಿರಬಹುದಿತ್ತು!

ದಿನ ಭವಿಷ್ಯ

ಮೇಷ ಬಂಧುಗಳ ಅನಿರೀಕ್ಷಿತ ಭೇಟಿ. ಬಾಕಿ ಇರುವ ಹೊಣೆಗಾರಿಕೆ ಪೂರ್ತಿಸಿ. ಕೌಟುಂಬಿಕ ಪರಿಸರ ಉಲ್ಲಾಸಕಾರಿ. ಶಾಪಿಂಗ್ ಸಂಭ್ರಮ.

ವೃಷಭ ಸಂಬಂಧದಲ್ಲಿ ಮಹತ್ತರ ತಿರುವು. ಆತ್ಮೀಯ ಸಂಬಂಧ ಹೊಸ ಆಯಾಮ ಪಡೆದೀತು. ಮಾನಸಿಕ ಉದ್ವಿಗ್ನತೆ ಶಮನ. ನಿರಾಳತೆ.

ಮಿಥುನ ಮುಕ್ತವಾಗಿ ಮಾತಾಡಿ, ಸಂಬಂಧ ಹಗುರಗೊಳಿಸಿ. ಇದು ನಿಮಗೆ ಇಂದಿನ ಸಲಹೆ. ಅನಾರೋಗ್ಯ ಇದ್ದರೆ ಕಡೆಗಣಿಸಬೇಡಿ.

ಕಟಕ ನಿಮ್ಮ ಪೂರ್ಣ ಪ್ರಯತ್ನ ಹಾಕಿ, ಯಶಸ್ಸು ಸಿಗುವುದನ್ನು ಕಾಣಿರಿ. ಅನ್ಯರ ಟೀಕೆಗೆ ಗಮನ ಕೊಡಬೇಡಿ. ಬಾಂಧವ್ಯ ಕೆಡದಂತೆ ಎಚ್ಚರ ವಹಿಸಿ.

ಸಿಂಹ ಸಂತೋಷವೆಂಬುದು ಮನಸ್ಸಿನ ಸ್ಥಿತಿ. ಅದನ್ನು ಬೇರೆಲ್ಲೋ ಹುಡುಕಬೇಡಿ. ದ್ವೇಷ, ವೈರ ಬಿಟ್ಟು ಹೊಂದಾಣಿಕೆಯ ದಾರಿ ಹಿಡಿಯಿರಿ. ಧನವ್ಯಯ.

ಕನ್ಯಾ ನಿಮ್ಮ ಅದೃಷ್ಟದ ದಿನ. ಎಲ್ಲ ಕಾರ್ಯದಲ್ಲೂ ಯಶಸ್ಸು. ಇಷ್ಟಾರ್ಥ ಪೂರೈಕೆ. ಬಂಧುವಿನಿಂದ ಶುಭ ಸುದ್ದಿ ಕೇಳುವಿರಿ. ಧನಪ್ರಾಪ್ತಿಯಾದೀತು.

ತುಲಾ ವೈರುಧ್ಯಮಯ ಭಾವಗಳ ಸಂಘರ್ಷ. ಹೆಚ್ಚುವರಿ ಹೊಣೆ. ತಾಳ್ಮೆ ಅವಶ್ಯ. ಚಿಂತನೆಯಲ್ಲಿ ಸ್ಪಷ್ಟತೆಯಿರಲಿ. ಮಾತು ಹದ ಮೀರದಿರಲಿ.

ವೃಶ್ಚಿಕ ದಂಪತಿಗೆ ಶುಭ ಬೆಳವಣಿಗೆ. ಹಣಕಾಸು ಸ್ಥಿರ. ಆರೋಗ್ಯ ಚಿಂತೆ ಪರಿಹಾರ. ಆಪ್ತರ ಜತೆ ಪ್ರವಾಸದ ಅವಕಾಶ. ಆದಾಯದಲ್ಲಿ ಉನ್ನತಿ.

ಧನು ಯಾವುದೇ ಕೆಲಸ ಇಂದು ವೈಫಲ್ಯ ಕಾಣದು. ಆದರೆ ಕೌಟುಂಬಿಕ ಸೌಹಾರ್ದತೆಗೆ ಭಂಗ ಬಂದೀತು. ದುಡುಕಿನ ವರ್ತನೆ ನಿವಾರಿಸಿ.

ಮಕರ ರಹಸ್ಯ ವೈರಿಗಳು ನಿಮ್ಮ ಬೆನ್ನ ಹಿಂದೆ ಇದ್ದಾರೆ. ಅವರ ಹಿಡಿತಕ್ಕೆ ಸಿಗದಂತೆ ಎಚ್ಚರ ವಹಿಸಿ. ಭಾವನೆಗಳ ಸಂಘರ್ಷ ಎದುರಿಸುವಿರಿ. ಆರ್ಥಿಕ ಬಿಕ್ಕಟ್ಟು.

ಕುಂಭ ಕೆಲಸದ ಒತ್ತಡ ಇಂದು ಕಡಿಮೆ ಆಗಲಿದೆ. ಆ ಮೂಲಕ ಮನಸ್ಸಿಗೆ ನಿರಾಳತೆ. ಬಾಂಧವ್ಯದಲ್ಲಿ ಸಣ್ಣ ಕುಂದು ಕಂಡೀತು. ಅದನ್ನು ನಿರ್ಲಕ್ಷಿಸಿ.

ಮೀನ ಕೆಲಸದಲ್ಲಿ ಪೂರ್ಣ ತಲ್ಲೀನ. ಭವಿಷ್ಯದ ಗುರಿಯತ್ತ ಹೆಚ್ಚು ಗಮನ ಕೊಡಿ. ಕುಟುಂಬದ ಸಂತೋಷಕ್ಕೆ ಹೆಚ್ಚು ಹಣ ವ್ಯಯಿಸುವಿರಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 6,1,8,3

ಉನ್ನತ ಶಿಕ್ಷಣವು ತಾಂತ್ರಿಕ ಬದಲಾವಣೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪಿಂಚಣಿ ಸಮಸ್ಯೆಗೆ ಸಮಿತಿ ರಚನೆ

ಬೆಂಗಳೂರು: ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಆರ್ಥಿಕ ಮುಗ್ಗಟ್ಟು ಎದುರಾಗಿದೆ. ಅದಲ್ಲದೇ, ಪಿಂಚಣಿ ಸಮಸ್ಯೆ ಕುರಿತು ಪ್ರಸ್ತಾಪಿಸಿದ್ದಾರೆ. ಈ ಕುರಿತು ಉನ್ನತ ಶಿಕ್ಷಣ ಸಚಿವರ ಜತೆ ಚರ್ಚಿಸಿದ್ದು, ಈ ಸಮಸ್ಯೆ ಬಗೆಹರಿಸಲು ಸಮಿತಿ ರಚಿಸಲು ಸಲಹೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಲೋಕಭವನ, ಉನ್ನತಶಿಕ್ಷಣ ಇಲಾಖೆ ಮತ್ತು ಕರ್ನಾಟಕ ಉನ್ನತ ಶಿಕ್ಷಣ ಮಂಡಳಿ ವತಿಯಿಂದ ಶನಿವಾರ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನ -2026 ರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಉನ್ನತ ಶಿಕ್ಷಣವು ತಾಂತ್ರಿಕ ಬದಲಾವಣೆ ಮತ್ತು ಜಾಗತಿಕ ಸ್ಪರ್ಧೆಯ ಮಟ್ಟದಲ್ಲಿದೆ. ನಮ್ಮ ಸಂಸ್ಥೆಗಳು ಕೇವಲ ಪದವಿ ನೀಡುವುದನ್ನು ಗುರಿಯನ್ನಾಗಿಟ್ಟುಕೊಳ್ಳಬಾರದು. ಕಲಿಕೆಯಲ್ಲಿ ನಾವೀನ್ಯತೆ, ವಿಮರ್ಶಾತ್ಮಕ ಚಿಂತನೆ ಮತ್ತು ಉದ್ಯೋಗಾವಕಾಶವನ್ನು ಬೆಳೆಸಬೇಕಾಗಿದೆ.

ಈ ನಿಟ್ಟಿನಲ್ಲಿ ನಾವು ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ಬೆಂಬಲದೊಂದಿಗೆ 2,500 ಕೋಟಿ ರೂ. ವೆಚ್ಚದ ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆಯನ್ನು ಜಾರಿಗೆ ತರುತ್ತಿದ್ದೇವೆ. ಇದು ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವುದು ಹಾಗೂ ಸಂಶೋಧನೆಗೆ ಉತ್ತೇಜನ ನೀಡುತ್ತದೆ ಎಂದು ತಿಳಿಸಿದರು.

ಕುಲಪತಿ ಯುವಜನತೆಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹೆಚ್ಚು ನಿಗಾವಹಿಸಬೇಕು. ಪದವಿ ಪ್ರಮಾಣ ಪತ್ರ ನೀಡುವುದು ಶಿಕ್ಷಣವಾಗುವುದಿಲ್ಲ. ಸಮಾಜದಲ್ಲಿ ಉತ್ತಮ ನಾಗರಿಕರನ್ನಾಗಿ ಮಾಡುವುದು ನಿಜವಾದ ಶಿಕ್ಷಣ. ಯುವಜನತೆಯಲ್ಲಿ ವೈಜ್ಞಾನಿಕ ಮತ್ತು ವೈಚಾರಿಕತೆ ಮನಸ್ಥಿತಿಯನ್ನು ಬೆಳೆಸಬೇಕು ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಪ್ರಕ್ರಿಯೆ ಆರಂಭ: ಕಳೆದ 10 ವರ್ಷಗಳಿಂದ ಕಾಲ-ಕಾಲಕ್ಕೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಪ್ರಾಧ್ಯಾಪಕರ ನೇಮಕಾತಿ ಸರಿಯಾಗಿ ಆಗದಿರುವುದರಿಂದ ಶಿಕ್ಷಕರ ಕೊರತೆ ಕಾಡುತ್ತಿವೆ. ರಾಜ್ಯದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಶೇ. 60 ರಿಂದ 70 ರಷ್ಟು ಶಿಕ್ಷಕರ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನದಲ್ಲಿದೆ. ಈ ಹಿನ್ನೆಲೆ ಸರ್ಕಾರಿ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಖಾಲಿಯಿರುವ 2 ಸಾವಿರ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದ್ದೇವೆ ಎಂದು ವಿವರಿಸಿದರು. ಡಿಸಿಎಂ ಡಿ.ಕೆ. ಶಿವಕುಮಾರ್, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಕಾರ್ಯದರ್ಶಿ ಖುಷ್ಬೂ ಚೌಧರಿ, ಕಾಲೇಜು, ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತೆ ಮಂಜುಶ್ರೀ, ಪ್ರೊ. ಎಸ್.ಆರ್. ನಿರಂಜನ್ ಇದ್ದರು.



ರಾಜ್ಯದ ವಿವಿಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಹೊಂದಬೇಕು. ಹಣಕಾಸಿನ ಸವಾಲುಗಳಿದ್ದರೂ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ಸ್ಪಷ್ಟ ದೃಷ್ಟಿಕೋನ ಹೊಂದಿ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಕುಲಪತಿಗಳು ಮುಂದಾಗಬೇಕು. ಲಭ್ಯವಿರುವ ಸಿಎಸ್‌ಆರ್ ನಿಧಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.
■ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಹೊಸ ಉದ್ಯೋಗಾಧಾರಿತ ಕೋರ್ಸ್ ಪರಿಚಯಿಸುವುದು ಅಗತ್ಯ

ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸಲು ಕುಲಪತಿಗಳು ಮತ್ತು ಕುಲಸಚಿವರ ನಡುವೆ ಉತ್ತಮ ಸಮನ್ವಯದ ಅವಶ್ಯಕತೆಯಿದ್ದು, ಶೈಕ್ಷಣಿಕ ಸಿಬ್ಬಂದಿಯನ್ನು ಸಕಾಲಿಕವಾಗಿ ಮೇಲ್ದರ್ಜೆಗೇರಿಸುವ ಅಗತ್ಯವಿದೆ. ಪ್ರಸ್ತುತ ಅವಶ್ಯಕತೆಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯಗಳ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ವಿದ್ಯಾರ್ಥಿಗಳನ್ನು ಹೆಚ್ಚು-ಹೆಚ್ಚು ಉದ್ಯೋಗದೊಂದಿಗೆ ಸಂಪರ್ಕಿಸುವ ಅವಶ್ಯಕತೆಯಿದೆ. ಪ್ರಸ್ತುತ ಅವಶ್ಯಕತೆಗೆ ಅನುಗುಣವಾಗಿ ಹೊಸ ಉದ್ಯೋಗ ಆಧಾರಿತ ಕೋರ್ಸ್‌ಗಳನ್ನು ಪ್ರಾರಂಭಿಸುವ ಅವಶ್ಯಕತೆಯಿದ್ದು, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಕ್ಯಾಂಪಸ್ ಪರಿಸರವನ್ನು ಸುಧಾರಣೆಯಾಗಬೇಕಾಗಿದೆ. ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ಸಲಹೆ ನೀಡಿದರು.

ವೈದ್ಯ ಲೋಕದಲ್ಲಿರಲಿ ಮಾನವೀಯ ಮುಖ

ಪುಟ ೧ → **ರೋಗತಡೆಗಟ್ಟಲು ಆದ್ಯತೆ ನೀಡಿ:** ಆರೋಗ್ಯ ಇಲಾಖೆಯ ಕೆಲಸ ಕಾರ್ಯಗಳಲ್ಲಿ ಜಾತಿಧರ್ಮಗಳ ಭೇದಗಳನ್ನು ಮೀರಿ, ಮಾನವೀಯತೆಯಿಂದ ಸೇವೆ ಸಲ್ಲಿಸುವುದು ಮುಖ್ಯ. ರೋಗಿಗಳಿಗೆ ಚಿಕಿತ್ಸೆ ವೇಳೆ ಅಗತ್ಯವಿರುವ ರಕ್ತ ಪಡೆಯಲು ಯಾವುದೇ ಜಾತಿ, ಧರ್ಮ ಪರಿಗಣಿಸುವುದಿಲ್ಲ, ಆದರೆ ಜನರು ಗುಣಮುಖರಾದಂತಹ ತಕ್ಷಣ ಪುನಃ ಜಾತಿ, ಧರ್ಮಗಳ ಸುಳಿಯಲ್ಲಿ ಬೀಳುತ್ತಾರೆ. ರೋಗ ತಡೆಗಟ್ಟುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಈ ದಿಸೆಯಲ್ಲಿ ಆರೋಗ್ಯ ಇಲಾಖೆ ಕಾರ್ಯಪ್ರವೃತ್ತರಾಗಬೇಕು. ರಾಜ್ಯದ ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಸರ್ಕಾರ ಕಾರ್ಯಗತಗೊಳಿಸಲಾಗುತ್ತಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

970 ಅರ್ಹ ಅರೆ- ವೈದ್ಯ ಸಿಬ್ಬಂದಿಗೆ ನೇಮಕಾತಿ ಪತ್ರ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ 320 ಮತ್ತು ರಾಜ್ಯದ ಉಳಿದ ಭಾಗದ 650, ಒಟ್ಟು 970 ಅರ್ಹ ಅರೆ-ವೈದ್ಯಕೀಯ ಹುದ್ದೆಗಳಿಗೆ ಖಾಯಂ ನೇಮಕಾತಿ ಪತ್ರ ನೀಡುತ್ತಿದ್ದೇವೆ. 77 ಡ್ರಗ್ ಇನ್ಸ್‌ಪೆಕ್ಟರ್ ಹುದ್ದೆಗೆ ಆಯ್ಕೆಯಾದವರಿಗೆ ನೇಮಕಾತಿ ಪತ್ರ ನೀಡುತ್ತಿದ್ದೇವೆ. 223 ಡಿ ಫಾರ್ಮಾ ವಿದ್ಯಾರ್ಥಿಗಳನ್ನು ಅಪ್ರೆಂಟಿಸ್ ಆಗಿ ತೆಗೆದುಕೊಂಡಿದ್ದೇವೆ. ಇನ್ನೂ 700 ವಿದ್ಯಾರ್ಥಿಗಳನ್ನು ನೇಮಕ ಮಾಡಲಾಗುವುದು. ಇದರಿಂದ ಅವರಿಗೆ ವೃತ್ತಿ ಅನುಭವದ ಜತೆ, ಪ್ರತಿ ತಿಂಗಳು 8 ಸಾವಿರ ವೇತನ ನೀಡುತ್ತೇವೆ. ಇದು ದೇಶದಲ್ಲೇ ಮೊದಲು. ಒಂದೆರಡು ತಿಂಗಳಲ್ಲಿ ಸುಮಾರು 220 ತಜ್ಞ ವೈದ್ಯರ ನೇಮಕಾತಿಯಾಗಲಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿಯೇ ಸೂಪರ್ ಸ್ಪೆಷಾಲಿಟಿ ಚಿಕಿತ್ಸೆ ದೊರೆಯಬೇಕು ಎನ್ನುವುದು ನಮ್ಮ ಉದ್ದೇಶ ಎಂದು ಅಭಿಪ್ರಾಯಪಟ್ಟರು.

ಭ್ರಷ್ಟಾಚಾರ ತಡೆಗೆ ಕೌನ್ಸೆಲಿಂಗ್

ಎಲ್ಲ ನೇಮಕಾತಿಗಳನ್ನು ಕೌನ್ಸೆಲಿಂಗ್ ಮೂಲಕ ಮಾಡುತ್ತಿದ್ದು, ಭ್ರಷ್ಟಾಚಾರ ತಡೆಯಲು ಸಾಧ್ಯವಾಗುತ್ತಿದೆ. 5,700 ಹುದ್ದೆಗಳನ್ನು ವೈದ್ಯರನ್ನು ಸೇರಿದಂತೆ ಇತರೆ ಸಿಬ್ಬಂದಿಗಳನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿದೆ. ನೇಮಕಾತಿ ಹಾಗೂ ವರ್ಗಾವಣೆಗಳಲ್ಲಿ ಭ್ರಷ್ಟಾಚಾರ ತಡೆಯುವುದು ಸರ್ಕಾರದ ಆಶಯ. ವರ್ಗಾವಣೆಯಲ್ಲಿ ಏಜೆಂಟರುಗಳ ಹಾವಳಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರು ಇದಕ್ಕೆ ಬಲಿಯಾಗಬಾರದು ಎಂದು ಸಿದ್ದರಾಮಯ್ಯ ತಿಳಿಸಿದರು.

ಪ್ರತಿಭಟನೆ; ಕೈಗೆ ಜೆನ್ ಝಿ ಸ್ಫೂರ್ತಿ

ಪುಟ ೧ → ಬಂಧಿತರನ್ನು ಕಸ್ಟಡಿಗೆ ಒಪ್ಪಿಸುವಂತೆ ಪಟಿಯಾಲಾ ಹೌಸ್ ಕೋರ್ಟ್‌ನಲ್ಲಿ ಮನವಿ ಮಾಡಿದ ದಿಲ್ಲಿ ಪೊಲೀಸರು, ಇದು ಸಣ್ಣ ಪ್ರಕರಣವಲ್ಲ, ನೇಪಾಳದ ಜೆನ್ ಝಿ ದಂಗೆಯಿಂದ ಸ್ಫೂರ್ತಿ ಪಡೆದು ನಡೆಸಿದ ದೊಡ್ಡ ಷಡ್ಯಂತ್ರದ ಭಾಗವಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಪ್ರತಿಭಟನಾಕಾರರಿಗೆ ಹಣಕಾಸಿನ ಸಹಾಯ, ಪ್ರತಿಭಟನೆಯಲ್ಲಿ ಬಳಸಿದ ಟಿ-ಶರ್ಟ್ ಪ್ರಿಂಟ್ ಮಾಡಲು ಹಣಕಾಸಿನ ನೆರವು ಯಾರು ನೀಡಿದ್ದಾರೆಂಬ ಮಾಹಿತಿ ಕಲೆಹಾಕಬೇಕಿದ್ದು, ತನಿಖೆ ನಡೆಸಲಾಗುವುದು ಎಂದು ಪಟಿಯಾಲಾ ನ್ಯಾಯಾಲಯಕ್ಕೆ ಪೊಲೀಸರು ತಿಳಿಸಿದ್ದಾರೆ. ಪಿಎಂ ಈಸ್ ಕಾಂಪ್ರಮೈಸ್ಡ್ (ರಾಜಿಯಾಗಿದ್ದಾರೆ), ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಮತ್ತು ಎಪ್‌ಸ್ಟೀನ್ ಫೈಲ್ಸ್ ಇತ್ಯಾದಿ ಬರಹಗಳೊಂದಿಗೆ ಪ್ರಿಂಟ್ ಮಾಡಿದ್ದ ಟಿ-ಶರ್ಟ್‌ಗಳನ್ನು ಯುವ ಕಾಂಗ್ರೆಸಿಗರು ಪ್ರದರ್ಶಿಸಿದ್ದರು.

5 ದಿನಗಳ ಕಸ್ಟಡಿ ಸೇರಿದ ನಾಲ್ವರು

ಪುಟ ೧ → ಐವೈಸಿ ರಾಷ್ಟ್ರೀಯ ಕಾರ್ಯದರ್ಶಿ ಕೃಷ್ಣ ಹರಿ (ಬಿಹಾರ), ಐವೈಸಿ ರಾಜ್ಯ ಕಾರ್ಯದರ್ಶಿ ಕುಂದನ್ ಯಾದವ್ (ಬಿಹಾರ), ಐವೈಸಿ ರಾಜ್ಯಾಧ್ಯಕ್ಷ ಅಜಯ್ ಕುಮಾರ್ (ಉತ್ತರಪ್ರದೇಶ) ಮತ್ತು ನರಸಿಂಹ ಯಾದವ್ (ತೆಲಂಗಾಣ) ನಾಲ್ವರು ಆರೋಪಿಗಳೆಂದು ಗುರುತಿಸಲಾಗಿದೆ. ಇವರ ಮೊಬೈಲ್ ಫೋನ್‌ಗಳನ್ನು ವಶಪಡಿಸಲಾಗಿದೆ. ಆರೋಪ ಸಾಬೀತಾದರೆ 7 ವರ್ಷ ಜೈಲು ಶಿಕ್ಷೆಯಾಗಲಿದೆ.

ಟ್ರಂಪ್ ಸುಂಕ 15ಕ್ಕೇರಿಕೆ!

ಪುಟ ೧ → ಸುಪ್ರೀಂ ತೀರ್ಪಿನ ಬಗ್ಗೆ ಟ್ರಂಪ್ ಭಾರೀ ಹತಾಶೆ ವ್ಯಕ್ತಪಡಿಸಿದ್ದಾರೆ.

ಶೇ.7 ಸುಂಕ ಇಳಿಸಿದ್ದ ಟ್ರಂಪ್: ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಹೇರಿದ್ದ ಶೇ.50 ಸುಂಕವನ್ನು ಅಮೆರಿಕ ಶೇ.18ಕ್ಕೆ ಇಳಿಕೆ ಮಾಡಿತ್ತು. ರಷ್ಯಾ ಕಚ್ಚಾ ತೈಲ ಖರೀದಿ ನಿಲ್ಲಿಸುವಂತೆ ಕೋರಿ ಭಾರತೀಯ ಸರಕುಗಳ ಮೇಲೆ ಹೇರಿದ್ದ ಶೇ.25 ದಂಡದಿಂದ ಸಂಪೂರ್ಣ ವಿನಾಯಿತಿ ಘೋಷಿಸಿದ್ದರು. ಶೇ.25 ಪ್ರತಿಸುಂಕವನ್ನು ಶೇ.18ಕ್ಕೆ ಕಡಿತಗೊಳಿಸಿದ್ದರು. ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧ ಸುಧಾರಿಸುವ ಉದ್ದೇಶದಿಂದ ಟ್ರಂಪ್ ಭಾರತದ ಮೇಲಿನ ಸುಂಕ ಕಡಿತಗೊಳಿಸಿದ್ದರು.

ರಿಪಬ್ಲಿಕನ್ನರಿಂದ ಸ್ವಾಗತ: ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪನ್ನು ಹಲವು ರಿಪಬ್ಲಿಕನ್ ಪಕ್ಷದ ನಾಯಕರೇ ಸ್ವಾಗತಿಸಿದ್ದು, ಅಧ್ಯಕ್ಷ ಟ್ರಂಪ್‌ರಿಗೆ ಭಾರೀ ಹಿನ್ನಡೆಯಾಗಿದೆ.

ಎಲ್ಲವೂ ಗಮನದಲ್ಲಿದೆ: ಭಾರತ ಪ್ರತಿಕ್ರಿಯೆ

ಪುಟ ೧ → ಟ್ರಂಪ್ ಹೇರಿರುವ ತೆರಿಗೆ ಬಗ್ಗೆ ಅಮೆರಿಕ ಸುಪ್ರೀಂಕೋರ್ಟ್ ಶುಕ್ರವಾರ ನೀಡಿರುವ ತೀರ್ಪನ್ನು ಗಮನಿಸಿದ್ದೇವೆ. ತೀರ್ಪಿನ ಬೆನ್ನಲ್ಲೇ ಅಧ್ಯಕ್ಷ ಟ್ರಂಪ್ ಸುದ್ದಿಗೋಷ್ಠಿ ಕರೆದಿದ್ದಾರೆ. ಟ್ರಂಪ್ ಆಡಳಿತ ಕೆಲವು ಕ್ರಮಗಳನ್ನು ಘೋಷಿಸಿದೆ ಕೂಡ. ಇವೆಲ್ಲ ವಿದ್ಯಮಾನಗಳು ಸೃಷ್ಟಿಸಲಿರುವ ತೊಡಕುಗಳ ಬಗ್ಗೆ ನಾವು ಅಧ್ಯಯನ ನಡೆಸುತ್ತಿದ್ದೇವೆಂದು ವಾಣಿಜ್ಯ ಖಾತೆ ಲಿಖಿತ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ದೇಗುಲಗಳಲ್ಲಿ ವಿಡಿಯೋ ನಿರ್ಬಂಧ

ಪುಟ ೧ → ಇದಕ್ಕೆ ಕಡಿವಾಣ ಹಾಕಿ ದೇವಾಲಯದ ಪಾವಿತ್ರ್ಯ ಕಾಪಾಡುವ ನಿಟ್ಟಿನಲ್ಲಿ ಮುಜರಾಯಿ ಆಡಳಿತ ಮಂಡಳಿ ಬಿಗಿ ಕ್ರಮದೊಂದಿಗೆ ಚಿತ್ರೀಕರಣಕ್ಕೆ ಪೂರ್ವಾನುಮತಿ ಕಡ್ಡಾಯಗೊಳಿಸಿದೆ. ನಿಯಮ ಉಲ್ಲಂಘಿಸಿ ಚಿತ್ರೀಕರಣವಾದಲ್ಲಿ ಕಾನೂನು ಕ್ರಮವಾಗಲಿದೆ. ಇದಕ್ಕೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಹೊಣೆಯಾಗಲಿದ್ದಾರೆ ಎಂದು ಎಚ್ಚರಿಸಿದರು.

ದೇಗುಲದ ಪಾವಿತ್ರ್ಯ ರಕ್ಷಣೆ ಅವಶ್ಯ: ಭಕ್ತಾದಿಗಳು ಮೊಬೈಲ್‌ಗಳಲ್ಲಿ ವಿಡಿಯೋ ಚಿತ್ರೀಕರಣ ಮಾಡಿಕೊಂಡು ರೀಲ್ ಮಾಡುವುದು, ಯೂಟ್ಯೂಬ್ ಚಾನೆಲ್‌ಗಳು ಹಾಗೂ ಇತರೆ ಕೆಲವರು ವಾಣಿಜ್ಯ ಉದ್ದೇಶಗಳಿಗೆ ದೇವಾಲಯದ ಪಾವಿತ್ರ್ಯ ಹಾಳು ಮಾಡುವ ಹಾಗೂ ಅವುಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವ ರೀತಿ ಬಿಂಬಿಸಲಾಗುತ್ತಿದೆ.

ಶುಲ್ಕ ಎಷ್ಟು ನಿಗದಿ

ಪುಟ ೧ → ಹಾಗೂ ನ್ಯೂಸ್ ಚಾನೆಲ್‌ಗಳಲ್ಲಿ ಕ್ಷೇತ್ರದ ಮಹಿಮೆ ಸಾರುವ, ಐದು ನಿಮಿಷಗಳ ಅವಧಿ ಮೀರದ ಚಿತ್ರೀಕರಣಕ್ಕಾಗಿ 250 ರೂ. ಹಾಗೂ 5 ನಿಮಿಷಗಳ ನಂತರದ ಚಿತ್ರೀಕರಣಕ್ಕೆ ಗಂಟೆಗಳ ಆಧಾರದಲ್ಲಿ ಶುಲ್ಕ ನಿಗದಿಪಡಿಸಲಾಗಿದೆ. ಸಂಬಂಧಿಸಿದವರು ದೇವಾಲಯದ ಹೆಸರಿನಲ್ಲಿ ಬೇಡಿಕೆ ಹುಂಡಿ ಶುಲ್ಕ ಪಾವತಿಸಿ, ಅನುಮತಿ ಪತ್ರವನ್ನು ಮುಜರಾಯಿ ಇಲಾಖೆಯ ಪ್ರಧಾನ ಕಚೇರಿಯಲ್ಲಿ ನೀಡಬೇಕು. ಇಲಾಖೆಯಿಂದಲೇ ಸಂಬಂಧಿಸಿದ ದೇವಾಲಯಗಳಿಗೆ ಸೂಚನೆ ಹೋಗುತ್ತದೆ. ಆಗ ಆ ದೇವಾಲಯಗಳ ಆಡಳಿತ ಮಂಡಳಿಯವರು ಭಕ್ತರಿಗೆ ತೊಂದರೆಯಾಗದಂತೆ ಶೂಟಿಂಗ್‌ಗೆ ಅವಕಾಶ ನೀಡುತ್ತಾರೆ. ಆದರೆ ಕ್ಷೇತ್ರದ ಮಹಿಮೆಯನ್ನು ಸಾರುವ ಸಾಕ್ಷ್ಯಚಿತ್ರವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಬಾರದು ಎಂದು ಸ್ಪಷ್ಟಪಡಿಸಲಾಗಿದೆ.

ಶಾಸಕ ಚಂದ್ರು ಲೋಕಾ ಬಲೆಗೆ

ಪುಟ ೧ → ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ವೇಳೆ ಶಾಸಕರ ಆಪ್ತ ಸಹಾಯಕ ಗುರು ನಾಯಕ್ 50 ಸಾವಿರ ನಗದು ಇದ್ದ ಕವರ್‌ನ್ನು ಆಸ್ಪತ್ರೆ ಹಿಂಭಾಗದ ಖಾಸಗಿ ಶಾಲೆಯೊಂದರ ಕಾಂಪೌಂಡ್ ಒಳಕ್ಕೆ ಎಸೆದ ಘಟನೆಯೂ ನಡೆಯಿತು. ಕವರ್‌ನಲ್ಲಿದ್ದ 50 ಸಾವಿರ ಹಾಗೂ ಆಸ್ಪತ್ರೆಯಲ್ಲಿ ಸಿಕ್ಕ ರೂ. 4.50 ಲಕ್ಷ ಹಣವನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮೂವರು ಸಿಪಿಐ, ಮೂವರು ಪಿಎಸ್‌ಐ, ಒಂದು ಡಿಆರ್ ತುಕಡಿ ಸೇರಿ 50ಕ್ಕೂ ಹೆಚ್ಚು ಪೊಲೀಸರ ನಿಯೋಜನೆ ಮಾಡಲಾಗಿದೆ. ಲೋಕಾಯುಕ್ತ ಪೊಲೀಸರಿಂದ ದಾಖಲೆಗಳ ಪರಿಶೀಲನೆ ಮುಂದುವರಿದಿದೆ. ಲೋಕಾಯುಕ್ತ ಎಸ್‌ಪಿ ಸಿದ್ದಲಿಂಗಪ್ಪ ಅವರ ಮಾರ್ಗದರ್ಶನದಲ್ಲಿ ಗದಗ ಲೋಕಾಯುಕ್ತ ಡಿವೈಎಸ್‌ಪಿ ವಿಜಯ್ ಬಿರಾದಾರ, ಇನ್‌ಸ್ಪೆಕ್ಟರ್ ಪರಮೇಶ್ ಕವಟಗಿ ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದಾರೆ.

ಜೇನು ದಾಳಿ: ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ವೇಳೆ ಆಸ್ಪತ್ರೆ ಕಟ್ಟಡದಲ್ಲಿದ್ದ ಜೇನುಗೂಡಿನಿಂದ ಆಕಸ್ಮಿಕವಾಗಿ ಜೇನು ಹುಳುಗಳು ಎದ್ದ ಪರಿಣಾಮ ಕೆಲಕಾಲ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಆರೋಗ್ಯ ತಪಾಸಣೆ ಬಳಿಕ ಕೋರ್ಟ್‌ಗೆ ಹಾಜರು

ಶಾಸಕ ಡಾ.ಚಂದ್ರು ಲಮಾಣಿ ಅವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದು ಆರೋಗ್ಯ ತಪಾಸಣೆ ಮಾಡಿಸಿದ ಬಳಿಕ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಮಾವನಿಂದ ಅಳಿಯನ ಮನೆಗೆ ಬೆಂಕಿ

ಮಂಡ್ಯ: ಮನೆಯವರ ವಿರೋಧದ ನಡುವೆಯೂ ಪ್ರೀತಿಸಿ ಮದುವೆಯಾದರೆಂಬ ಕಾರಣಕ್ಕೆ ಮಾವನೇ ಅಳಿಯನ ಮನೆಗೆ ಬೆಂಕಿ ಇಟ್ಟ ಘಟನೆ ತಾಲೂಕಿನ ಚುಂಚಗಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ. ಗ್ರಾಮದ ವಿನೋದ್ ಹಾಗೂ ಕಾವ್ಯ ಪ್ರೀತಿಸಿ ಮದುವೆಯಾಗಿದ್ದರಿಂದ ಯುವತಿಯ ತಂದೆ ಚನ್ನೇಗೌಡ ಅಳಿಯನ ಮನೆಗೆ ಬೆಂಕಿ ಇಟ್ಟಿದ್ದಾರೆ. ಮನೆಯಲ್ಲಿದ್ದ ವಸ್ತುಗಳೆಲ್ಲವೂ ಸುಟ್ಟು ಕರಕಲಾಗಿದೆ.

ಘಟನೆ ವಿವರ: ಮನೆಯವರ ವಿರೋಧವನ್ನು ಲೆಕ್ಕಿಸದ ಪ್ರೇಮಿಗಳು ನ.19ರಂದು ಯಾರಿಗೂ ವಿಷಯ ತಿಳಿಸದೆ ಮದುವೆಯಾಗಿದ್ದರು. ವಿವಾಹದ ಬಳಿಕ ಮನೆಗೆ ಬಾರದೆ ಬೇರೆಯವರ ಮನೆಯಲ್ಲಿ ನೆಲೆಸಿದ್ದರು.ಈ ವಿಷಯ ಯುವತಿಯ ತಂದೆ ಚನ್ನೇಗೌಡರಿಗೆ ತಿಳಿದು ಕೋಪೋದ್ರಿಕ್ತರಾದರು. ಶನಿವಾರ ಬೆಳಗ್ಗೆ ಅಳಿಯನ ಮನೆ ಎದುರು ಬಂದು ಏಕಾಏಕಿ ಮನೆಗೆ ಬೆಂಕಿ ಹಚ್ಚಿದ್ದಾನೆಂದು ಪೊಲೀಸರು ತಿಳಿಸಿದ್ದಾರೆ.

87 ಕಡೆ ಗಾಂಧಿ ಸ್ತಂಭ

ಪುಟ ೧ → ಇದಕ್ಕಾಗಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ನೀಡಿ, 5.09 ಕೋಟಿ ರೂ.ಗೆ ಅರುಣ್ ಯೋಗಿರಾಜ್ ಅವರ ಕಶ್ಯಪ ಶಿಲ್ಪ ಕಲಾನಿಕೇತನಕ್ಕೆ ಸ್ತಂಭ ನಿರ್ಮಾಣದ ಹೊಣೆ ವಹಿಸಲಾಗಿದೆ. ಗಾಂಧಿ ಸ್ತಂಭ ನಿರ್ಮಾಣ ವಿಷಯವಾಗಿ **ಹೊಸ ದಿಗಂತ**ದೊಂದಿಗೆ ಮಾತನಾಡಿದ ಅರುಣ್ ಯೋಗಿರಾಜ್, ನಾವು ಕಳೆದ ಸುಮಾರು 2-3 ತಿಂಗಳುಗಳಿಂದಲೇ ಇದರ ಬಗ್ಗೆ ಸಾಕಷ್ಟು ತಯಾರಿ ನಡೆಸುತ್ತಿದ್ದೆವು. ಈಗ ಅಧಿಕೃತ ಆದೇಶ ಬಂದಿದೆ. ಸ್ತಂಭಗಳ ಗಾತ್ರ, ವಿನ್ಯಾಸ ಮತ್ತು ಯಾವ ಶೈಲಿ ಬಳಸಿದರೆ ಸ್ತಂಭ ನೂರಾರು ವರ್ಷ ಬಾಳಿಕೆ ಬರುತ್ತದೆ ಎಂಬ ಬಗ್ಗೆ ಚರ್ಚಿಸಿ ವಿನ್ಯಾಸ ಸಿದ್ಧಪಡಿಸಲಾಗಿದೆ. ಈ ಸ್ತಂಭಗಳು ಸುಮಾರು 10 ಅಡಿ ಎತ್ತರ ಮತ್ತು 3 ರಿಂದ 3.5 ಅಡಿ ಅಗಲ ಇರುತ್ತವೆ. ಇವುಗಳನ್ನು ಸಂಪೂರ್ಣವಾಗಿ ಗಟ್ಟಿಯಾದ ಶಿಲೆಯಲ್ಲಿ ಕೆತ್ತಲಾಗುವುದು. ವಿನ್ಯಾಸದಲ್ಲಿ ಮಹಾತ್ಮ ಗಾಂಧಿಯವರ ಸಂಕೇತವಾದ ಚರಕ, ಅವರ ಪ್ರಸಿದ್ಧ ಸಂದೇಶಗಳು, ಸ್ಥಳಕ್ಕೆ ಭೇಟಿ ನೀಡಿದ ದಿನಾಂಕ, ಅಲ್ಲಿ ಅವರು ಮಾಡಿದ ಭಾಷಣದ ಸಾರಾಂಶ, ಅಲ್ಲಿ ನಡೆದ ಪ್ರಮುಖ ಘಟನೆಯ ವಿವರಗಳು ಕೆತ್ತನೆಯಲ್ಲಿ ಇರಲಿವೆ. ಕೆತ್ತನೆಯಲ್ಲಿ ವಿಶೇಷವಾಗಿ ರಾಜ್ಯದ ಸಂಸ್ಕೃತಿ ಬಿಂಬಿಸುವ ಶೈಲಿ ಮತ್ತು ಸೌಂದರ್ಯಕ್ಕೆ ಆದ್ಯತೆ ನೀಡಲಾಗಿದೆ ಎಂದರು.

ಇತಿಹಾಸವಾಗಿ ಉಳಿಯಬೇಕು: ಶಾಸನ ಕಲ್ಲುಗಳೇ ಸ್ಫೂರ್ತಿಯಾಗಿದ್ದು, 9ನೇ ಶತಮಾನದ ಶಾಸನಗಳು ಇಂದಿಗೂ ಹೇಗೆ ಸುಸ್ಥಿತಿಯಲ್ಲಿವೆಯೋ, ಹಾಗೆಯೇ ಇವು ಕೂಡ ಇತಿಹಾಸವಾಗಿ ಉಳಿಯಬೇಕು ಎಂಬುದು ನಮ್ಮ ಉದ್ದೇಶ. ಯಾರೂ ನಿರ್ವಹಣೆ ಮಾಡದಿದ್ದರೂ ಇವು ಶಾಶ್ವತವಾಗಿರಬೇಕು ಎನ್ನುವ ನಿಟ್ಟಿನಲ್ಲಿ ವಿನ್ಯಾಸ ಮಾಡಲಾಗಿದೆ. ಮೊದಲು ಮೈಸೂರಿನಲ್ಲಿ ಸ್ತಂಭಗಳನ್ನು ಸಿದ್ಧಪಡಿಸುತ್ತೇವೆ. ನಂತರ ಆಯಾ ಜಿಲ್ಲೆಗಳ ನಿರ್ಮಿತಿ ಕೇಂದ್ರ, ಅಥವಾ ಸಂಬಂಧಪಟ್ಟ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ, ಅಳವಡಿಕೆಯ ಕೆಲಸ ಮಾಡುತ್ತೇವೆ ಎಂದು ಅರುಣ್ ಮಾಹಿತಿ ನೀಡಿದರು. ಈ ಯೋಜನೆಯು ಪೂರ್ಣಗೊಂಡ ನಂತರ ಕರ್ನಾಟಕವು ಮಹಾತ್ಮ ಗಾಂಧಿಯವರ ನೆನಪಿಗಾಗಿ ಇಷ್ಟು ದೊಡ್ಡ ಮಟ್ಟದ ಹೆರಿಟೇಜ್ ಕಾರಿಡಾರ್ ಹೊಂದಿದ ದೇಶದ ಮೊದಲ ರಾಜ್ಯವಾಗಲಿದೆ.

ಎಲ್ಲೆಲ್ಲಿ ಸ್ತಂಭ ನಿರ್ಮಾಣ?

ಮಹಾತ್ಮ ಗಾಂಧಿಯವರು ಕರ್ನಾಟಕದಲ್ಲಿ ಭೇಟಿ ನೀಡಿದ ಸ್ಥಳಗಳಲ್ಲಿ ಪ್ರಮುಖವಾಗಿ, ಬೆಂಗಳೂರಿನ ಆನಂದ ರಾವ್ ವೃತ್ತ, ನಂದಿಬೆಟ್ಟ, ಕುಮಾರಕೃಪಾ ಅತಿಥಿಗೃಹ, ಬೆಳಗಾವಿಯಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನ, ಹುದಲಿ ಗ್ರಾಮ, ಮೈಸೂರಿನ ಬದನವಾಳು ಗ್ರಾಮ, ಮಂಗಳೂರು, ಅಂಕೋಲಾ, ತುಮಕೂರು, ಶಿವಮೊಗ್ಗ, ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಕರೆಯುವ ವಿದುರಾಶ್ವತ್ಥ ಸೇರಿದಂತೆ 87 ಸ್ಥಳಗಳನ್ನು ಗುರುತಿಸಲಾಗಿದೆ. ಆಯಾ ಜಿಲ್ಲಾಡಳಿತಗಳ ಮೂಲಕ ಜಾಗವನ್ನು ಕಾಯ್ದಿರಿಸುವ ಪ್ರಕ್ರಿಯೆ ನಡೆಯುತ್ತಿದೆ. ಕೇವಲ ಸ್ಮಾರಕಗಳಾಗಿ ಮಾತ್ರವಲ್ಲದೆ, ಇತಿಹಾಸವನ್ನು ಸಾರುವ ಕಲಾಕೃತಿಗಳನ್ನಾಗಿ ಮಾಡಲು ಸರ್ಕಾರ ಉದ್ದೇಶಿಸಿದೆ.



ಮಹಾತ್ಮ ಗಾಂಧಿಯವರು ಜಗತ್ತಿಗೆ ಶಾಂತಿ ಸಾರಿದವರು. ಅವರು ನಮ್ಮ ಕರ್ನಾಟಕಕ್ಕೆ ಭೇಟಿ ನೀಡಿದ್ದ ನೆನಪಿಗಾಗಿ ಈ ಕೆಲಸ ಮಾಡುವುದು ನಮಗೂ ಮತ್ತು ಮುಂದಿನ ಪೀಳಿಗೆಗೂ ಬಹಳ ಮುಖ್ಯ. ಈ ಅವಕಾಶ ನನಗೆ ಸಿಕ್ಕಿರುವುದು ಹೆಮ್ಮೆಯ ವಿಷಯ. ಅವಕಾಶ ನೀಡಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದಗಳು.
■ ಅರುಣ್ ಯೋಗಿರಾಜ್, ಶಿಲ್ಪಿ

ಆಳ್ವಾಸ್ ಶಾಲೆಗೆ ವಿದ್ಯಾರ್ಥಿಸಾಗರ!

ಪುಟ ೧ → ವಿದ್ಯಾರ್ಥಿಗಳಿಗೆ, ಹೆತ್ತವರಿಗೆ ಕನ್ನಡ ಭಾಷೆಯ ಬಗೆಗಿರುವ ವ್ಯಾಮೋಹ ಕಡಿಮೆಯಾಗಿಲ್ಲ ಎಂಬುದನ್ನು ಈ ಮೂಲಕ ಸ್ಪಷ್ಟವಾಗುತ್ತದೆ!

ಇದೊಂದು ಮಾದರಿ ಕಾರ್ಯ: ಆಳ್ವಾಸ್ ಸಮೂಹ ಸಂಸ್ಥೆಗಳ ಸಂಸ್ಥಾಪಕ, ಡಾ.ಎಂ. ಮೋಹನ ಆಳ್ವಾ ಅವರ ಕನಸಿನ ಕೂಸು ಈ ಕನ್ನಡ ಮಾಧ್ಯಮ ಶಾಲೆ. ಇಡೀ ರಾಜ್ಯದಲ್ಲಿ ಒಂದು ಮಾದರಿ ಶಾಲೆಯನ್ನಾಗಿ ಇದನ್ನು ರೂಪಿಸುವ ದೃಷ್ಟಿಯಿಂದ ವಿಶೇಷ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸುತ್ತಿದ್ದಾರೆ. 'ಕನ್ನಡದ ಬಗೆಗಿರುವ ಪ್ರೀತಿ ಬಾಯಲ್ಲಿ ಇದ್ದರೆ ಸಾಲದು, ಬದಲಾಗಿ ಅದು ಕಾರ್ಯರೂಪದಲ್ಲಿರಬೇಕು' ಎಂಬ ಆಳ್ವರ ಅಭಿಪ್ರಾಯವೇ ಅವರಿಗೆ ಈ ಶಾಲೆಯ ಮೇಲಿರುವ, ಕನ್ನಡದ ಮೇಲಿರುವ ಪ್ರೀತಿಗೆ ಸಾಕ್ಷಿಯಾಗಿದೆ.

ಎಲ್ಲೆಲ್ಲೂ ವಿದ್ಯಾರ್ಥಿಗಳು: ಶನಿವಾರವೇ ಮೂಡುಬಿದಿರೆಯತ್ತ ಕರ್ನಾಟಕದಾದ್ಯಂತದಿಂದ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸತೊಡಗಿದ್ದಾರೆ. ಇವರೆಲ್ಲರಿಗೂ ಸುಸಜ್ಜಿತ ವ್ಯವಸ್ಥೆಯನ್ನು ಆಳ್ವಾಸ್ ಸಂಸ್ಥೆ ಆಯೋಜಿಸಿದೆ. ಎಲ್ಲೂ ಏನೂ ಲೋಪಗಳು ಆಗಬಾರದೆಂಬ ದೃಷ್ಟಿಯಿಂದ ಸುಸಜ್ಜಿತ ವ್ಯವಸ್ಥೆ ಕಲ್ಪಿಸಲಾಗಿದೆ. ಬಸ್, ಕಾರು, ಟೆಂಪೋ ಮೂಲಕ ದಂಡುದಂಡಾಗಿ ವಿದ್ಯಾರ್ಥಿಗಳು, ಪೋಷಕರು ಆಳ್ವಾಸ್ ಸಂಸ್ಥೆಯತ್ತ ಆಗಮಿಸತೊಡಗಿದ್ದಾರೆ. ಭಾನುವಾರ ಬೆಳಗ್ಗೆ ಪರೀಕ್ಷೆ ನಡೆಯಲಿದೆ. ವಿವಿಧ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅತ್ಯಂತ ಶಿಸ್ತಿನ ವ್ಯವಸ್ಥೆ ಮಾಡಲಾಗಿದೆ. ಪ್ರತ್ಯೇಕ ನೋಂದಣಿ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆಳ್ವಾಸ್ ಸಂಸ್ಥೆಯ ಸಿಬ್ಬಂದಿ, ಶಿಕ್ಷಕರು ಈ ಕಾರ್ಯದಲ್ಲಿ ನಿರತರಾಗಿದ್ದಾರೆ.

3 ಹಂತದ ಆಯ್ಕೆ ಪ್ರಕ್ರಿಯೆ: ಕನ್ನಡ ಮಾಧ್ಯಮ ಶಾಲೆಗಾಗಿ 3 ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತಿದ್ದು, ಪ್ರಾಥಮಿಕ ಹಂತ, ಮುಖ್ಯ ಹಂತ, ಸಂದರ್ಶನ ಹಂತ ಎಂದು ಗುರುತಿಸಲಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಒಎಂಆರ್ ಆಧಾರಿತ ಬಹು ಆಯ್ಕೆ ಮಾದರಿ ಪ್ರಶ್ನೆಪತ್ರಿಕೆ ಇದ್ದು ಉಳಿದ ಸ್ಪರ್ಧಾತ್ಮಕ ಪರೀಕ್ಷೆಯಂತೆ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ವಿದ್ಯಾರ್ಥಿಯ ಚಿಂತನಾ ಸಾಮರ್ಥ್ಯ ಗುರುತಿಸಲಾಗುತ್ತದೆ. ಇದರಲ್ಲಿ ಸಂಸ್ಥೆ ನಿಗದಿಪಡಿಸಿದ ಮಾನದಂಡ ಗಳಿಸಿದವರು ಮಾತ್ರವೇ ಮುಖ್ಯ ಹಂತಕ್ಕೆ ಆಯ್ಕೆಯಾಗುತ್ತಾರೆ.

ಉಚಿತ ಶಿಕ್ಷಣ

ಆಯ್ಕೆಯಾದ ವಿದ್ಯಾರ್ಥಿಗಳು 6ನೇ ತರಗತಿಯಿಂದ 10ನೇ ತರಗತಿವರೆಗೆ ಉಚಿತ ವಸತಿ ಊಟೋಪಚಾರಸಹಿತ ಶಿಕ್ಷಣವನ್ನು ಪಡೆಯುತ್ತಾರೆ. ಈಗಾಗಲೇ ಕ್ರೀಡಾ ಹಾಗೂ ಸಾಂಸ್ಕೃತಿಕ ವಿಭಾಗದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಗಾಗಿ ಪತ್ರಿಕಾ ಪ್ರಕಟಣೆ ನೀಡಿದ್ದು, ಕ್ರೀಡಾ ಮತ್ತು ಸಾಂಸ್ಕೃತಿಕ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಶಾಲೆಯಲ್ಲಿ ವಿಶೇಷ ಆದ್ಯತೆಯನ್ನು ನೀಡಿ ಪ್ರತ್ಯೇಕ ಆಯ್ಕೆ ಶಿಬಿರಗಳನ್ನು ನಡೆಸಿ ಆಯ್ಕೆ ಮಾಡಲಾಗುತ್ತದೆ.

ಪಾರದರ್ಶಕ ವ್ಯವಸ್ಥೆ

ಪ್ರವೇಶಾತಿಗೆ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಂಸ್ಥೆ ಅವಕಾಶ ಒದಗಿಸಿಕೊಟ್ಟಿತ್ತು. ಅಕ್ಟೋಬರ್‌ನಲ್ಲಿ ಈ ಬಗ್ಗೆ ಅಧಿಕೃತ ಪತ್ರಿಕಾ ಪ್ರಕಟಣೆ ನೀಡಲಾಗಿತ್ತು.

ಬೆನ್ನಿಗೆ ಚೂರಿ ಹಾಕುವ ಪಾಕಿಸ್ತಾನ: ಶ್ರೀಗಳು

ದಾವಣಗೆರೆ: ಭಾರತವನ್ನು ಪ್ರಸ್ತುತ ಇಬ್ಬರು ಹೊರಗಿನ ಪಾಪಿಗಳು ಕಾಡುತ್ತಿದ್ದಾರೆ. ಒಬ್ಬ ಜಗತ್ತಿನ ದೊಡ್ಡಣ್ಣ ಎಂಬ ಭ್ರಮೆಯಲ್ಲಿರುವ ಟ್ರಂಪ್, ಇನ್ನೊಂದು ನೇರವಾಗಿ ನಮ್ಮನ್ನು ಎದುರಿಸಲಾಗದೆ ಬೆನ್ನಿಗೆ ಚೂರಿ ಹಾಕುವ ಪಾಕಿಸ್ತಾನ ಎಂದು ಉಡುಪಿ ಅದಮಾರು ಮಠದ ಪೀಠಾಧಿಪತಿ ಶ್ರೀವಿಶ್ವಪ್ರಿಯತೀರ್ಥ ಶ್ರೀಪಾದಂಗಳವರು ಸಲಹೆ ನೀಡಿದರು.

ನಗರದ ಕೆ.ಬಿ.ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಮಠದ ಸುವರ್ಣ ಮಹೋತ್ಸವದ ಅಂಗವಾಗಿ ಶನಿವಾರ ಶ್ರೀಗಳು ಸಂಸ್ಥಾನ ಪೂಜೆ ನೆರವೇರಿಸಿ ಅನುಗ್ರಹ



ಸಂದೇಶ ನೀಡಿದರು. ದೇಶದ ಒಳಗೇ ಇದ್ದುಕೊಂಡು ಪ್ರಭು ಶ್ರೀರಾಮನಿಗೆ, ಭಾರತಕ್ಕೆ ಕಿರಿಕಿರಿ ಮಾಡುವವರೂ ಇದ್ದಾರೆ. ಅಂತಹವರನ್ನು ಓಡಿಸು ಅಥವಾ ಅಂತಹವರ ದುರ್ಬುದ್ಧಿಯನ್ನಾದರೂ ಓಡಿಸು ಎಂಬುದು ರಾಯರಲ್ಲಿ ನಮ್ಮ ಪ್ರತಿನಿತ್ಯದ ಪ್ರಾರ್ಥನೆಯಾಗಿರಬೇಕು ಎಂದು ಅವರು ಆಶಿಸಿದರು.

ಬ್ರಿಟೀಶರು ದೇಶ ಬಿಟ್ಟು ಹೋಗಿ 70 ವರ್ಷವಾದರೂ ಜನರಿಗೆ ಮೋದ(ಆನಂದ) ಕೊಡುವವರು ಯಾರೂ ಇರಲಿಲ್ಲ, ಆ ರೀತಿ ಮೋದ ಕೊಟ್ಟವರೇ ಇಂದು ನರೇಂದ್ರ ಮೋದಿ ಎಂಬುದಾಗಿ ಹೆಸರಾಗಿದ್ದಾರೆ. ದೇಶದ ಶತೃಗಳನ್ನು ಬಗ್ಗುಬಡಿಯುವ ಮೋದ ಶಾಸ್ತ್ರ(ಆನಂದ ಶಾಸ್ತ್ರ) ನರೇಂದ್ರ ಮೋದಿಯವರಿಗೆ ಗೊತ್ತಿದೆ. ಹೀಗಾಗಿಯೇ ದೇವರು ಅವರನ್ನು ಆ ಸ್ಥಾನದಲ್ಲಿ ಕೂರಿಸಿದ್ದಾನೆ. ಜಗತ್ತಿನ ದೊಡ್ಡಣ್ಣ 200 ಪರ್ಸೆಂಟ್ ಸುಂಕ ಹಾಕಿದರೂ, ಸುಮಂಗಲೆಯರ ಪ್ರಾರ್ಥನೆಯಿಂದ ಪ್ರಪಂಚದಲ್ಲಿನ ಎಲ್ಲ ಲಕ್ಷ್ಮೀಯರು ಭಾರತದಲ್ಲೇ ಬಂದು ಕೂತಿದ್ದಾರೆ. ಯಾರು ಎಷ್ಟೇ ಹೆದರಿಸಿದರೂ, ಬೆದರಿಸಿದರೂ ಸಮರ್ಥ ನಾಯಕತ್ವ ಹೊಂದಿರುವ ಭಾರತ ಜಗ್ಗುವುದಿಲ್ಲ, ಕುಗ್ಗುವುದಿಲ್ಲ ಎಂದರು. ಶ್ರೀಹರಿವಾಯು ಸ್ತುತಿ ಪಾರಾಯಣ ಹಾಗೂ ಶ್ರೀರಾಘವೇಂದ್ರ ಅಷ್ಟೋತ್ತರ ಪಾರಾಯಣ ನಡೆಸಲಾಯಿತು.



ಧಾರವಾಡದಲ್ಲಿ ಮೈನವಿರೇಳಿಸಿದ ಎತ್ತಿನ ಚಕ್ಕಡಿ ಸ್ಪರ್ಧೆಯಲ್ಲಿ ಶನಿವಾರ ಭಾಗವಹಿಸಿದ ಜೋಡೆತ್ತು.

ಸ್ನೇಹಮಯಿ ಕಷ್ಣ ಬಿಡುಗಡೆ

ಬೆಂಗಳೂರು: ಮುಡಾ ಹಗರಣದ ಆರೋಪ ಎದುರಿಸುತ್ತಿರುವ ಹಿಂದಿನ ಆಯುಕ್ತ ಡಿ.ಬಿ.ನಟೇಶ್ ಮುಂಬಡ್ತಿ ವಿಚಾರವಾಗಿ ಸಾಮಾಜಿಕ ಜಾಲತಾಣದಲ್ಲಿ ಆರೋಪ ಮಾಡಿರುವ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತ ಮೈಸೂರಿನ ಸ್ನೇಹಮಯಿ ಕಷ್ಣ ಅವರನ್ನು ಬಂಧಿಸಿದ್ದ ಕೇಂದ್ರ ಅಪರಾಧ ವಿಭಾಗ (ಸಿಸಿಬಿ)ದ ಪೊಲೀಸರು ವಿಚಾರಣೆ ನಡೆಸಿ ಶನಿವಾರ ಬಿಡುಗಡೆ ಮಾಡಿದ್ದಾರೆ. ಸಿಸಿಬಿ ವಿಚಾರಣೆ ವೇಳೆ ಡಿ.ಬಿ.ನಟೇಶ್ ಜತೆಗೆ ಮೈಸೂರಿನ ಎನ್. ವಿನೋದ್ ಬೋಗಾದಿ ವೈಯಕ್ತಿಕ ವ್ಯವಹಾರ ನಡೆಸಿದ್ದರು. ಆದರೆ, ಈ ವ್ಯವಹಾರದ ವಿಚಾರವಾಗಿ ಇಬ್ಬರಲ್ಲಿ ವೈಮನಸ್ಸು ಉಂಟಾಗಿತ್ತು. ವಿನೋದನು ನಟೇಶ್ ವಿರುದ್ಧ ದ್ವೇಷ ಸಾಧಿಸಲು ಸ್ನೇಹಮಯಿ ಕೃಷ್ಣ ಅವರನ್ನು ಸಂಪರ್ಕಿಸಿ ಸತ್ಯಕ್ಕೆ ದೂರವಾದ ಸುಳ್ಳು ಮಾಹಿತಿಗಳನ್ನು ನೀಡಿದ್ದಾನೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ವ್ಯಕ್ತಿ ಬಂಧನ: ಸರ್ಕಾರದ ಮುಖ್ಯ ಕಾರ್ಯದರ್ಶಿ ವಿರುದ್ಧ ಸುಳ್ಳು ಮಾಹಿತಿ ನೀಡಿದ್ದ ಮೈಸೂರು ಮೂಲದ ಎನ್.ವಿನೋದ್ ಎಂಬಾತನನ್ನು ಸಿಸಿಬಿ ಪೊಲಿಸರು ಬಂಧಿಸಿ ದ್ದಾರೆ. ಆಧಾರ ರಹಿತ ಆರೋಪ ಮಾಡಿರುವ ಆರೋಪದ ಅಡಿ ವ್ಯಕ್ತಿಯನ್ನು ಬಂಧಿಸಿ ವಿಚಾರಣೆ ಕೈಗೊಳ್ಳಲಾಗಿದೆ.

ಶಾಲಿನಿ ರಜನೀಶ್ ಅವರ ಕ್ಷಮೆಯಾಚಿಸುತ್ತೇನೆ

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಮೇಲೆ ಲಂಚದ



ಆರೋಪ ಮಾಡಿರುವ ಬಗ್ಗೆ ನಾನು ಕ್ಷಮೆಯಾಚಿಸುತ್ತೇನೆ. ಕೆಎಎಸ್ ಅಧಿಕಾರಿ ನಟೇಶ್ ಅವರು ನನ್ನ ವಿರುದ್ಧ ಸುಳ್ಳು ದೂರು ನೀಡಿದ್ದಾರೆ. ಈ ಸಂಬಂಧ ಸಿಸಿಬಿ ಪೊಲೀಸರು ತನ್ನನ್ನು ವಿಚಾರಣೆ ನಡೆಸಿದ್ದಾರೆ. ಬಿಡುಗಡೆಗೊಳಿಸಿದ ಆಡಿಯೋದಲ್ಲಿ ನಟೇಶ್ ಮಾತನಾಡಿದ್ದಾರೆ. ಆದರೆ, ಮುಂಬಡ್ತಿ ವಿಚಾರ ಸಂಬಂಧ ಶಾಲಿನಿ ರಜನೀಶ್ ಅವರು, 1.60 ಕೋಟಿ ರೂ. ಲಂಚ ಪಡೆದಿದ್ದಾರೆ ಎಂದು ವಿನೋದ್ ತನಗೆ ಸುಳ್ಳು ಮಾಹಿತಿ ನೀಡಿದ್ದನು. ವಿಚಾರಣೆಯಲ್ಲಿ ಹಣವನ್ನು ಪ್ರಭಾವಿ ವ್ಯಕ್ತಿಗಳಿಗೆ ನೀಡಿರುವುದು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾನೆ.

ಕಿರುಸುದ್ದಿ

34 ಗಂಟೆ ರುದ್ರ ಪಾರಾಯಣ ಪಠಿಸಿ ಗಿನ್ನಿಸ್ ದಾಖಲೆ



ಯಲ್ಲಾಪುರ: ಕರ್ನಾಟಕ-ತಮಿಳುನಾಡು ಗಡಿ ಪ್ರದೇಶದ ಹೊಸೂರಿನಲ್ಲಿರುವ ಓಎಂಜಿ ಸಂಸ್ಥೆ ಇತ್ತೀಚೆಗೆ ಆಯೋಜಿಸಿದ್ದ ರುದ್ರ ಪಾರಾಯಣದಲ್ಲಿ 25 ವೇದ ವಿದ್ವಾಂಸರು ಸತತ 34 ಗಂಟೆಗಳ ಕಾಲ ನಿರಂತರ ರುದ್ರ ಪಠಿಸಿ ಗಿನ್ನಿಸ್ ದಾಖಲೆ ಮಾಡಿದ್ದಾರೆ. ತಾಲೂಕಿನ ಉಮ್ಮಚಗಿಯ ಶ್ರೀ ಮಾತಾ ಸಂಸ್ಕೃತ ಮಹಾಪಾಠ ಶಾಲೆಯ ವಿದ್ಯಾರ್ಥಿಗಳಾದ ಶುಭಾಂಗ ಹೆಗಡೆ ಚಿಪಗೇರಿ ಹಾಗೂ ವೀರೇಂದ್ರ ಭಟ್ಟ ಕಾರವಾರ ಅವರು ಈ ತಂಡದ ಸದಸ್ಯರಾಗಿ ಗಿನ್ನಿಸ್ ದಾಖಲೆಯ ಗೌರವಕ್ಕೆ ಪಾತ್ರರಾಗಿದ್ದಾರೆ. ದಾಖಲೆ ಮಾಡಿದ ತಂಡದಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದ ವೇದ ವಿದ್ವಾಂಸರು ಇದ್ದರು.

ಟ್ರ್ಯಾಕ್ಟರ್ ಪಲ್ಟಿ: ಮಗು ಸೇರಿ ನಾಲ್ವರ ಸಾವು

ಜಮಖಂಡಿ: ನಗರದ ಮುಧೋಳ ರಸ್ತೆಯ ಔರಾದ ಸದಾ ಶಿವಗಡ ರಾಜ್ಯ ಹೆದ್ದಾರಿಯಲ್ಲಿ ಕಟ್ಟೆಕೆರೆಯ ಹತ್ತಿರ ಟ್ರ್ಯಾಕ್ಟರ್ ಪಲ್ಟಿಯಾಗಿ 2 ವರ್ಷದ ಮಗು ಸೇರಿ 4 ಜನರು ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಸಂಭವಿಸಿದೆ. ಮೃತರು ಮಹಾರಾಷ್ಟ್ರದ ಮೂಲದವರು ಎಂದು ಗುರುತಿಸಲಾದೆ. ಅಪಘಾತದ ಸ್ಥಳದಲ್ಲೇ ನಾಲ್ವರು ಮೃತಪಟ್ಟಿದ್ದು, ಒಟ್ಟು 17 ಜನರಿಗೆ ಗಾಯಗಳಾಗಿವೆ. ಮನೀಷಾ ಪುಂಡಲೀಕ ಪಾಂಡೆ (23), ಹಲಕಿ ಪುಂಡಲೀಕ ಪಾಂಡೆ (2), ಲಕ್ಷ್ಮೀ ಸಮಾದಾನ ಚಿರಮಡಿ (27), ರೇಖಾ ಪಾಂಡುರಂಗ ಭೂಕೆ (28) ಎಂದು ಗುರುತಿಸಲಾಗಿದೆ. ಗಾಯಾಳು ಗಳನ್ನು ಜಮಖಂಡಿ ಸರ್ಕಾರಿ ಉಪ ವಿಭಾಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನಾ ಸ್ಥಳಕ್ಕೆ ಬಾಗಲಕೋಟ ಜಿಲ್ಲಾ ಎಸ್ಪಿ, ಸಿದ್ದಾರ್ಥ ಗೋಯಲ್ ಅವರು ಭೇಟಿ ನೀಡಿ ತನಿಖೆ ನಡೆಸಿದ್ದಾರೆ. ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋಣಿ ತುಮಕೂರಿನಲ್ಲಿ ಅಸ್ಪೃಶ್ಯತೆ ಆಚರಣೆ

ತುಮಕೂರು: ಮೈಮೇಲೆ ದೇವರು ಬಂದಂತೆ ನಾಟಕ ವಾಡಿದ ವ್ಯಕ್ತಿಯೊಬ್ಬ ಹೊಸದಾಗಿ ಮದುವೆಯಾಗಿ ದೇವ ಸ್ಥಾನಕ್ಕೆ ಬಂದ ದಲಿತ ದಂಪತಿಯನ್ನು ಹೊರಗೆ ಕಳಿಸಿ ಅಸ್ಪೃಶ್ಯತೆ ಆಚರಣೆ ಮಾಡಿರುವ ಘಟನೆ ಜಿಲ್ಲೆಯ ತುರುವೇಕೆರೆ ತಾಲೂಕಿನ ಗೋಣಿ ತುಮಕೂರಿನಲ್ಲಿ ನಡೆದಿದ್ದು, ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿದೆ. ತುರುವೇಕೆರೆ ತಾಲೂಕು ಗೋಣಿ ತುಮಕೂರಿನ ಅರಸಮ್ಮ ದೇವಾಲಯಕ್ಕೆ ದಲಿತ ಸಮುದಾಯದ ನವದಂಪತಿಗಳಾದ ಜಗದೀಶ್, ಪತ್ನಿ ಪೂಜೆ ಮಾಡಿಸಲು ಬಂದಿದ್ದಾರೆ. ಇದನ್ನು ಗಮನಿಸಿದ ನಾರಾಯಣಪ್ಪ ನೂತನ ದಂಪತಿಯನ್ನು ನೇರವಾಗಿ ಕಳುಹಿಸಿದರೆ ಸಮಸ್ಯೆಯಾಗುತ್ತದೆ ಎಂದು ತಿಳಿದು ಮೈ ಮೇಲೆ ದೇವರು ಬಂದಂತೆ ನಾಟಕವಾಡಿದ್ದಾರೆ. ದೇವರು ಮೈದುಂಬಿಕೊಂಡ ನಾರಾಯಣಪ್ಪ ನೀವು ದಲಿತರು, ದಲಿತರಿಗೆ ದೇಗುಲಯದೊಳಗೆ ಪ್ರವೇಶವಿಲ್ಲ, ನಡಿ ಆಚೆಗೆ ಎಂದು ದಬ್ಬಾಳಿಕೆಯಿಂದ ದಲಿತ ನವದಂಪತಿ ಮತ್ತು ಅವರ ಕುಟುಂಬವನ್ನು ಹೊರಗೆ ಕಳುಹಿಸಿ, ನಿಮ್ಮ ಪ್ರವೇಶದಿಂದ ಪುಣ್ಯ ಮಾಡಿಸಬೇಕು ಎಂದು ಅಸ್ಪೃಶ್ಯತೆ ಆಚರಣೆ ಮಾಡಿರುವ ವಿಡಿಯೋ ಎಲ್ಲರ ಮೊಬೈಲ್ ನಲ್ಲಿ ಹರಿದಾಡುತ್ತಿದೆ. ಈ ಬಗ್ಗೆ ತುರುವೇಕೆರೆ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಂಗ್ರೆಸ್ ಕಚೇರಿಗೆ ಬಿಜೆಪಿ ಕಾರ್ಯಕರ್ತರ ಮುತ್ತಿಗೆಗೆ ಯತ್ನ

ರಾಜ್ಯದೆಲ್ಲೆಡೆ ಬಿಜೆಪಿ ಪ್ರತಿಭಟನೆ

ಬೆಂಗಳೂರು: ದಿಲ್ಲಿಯ ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್‌ನ ವರ್ತನೆಯನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾ ವತಿಯಿಂದ ರಾಜ್ಯದ ವಿವಿಧೆಡೆ ಶನಿವಾರ ಪ್ರತಿಭಟನೆ ಹಾಗೂ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕು ಪ್ರಯತ್ನ ನಡೆಸಲಾಯಿತು.

ಬಿಜೆಪಿ ಯುವಮೋರ್ಚಾ ರಾಜ್ಯಾಧ್ಯಕ್ಷಮತ್ತು ಶಾಸಕ ಧೀರಜ್ ಮುನಿರಾಜ್ ಮಾತನಾಡಿ, ಎಐ ಶೃಂಗಸಭೆಯಲ್ಲಿ ಪ್ರತಿಭಟನೆ ಮಾಡುವ ಮೂಲಕ ಕಾಂಗ್ರೆಸ್ಸಿನವರು ತಮ್ಮ ಕೆಟ್ಟ ಸಂಸ್ಕೃತಿಯ ಅನಾವರಣ ಮಾಡಿದ್ದಾರೆ. ವಿದೇಶಿ ಅತಿಥಿಗಳ ಸಮ್ಮುಖದಲ್ಲಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಅವಮಾನ ಮಾಡುವಂತೆ ನಡೆದುಕೊಂಡಿದ್ದು ಖಂಡನೀಯ. ಯುವ ಕಾಂಗ್ರೆಸ್ಸಿಗರು ತಮ್ಮ ವರ್ತನೆಗೆ ಬೇಷರತ್ ಕ್ಷಮೆ ಕೇಳಲಿ ಎಂದು ಆಗ್ರಹಿಸಿದರು.

ಶಾಸಕ ಸಿ.ಕೆ. ರಾಮಮೂರ್ತಿ ಮಾತನಾಡಿ, ಎಐ ಶೃಂಗಸಭೆಯಲ್ಲಿ 30-35 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದು, ಭಾರತಕ್ಕೆ ಅವಮಾನವಾಗುವ ರೀತಿಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಅರೆ ಬೆತ್ತಲೆ ಪ್ರತಿಭಟನೆ ನಡೆಸಿದ್ದಾರೆ. ಇದು ಖಂಡನೀಯ ಎಂದು ಹೇಳಿದರು. ಭಾರತದಲ್ಲಿ ಉತ್ತಮ ಆವಿಷ್ಕಾರ ನಡೆಯುತ್ತಿದೆ. ಈ ಸಂದರ್ಭದಲ್ಲಿ ಪ್ರಧಾನಿಯವರಿಗೂ ಧಿಕ್ಕಾರ ಕೂಗಿದ ಯುವ ಕಾಂಗ್ರೆಸ್ಸಿಗರ ವರ್ತನೆ ಅನಪೇಕ್ಷಣೀಯ. ಇವರ ವರ್ತನೆಯನ್ನು ಖಂಡಿಸಿ ಸಾರ್ವಜನಿಕರೂ ಒದೆ - ಗೂಸಾ ಕೊಟ್ಟಿದ್ದಾರೆ ಎಂದು ಗಮನ ಸೆಳೆದರು. ಪ್ರತಿಭಟನೆಯನ್ನು ಖಂಡಿಸಿ ಕೆಪಿಸಿಸಿ ಕಚೇರಿಗೂ ಮುತ್ತಿಗೆ ಹಾಕುವುದಾಗಿ ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಮಾತನಾಡಿ, ಕಾಂಗ್ರೆಸ್ಸಿನವರು ಎಲ್ಲ ಕಾರ್ಯಕ್ರಮ, ಯೋಜನೆಗಳಿಗೆ ತಮ್ಮ ನಾಯಕರಾದ ನೆಹರು, ಇಂದಿರಾ, ರಾಜೀವ್ ಗಾಂಧಿ ಅವರ ಹೆಸರು ಇಟ್ಟುಕೊಂಡಿದ್ದಾರೆ. ನಮ್ಮ ಪ್ರಧಾನಿ ಮೋದಿ ಅವರು ಯಾವುದೇ ಒಂದು ಯೋಜನೆಗೂ ತಮ್ಮ ಹೆಸರನ್ನು ಇಟ್ಟುಕೊಂಡಿಲ್ಲ ಎಂದು ಗಮನ ಸೆಳೆದರು. ದೇಶದ ಮಾನ ಕಳೆಯುವಂತೆ ಶುಕ್ರವಾರ ನಡೆದ ಘಟನೆ ಅತ್ಯಂತ ಖಂಡನೀಯವಾಗಿದೆ ಎಂದು ಹೇಳಿದರು. ಇದೇ ವೇಳೆ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ಸಿಗರಿಗೆ ಧಿಕ್ಕಾರ ಕೂಗಿದರು. ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ಮುಖಂಡ ಉಮೇಶ್ ಶೆಟ್ಟಿ, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.



ಕಾರ್ಯಕರ್ತರ ಬಂಧನ ಬಿಡುಗಡೆ

ಮೈಸೂರು: ಹೊಸದಿಲ್ಲಿಯಲ್ಲಿ ಅಂತಾರಾಷ್ಟ್ರೀಯ ಎಐ ಸಮ್ಮೇಳನ ನಡೆಯುತ್ತಿದ್ದ ಸಂದರ್ಭದಲ್ಲಿ ಕಾಂಗ್ರೆಸ್‌ನ ಕೆಲವು ಮುಖಂಡರು, ಕಾರ್ಯಕರ್ತರು ಅರೆಬೆತ್ತಲೆ ಪ್ರತಿಭಟನೆ ನಡೆಸುವ ಮೂಲಕ ದೇಶದ ಹಿರಿಮೆಗೆ ಮಸಿ ಬಳಿಯುವ ಪ್ರಯತ್ನ ನಡೆಸಿರುವುದನ್ನು ಖಂಡಿಸಿ, ಶನಿವಾರ ನಗರದಲ್ಲಿರುವ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಹೊರಟ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರನ್ನು ಪೊಲೀಸರು ಬಂಧಿಸಿದ ಘಟನೆ ನಡೆಯಿತು. ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು. ದೇಶಕ್ಕೆ ಅಪಮಾನ ಎಸಗಿದವರ ವಿರುದ್ಧ ಕ್ರಮಜರುಗಿಸುವಂತೆ ಒತ್ತಾಯಿಸಿದರು. ವಿಶ್ವಮಟ್ಟದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ಎಐ ಶೃಂಗಸಭೆಯಂತಹ ದೊಡ್ಡ, ಜಾಗತಿಕ ವೇದಿಕೆಯಲ್ಲಿ, ಪ್ರತಿಭಟನೆ ಸೋಗಿನಲ್ಲಿ ಕಾಂಗ್ರೆಸ್ ಪಕ್ಷ ತನ್ನ ಹತಾಶೆ, ಅಸಹನೆಯನ್ನು, ಕೆಟ್ಟ ರೀತಿಯಲ್ಲಿ ಬೀದಿಗೆ ತಂದಿದೆ. ಅಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸುವ ಮೂಲಕ ಜಾಗತಿಕವಾಗಿ ದೇಶಕ್ಕೆರ ಅಪಮಾನ ಮಾಡುವ ಕೆಲಸ ಮಾಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಶಾಂತಿ ಸಭೆ, ಹಿಂದು ಕಾರ್ಯಕರ್ತರು ಗೈರು

ಬಾಗಲಕೋಟೆ: ಶಿವಾಜಿ ಜಯಂತಿ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟದಿಂದ ಬೂದಿ ಮುಚ್ಚಿದ ಕೆಂಡದಂತಿರುವ ಬಾಗಲಕೋಟೆಯಲ್ಲಿ ಫೆ.24ರ ವರೆಗೂ ನಿಷೇಧಾಜ್ಞೆ ಇದ್ದರೂ ಹಿಂದೂ ಸಮಾವೇಶದಭವ್ಯ ಮೆರವಣಿಗೆನಡೆಯಿತು. ಇನ್ನೊಂದೆಡೆ ಡಿಸಿ ಕಚೇರಿಯಲ್ಲಿ ಮುಸ್ಲಿಂ ಮುಖಂಡರ ಸಭೆ ನಡೆಯಿತು. ಹಿಂದೂ ಮುಖಂಡರು ಸಭೆಯಿಂದ ದೂರ ಸರಿದರು.

ಕಲ್ಲು ತೂರಾಟ, ಚಪ್ಪಲಿ ತೂರಾಟದಿಂದಾಗಿ ಶುಕ್ರವಾರ ಹಿಂದೂ ಕಾರ್ಯಕರ್ತರು ಅಂಗಡಿಗಳನ್ನು ಮುಚ್ಚಲು ಮುಂದಾದಾಗ ಲಾಠಿ ಚಾರ್ಜ್ ನಡೆದಿತ್ತು. ಹೀಗಾಗಿ ಬಾಗಲಕೋಟೆಯಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ಇದರಿಂದ ಎಚ್ಚೆತ್ತುಕೊಂಡ ಪೊಲೀಸ್ ಇಲಾಖೆ ಬೇರೆ ಬೇರೆ ಜಿಲ್ಲೆಗಳಲ್ಲಿ ಹೆಚ್ಚಿನ ಸಿಬ್ಬಂದಿ ಕರೆಯಿಸಿ ನಗರದ ಆಯಕಟ್ಟಿನ ಸ್ಥಳದಲ್ಲಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಶುಕ್ರವಾರ ಡಿಸಿಗಳ ನೇತೃತ್ವದಲ್ಲಿ ಗುರುವಾರ ಶಾಂತಿ ಸಭೆ ನಡೆಸುವ ಸಂದರ್ಭದಲ್ಲಿ ಹಿಂದೂ ಮುಖಂಡರು ಭಾಗವಹಿಸಿದ್ದರು.

ಆಗಮುಸ್ಲಿಂಮುಖಂಡರು ಆಗಮಿಸದ ಹಿನ್ನೆಲೆಯಲ್ಲಿ ಸಭೆ ರದ್ದಾಗಿತ್ತು. ಹೀಗಾಗಿ ಶನಿವಾರ ಮಧ್ಯಾಹ್ನ 12ಕ್ಕೆ ಮತ್ತೊಮ್ಮೆ ಜಿಲ್ಲಾಧಿಕಾರಿ ಸಂಗಪ್ಪ, ಸಿಇಒ ಶಶಿಧರ ಕೂರೇರಾ, ಎಸ್ಪಿ ಸಿದ್ದಾರ್ಥ ಗೋಯಲ್, ಅಮರನಾಥ ರೆಡ್ಡಿ ನೇತೃತ್ವದಲ್ಲಿ ಮತ್ತೊಮ್ಮೆ ಸಭೆ ಕರೆಯಲಾಗಿತ್ತು. ಆ ಸಭೆಗೆ ಮುಸ್ಲಿಂ ಮುಖಂಡರು, ಕಾಂಗ್ರೆಸ್ ಮುಖಂಡರು ಹಾಜರಾದರು. ಹಿಂದೂ ಮುಖಂಡರನ್ನು ಕರೆಯದೇ ಮರಾಠ ಸಮಾಜದವರನ್ನು ಮಾತ್ರ ಸಭೆಗೆ ಕರೆಯಲಾಗಿದೆ ಎಂದು ಆರೋಪಿಸಿ ಮರಾಠಾ ಸಮಾಜದ ಮುಖಂಡರು ಸಭೆ ಬಹಿಷ್ಕರಿಸಿದರು.

ನಂತರ ಮರಾಠಾ ಸಮಾಜದಿಂದ ಉಪವಿಭಾಗಾಧಿಕಾರಿಗಳಿಗೆ ಸಮಾಜದ ರಾಜ್ಯ ಉಪಾಧ್ಯಕ್ಷ ಶೇಖರ ಮಾನೆ, ಶ್ರೀಕಾಂತ ಪಾಟೀಲ ನೇತೃತ್ವದಲ್ಲಿ ಮನವಿ ಸಲ್ಲಿಸಿ, ಎಲ್ಲ ಆರೋಪಿಗಳನ್ನ ಕೂಡಲೇ ಬಂಧಿಸಿ ಗಡಿಪಾರು ಮಾಡಬೇಕೆಂದು ಆಗ್ರಹಿಸಲಾಯಿತು.

ವ್ಯಾಪಾರ ವಹಿವಾಟುಗೆ ಹೊಡೆತ

ಮೊದಲೇ ಮುಳುಗಡೆಯಿಂದ ಮೂರು ಭಾಗವಾಗಿ ಹೋಗಿರುವ ಬಾಗಲಕೋಟೆಯಲ್ಲಿ ಈ ಘಟನೆಯಿಂದಾಗಿ ವ್ಯಾಪಾರ ವಹಿವಾಟಿಗೆ ತೀವ್ರ ತೊಂದರೆಯಾಯಿತು. ಗ್ರಾಹಕರು ಘಟನೆಗೆ ಅಂಜಿ ಮಾರುಕಟ್ಟೆ ಕಡೆಗೆ ಆಗಮಿಸುವುದು ಕಡಿಮೆಯಾಗಿತ್ತು. ಇದರಿಂದಾಗಿ ವ್ಯಾಪಾರಸ್ಥರು ಸರಿಯಾದ ವ್ಯಾಪಾರವಿಲ್ಲದೇ ತೀವ್ರ ನಷ್ಟ ಅನುಭವಿಸಿದರು.

ರಾಜ್ಯ ಆರ್ಥಿಕವಾಗಿ ದಿವಾಳಿ: ಬಿವೈವಿ

ಹೊನ್ನಾಳಿ: ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯ ಆರ್ಥಿಕ ವ್ಯವಸ್ಥೆ ದಿವಾಳಿಯಾಗಿದೆ. ಅಭಿವೃದ್ಧಿ ಶೂನ್ಯವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.



ತಾಲೂಕಿನ ತರಗನಹಳ್ಳಿ ಗ್ರಾಮದಲ್ಲಿ ಬಿಜೆಪಿ ವತಿಯಿಂದ ಆಯೋಜಿಸಿದ್ದ ವಿಬಿ-ರಾಮ್-ಜಿ ಬಗ್ಗೆ ಪಾದಯಾತ್ರೆ ಹಾಗೂ ಜನಜಾಗೃತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಕಾಂಗ್ರೆಸ್ ಅವಧಿಯಲ್ಲಿ ನರೇಗಾ ಯೋಜನೆಯಲ್ಲಿ ಗುಂಡಿ ಮುಚ್ಚು ಗುಂಡಿ ತೆಗಿ ಎನ್ನುವ ಕಾಯಕದಲ್ಲೇ ಭ್ರಷ್ಟಾಚಾರ ನಡೆಸಿದ್ದಾರೆ. ಯಂತ್ರಗಳ ಮೂಲಕ ಕೆಲಸ ಮಾಡಿಸಿ ತಮಗೆ ಇಚ್ಛೆಗೆ ಅನುಗುಣವಾಗಿ ಕೆಲಸ ಮಾಡಿ ದುರುಪಯೋಗ ಮಾಡಿಕೊಂಡಿದ್ದರು. ಅವರ ಕಾಲದಲ್ಲಿ ನರೇಗಾ ಯೋಜನೆಗಳು ಸದುಪಯೋಗ ಆಗಲಿಲ್ಲ ಎಂದರು.

ಬೆಳಗಾವಿಯಲ್ಲಿ ಕಬ್ಬು ಬೆಳೆಗಾರರಿಗೆ ಸಮರ್ಪಕ ಬೆಲೆ ನೀಡದೆ ರೈತರು ಪ್ರತಿಭಟನೆ ನಡೆಸಿದಾಗ ನಾನೂ ಸಹ ಅಹೋರಾತ್ರಿ ಧರಣಿನಿರತ ನಾಗಿದ್ದೆ, ಆ ಸಂದರ್ಭದಲ್ಲಿ ಸರಕಾರ 300 ಪ್ರೋತ್ಸಾಹಧನ ನೀಡುವುದಾಗಿ ಹೇಳಿ ಇದುವರೆಗೂ ಕಬ್ಬು ಬೆಳೆಗಾರರಿಗೆ ಪಾವತಿ ಮಾಡಿಲ್ಲ ಎಂದು ದೂರಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿದರು. ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಜಿ ಸಚಿವ ಕರುಣಾಕರರೆಡ್ಡಿ, ಮಾಜಿ ಶಾಸಕರಾದ ಬಸವರಾಜ್‌ನಾಯ್ಕ್, ಬಿಜೆಪಿ ರಾಜ್ಯ ಮುಖಂಡ ದತ್ತಾತ್ರಿ, ಜಿಲಾ ಬಿಜೆಪಿ ಅಧ್ಯಕ್ಷ ರಾಜಶೇಖರ್ ನಾಗಪ್ಪ ಮಾತನಾಡಿದರು. ಇದಕ್ಕೂ ಮೊದಲು ತಾಲೂಕಿನ ಸಿಂಗಟಕೆರೆಯಿಂದ ತರಗನಹಳ್ಳಿವರೆಗೆ 101 ಪೂರ್ಣ ಕುಂಭದೊಂದಿಗೆ ಪಾದಯಾತ್ರೆ ನಡೆಯಿತು.

ಜಗಳೂರು ಮಾಜಿ ಶಾಸಕ ರಾಮಚಂದ್ರಪ್ಪ, ವಿಧಾನ ಪರಿಷತ್ತಿನ ಮಾಜಿ ಮುಖ್ಯಸಚೇತಕ ಡಾ. ಶಿವಯೋಗಿಸ್ವಾಮಿ, ಮಾಡಾಳು ಮಲ್ಲಿಕಾರ್ಜುನ, ಕಲ್ಲೇಶ್, ನೆಲಹೊನ್ನೆ ಮಂಜುನಾಥ್ ಇದ್ದರು.

ಪೂರ್ವನಿಯೋಜಿತ ಕೃತ್ಯ

ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಕಾರ್ಯಕ್ರಮದ ಮೇಲೆ ನಡೆದ ಕಲ್ಲು ತೂರಾಟ ಪೂರ್ವನಿಯೋಜಿತ ಕೃತ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಂದರು. ಶನಿವಾರ ಹೊನ್ನಾಳಿಗೆ ಆಗಮಿಸಿದಾಗ ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದೂಗಳು ಯಾವುದೇ ಧಾರ್ಮಿಕ ಕಾರ್ಯಕ್ರಮ ಅಥವಾ ಮೆರವಣಿಗೆ ನಡೆಸಿದಾಗಲೂ ಇಂತಹ ಕೃತ್ಯ ನಡೆಸುತ್ತಾರೆ. ಆದರೆ ಸರ್ಕಾರ ಇವರ ವಿರುದ್ಧ ಕ್ರಮ ಜರುಗಿಸಲು ಪೊಲೀಸರಿಗೆ ಸೂಚಿಸುವುದಿಲ್ಲ ಇದೊಂದು ದುರಂತವೇ ಸರಿ ಎಂದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಅವರ ತುಷ್ಟೀಕರಣ ನೀತಿಯಿಂದಾಗಿ ವಿಕೃತ ಮನಸ್ಸು ಇರುವವರು ಇಂತಹ ಹೀನ ಕೃತ್ಯದಲ್ಲಿ ತೊಡಗಿದ್ದಾರೆ ಎಂದರು.

ತುಂಗಭದ್ರಾ ನದಿ ತೀರದಲ್ಲಿ ಪಾರ್ಟಿ: ಪ್ರಕರಣ ದಾಖಲು

ಕೊಪ್ಪಳ: ವಿದೇಶಿಗರ ಅಕ್ರಮ ಪಾರ್ಟಿಗಳು ಮುಂದುವರಿದಿವೆ. ಈ ಸಂಬಂಧ ರೆಸಾರ್ಟ್ ಮಾಲೀಕರ ಮೇಲೆ ಪ್ರಕರಣ ದಾಖಲಾಗಿದೆ. ಗಂಗಾವತಿ ಸಮೀಪದ ತುಂಗಭದ್ರಾ ನದಿ ತೀರದಲ್ಲಿ ಫೆ.16ರಂದು ಯಾವುದೇ ಅನುಮತಿ ಪಡೆಯದೆ ಭರ್ಜರಿ ಪಾರ್ಟಿ ಆಯೋಜಿಸಲಾಗಿತ್ತು. ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿತ್ತು. ವಿಡಿಯೋ ನೋಡಿದ್ದ ಪೊಲೀಸರು ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಈ ಕಾರ್ಯಕ್ರಮ ಮುನಿರಾಬಾದ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಎಚ್ಚೆತ್ತ ಪೊಲೀಸ್ ಇಲಾಖೆ 'ದಿ ಹಂಪಿ ಕೆಫೆ' ರೆಸಾರ್ಟ್ ಮಾಲೀಕ ಪಿಯೂಷ್ ಹಾಗೂ ವ್ಯವಸ್ಥಾಪಕರ ವಿರುದ್ಧ ಅನುಮತಿ ಇಲ್ಲದೆ ಪಾರ್ಟಿ ಆಯೋಜಿಸಿದ ಆರೋಪದಡಿ ಪ್ರಕ ರಣ ದಾಖಲಿಸಿದೆ. ಕಾರ್ಯಕ್ರಮಕ್ಕೆ ಯಾರು ಯಾರು ಹಾಜರಾಗಿದ್ದರು ಎಂಬುದರ ಕುರಿತು ತನಿಖೆ ನಡೆಯುತ್ತಿದೆ. ರೆಸಾರ್ಟ್‌ನಲ್ಲಿ ನಿಯಮಬಾಹಿರ ಚಟುವಟಿಕೆಗಳ ಪರಿಶೀಲನೆಗಾಗಿ ವಿಶೇಷ ತಂಡ ರಚಿಸಲಾಗಿದ್ದು, ಜಿಲ್ಲಾಡಳಿತವೂ ಟಾಸ್ಕ್‌ಫೋರ್ಸ್ ರಚಿಸಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಅರಸಿದ್ಧಿ ತಿಳಿಸಿದ್ದಾರೆ.

ಉನ್ನತಮಟ್ಟಕ್ಕೇರುವುದು ಕೈಗೆ ಇಷ್ಟವಿಲ್ಲ

ಬೆಂಗಳೂರು: ಭಾರತ ಮುಂದುವರೆಯುವುದು, ಉನ್ನತ ಮಟ್ಟಕ್ಕೇರುವುದು ಕಾಂಗ್ರೆಸ್ಸಿಗೆ ಇಷ್ಟವಿಲ್ಲ. ಅದಕ್ಕಾಗಿ ಕಾಂಗ್ರೆಸ್ಸಿನ ಕೆಲವು ಗುಲಾಮರನ್ನು ಎಐ ಶೃಂಗಸಭೆಯಲ್ಲಿ ವಿರೋಧಿಸಲು ಕಳುಹಿಸಿದ್ದು, ಅವರು ಒಳಗೆ ಬಂದು ಅದನ್ನು ಅಡ್ಡಿಪಡಿಸಲು ಮುಂದಾಗಿದ್ದಾರೆ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.



ಅವರು ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮೋದಿ ಅವರು ಎಐ ಶೃಂಗಸಭೆಯ ಮೂಲಕ ಭಾರತದ ಗೌರವ ಎತ್ತಿ ಹಿಡಿಯುವ ಕೆಲಸ ಮಾಡುತ್ತಿದ್ದಾರೆ. ಆದರೆ, ಶೃಂಗಸಭೆಗೆ ಅಡ್ಡಿಪಡಿಸುವ ಕೆಲಸ ರಾಹುಲ್ ಗಾಂಧಿ ಮಾಡಿಸಿದ್ದಾರೆ ಎಂದು ವರದಿಗಳು ಬರುತ್ತಿವೆ. ಇದು ದೇಶವಿರೋಧಿ ನಡೆಯಾಗಿದೆ ಎಂದರು.

ಶೃಂಗಸಭೆಯ ಬಳಿ ಸೇರಿದ್ದ ಸಾರ್ವಜನಿಕರು ಬಟ್ಟೆ ಬಿಚ್ಚಿಕೊಂಡಿದ್ದ ಕಾಂಗ್ರೆಸ್ಸಿನವರಿಗೆ ಬೂಟಿನಲ್ಲಿ ಒದೆ ಕೊಟ್ಟು ಕಳುಹಿಸಿದ್ದಾರೆ. ಕಾಂಗ್ರೆಸ್ಸಿಗೆ ಇವತ್ತು ಜನರೇ ಬೂಟಿನ ಏಟು ಕೊಡುವ ಕೆಲಸ ಮಾಡಿದ್ದಾರೆ.

ಕಾಂಗ್ರೆಸ್ ಸಂಸ್ಕೃತಿಗೆ ಬೂಟಿನ ಏಟು ಬೇಕಾಯಿತು. ಇದು ಜನರಿಂದ ಇವತ್ತು ಪ್ರಾರಂಭ. ದೇಶಾದ್ಯಂತ ಇನ್ನು ಕಾಂಗ್ರೆಸ್ಸಿನವರಿಗೆ ಇದೇ ರೀತಿಯ ಪೂಜೆ ಸಹಜವಾಗಿ ಆಗಲಿದೆ ಎಂದು ಕಾಣಿಸುತ್ತಿದೆ ಎಂದು ವಿಶ್ಲೇಷಿಸಿದರು.

ಇಂಥ ಚಿತಾವಣೆ ಮಾಡುವವರಿಗೆ ಪ್ರತಿಯೊಬ್ಬರಿಗೂ ಶಿಕ್ಷೆ ಆಗಬೇಕು. ಜನರು ಹೇಳುತ್ತಿರುವುದು ಸರಿಯೇ? ನೀವು ಹಿಂದುಗಳನ್ನು ಯಾಕೆ ಟಾರ್ಗೆಟ್ ಮಾಡುತ್ತೀರಿ ಎಂಬುದಕ್ಕೆ ಪ್ರಿಯಾಂಕ್ ಖರ್ಗೆ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು. ನಾನು ಎಲ್ಲ ಮುಸ್ಲಿಮರನ್ನು ನಿಂದಿಸುವುದಿಲ್ಲ, ಉಳಿದವರಿಗೆ ನೋವು ಕೂಡ ಆಗಬಹುದು. ಯಾರು ಈ ಕೃತ್ಯಗಳಲ್ಲಿ ಭಾಗಿಯಾಗುತ್ತಾರೋ ಅವರು ಮಾತ್ರ.

ನಾಲ್ಕು ಜನ ಮಾಡುವ ಕೃತ್ಯಗಳಿಂದ ನಮ್ಮ ಸಮುದಾಯಕ್ಕೆ ಇವತ್ತು ಕೆಟ್ಟ ಹೆಸರು ಬರುತ್ತಿದೆ ಎಂದು ಅನೇಕರು ಮಾತನಾಡುತ್ತಾರೆ. ಆದ್ದರಿಂದ ನಾನು ಸಾರಾಸಗಟಾಗಿ ಮುಸಲ್ಮಾನರನ್ನು ವಿರೋಧಿಸುವುದಿಲ್ಲ. ಈ ಕೃತ್ಯಗಳಲ್ಲಿ ಇರುವವರನ್ನು ಹೆಡೆಮುರಿ ಕಟ್ಟುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಒತ್ತಾಯಿಸಿದರು.

ಹಿಂದುಗಳ ಮೇಲಿನ ದಬ್ಬಾಳಿಕೆ ಖಂಡನೀಯ

ಬಾಗಲಕೋಟೆಯಲ್ಲಿ ಆಗಿರುವುದು ಹಿಂದುಗಳ ಮೇಲಿನ ದಬ್ಬಾಳಿಕೆ, ಇದನ್ನು ಸಹಿಸಲಾಗದು. ಈಗ ಶಾಂತಿ ಸಭೆಗೆ ಕರೆದರೂ ಕೆಲವರು ಬರುತ್ತಿಲ್ಲ, ಇದಕ್ಕೆ ಈಗಿನ ಸರ್ಕಾರವೇ ಕಾರಣ. ಚಿತ್ತಾಪುರದಲ್ಲಿ ನಡೆದಿದೆ ಎಂದರೆ ಚಿತಾವಣೆ ಯಾರು? ಇದಕ್ಕೆಲ್ಲ ಚಿತ್ತಾಪುರದ ಶಾಸಕ ಪ್ರಿಯಾಂಕ್ ಖರ್ಗೆ ಅವರೇ ಏನೋ ಮಾಡಿಸುತ್ತಿದ್ದಾರೆಂಬ ಅನುಮಾನವಿದೆ ಎಂದು ಸ್ಥಳೀಯ ಕೆಲವರು ತಿಳಿಸಿದ್ದಾಗಿ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಕಲ್ಲು ತೂರಾಟ ಪ್ರಕರಣ | ಹೆಚ್ಚುವರಿ ಎಸ್ಪಿ, ಡಿವೈಎಸ್ಪಿಗಳ ನಿಯೋಜನೆ

ಬಾಗಲಕೋಟೆಯಲ್ಲಿ ಪೊಲೀಸ್ ಸರ್ಪಗಾವಲು

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜಯ ಜಯಂತಿನಿಮಿತ್ತ ಭವ್ಯ ಮೆರವಣಿಗೆ ನಡೆಯುತ್ತಿರುವ ಸಂದರ್ಭದಲ್ಲಿ ಗುರುವಾರ ರಾತ್ರಿ ಮಸೀದಿಯಿಂದ ಕಲ್ಲು ತೂರಾಟ, ಚಪ್ಪಲಿ ತೂರಿ ಬಂದ ಹಿನ್ನೆಲೆಯಲ್ಲಿ ಬಾಗಲಕೋಟೆಯಲ್ಲಿ ಸದ್ಯ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಪೊಲೀಸ್ ಸರ್ಪಗಾವಲು ಹಾಕಲಾಗಿದೆ.

ಕಲ್ಲು ತೂರಾಟ ಪ್ರಕರಣ ನಡೆದ ಬಳಿಕ ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ಜತೆ ಸೇರಿ ಐವರು ಐಪಿಎಸ್ ಅಧಿಕಾರಿಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ. ಐಜಿಪಿ ಚೇತನ್ ಸಿಂಗ್ ರಾಠೋಡವರ ಘಟನೆ ನಡೆದ ಸ್ಥಳದಲ್ಲೇ ಕಳೆದ ಎರಡು ದಿನಗಳಿಂದ ಎಲ್ಲವನ್ನೂ ಪರಿಶೀಲಿಸುತ್ತಿದ್ದಾರೆ. ಹಿಂದಿನ ಬಾಗಲಕೋಟೆ ಎಸ್ಪಿಯಾಗಿ ಕಾರ್ಯನಿರ್ವಹಿಸಿದ್ದ ರಿಷ್ಯಂತ್, ಅಮರನಾಥ ರೆಡ್ಡಿಯವರನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಪೊಲೀಸರ ರೂಟ್‌ಮಾರ್ಚ್: ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ, ಗೃಹರಕ್ಷದಳ, ಪಿಎಸ್ಐ, ಸಿಪಿಐಗಳಿಂದ ನಗರದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಶಾಂತಿ ಕಾಪಾಡುವಂತೆ ಪಥಸಂಚಲನ ನಡೆಸಿದರು.

ಖಾಕಿ ಸರ್ಪಗಾವಲು: ನಗರದ ಪಂಕಾ ಮಸೀದಿ ಮುಂಭಾಗ



ಎರಡ್ನೂರು ಜಿಲ್ಲಾ ಸಶಸ್ತ್ರ ಪಡೆ ಹಾಗೂ ಕೆಎಸ್‌ಆರ್‌ಪಿ ತುಕಡಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಗಂಟೆಗೊಮ್ಮೆ ಐಜಿಪಿ ಚೇತನ್ ಸಿಂಗ್ ರಾಠೋಡ ನಗರದಲ್ಲಿ ಸಂಚರಿಸಿ ಪರಿಶೀಲನೆ ನಡೆಸುತ್ತಿದ್ದರು. ಇನ್ನೂ ಬಾಗಲಕೋಟೆ ಹಿಂದಿನ ಎಸ್ಪಿ ಅಮರನಾಥ ರೆಡ್ಡಿ, ಸಿ.ಬಿ.ರಿಷ್ಯಂತ್ ಕೂಡ ನಗರದಲ್ಲಿ ಸಂಚಾರ ನಡೆಸಿದರು. ಪಂಕಾ ಮಸೀದಿ ಬಳಿ ಎಸ್ಪಿಗಳು ಮುಕ್ಕಾಂ ಹೂಡಿದ್ದರು.

ಬಂದ್ ವಾತಾವರಣ ಕಾಣಲಿಲ್ಲ: ಬಾಗಲಕೋಟೆ ನಗರದ ಹಳೆ ಮಾರುಕಟ್ಟೆ, ತರಕಾರಿ, ಕಿರಾಣಿ ಮಾರುಕಟ್ಟೆಯಲ್ಲಿ ಎಂದಿನಂತೆ ಶನಿವಾರ ಮಾರುಕಟ್ಟೆ ಆರಂಭಾಗಿತ್ತು. ಸಾರ್ವಜನಿಕರು ಕೂಡ ಎಂದಿನಂತೆ ತಮ್ಮ ದೈನಂದಿನ ಚಟುವಟಿಕೆಯಲ್ಲಿ ಭಾಗವಹಿಸಿದ್ದರು.

ಸಭೆ ನಡೆಸದ ಸಚಿವರು

ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆಯಲ್ಲಿ ಕಲ್ಲು ತೂರಾಟ, ಚಪ್ಪಲಿ ಎಸೆತ ನಡೆದ ಪ್ರಕರಣ ನಡೆದು ಬಾಗಲಕೋಟೆಯಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾದ ಸಂದರ್ಭದಲ್ಲಿ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಗ್ಯಾರಂಟಿ ಸಮಾವೇಶ ಉತ್ಸವದಲ್ಲಿ ಭಾಗಿಯಾಗಿದ್ದರು. ಕಾರ್ಯಕ್ರಮ ನಂತರವೂ ಬಾಗಲಕೋಟೆಯಲ್ಲಿ ನಡೆದ ಘಟನಾ ಸ್ಥಳಕ್ಕೂ ಭೇಟಿ ನೀಡಲಿಲ್ಲ. ಇನ್ನೂ ಬಾಗಲಕೋಟೆಯ ಘಟನೆಗೆ ಸಂಬಂಧಿಸಿದಂತೆ ಹಿಂದೂ ಮುಸ್ಲಿಂ ಮುಖಂಡರನ್ನು ಕರೆದು ಸಭೆ ಕೂಡ ನಡೆಸಲಿಲ್ಲ. ಇದರಿಂದ ಹಿಂದೂ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೂದಿ ಮುಚ್ಚಿದ ಕೆಂಡ: ಬಾಗಲಕೋಟೆಯ ಪಂಕಾ ಮಸೀದಿ, ಅಂಬಾಭವಾನಿ ದೇವಸ್ಥಾನದ ಸಮೀಪದ ರಸ್ತೆಯಲ್ಲಿ ಆತಂಕದ ವಾತಾವರಣ ಇತ್ತು. ಸದ್ಯಕ್ಕೆ ಬೂದಿ ಮುಚ್ಚಿದ ಕೆಂಡದಂತೆ ಇಲ್ಲಿ ಕಂಡುಬಂದಿತು.

ಕಲಬುರಗಿಯಲ್ಲೂ ಶಿವಾಜಿ ಜಯಂತಿ ವೇಳೆ ಗದ್ದಲ

2 ಸಮುದಾಯಗಳ ನಡುವೆ ಗಲಾಟೆ

ಕಲಬುರಗಿ: ಶಿವಾಜಿ ಮಹಾರಾಜರ ಜಯಂತಿ ಹಿನ್ನೆಲೆ ರಾಜ್ಯದ ಬಾಗಲಕೋಟೆಯಲ್ಲಿನ ಮಸೀದಿ ಬಳಿ ನಡೆದ ಕಲ್ಲು ತೂರಾಟದ ಪ್ರಕರಣ ಮಾಸುವ ಮುನ್ನವೇ, ಇದೀಗ ಅಂತಹದ್ದೇ ಘಟನೆ ಕಲಬುರಗಿಯಲ್ಲಿ ನಡೆದಿದ್ದು, ಕೇವಲ ಡಿಜೆ ಸೌಂಡ್ ಕಡಿಮೆ ಮಾಡು ಎನ್ನುವ ವಿಚಾರಕ್ಕಾಗಿ ಎರಡು ಸಮುದಾಯಗಳ ನಡುವೆ ಗಲಾಟೆಯಾಗಿ ಓರ್ವರಿಗೆ ಗಾಯವಾಗಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಜಿಲ್ಲೆಯ ಚಿತ್ತಾಪುರ ತಾಲೂಕಿನ ರಾವೂರ್ ಗ್ರಾಮದ ಗೋಕುಲ್ ನಗರದ ಗಣೇಶ್ ಕಟ್ಟೆಯ ಮೇಲೆ ಕಳೆದ ಫೆ.19ರಂದು ಪ್ರತಿ ವರ್ಷದಂತೆ ಈ ವರ್ಷವೂ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯಂದು ಶಿವಾಜಿ ಮಹಾರಾಜರ ಭಾವಚಿತ್ರವಿಟ್ಟು ಪೂಜೆ ಮಾಡಲಾಗುತ್ತಿತ್ತು. ಈ ವೇಳೆ ಡಿಜೆ (ಧ್ವನಿವರ್ಧಕ) ಹಚ್ಚಿ ಹಿಂದೂ ಯುವಕರು ಡ್ಯಾನ್ಸ್ ಮಾಡುವಾಗ ಅನ್ಯ ಕೋಮಿನವರು ಡಿಜೆ ಸೌಂಡ್ ಕಡಿಮೆ ಮಾಡುವಂತೆ ಕಿರಿಕ್ ಮಾಡಿಕೊಂಡಿದ್ದೆ ಎರಡು ಸಮುದಾಯಗಳ ನಡುವೆ ನಡೆದ ಗಲಾಟೆಗೆ ಕಾರಣವಾಗಿದೆ.

ಡಿಜೆ ಸೌಂಡ್ ಕಡಿಮೆ ಮಾಡುವಂತೆ ಹೇಳಿ ಕಿರಿಕ್ ಮಾಡುತ್ತಿದ್ದಾಗ, ಈ ವೇಳೆ ಅವರನ್ನು ಸಮಾಧಾನ ಪಡಿಸಲು ಮುಂದಾದರೂ ಸಹ ಒಂದು ಕೋಮಿನ ಜನರು ಗಲಾಟೆ ಮಾಡಿದ್ದಾರೆ. ಗಲಾಟೆ ಬಿಡಿಸಲು ಹೋದಾಗ ಕಲ್ಲು ತೂರಾಟ, ಬಡಿಗೆ ಹಿಡಿದು ಕೆಲ ಕಿಡಿಗೇಡಿಗಳು ಹಲ್ಲೆ ಮಾಡಿದ್ದಾರೆ. ಗಲಾಟೆ ಸಮಯದಲ್ಲಿ ಪೊಲೀಸರ ಸಂಖ್ಯೆ ಕಡಿಮೆ ಇರುವುದರಿಂದ ಎರಡು ಸಮುದಾಯಗಳ ನಡುವಿನ ಗಲಾಟೆ ವಿಕೋಪಕ್ಕೆ ಹೋಗಲು ಕಾರಣವಾಗಿದೆ ಎನ್ನಲಾಗುತ್ತಿದೆ.



> ಶಿವಾಜಿ ಮಹಾರಾಜರ ಜಯಂತಿ ವೇಳೆ ಸೌಂಡ್ ವಿಚಾರವಾಗಿ ಗಲಾಟೆ ನಡೆದಿದೆ. ಆದರೆ, ಯಾರಿಂದಲೂ ಇಲ್ಲಿಯವರೆಗೆ ಎಫ್‌ಐಆರ್ ದಾಖಲಾಗಿಲ್ಲ, ಗಲಾಟೆಯಲ್ಲಿ ಓರ್ವನಿಗೆ ಸಣ್ಣ ಪ್ರಮಾಣದಲ್ಲಿ ಗಾಯವಾಗಿವೆ. ಗಲಾಟೆ ವೇಳೆ ಕಂಡ ಜನರಲ್ಲಿ ಬಹುತೇಕರು ಗಲಾಟೆ ಬಿಡಿಸಲು ಪ್ರಯತ್ನ ಮಾಡಿದ್ದಾರೆ. ಇದೀಗ ವಾತಾವರಣ ಶಾಂತವಾಗಿದೆ.
>
> ■ ಅಡ್ಡೂರು ಶ್ರೀನಿವಾಸುಲು, ಪೊಲೀಸ್ ವರಿಷ್ಠಾಧಿಕಾರಿ, ಕಲಬುರಗಿ

ಪ್ರಶ್ನೋತ್ತರ ರತ್ನಮಾಲಿಕೆ



• ವಿದ್ವಾನ್ ನರಸಿಂಹ ಭಟ್

ಮಾತಿಗೆ ಭೂಷಣ ಯಾವುದು?

ಉ: ಸತ್ಯ

ಮಾತಿಗೆ ಭೂಷಣವಾದುದು ಯಾವುದು ಎಂಬುದು ಪ್ರಶ್ನೆ. ಅದಕ್ಕೆ ಉತ್ತರ 'ಸತ್ಯ' ಎಂಬುದು. ಅಂದರೆ ಮಾತು ಮತ್ತು ಸತ್ಯ ಇವೆರಡೂ ಪರಸ್ಪರ ಅನ್ಯೋನ್ಯವಾದವುಗಳು ಎಂಬುದು ಇದರ ತಾತ್ಪರ್ಯವಷ್ಟೇ. ಮಾತು ಯಾವಾಗ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬಲ್ಲದು? ಅಥವಾ ಮಾತು ಯಾವಾಗ ಪರಿಪೂರ್ಣವಾಗಬಲ್ಲದು? ಎಂದರೆ ಆ ಮಾತಿನಲ್ಲಿ ಸತ್ಯ ಹುದುಗಿದಾಗ, ಎಂಬುದು ಇದರ ಹಿಂದಿರುವ ಆಶಯವಷ್ಟೇ. ಮಾತಿನಲ್ಲಿ ಸತ್ಯವಿಲ್ಲದಿದ್ದರೆ ಅದು ಪೂರ್ಣವಾಗಲಾರದು. ಅದಕ್ಕಾಗಿ ಸತ್ಯವನ್ನು ಮಾತಿಗೆ ಭೂಷಣ ಎಂಬುದಾಗಿ ಹೇಳಲಾಗಿದೆ. 'ಭೂಷಣ' ಎಂದರೆ ಅಲಂಕಾರ ಎಂದರ್ಥ. ಅಂದರೆ ಸತ್ಯದಿಂದ ಮಾತ್ರವೇ ಮಾತು ಅಲಂಕೃತವಾಗುತ್ತದೆ. ಮಾತು ಆಡಿದವರನ್ನು ಅಲಂಕರಿಸುತ್ತದೆ. ಅವರನ್ನು ಮಾನ್ಯರನ್ನಾಗಿ ಮಾಡುತ್ತದೆ ಎಂಬುದಷ್ಟೇ ಇಲ್ಲಿನ ವಿಷಯ.

ಮಾತು ಹೇಗಿರಬೇಕು? ಮಾತಿನ ಮೌಲ್ಯವೇನು? ಇತ್ಯಾದಿ ವಿಷಯದ ಬಗ್ಗೆ ವೇದದಿಂದ ಹಿಡಿದು ಎಲ್ಲ ಸಾಹಿತ್ಯಗಳಲ್ಲೂ ವಿಪುಲವಾಗಿ ಹೇಳಿದ್ದನ್ನು ನಾವು ಕಾಣಬಹುದು. ಅಂತೆಯೇ ಮಾತಿಗೂ ಮಿಗಿಲಾಗಿ ಸತ್ಯವನ್ನು ಇನ್ನಷ್ಟು ವಿವರವಾಗಿ ಹೇಳಿದ್ದನ್ನು ಕಾಣಬಹುದು. ಹಾಗಾಗಿ ಮಾತು ಮತ್ತು ಸತ್ಯ ಎರಡು ಒಂದಕ್ಕೊಂದು ಎಡಬಿಡದೆ ಸೇರಿರುವ ಎರಡು ಸಂಗತಿಗಳು ಎಂಬುದನ್ನು ಹೇಳಬಹುದು. ಮಾತಿನಲ್ಲಿ ಸತ್ಯ ಎಂಬುದು ಅತ್ಯಂತ ಅನಿವಾರ್ಯ. ಉಪನಿಷತ್ತು ಈ ಮಾತನ್ನು ಸಾರುತ್ತದೆ – 'ಸತ್ಯಂ ವದ' ಎಂಬುದಾಗಿ. ಸತ್ಯವನ್ನು ಮಾತನಾಡಬೇಕು. ಸತ್ಯವನ್ನೇ ಮಾತನಾಡಬೇಕು. ಸತ್ಯವನ್ನು ಬಿಟ್ಟು ಬೇರೆ ಯಾವುದೂ ಕೂಡ ಮಾತಿನಲ್ಲಿ ಇರಬಾರದು. ಅಷ್ಟರಮಟ್ಟಿಗೆ ಮಾತು ಸತ್ಯವನ್ನು ಆವರಿಸಿಕೊಂಡು ಇರಬೇಕು. ಮಾತಾಡಿದರೆ ಅದು ಸತ್ಯವೇ ಆಗಿರಬೇಕು. ಸತ್ಯವಲ್ಲದ ಮಾತನ್ನು ಆಡಬಾರದು ಎಂಬುದು ಇದರ ಅರ್ಥ. ರಘುವಂಶದ ರಾಜರು ಸತ್ಯವನ್ನು ಯಾವ ರೀತಿಯಾಗಿ ಆಚರಿಸುತ್ತಿದ್ದರು ಎಂಬುದನ್ನು ಕಾಳಿದಾಸ ಹೀಗೆ ಹೇಳುತ್ತಾನೆ – 'ಸತ್ಯಾಯ ಮಿತಭಾಷಿಣಾಮ್' ಎಂಬುದಾಗಿ. ಅಂದರೆ ಅವರ ಮಾತುಗಳಲ್ಲಿ ಮಿತಿ ಇರುತ್ತಿತ್ತು. ಅದಕ್ಕೆ ಕಾರಣ ಆ ಮಾತು ಸತ್ಯದಿಂದ ಕೂಡಿತ್ತು. ಯಾವ ಮಾತು ಸತ್ಯದಿಂದ ಕೂಡಿರುತ್ತದೆಯೋ, ಆ ಮಾತು ಹಿತವು ಮಿತವು ಆಗಿಯೇ ಇರಬೇಕು. ಅಂತಹ ಸತ್ಯದ ನಡೆಯನ್ನು ಆ ರಾಜರ ನಡೆಯಲ್ಲಿ ಕಾಣಬಹುದಾಗಿತ್ತು. ಸತ್ಯ ಎಂದರೆ ಇದ್ದದ್ದನ್ನು ಇದ್ದಂತೆಯೇ ಹೇಳುವುದು, 'ಯಥಾರ್ಥವಚನಂ' ಎಂಬುದಾಗಿ. ಸತ್ಯವನ್ನು ಹೇಳುವುದರಿಂದ ಯಾವೆಲ್ಲ ಲಾಭಗಳು ಆಗುತ್ತವೆ ಎಂಬುದನ್ನು ವೇದ, ಪುರಾಣ, ಇತಿಹಾಸ ಮೊದಲಾದ ಎಲ್ಲಾ ಗ್ರಂಥಗಳೂ ಸಾರುತ್ತವೆ. ಯೋಗಶಾಸ್ತ್ರವು ಹೀಗೆ ಹೇಳುತ್ತದೆ ''ಯಾರು ಸತ್ಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುತ್ತಾರೋ, ಅವರು ಹಾಡಿದ ಮಾತುಗಳು ಯಥಾರ್ಥವಾಗುತ್ತವೆ'' ಎಂಬುದಾಗಿ. 'ಸತ್ಯಪ್ರತಿಷ್ಠಾಯಾಂ ಕ್ರಿಯಾಫಲಾಶ್ರಯತ್ವಮ್' ಅಂದರೆ ಮಾಡದ ಕ್ರಿಯೆಗೆ ಫಲ ದೊರಕಿಸುವ ಸಾಮರ್ಥ್ಯ ಸತ್ಯವಚನಕ್ಕೆ ಇದೆ ಎಂಬಷ್ಟರ ಮಟ್ಟಿಗೆ ಸತ್ಯದ ಸಾಮರ್ಥ್ಯವನ್ನು ಇಲ್ಲಿ ಕೊಂಡಾಡಲಾಗಿದೆ. ಹಾಗಾಗಿ ಸತ್ಯವಿದ್ದರೆ ಮಾತ್ರ ಅದು ಮಾತಾಗುತ್ತದೆ. ಸತ್ಯವಿಲ್ಲದಿದ್ದರೆ ಅದು ಕೇವಲ ಶಬ್ದಾಡಂಬರವಾಗುತ್ತದೆ. ಸತ್ಯವೆಂದರೆ ಭಗವಂತ. ಅವನನ್ನು ಹೊತ್ತ ಮಾತು ಸತ್ಯವೇ ಆಗಿರುತ್ತದೆ. ಯಾವುದೇ ಮಾತನ್ನು ಆಡಬೇಕಾದರೂ ಆ ಮಾತು ಭಗವಂತನ ಅಥವಾ ಅವನ ಸೃಷ್ಟಿಯ ನಡೆಗೆ ವಿರೋಧವಾಗುವಂತೆ ಇರಬಾರದು. ಅಂತಹ ಸತ್ಯ ಮಾತಿಗೆ ಭೂಷಣ ಎಂಬುದು ಈ ಪ್ರಶ್ನೋತ್ತರದ ಆಶಯವಾಗಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಜರಾಸಂಧನನ್ನು ವಧಿಸಲು ಏಕಾಂತವೇ ಯುಕ್ತ

ಶ್ರೀಕೃಷ್ಣನು ಜರಾಸಂಧನನ್ನು ವಧಿಸಲು ಬೇಕಾದ ಹಿನ್ನೆಲೆಯನ್ನು ಯುಧಿಷ್ಠಿರನಿಗೆ ತಿಳಿಸಿಕೊಡುತ್ತಿದ್ದಾನೆ. ಜರಾಸಂಧನು ತನ್ನ ಮಹಾಗದೆಯನ್ನು ಮಥುರೆಯತ್ತ ಪ್ರಬಲವಾಗಿ ಬೀಸಿದ ಬಳಿಕ ಆದುದನ್ನು ತಿಳಿಸುತ್ತಾನೆ. ಆಗ ಬಲಶಾಲಿಗಳಾದ ಕುಕ್ಕುರ-ಅಂಧಕ-ವೃಷ್ಣಿ ಈ ವಂಶಗಳ ವೀರರೂ ಇದ್ದರು. ಆದರೂ ರಾಜನೀತಿಯ ಲೆಕ್ಕದ ಮೇರೆಗೆ ಅವರು ಜರಾಸಂಧನನ್ನು ಉಪೇಕ್ಷಿಸಿದರು. ಹಾಗೆಂದರೆ, ಆ ಕಾರಣಕ್ಕಾಗಿ ಆತನ ಮೇಲೆ ಸಮರ ಮಾಡಲು ಹೋಗಲಿಲ್ಲ ಎಂದರ್ಥ.

ಒಟ್ಟಾರೆ ಹೇಳುವುದಾದರೆ, ಹಂಸ-ಡಿಂಭಕರು ಮುಳುಗಿ ಸತ್ತರು. ಕಂಸನೂ ಪರಿವಾರ ಸಮೇತನಾಗಿ ಹತನಾದನು. ಇನ್ನೀಗ ಜರಾಸಂಧನ ಸಾವಿನ ಸಮಯವೊದಗಿದೆ. ಸುರರಾಗಲಿ ಅಸುರರಾಗಲಿ, ಈ ಜರಾಸಂಧನನ್ನು ಯುದ್ಧದಲ್ಲಿ ಜಯಿಸಲಾರರು. ಈತನನ್ನು ಬಾಹು ಯುದ್ಧದಿಂದಲೇ ಸೋಲಿಸಬೇಕೆಂಬುದೇ ತೋರುವುದು.

ಯುಧಿಷ್ಠಿರಾ, ನನ್ನಲ್ಲಿ ರಾಜನೀತಿಯ ಜ್ಞಾನವು ಚೆನ್ನಾಗಿದೆ; ಭೀಮನಲ್ಲಿ ಬಲವಿದೆ; ನಮ್ಮಿಬ್ಬರನ್ನೂ ಜಯನು, ಎಂದರೆ ಅರ್ಜುನನು ರಕ್ಷಿಸುವವನಾಗಿದ್ದಾನೆ. ನಾವು ಮೂವರು ಹೇಗೆಂದರೆ, ಯಜ್ಞ ಸಾಧನೆಯಲ್ಲಿ ಮೂರು ಅಗ್ನಿಗಳು. ಎಂದರೆ ದಾಕ್ಷಿಣಾತ್ಯ-ಗಾರ್ಹಪತ್ಯ-ಆಹವನೀಯಗಳೆಂಬ ಹೆಸರಿನವು. ಹೇಗೆ ಭಾಗಿಗಳೋ ಹಾಗೆಯೇ. ನಾವು ಮೂವರೂ ಸೇರಿ ಈ ಮಾಗಧನನ್ನು, ಎಂದರೆ ಜರಾಸಂಧನನ್ನು ಸಾಧಿಸುವುದಾಗಬೇಕಾಗಿದೆ ಎಂದರೆ ವಧಿಸಬೇಕಾಗಿದೆ.

ನಾವು ಮೂವರು ಆತನನ್ನು ನಿರ್ಜನ ಪ್ರದೇಶದಲ್ಲಿ, ಎಂದರೆ ರಹಸ್ಯವಾಗಿ ಎದುರಿಸುವುದೇ ಯುಕ್ತ. ಏಕೆ ಗೊತ್ತೇ? ಹಾಗೆ ಮಾಡಿದಲ್ಲಿ, ಆತನು ಒಬ್ಬರೊಂದಿಗಾದರೂ ಯುದ್ಧಕ್ಕೆ ಬಂದೇ ಬರುವನು; ಇದರಲ್ಲಿ ಸಂಶಯವಿಲ್ಲ. ಅಷ್ಟೇ ಅಲ್ಲ, ಅವಮಾನವೆನ್ನುವ ಕಾರಣದಿಂದಲೂ, ಲೋಭ ನಿಮಿತ್ತವಾಗಿಯೂ, ಸ್ವಬಾಹು-ವೀರ್ಯ-ದರ್ಪದಿಂದಲೂ, ಆತನು ಭೀಮಸೇನನೊಂದಿಗೇ ಯುದ್ಧಕ್ಕೆ ಬರುವನು. ಭೀಮಸೇನನು ಮಹಾಬಾಹು ಹಾಗೂ ಮಹಾಬಲ. ಹಾಗಿರುವುದರಿಂದಲೇ, ಸೊಕ್ಕಿದ ಲೋಕದ ವಿನಾಶಕ್ಕೆ ಹೇಗೆ ಯಮರಾಜನೇ ತಕ್ಕವನೋ, ಹಾಗೆಯೇ ಭೀಮಸೇನನೇ ಇಲ್ಲಿ ತಕ್ಕವನು. ನನ್ನ ಹೃದಯವನ್ನು ನೀನು ಅರಿಯುವೆಯಾದರೆ ಹಾಗೂ ನನ್ನ ಮೇಲೆ ನಂಬಿಕೆಯಿರುವುದಾದರೆ ಯುಧಿಷ್ಠಿರಾ, ನೀನು ಒಡನೆಯೇ ಭೀಮಸೇನ-ಅರ್ಜುನರನ್ನು ನನಗೆ ನ್ಯಾಸ ರೂಪವಾಗಿ ಕೊಡು. (ನ್ಯಾಸವಾಗಿ ಕೊಡುವುದೆಂದರೆ, ಕೊಟ್ಟಿದ್ದನ್ನು ಆಮೇಲೆ ಯಥಾವತ್ತಾಗಿ ಹಿಂದಿರುಗಿಸುವುದು ಇದ್ದೇ ಇದೆ ಎಂಬ ಭಾವ).

ಹೀಗೆಂಬುದಾಗಿ ಕೃಷ್ಣನು ಹೇಳಲಾಗಿ, ಯುಧಿಷ್ಠಿರನು ಭೀಮ-ಅರ್ಜುನರತ್ತ ತನ್ನ ದೃಷ್ಟಿಯನ್ನು ಹಾಯಿಸಿದನು. ಅವರಂತೂ ಸಂಪ್ರಹೃಷ್ಟರಾಗಿದ್ದರು . ಎಂದರೆ ಬಹು ಹರ್ಷದಿಂದ ಅರಳಿದ ಮುಖವುಳ್ಳವರಾಗಿದ್ದರು.

ಆಗ ಯುಧಿಷ್ಠಿರನು ಹೇಳಿದನು:

ಅಚ್ಯುತ, ಅಚ್ಯುತ, ಬೇಡ, ಹೀಗೆ ಹೇಳಬೇಡ! ಶತ್ರು ಸಂಹಾರಕನಾದವನು ನೀನು. ಪಾಂಡವರಿಗೆ ನೀನೇ ಒಡೆಯ! ನಿನ್ನನ್ನು ಆಶ್ರಯಿಸಿರತಕ್ಕವರು ನಾವು.

ಮಗುವನ್ನು ಮಲಗಿಸುವುದೆಂದರೆ...

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com



''ನಿದ್ದೆ ಬಂದಿದೆ ಮಗೂಗೆ'' ಘೋಷಿಸಿದಳು ಮಡದಿ. ಸಾಮಾನ್ಯ ಜನರಿಗೆ ನಿದ್ರೆ ಯಾವಾಗ ಬರುತ್ತದೆಂದು ತಿಳಿಯುವುದಿಲ್ಲ. ಅತ್ಯಂತ ನಿಶ್ಶಬ್ದದ ಹೆಜ್ಜೆಗಳನ್ನಿರಿಸುತ್ತಾ ಬರುವ ನಿದ್ರಾಂಗನೆಯು ತನುವನ್ನು ಆಲಿಂಗಿಸುವುದು ತಿಳಿಯುವುದೇ ಇಲ್ಲ. ಆದರೆ ಮಕ್ಕಳಿಗೆ ನಿದ್ರೆಯು ಸದ್ದು ಮಾಡುತ್ತಲೇ ಆಗಮಿಸುವುದು. ಮಂದ್ರದಿಂದ ಆರಂಭವಾಗುವ 'ಉವ್ವೇ...' ತಾರಕಕ್ಕೇರಿ ಅಲ್ಲಿಯೇ ಒಂದಷ್ಟು ವಿಹರಿಸಿ, ಅನಂತರ ಕಟಕ್ ಕಿಟಿಕ್ ಕಿಟಿಕ್ ಕಟಕ್ ಎಂಬ ಸ್ವರಚಿತ್ರದಲ್ಲಿ ಮುಂದುವರೆದು, ಒಂದಿಷ್ಟು ಕಣ್ಣೀರಿನಲ್ಲಿ ನೆನೆದರೆ, ಮಗುವಿಗೆ ನಿದ್ರೆ ಇನ್ನೇನು ಬಂದಿತು ಎಂದರ್ಥ.


''ಓಡಾಡಿಸಿದರೆ ಮಲಗುತ್ತಾನೆ'' ಎಂದಳು ಮಗಳು. ಮಗುವನ್ನು ಭುಜಕ್ಕಾನಿಸಿಕೊಂಡು ಗಡಿಪ್ರದೇಶದ ಪಹರೆಯವರು ಅತ್ತಿಂದಿತ್ತ, ಇತ್ತಿಂದತ್ತ ಠಳಾಯಿಸುವಂತೆ ನಡೆಯತೊಡಗಿದೆ. ಮೊದಲಿಗೆ ಮೊಬೈಲನ್ನು ಕಚ್ಚಿಹಿಡಿದ ಬ್ಯಾಕ್ ಕವರ್‌ನಂತೆ ನನ್ನನ್ನು ಆತುಕೊಂಡಿದ್ದ ಮಗುವು ಕ್ರಮೇಣ ಕಟ್ಟಡಗಳ ತುದಿಯಿಂದ ಬಾಲ್ಕನಿಗಳು ಹೊರಚಾಚುವಂತೆ ನನ್ನ ಭುಜದ ಪಾರ್ಶ್ವದಿಂದ ಹೊರಕ್ಕೆ ತಲೆಯನ್ನು ಚಾಚಿ ವಾಲಿತು. ಮಗುವಿನ ಬುಡವನ್ನು ಭದ್ರವಾಗಿ ಹಿಡಿದೆ. ಮಗುವು ತನ್ನ ವಾಲುಕೋನವನ್ನು ಹೆಚ್ಚಿಸಿ ಪಿಜ್ಜಾದ ಲೀನಿಂಗ್ ಟವರ್‌ನಂತೆ ವಾಲಿತು. ಪಿಜ್ಜಾದ ಸರ್ಕಾರದವರು 'ಕೋರ್ಸ್ ಕರೆಕ್ಷನ್' ಮಾಡಲೆಂದು ಆಗಾಗ್ಗೆ ವಾಲುವಿಕೆಯನ್ನು ನಿಯಂತ್ರಿಸುವಂತೆಯೇ ನಾನೂ ಭುಜವನ್ನು ತಗ್ಗಿಸಿ, ಮಗುವನ್ನು ನನ್ನ ತನುವಿನತ್ತ ಕೊಂಚ ಎಳೆದುಕೊಂಡು, 'ಭಜ್ಜಾ ಪೊಸಿಷನ್'ಗೆ ತಂದಿರಿಸಿದೆ.

ವಾಲು-ನೇರಗಳ ಆಟದಲ್ಲಿ ಸಂತೋಷದಿಂದ ಪಾಲ್ಗೊಂಡಿದ್ದ ಮಗುವಿಗೆ ಆ ಆಟವು ಸಾಕೆನಿಸಿ ಛಿಟ್ಟನೆ ಚೀರಿತು. ಆಗಷ್ಟೇ ತಮ್ಮ ಅಂದಿನ ಆಗುಹೋಗುಗಳನ್ನು ಚಿಲಿಪಿಲಿಯ ಮೂಲಕ ವಿನಿಮಯ ಮಾಡಿಕೊಂಡು ಪರಸ್ಪರ ಗುಡ್ ನೈಟ್ ಹೇಳಿದ್ದ ಪಕ್ಷಿಗಳು ಈ ಛೀತ್ಕಾರಿಗೆ ಬೆಚ್ಚಿ ಎದ್ದು ತಮ್ಮದೇ ಭಾಷೆಯಲ್ಲಿ ಮಗುವನ್ನೂ, ನನ್ನನ್ನೂ ಆಶೀರ್ವದಿಸಿ ಮುಲುಗಿ ಮಲಗಿದವು. ''ಪೊಸಿಷನ್ ಚೇಂಜ್ ಆದರೆ ಡೈವರ್ಟ್ ಆಗುತ್ತಾನೆ'' ಎಂದು ಮಗಳು ನುಡಿದ ಕಾರಣ ನೆಲಕ್ಕೆ ಲಂಬಕೋನದಲ್ಲಿ ಎತ್ತಿಕೊಂಡಿದ್ದ ಮಗುವನ್ನು ನೆಲಕ್ಕೆ ಸಮಾನಾಂತರ ರೇಖೆಯಲ್ಲಿ ಎತ್ತಿಕೊಂಡೆ. ಮಗುವು ನನ್ನತ್ತ ನೋಡಿತು, ನಕ್ಕಿತು. ಆ ನಗೆಯು ''ಮುಂದಕ್ಕೈತೆ ಮಾರಿಹಬ್ಬ'' ಎನ್ನುವುದರ ಸೂಚನೆಯೆಂದು ನನಗೆ ಆಗ ಹೊಳೆಯಲಿಲ್ಲ.

ನನ್ನ ಠಳಾಯಿಸುವಿಕೆಯು ಅಂದಿನ ವಾಕಿಂಗ್ ಕೋಟಾ ಆದ ಟೆನ್ ಥೌಸೆಂಡ್ ಸ್ಟೆಪ್ಸ್ ಅನ್ನು ಸಮೀಪಿಸುತ್ತಿತ್ತು. ನನ್ನ ಮೊದಮೊದಲ ಸ್ಟೆಪ್ಪುಗಳ ಸಮಯದಲ್ಲಿ ನಿದ್ರೆಯ ಸೂಚನೆಯಾಗಿ ಸಣ್ಣ ಕಣ್ಣಾಗಿದ್ದ ಮಗುವು ಈಗ ಬೊಗಸೆಗಾತ್ರಕ್ಕೆ ಕಣ್ಣುಗಳನ್ನು ಹಿಗ್ಗಿಸಿತ್ತು. ಮೊದಮೊದಲು ಸಣ್ಣ ಗೊರಕೆಯ ಸದ್ದನ್ನು ಹೊರಡಿಸುತ್ತಿದ್ದ ಅದು ಈಗ ದೊಡ್ಡ ದೊಡ್ಡ ಕೇಕೆಗಳನ್ನು ಹಾಕುತ್ತಾ ತನ್ನ ಶಬ್ದಗಾರುಡಿಯ ಅಮೋಘ ಪ್ರದರ್ಶನವನ್ನು ತೋರುತ್ತಿತ್ತು.

''ಮನೆಯೊಳಗೆ ಇದ್ದರೆ ನಿದ್ರೆ ಮಾಡಲ್ಲ. ಹೊರಗೆ ಕರೆದುಕೊಂಡು ಹೋಗಿ'' ಎಂದಳು ಮಡದಿ. ಅಗಲಗಣ್ಣಿನ, ಕೇಕೆಕಂಠದ ಕಂದನೊಡನೆ ಮನೆಯ ಅಂಗಳಕ್ಕಿಳಿದೆ. ಅದೇ ಸಮಯವು ತನ್ನ ಸೈಲೆನ್ಸರ್ ರಹಿತ ಮೋಟರ್ ಬೈಕನ್ನು ಆ ರಸ್ತೆಯಲ್ಲಿ ಓಡಿಸಲು ಸುಮುಹೂರ್ತವೆಂದು ಭಾವಿಸಿದ ಪಡ್ಡೆಯೊಬ್ಬನು ತನ್ನ ವಾಹನವನ್ನು ನಮ್ಮ ಮನೆಯ ಮುಂದೆ ರೊಯ್ರೊಯ್ರೊಯ್ಯಿಸಿದ. 'ಎನಗಿಂತ ಸದ್ದಿಗರುಂಟೆ ಜಗದೊಳ್!' ಎಂಬ ಭಾವವನ್ನು ಹೊಂದಿದ ಮಗುವು ಕಿಟ್ ಕಿಟ್ ಕಿಟಾರ್ ಎಂದರಚಿ ಬೈಕಿನ ಸದ್ದು ಸದ್ದೇ ಅಲ್ಲವೆನ್ನಿಸಿತು. ಹೀಗೆ ಕಿಟಾರ್ ಎನ್ನುವುದರಿಂದ ಮಗುವನ್ನು 'ಕಿಟಾರ್ ವಾದಕ' ಎನ್ನಬಹುದೇ ಎಂದು ಯೋಚಿಸುತ್ತಲೇ ಅಂಗಳದ ವಾಕ್‌ಗೆ ಮಂಗಳ ಹಾಡಿ ಒಳಸರಿದೆ.

ಮಗುವನ್ನು ನಾವು ಕಂದ ಎಂದು ಕರೆದರೂ ಅದರ ಪದ್ಯಪ್ರಕಾರ ರಗಳೆಯೇ. ನಗುತ್ತಿರುವಾಗ ಮಂದಾನಿಲದಂತೆಯೂ, ನಿದ್ರಿಸುವಾಗ ಸರಳವಾಗಿಯೂ ಕಾಣುವ ಮಗುವಿನದು ಕೇಕೆ ಹಾಕುವ ಸಮಯದಲ್ಲಿ ಉತ್ಸಾಹ ರಗಳೆ. ಸರಳಕ್ಕೂ, ಮಂದಾನಿಲಕ್ಕೂ ಮಧ್ಯದ ಸಮಯದಲ್ಲಿ ಮಂದಾಕ್ರಾಂತವೃತ್ತದಲ್ಲಿ ಆಕ್ರಂದನಗೈವ ಮಗುವು ಹಠ ಹಿಡಿದು ಕುಳಿತರೆ ಯಾವ ಶಾರ್ದೂಲ ವಿಕ್ರೀಡಿತಕ್ಕೂ ಕಡಿಮೆಯಿರುವುದಿಲ್ಲ. ಭಾಮಿನಿಯ ಸಾಂಗತ್ಯದಲ್ಲಿ ಪಿರಿಯಕ್ಕರ ತೋರಿದರೂ, ಶಿಶುವು 'ಹಠಯೋಗ'ದಲ್ಲಿರುವಾಗ ಅವನಿಂದ ಕಿರಿಯಕ್ಕರ ಪಡೆಯುವುದೂ ಕಷ್ಟವೇ. ನಮ್ಮ ಶಿಶುವು ಅಂಗಳವನ್ನು ತೊರೆದ ಆ ಸಮಯದಲ್ಲಿ ಹಠಯೋಗದಲ್ಲಿಯೇ ಇದ್ದು, ನನ್ನೆರಡು ತೋಳುಗಳೆಂಬ ಹಾಸಿಗೆಯ ಮೇಲಿನಿಂದ ತನ್ನ ತನುವಿನ ಮಧ್ಯಭಾಗವನ್ನು ಬಿಲ್ಲಿನಂತೆ ಬಾಗಿಸಿ ಮೇಲೇರಿಸಿ, ತಲೆಯನ್ನು ಮೊಣಕೈಯಿಂದ ವಿಶಾಲಕೋನದಲ್ಲಿ ಹೊರಚಾಚಿ 'ಅರ್ಧವೃತ್ತವಿಶಾಲಕೋನಾಸನ'ವೆಂಬ ಹೊಸ ಭಂಗಿಯನ್ನೇ ವಿಶ್ವಕ್ಕೆ ಅರ್ಪಿಸಿದ್ದನು ಹಾಗೂ ಹಾಗೆ ಅರ್ಪಿಸಿದ ಸಂತೋಷವನ್ನು ಜಗಕ್ಕೆ ಅರುಹಲೆಂದೋ ಎಂಬಂತೆ ಕಿಟ್ಟಕಿಟಾರನೆ ಗೋಳಿಟ್ಟನು.



''ನಿಮಕ್ಕೈಲಾಗಲ್ಲ. ಕೊಡಿ ಇಲ್ಲಿ'' ಎಂದಳು ಶಿಶುಭಾಷಾಪ್ರವೀಣೆ. ಯಾವುದೇ ಹುಡುಗನು ಹೊಸ ವಾಹನವನ್ನು ಮೆಚ್ಚಿಕೊಳ್ಳುವಂತೆಯೇ ಮಗುವೂ ತನ್ನ ಹೊಸ ವಾಹನದಲ್ಲಿನ ಪ್ರಯಾಣವನ್ನು ಸುಖಕರವೆಂದು ಪರಿಗಣಿಸಿತೆಂದು ಅದರ ನಗೆಮೊಗವು ಸೂಚಿಸುತ್ತಿತ್ತು. ಕಿಟಾರ್ ವಾದನವು ಮುಗಿದು ನಗೆಮಲ್ಲಿಗೆಯು ಅರಳಿದುದಕ್ಕೆ ತನ್ನ ಶಿಶುಗ್ರಹಣಕೌಶಲವೇ ಕಾರಣವೆಂದು ಕಣ್ಣಿನಿಂದಲೇ ಸೂಚಿಸುತ್ತಾ ಪಹರೆನಡೆಯನ್ನು ಕೈಗೊಂಡಳವಳು. 'ನಿದ್ದೆ ಬಂದಿದೆ ಮಗೂಗೆ' ಎನ್ನಿಸಿಕೊಂಡಿದ್ದ ಮಗುವಿನ ಕಣ್ಣಿನಿಂದ ಈಗ ಝೋಂಪಿನ ಸೂಚನೆಯೂ ಮಾಯವಾಗಿತ್ತು.

ಅಂತಿಂಥ ನಿದ್ರೆ ನಿನದಲ್ಲ; ನಿನ್ನಂಥ ನಿದ್ರೆ, ಇನ್ನಿಲ್ಲ।
ನಡೆನಡೆದು ಕಾಲ ಕೀಲೆಲ್ಲ ಸ್ಟ್ರೈಕ್ ಮಾಡುತಿಹವು 'ನಡೆಯೊಲ್ಲ'
ತಿರುತಿರುಗಿ ಕೊರಳ ನರವೆಲ್ಲ ಹೇಳಿಹವು 'ನಾವು ಹೊರಳಲ್ಲ' ॥
ನಡುಮಧ್ಯದಲ್ಲಿ ನಿನ್ನೂರು ಭುಜಕೀಲಿನಲ್ಲಿ ನಿನ್ನಲರು
ತೊಟ್ಟಿಲಲಿ ಮಲಗೆ ನೀನೊಲ್ಲೆ ಒಲು ಪ್ರಿಯವು ನಿನಗೆ ಉಯ್ಯಾಲೆ ॥
ಎದೆಮಟ್ಟದಲ್ಲಿ ನಾ ಹೊತ್ತೆ; ತಿರುಗಾಡಿಸಿದೆನು ಬಲು ಹೊತ್ತೆ
ಹೊತ್ತಾಯಿತಷ್ಟೆ ನಿನ ಹೊತ್ತು; ಬರಲಿಲ್ಲ ನಿದಿರೆ ಕಿಂಚಿತ್ತು ॥

ಎಂಬ 'ಅನಿದ್ರೆಗೀತೆ'ಯೊಂದು ನನ್ನ ಮನದಲ್ಲಿ ಮೂಡಿತು. ಮಡದಿ-ಮಗುವಿನ ಠಳಾಯಿಸುವಿಕೆಯು ಎರಡು ದಿನಗಳಿಗೆ ಆಗುವಷ್ಟು ಸ್ವಪ್ನವನ್ನು ತಲುಪಿತು. ಮಗುವಿನ ಕಣ್ಣಲ್ಲಿ ಲವಲೇಶವೂ ಕಾಣದ ನಿದ್ರೆಯ ಛಾಯೆಯು ಮಡದಿಯ ಕಣ್ಣಲ್ಲಿ ಢಾಳಾಗಿ ಕಾಣತೊಡಗಿತು. ಇವೆಲ್ಲವನ್ನೂ ಗಮನಿಸುತ್ತಿದ್ದ ಮಗಳು ''ಕೊಡಮ್ಮ, ಹಾಲು ಕುಡಿದರೆ ನಿದ್ರಿಸ್ತಾನೆ'' ಎಂದು ಮಗುವನ್ನು ಒಳಗೆ ಕರೆದೊಯ್ದಳು. ಮಡದಿಯು ನಿದ್ರೆಯ ಮೊದಲ ಮೆಟ್ಟಿಲನ್ನು ಏರಿದಳು.

ಕೊಂಚ ಸಮಯದ ನಂತರ 'ಸ್ವಲ್ಪ ಮಗೂನ ಎತ್ಕೊಳ್ರಿ' ಎಂಬ ಮಗಳ ನಿದ್ರಾಭರಿತ ಸ್ವರವೂ, ಮಗುವಿನ ಕಿಟಾರ್ ವಾದನವೂ ಕೇಳಿಸಿತು. ಸತಿವಾಕ್ಯಪರಿಪಾಲಕನಾದ ಅಳಿಯನು ಕಾವಡಿಯನ್ನು ಹೊತ್ತ ಹರೋಹರರಂತೆ, ಇರುಮುಡಿಯನ್ನು ಹೊತ್ತ ಅಯ್ಯಪ್ಪರಂತೆ ಮಗುವನ್ನು ಹೊತ್ತು ಓಡಾಡತೊಡಗಿದನು. ಇವೆಲ್ಲವನ್ನೂ ದೂರದಿಂದ ಗಮನಿಸುತ್ತಿದ್ದ ಅಪಾರ್ಟ್‌ಮೆಂಟಿನ ಸೆಕ್ಯುರಿಟಿ ಗಾರ್ಡ್‌ಗಳು 'ಮಗೀ ಬ್ಯಳ್ಕೋ ಗಂಟ ನಾವು ನೇಟ್ ಡ್ಯೂಟಿ ಮಾಡ್ಬೇಕಾಗಿಲ್ಲ. ಈ ಮನ್ಯವ್ರೇ ಬೆಳತನ್ಕ ಎದ್ದಿರ್ತಾರೆ ಯಾವ್ಕಳ್ಳ ಬರಾಕಿಲ್ಲ. ಮೂರ್ದಿನ ಟ್ರಿಪ್ ಓಗ್ಬರೋಮಾ' ಎಂಬ ಯೋಜನೆಯನ್ನು ಹಾಕಿಕೊಳ್ಳುತ್ತಿದ್ದರೆಂದು ಮರುದಿನ ನನಗೆ ಬಲ್ಲ ಮೂಲಗಳಿಂದ ತಿಳಿಯಿತು.

ಮಗುವಿನ ಕಣ್ಣುಗಳು ಈಗ ಡಬಲ್ ಜಾಮೂನಿನ ಬಟ್ಟಲುಗಳಷ್ಟು ಅಗಲವಾಗಿದ್ದವು. ಅಳಿಯನ ಕಾಲುಗಳು ಸೋಲುತ್ತಿದ್ದವು. ತೂಕಡಿಕೆಯಿಂದ ಅವನ ಶಿರವು ಪೆಂಡುಲಮ್‌ನಂತೆ ಆಡುತ್ತಿತ್ತು. ಮಗುವು ಪ್ರತಿ ಮೂವತ್ತು ಸೆಕೆಂಡಿಗೊಮ್ಮೆ ಕೇಕೆ ಹಾಕುವ ಮೂಲಕ ಪೆಂಡುಲಮ್ ಆಟಕ್ಕೆ ತನ್ನ ಮೆಚ್ಚುಗೆ ಸೂಚಿಸುತ್ತಿತ್ತು. ಮಗುವನ್ನು ಚುಕ್ಕು ತಟ್ಟುತ್ತಾ ಮಲಗಿಸುವುದೆಂದು ತೀರ್ಮಾನಿಸಿದ ಅಳಿಯನು ಮಗುವನ್ನು ಹಾಸಿಗೆಯ ಮಧ್ಯದಲ್ಲಿ ಮಲಗಿಸಿದನು.

ಮರದಲ್ಲಿನ ಪಕ್ಷಿಗಳು ಮತ್ತೆ ನಿದ್ರೆಯಿಂದೇಳುವಂತೆ ದನಿಯೇರಿಸಿತು ಮಗು. ಮಡದಿ, ಮಗಳು, ಅಳಿಯ ನಿದ್ರೆಗೆ ಜಾರಿದ್ದರು. ಈಗ ಎದ್ದಿದ್ದದ್ದು ನಾನು ಮತ್ತು ಮಗು ಮಾತ್ರ. ಹಾಸಿಗೆಯಿಂದ ಮಗುವನ್ನು ಎತ್ತಿಕೊಂಡು ಹೊರಬಂದು ಉಯ್ಯಾಲೆಯಲ್ಲಿ ಕುಳಿತು ಜೀಕತೊಡಗಿದೆ. ಮಗುವಿನ ಡಬಲ್ ಜಾಮೂನ್ ಬಟ್ಟಲ ಕಣ್ಣುಗಳು ಸಿಂಗಲ್ ಜಾಮೂನ್ ಬಟ್ಟಲಿನ ಗಾತ್ರಕ್ಕೆ ಇಳಿದವು; ಮಿನಿ ರಸಗುಲ್ಲಾದ ಬಟ್ಟಲಿನ ಗಾತ್ರಕ್ಕೆ ಕ್ಷೀಣಿಸಿದವು; ಕೆಳರೆಪ್ಪೆಯು ಆಯಸ್ಕಾಂತದಂತೆ ಬದಲಾಗಿ ಮೇಲ್ರೆಪ್ಪೆಯನ್ನು ಜಗ್ಗತೊಡಗಿತು; ಮೇಲ್ರೆಪ್ಪೆಯು ಅಂಗಡಿಯ ಶಟರ್‌ಗಳು ಕ್ಲೋಸ್ ಆಗಿ ಅಂಗಡಿಯ ವಸ್ತುಗಳಾವುವೂ ಕಾಣದಂತಾಗಿಸುವಂತೆಯೇ ಕಣ್ಣಾಪಾಪೆಗಳ ಮೇಲೆ ಚಾಚಿಕೊಂಡಿತು. ಮೂಗಿನ ಹೊಳ್ಳೆಗಳು ಸಣ್ಣದಾಗಿ ಅರಳಿ ಶ್ವಾಸೋಚ್ಛ್ವಾಸವು ಮಂದಗತಿಯನ್ನು ತಲುಪಿತು.

ಊಹೂಂ. ಇವಾವುವೂ ಮಗುವಿನ ಕಣ್ಣಿಗೆ ಸಂಬಂಧಿಸಿದ ಬಾಬ್ತಲ್ಲ, ನನ್ನ ಕಣ್ಣುಗಳಿಗೆ ಸಂಬಂಧಿಸಿದವು. ಹಳ್ಳಿಯ ಜನರ ಮೈಮೇಲೆ ದೇವರು ಬಂದಾಗ ಅತ್ತಿತ್ತ ಆಡುವ ಕೊರಳಿನಂತೆ ನನ್ನ ಕೊರಳೂ ನಿದ್ರಾಭಾರಕ್ಕೆ ತೂಗತೊಡಗಿತು. ಕಷ್ಟಪಟ್ಟು ಉಯ್ಯಾಲೆಯಿಂದೆದ್ದು ತಟ್ಟಾಡುತ್ತಲೇ ಮಗುವನ್ನು ಎತ್ತಕೊಂಡು ಬಂದು ನನ್ನ ಹಾಸಿಗೆಯ ಮೇಲೆ ನನ್ನ ಪಕ್ಕದಲ್ಲಿಯೇ ಮಲಗಿಸಿಕೊಂಡು, ನನ್ನ ಪಿಳುಚುಕಣ್ಣುಗಳನ್ನು ಕೀಲಿಸಿ, ಮಗುವಿನತ್ತ ನೋಡಿದೆ.

ತನಗೂ ನಿದ್ರೆಗೂ ಏನೇನೂ ಸಂಬಂಧವಿಲ್ಲ ಎಂಬಂತಿದ್ದವು ಶಿಶುವಿನ ಕಣ್ಣುಗಳು. ಮುಖದಲ್ಲಿ ಮಂದಾನಿಲ ರಗಳೆಯ ಛಾಯೆಯು ಉತ್ಸಾಹ ರಗಳೆಯಾಗಿ ಬದಲಾಗುತ್ತಿರುವುದು ಗೋಚರಿಸಿತು. ನಿದ್ರೆ ಬಂದಿದ್ದ ಮಗುವು ಎಲ್ಲರನ್ನೂ ಮಲಗಿಸಿ, ಅಂತಹ ಸಾಧನೆಯನ್ನು ಗೈದುದಕ್ಕೆ ಕೇಕೆ ಹಾಕುತ್ತಾ ಕುಳಿತಿತ್ತು.

ಮಕ್ಕಳ ಕ್ಯಾನ್ಸರ್ ಆರೈಕೆಯಲ್ಲಿ ಸಂಗೀತ: ಒಂದು ಸಂಶೋಧನಾ ಅನುಭವ

▸ ವರಲಕ್ಷ್ಮಿ ಎನ್.

ಜಗತ್ತಿನಾದ್ಯಂತ ಪ್ರತಿ ವರ್ಷ ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಮಕ್ಕಳು ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಭಾರತದ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ದೇಶದ ವಿವಿಧ ಕ್ಯಾನ್ಸರ್ ನೋಂದಣಿ ಕೇಂದ್ರಗಳ ವರದಿಯ ಪ್ರಕಾರ, 0 ರಿಂದ 14 ವರ್ಷದ ಮಕ್ಕಳಲ್ಲಿ ಸುಮಾರು ಶೇ.4 ಮತ್ತು 0 ರಿಂದ 19 ವರ್ಷದ ಮಕ್ಕಳಲ್ಲಿ ಸುಮಾರು ಶೇ.6 ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ಇವುಗಳಲ್ಲಿ ಅಸಂಖ್ಯಾತ ಕುಟುಂಬಗಳ ಕಣ್ಣೀರಿನ ಕಥೆಗಳಿವೆ. ಕ್ಯಾನ್ಸರ್ ರೋಗನಿರ್ಣಯವು ಕೇವಲ ಮಗುವಿನ ದೈಹಿಕ ಆರೋಗ್ಯವನ್ನಷ್ಟೇ ಅಲ್ಲದೆ, ಇಡೀ ಕುಟುಂಬದ ದೈನಂದಿನ ಬದುಕು ಮತ್ತು ಮಾನಸಿಕ ನೆಮ್ಮದಿಯನ್ನು ಅಸ್ತವ್ಯಸ್ತಗೊಳಿಸುತ್ತದೆ. ಈ ಕಠಿಣ ಪಯಣದಲ್ಲಿ ಮಕ್ಕಳು ಮತ್ತು ಅವರ ಪೋಷಕರು ಅನುಭವಿಸುವ ನೋವು, ಅನಿಶ್ಚಿತತೆ, ಆತಂಕ ಮತ್ತು ವಿವರಿಸಲಾಗದ ಒತ್ತಡದ ವ್ಯಥೆ-ಕಥೆಗಳು ಅತ್ಯಂತ ಗಾಢವಾದುದು. ಕ್ಯಾನ್ಸರ್ ಚಿಕಿತ್ಸೆ ಎಂದರೆ ಕೇವಲ ಔಷಧಿ, ಕಿಮೋಥೆರಪಿ ಅಥವಾ ಶಸ್ತ್ರಚಿಕಿತ್ಸೆ ಮಾತ್ರವಲ್ಲ, ಅದು ಮಕ್ಕಳ ಮನಸ್ಸಿನ ಮೇಲೆಯೂ ಭಾರೀ ಪರಿಣಾಮ ಬೀರುತ್ತದೆ. ಆಸ್ಪತ್ರೆ, ಇಂಜೆಕ್ಷನ್, ಪರೀಕ್ಷೆಗಳು, ಅಪರಿಚಿತ ವಾತಾವರಣ – ಇವೆಲ್ಲವೂ ಮಕ್ಕಳಲ್ಲಿ ಆತಂಕ, ಒಂಟಿತನ ಮತ್ತು ಭಯವನ್ನು ಹೆಚ್ಚಿಸುತ್ತವೆ. ಈ ಸಂದರ್ಭದಲ್ಲಿ ಮಕ್ಕಳಿಗೆ ಬೇಕಾಗುವುದು ಕೇವಲ ದೈಹಿಕ ಚಿಕಿತ್ಸೆ ಅಲ್ಲ; ಮನಸ್ಸಿಗೆ ನೆಮ್ಮದಿ ಕೊಡುವ ಮಾನವೀಯ ಸ್ಪರ್ಶ.

ಇದೇ ಹಿನ್ನೆಲೆಯಲ್ಲಿ, ಬೆಂಗಳೂರು ನಗರದ ಒಂದು ಶೆಲ್ಟರ್ ಹೋಂನಲ್ಲಿ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಿಗಾಗಿ ಒಂದು ಸಂಗೀತ ಕಾರ್ಯಕ್ರಮವನ್ನು ನಡೆಸಿದ್ದೆ. ಅದು ವೇದಿಕೆ ಮೇಲೆ ನಿಂತು ಹಾಡುವ ಕಾರ್ಯಕ್ರಮವೂ ಅಲ್ಲ, ಪ್ರೇಕ್ಷಕರಿಗಾಗಿ ತಯಾರಿಸಿದ ಪ್ರದರ್ಶನವೂ ಅಲ್ಲ, ಅದು ಮಕ್ಕಳ ಜೊತೆ, ಅವರ ಕಣ್ಣೆದುರು, ಅವರ ನೆಲೆಯಲ್ಲೇ ಕುಳಿತುಕೊಂಡು ನಡೆಸಿದ ಒಂದು ಸರಳ ಸಂಗೀತ ಸಂವಾದ. ಮಕ್ಕಳಿಗೆ ಇಷ್ಟವಾದ ಹಾಡುಗಳನ್ನು ಕೇಳುತ್ತಾ, ಅವರ ಜೊತೆಗೆ ಗುನುಗುತ್ತಾ, ಕೆಲವೊಮ್ಮೆ ತಾಳಕ್ಕೆ ಕೈ ತಟ್ಟುತ್ತಾ, ಆಟವಾಡುತ್ತಾ ಸಾಗಿದ ಕ್ಷಣಗಳು ಅವು.

ಹಾಡು ಆರಂಭವಾದ ಕೆಲವೇ ಕ್ಷಣಗಳಲ್ಲಿ ಮಕ್ಕಳ ಮುಖದಲ್ಲಿ ಕಂಡ ಬದಲಾವಣೆ ಸ್ಪಷ್ಟವಾಗಿತ್ತು. ಸಾಮಾನ್ಯವಾಗಿ ಆಸ್ಪತ್ರೆಯ ವಾತಾವರಣದಲ್ಲಿ ಮೌನವಾಗಿರುವ, ದಣಿದಂತೆ ಕಾಣುವ ಮಕ್ಕಳು ತಾಳಕ್ಕೆ ಕೈ ತಟ್ಟಿದರು. ಕೆಲವರು ನಿಧಾನವಾಗಿ ಗುನುಗಲು ಆರಂಭಿಸಿದರು. ಆಸ್ಪತ್ರೆ, ಚಿಕಿತ್ಸೆ, ಇಂಜೆಕ್ಷನ್, ಕಿಮೋಥೆರಪಿ, ಪರೀಕ್ಷೆಗಳ ನಡುವೆ ಸಿಕ್ಕ ಈ ಕ್ಷಣಗಳಲ್ಲಿ ಮಕ್ಕಳು ಸ್ವಲ್ಪ ಹೊತ್ತು ತಮ್ಮ ಕಾಯಿಲೆಯನ್ನು ಮರೆತಂತಾಯಿತು. ಒಬ್ಬ ಮಗು ತನ್ನ ಇಷ್ಟವಾದ ಹಾಡು ಬಂದಾಗ ಕಣ್ಣುಮಿಟುಕಿಸುತ್ತಾ ನಗುತ್ತಿದ್ದರೆ, ಮತ್ತೊಬ್ಬ ಮಗು ತನ್ನ ಇಷ್ಟದ ಹಾಡು ಕೇಳುತ್ತಿದ್ದಂತೆ ತಲೆಯನ್ನು ಮೆಲ್ಲಗೆ ತಟ್ಟಿಕೊಂಡು ನಗುತ್ತಿದ್ದ ದೃಶ್ಯ ಇನ್ನೂ ಮನಸ್ಸಿನಲ್ಲಿ ಉಳಿದಿದೆ. ಆ ಕ್ಷಣಗಳು ನನ್ನನ್ನು ಒಂದು ಆಳವಾದ ಪ್ರಶ್ನೆಯ ಕಡೆಗೆ ಕರೆದೊಯ್ದವು: ''ಸಂಗೀತವು ಮಕ್ಕಳಲ್ಲಿ ಇಷ್ಟು ಬದಲಾವಣೆ ತರುತ್ತಿದ್ದರೆ, ಇದನ್ನು ಚಿಕಿತ್ಸೆ ಭಾಗವಾಗಿ ಯಾಕೆ ಹೆಚ್ಚು ಬಳಸುವುದಿಲ್ಲ?''

ಸಂಗೀತವು ಆಸ್ಪತ್ರೆಯ ಕಠಿಣ ಪರಿಸರದೊಳಗೆ ಮಕ್ಕಳಿಗೂ ಪಾಲಕರಿಗೂ ಒಟ್ಟಿಗೆ ಸಾಂತ್ವನ ನೀಡುವ ಮಾನವೀಯ ಸೇತುವೆಯಾಗಿ ಕೆಲಸ ಮಾಡುತ್ತದೆ.

ಮ್ಯೂಸಿಕ್ ಥೆರಪಿ

ವಿಶ್ವದ ಅನೇಕ ದೇಶಗಳಲ್ಲಿ ಮ್ಯೂಸಿಕ್ ಥೆರಪಿಯನ್ನು ಕ್ಯಾನ್ಸರ್ ಚಿಕಿತ್ಸೆಯ ಭಾಗವಾಗಿ ಬಳಸಲಾಗುತ್ತಿದೆ. ಸಂಗೀತದ ಮೂಲಕ ಮಕ್ಕಳಲ್ಲಿ ಆತಂಕ ಕಡಿಮೆಯಾಗುವುದು, ನೋವಿನ ಅನುಭವ ತಗ್ಗುವುದು ಮತ್ತು ಆಸ್ಪತ್ರೆಯ ಒತ್ತಡವನ್ನು ಸಹಿಸುವ ಶಕ್ತಿ ಹೆಚ್ಚಾಗುವುದು ಎಂಬುದನ್ನು ಹಲವಾರು ಅಧ್ಯಯನಗಳು ಸೂಚಿಸಿವೆ. ಆದರೆ ಭಾರತದಲ್ಲಿ, ವಿಶೇಷವಾಗಿ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಜೀವನದಲ್ಲಿ ದಿನನಿತ್ಯದ ಸಂಗೀತದ ಪಾತ್ರದ ಬಗ್ಗೆ ಸಂಶೋಧನೆ ಬಹಳ ಕಡಿಮೆ. ಔಷಧಿ , ಶಸ್ತ್ರಚಿಕಿತ್ಸೆ, ಕಿಮೋಥೆರಪಿ ಇವೆಲ್ಲದರ ಬಗ್ಗೆ ಸಾಕಷ್ಟು ಮಾತುಗಳಿವೆ. ಆದರೆ ಮಕ್ಕಳ ಮಾನಸಿಕ ಆರೋಗ್ಯಕ್ಕೆ ಬೇಕಾದ ಆರೈಕೆ ಕುರಿತು, ಅದರಲ್ಲೂ ಸಂಗೀತದಂತಹ ಸರಳ ಮತ್ತು ಸಹಜ ಸಾಧನಗಳ ಕುರಿತು ಹೆಚ್ಚು ಚರ್ಚೆ ನಡೆದಿಲ್ಲ. ಈ ಅನುಭವವೇ ನನ್ನ ಸಂಶೋಧನೆಗೆ ಆಧಾರವಾಯಿತು. ಈ ಅಧ್ಯಯನವು ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಜೀವನದಲ್ಲಿ 'ಎವ್ರಿ ಡೇ ಮ್ಯೂಸಿಕ್ ಎಂಗೇಜ್ಮೆಂಟ್', ಅಂದರೆ ದಿನನಿತ್ಯದ ಸರಳ ಸಂಗೀತ ಚಟುವಟಿಕೆಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಪಾಲಕರ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ. ಇಲ್ಲಿ ನಾನು ವೇದಿಕೆಯ ಮೇಲಿನ ಮ್ಯೂಸಿಕ್ ಥೆರಪಿಯ ಬಗ್ಗೆ ಮಾತ್ರ ನೋಡಿಲ್ಲ; ಮನೆಯಲ್ಲೋ, ಆಸ್ಪತ್ರೆಯ ಕೊಠಡಿಗಳಲ್ಲೋ, ಮೊಬೈಲ್ ಫೋನಿನ ಸ್ಪೀಕರ್‌ನಲ್ಲೋ, ತಾಯಿಯ ಗುನುಗು ಲಾಲಿಯಲ್ಲೋ ನಡೆಯುವ ಸಂಗೀತದ ಬಗ್ಗೆ ಕೇಳಿದೆ. ಪಾಲಕರು ತಮ್ಮ ಮಕ್ಕಳನ್ನು ದಿನನಿತ್ಯ ಇಪ್ಪತ್ನಾಲ್ಕು ಗಂಟೆ ನೋಡುತ್ತಿರುತ್ತಾರೆ.



ಚಿಕಿತ್ಸೆಗೂ ಮೊದಲು, ಚಿಕಿತ್ಸೆಯ ಸಮಯದಲ್ಲಿ, ನೋವು, ಆಯಾಸ, ಭಯ ಎಲ್ಲದರ ನಡುವೆ, ಚಿಕಿತ್ಸೆಯ ನಂತರದ ಸಮಯದಲ್ಲೂ ಪಾಲಕರು ಮಕ್ಕಳ ಜೊತೆ ಇರುತ್ತಾರೆ. ಅವರ ಮಾತುಗಳಲ್ಲಿ ಸಂಗೀತದ ಪರಿಣಾಮ ಸ್ಪಷ್ಟವಾಗಿ ಕೇಳಿಬರುತ್ತದೆ.

''ನಾವು ಹಾಡು ಹಾಕಿದಾಗ ಅವನು ನಗುತ್ತಾನೆ, ಶಕ್ತಿಯುತವಾಗಿ ವರ್ತಿಸುತ್ತಾನೆ, ಸುತ್ತಲೂ ಜಿಗಿಯುತ್ತಾನೆ. ಅದು ನನಗೂ ಸಂತೋಷವನ್ನು ನೀಡುತ್ತದೆ. ಅವನು ಚಿಕಿತ್ಸೆ ಪಡೆಯುತ್ತಿರುವಾಗಲು ಆ ಹಾಡಿಗೆ ನಲಿದಾಡುತ್ತಿರುತ್ತಾನೆ'' ಎಂದು ಒಬ್ಬ ತಾಯಿ ಹೇಳಿದರೆ, ''ಕಿಮೋಥೆರಪಿ ಇಂಜೆಕ್ಷನ್ ಸಮಯದಲ್ಲಿ ನಾವು ಭಕ್ತಿಗೀತೆಯನ್ನು ಹಾಕಿದರೆ, ಅವಳು ತುಂಬಾ ಶಾಂತವಾಗಿರುತ್ತಾಳೆ. ಭಕ್ತಿಗೀತೆಗಳು, ಹನುಮಾನ್ ಚಾಲೀಸಾವನ್ನು ಕೇಳಿದಾಗ ಯಾವುದೇ ಚಿಕಿತ್ಸಾವಿಧಾನಗಳಿಗೆ ಅವಳು ಧೈರ್ಯದಿಂದ, ಆತ್ಮವಿಶ್ವಾಸದಿಂದ ಕೂರುತ್ತಾಳೆ'' ಎಂದು 9 ವರ್ಷದ ಪುಟ್ಟಿಯ ತಂದೆ-ತಾಯಿ ತಮ್ಮ ಅನುಭವವನ್ನು ಹಂಚಿಕೊಂಡರು. ಈ ಮಾತುಗಳು ಹೇಳುವುದೇನೆಂದರೆ, ಸಂಗೀತ ಮಕ್ಕಳಿಗೆ ಕೇವಲ ಮನೋರಂಜನೆ ಅಲ್ಲ, ಅದು ಭದ್ರತೆಯ ಅನುಭವವನ್ನು ನೀಡುತ್ತದೆ. ಆಸ್ಪತ್ರೆಯ ಅಜ್ಞಾತ ಜಗತ್ತಿನಲ್ಲಿ, ಸಂಗೀತ ಮಕ್ಕಳಿಗೆ ಪರಿಚಿತವಾದ ಧ್ವನಿ, ಮನೆಯ ನೆನಪು, ಮತ್ತು ಸ್ವಲ್ಪ ಹೊತ್ತು ''ನಾನು ರೋಗಿ'' ಅನ್ನುವ ಭಾವನೆಯನ್ನು ಮರೆಸುವ ಒಂದು ಸೇತುವೆಯಾಗಿದೆ.

ಬಹುತೇಕ ಪಾಲಕರು ಸಂಗೀತವನ್ನು ಬಹಳ ಸರಳವಾಗಿ ಬಳಸುತ್ತಿದ್ದಾರೆ – ಮೊಬೈಲಿನಲ್ಲಿ ಹಳೆಯ ಹಾಡುಗಳು, ದೇವರ ಭಜನೆಗಳು, ಸಿನಿಮಾ ಗೀತೆಗಳು, ಮಗು ತಾನೇ ಹಾಡಿದ ಹಾಡುಗಳು ಅಥವಾ ಅಜ್ಜಿಯ ಲಾಲಿ ಹಾಡುಗಳು. ಇವೆಲ್ಲವುಗಳು ಮಕ್ಕಳಿಗೆ ನೆಮ್ಮದಿ ಕೊಡುತ್ತಿವೆ. ಆದರೆ ಇದೇ ಸಮಯದಲ್ಲಿ ಪಾಲಕರು ಒಂದು ಕೊರತೆಯನ್ನೂ ಸೂಚಿಸುತ್ತಾರೆ. ಸಂಗೀತ ಸಹಾಯ ಮಾಡುತ್ತಿದೆ ಎಂಬುದು ಗೊತ್ತಿದ್ದರೂ, ಅದನ್ನು ಹೇಗೆ ಸರಿಯಾಗಿ ಬಳಸಬೇಕು, ಯಾವ ಸಮಯದಲ್ಲಿ, ಯಾವ ರೀತಿಯಲ್ಲಿ ಎಂಬ ಮಾರ್ಗದರ್ಶನ ಅವರಿಗೆ ಇಲ್ಲ. ಮ್ಯೂಸಿಕ್ ಥೆರಪಿ ಮಾಡಲು ವಿಶೇಷ ತರಬೇತಿ ಪಡೆದ ಥೆರಪಿಸ್ಟ್‌ಗಳ ಅಗತ್ಯವಿದೆ. ಇದು ಮಕ್ಕಳ ಆರೈಕೆಯಲ್ಲಿ ಸಂಗೀತವನ್ನು ಗಂಭೀರವಾಗಿ ಸೇರಿಸಬಹುದಾದ ದೊಡ್ಡ ಅವಕಾಶವನ್ನು ತೋರಿಸುತ್ತದೆ. ಕಡಿಮೆ ಖರ್ಚಿನ, ಮಕ್ಕಳಿಗೆ ಇಷ್ಟವಾದ, ಮನಸ್ಸಿಗೆ ನೆಮ್ಮದಿ ನೀಡುವ ಸಂಗೀತ – ಇವೆಲ್ಲವೂ ಕ್ಯಾನ್ಸರ್ ಚಿಕಿತ್ಸೆಯ ಔಷಧಿಗೆ ಪೂರಕವಾಗಿ ಕೆಲಸ ಮಾಡಬಹುದು.

ಈ ಸಂಶೋಧನೆಯ ಮೂಲಕ ಸ್ಪಷ್ಟವಾದದ್ದು ಏನೆಂದರೆ, ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಬದುಕಿನಲ್ಲಿ ಸಂಗೀತ ಒಂದು ಕ್ಷಣಿಕ ಬದಲಾವಣೆಯಾಗಿರಬಹುದು, ಆದರೆ ಅದರ ಪರಿಣಾಮ ಆಳವಾದದ್ದು. ಅದು ಮಕ್ಕಳಿಗೆ ಧೈರ್ಯವನ್ನು ನೀಡುತ್ತದೆ, ಮುದುಡಿದ ಜೀವನಕ್ಕೆ ಬಣ್ಣವನ್ನು ಹಚ್ಚುತ್ತದೆ, ಆರಾಮವನ್ನು ನೀಡುತ್ತದೆ. ಪಾಲಕರಿಗೂ ಧೈರ್ಯವನ್ನು ನೀಡುತ್ತಾ, ಒತ್ತಡದ ನಡುವೆ ಒಂದು ಉಸಿರಾಟದ ಅವಕಾಶವಾಗುತ್ತದೆ. ಇದಷ್ಟೇ ಅಲ್ಲ, ಸಂಗೀತವು ಪಾಲಕರಿಗೂ ಒಂದು ಮಹತ್ವದ ನೆಮ್ಮದಿಯ ಸಾಧನವಾಗಿದೆ. ಮಕ್ಕಳ ನೋವು, ಭಯ ಮತ್ತು ಅನಿಶ್ಚಿತತೆಯನ್ನು ಪ್ರತಿದಿನ ಎದುರಿಸುವ ಪಾಲಕರಿಗೆ ಸಂಗೀತವು ಸ್ವಲ್ಪ ಹೊತ್ತು ಮನಸ್ಸನ್ನು ಹಗುರಗೊಳಿಸುವ ಅವಕಾಶವನ್ನು ನೀಡುತ್ತದೆ. ''ಮಗು ನಗುತ್ತಿರುವುದನ್ನು ನೋಡಿದಾಗ ನಮ್ಮ ನೋವು ಕೂಡ ಕ್ಷಣಮಾತ್ರಕ್ಕೆ ಕಡಿಮೆಯಾಗುತ್ತದೆ'' ಎಂಬ ಮಾತುಗಳು ಹಲವಾರು ಪಾಲಕರಿಂದ ಕೇಳಿಬಂದವು. ಮಗುವಿನ ಜೊತೆ ಹಾಡನ್ನು ಹಂಚಿಕೊಳ್ಳುವ ಕ್ಷಣಗಳು ಪಾಲಕರಿಗೂ ನಿಟ್ಟುಸಿರು, ಅಲ್ಪವಾದರೂ ನಿರಾಳತೆಯ ಜಾಗವಾಗುತ್ತವೆ – ಅವು ದುಃಖದ ನಡುವೆ ಆಶಾಕಿರಣವಾಗಿ ಕಾಣಿಸುತ್ತವೆ. ಈ ಕಾರಣದಿಂದ ಸಂಗೀತವು ಆಸ್ಪತ್ರೆಯ ಕಠಿಣ ಪರಿಸರದೊಳಗೆ ಮಕ್ಕಳಿಗೂ ಪಾಲಕರಿಗೂ ಒಟ್ಟಿಗೆ ಸಾಂತ್ವನ ನೀಡುವ ಮಾನವೀಯ ಸೇತುವೆಯಾಗಿ ಕೆಲಸ ಮಾಡುತ್ತದೆ. ಕೆಲವೊಮ್ಮೆ ತಮ್ಮ ಭಾವನೆಗಳನ್ನು ಮಾತುಗಳ ಮೂಲಕ ಹೇಳಲು ಕಷ್ಟವಾಗುವ ಮಕ್ಕಳಿಗೆ, ಹಾಡೇ ಅವರ ಭಾವನೆಯ ಭಾಷೆಯಾಗುತ್ತದೆ.

ಎಐ ಸಮ್ಮೇಳನ: ದೇಶದ ಹೀಯಾಳಿಕೆ ಸರಿಯೆ?

ಇತ್ತೀಚೆಗೆ ನಡೆದ ದಿಲ್ಲಿಯಲ್ಲಿ ನಡೆದ ಕೃತಕ ಬುದ್ಧಿಮತ್ತೆ (Artificial Intelligence) ಸಮ್ಮೇಳನದಲ್ಲಿ, ನೋಯ್ಡಾದ ಗೋಲ್ಗೋಟಿಯಾಸ್ ವಿಶ್ವವಿದ್ಯಾಲಯವು ಪ್ರದರ್ಶಿಸಿದ ಚೀನಾ ತಯಾರಿಕೆಯ ರೋಬೋಟ್ ನಾಯಿಯನ್ನು ತನ್ನದೇ ಉತ್ಪನ್ನ ಎಂದು ಪ್ರದರ್ಶಿಸಿದ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಯಿತು. ವಿಷಯ ಬಹಿರಂಗವಾದ ನಂತರ ಟೀಕೆಗಳು ಎರಡು ದಿಕ್ಕುಗಳಲ್ಲಿ ಹರಿದವು– ಒಂದು ಕಡೆ ಸಂಸ್ಥೆಯ ಮೇಲೆ ಪ್ರಶ್ನೆಗಳು, ಇನ್ನೊಂದು ಕಡೆ ಸಂಪೂರ್ಣ ಭಾರತೀಯ ಎಐ ಸಾಮರ್ಥ್ಯದ ಮೇಲೆಯೇ ಅನುಮಾನ.

ಪತ್ರ ಮಿತ್ರ

ಒಂದು ಖಾಸಗಿ ಸಂಸ್ಥೆಯ ತಪ್ಪು ನಡೆ ಇಡೀ ದೇಶದ ಸಂಪೂರ್ಣ ತಂತ್ರಜ್ಞಾನ ಸಾಮರ್ಥ್ಯವನ್ನು ಪ್ರತಿನಿಧಿಸುವುದಿಲ್ಲ ಎಂಬ ಮೂಲಭೂತ ವಿಚಾರ ಇಲ್ಲಿ ಮಸುಕಾಗಿದೆ. ಯಾವ ಕ್ಷೇತ್ರದಲ್ಲಾದರೂ ಕೆಲವರು ಕೀರ್ತಿ ಪಡೆಯಲು ಅಡ್ಡ ದಾರಿಯನ್ನು ಹುಡುಕುತ್ತಾರೆ; ಅದನ್ನು ಒಂದು ರಾಷ್ಟ್ರದ ವೈಜ್ಞಾನಿಕ ಸಾಮರ್ಥ್ಯದ ಮಾನದಂಡವಾಗಿ ಪರಿಗಣಿಸುವುದು ತರ್ಕಸಮ್ಮತವಲ್ಲ.

ವಿಪಕ್ಷಗಳು ಈ ಘಟನೆಯನ್ನು ಸರ್ಕಾರದ ಮೇಲೆ ದಾಳಿ ಮಾಡಲು ಉಪಯೋಗಿಸುತ್ತಿವೆ. ಸರ್ಕಾರದ ನೀತಿಗಳ ಮೇಲೆ ಪ್ರಶ್ನೆ ಕೇಳುವುದು ಪ್ರಜಾಪ್ರಭುತ್ವದ ಅವಿಭಾಜ್ಯ ಹಕ್ಕು. ಆದರೆ ಒಂದು ಖಾಸಗಿ ಸಂಸ್ಥೆಯ ತಪ್ಪನ್ನು ದೇಶದ ವೈಜ್ಞಾನಿಕ ಮೂಲಸೌಕರ್ಯ ಅಥವಾ ಪ್ರಧಾನಮಂತ್ರಿಯ ವೈಯಕ್ತಿಕ ಸಾಮರ್ಥ್ಯಕ್ಕೆ ತಳುಕು ಹಾಕುವುದು ಅತಿರೇಕವೆನ್ನಬಹುದು.

ವಿಮರ್ಶೆ ಹಾಗೂ ಹೀಯಾಳಿಕೆ – ಇವೆರಡರ ನಡುವೆ ಸೂಕ್ಷ್ಮವಾದ ಗಡಿ ಇದೆ. ಸಾರ್ವಜನಿಕ ಹಿತಕ್ಕಾಗಿ ಪ್ರಶ್ನೆ ಕೇಳುವುದು ಅಗತ್ಯ; ಆದರೆ ರಾಷ್ಟ್ರದ ಸಾಧನೆಗಳನ್ನು ನಿರ್ಲಕ್ಷಿಸಿ ಕೇವಲ ಒಂದು ಘಟನೆ ಆಧಾರವಾಗಿ ದೇಶದ ಸಾಮರ್ಥ್ಯವನ್ನೇ ತಿರಸ್ಕರಿಸುವುದು ನಿರ್ಮಾಣಾತ್ಮಕ ಚರ್ಚೆಯಾಗುವುದಿಲ್ಲ.

ಇಂದು ಭಾರತ ಜಗತ್ತಿನ ಅತಿ ದೊಡ್ಡ ಡಿಜಿಟಲ್ ಮೂಲಸೌಕರ್ಯ ಹೊಂದಿದ ರಾಷ್ಟ್ರಗಳಲ್ಲಿ ಒಂದಾಗಿದೆ. ಯುಪಿಐ ಪಾವತಿ ವ್ಯವಸ್ಥೆ, ಆಧಾರ್ ಆಧಾರಿತ ಸೇವೆಗಳು, ಡಿಜಿಟಲ್ ಪಬ್ಲಿಕ್ ಇನ್‌ಫ್ರಾಸ್ಟ್ರಕ್ಚರ್, ಭಾಷಾ ಮಾದರಿಗಳ ಸಂಶೋಧನೆ, ಸ್ಟಾರ್ಟ್‌ಅಪ್ ಪರಿಸರ ಇವೆಲ್ಲವೂ ಎಐ ಅಭಿವೃದ್ಧಿಗೆ ಬಲವಾದ ನೆಲೆಯನ್ನು ಒದಗಿಸುತ್ತಿವೆ. ಭಾರತೀಯ ಮೂಲದ ವಿಜ್ಞಾನಿಗಳು ಗೂಗಲ್, ಮೈಕ್ರೋಸಾಫ್ಟ್, ಓಪನ್‌ಎಐ ಮುಂತಾದ ಜಾಗತಿಕ ಸಂಸ್ಥೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಆದರರ್ಥ ಎಲ್ಲವೂ ಪರಿಪೂರ್ಣವೆಂದಲ್ಲ. ಭಾರತ ಇನ್ನೂ ಸೆಮಿಕಂಡಕ್ಟರ್ ಉತ್ಪಾದನೆ, ಹಾರ್ಡ್‌ವೇರ್ ರೋಬೋಟಿಕ್ಸ್ ಮತ್ತು ಮೂಲ ಸಂಶೋಧನೆಗಳಲ್ಲಿ ಹೆಚ್ಚಿನ ಹೂಡಿಕೆ ಮಾಡುವ ಅಗತ್ಯವಿದೆ. ಈ ಘಟನೆ ಒಂದು ಎಚ್ಚರಿಕೆಯ ಗಂಟೆಯಂತಿದೆ. ನಾವು 'ಪ್ರಚಾರ'ಕ್ಕಿಂತ 'ಪ್ರಮಾಣಿಕತೆ'ಗೆ ಆದ್ಯತೆ ಕೊಡಬೇಕೆಂದು ನೆನಪಿಸುತ್ತದೆ.

ದೇಶಾಭಿಮಾನ ಎಂದರೆ ತಪ್ಪುಗಳನ್ನು ಮುಚ್ಚುವುದು ಅಲ್ಲ; ತಪ್ಪುಗಳನ್ನು ಒಪ್ಪಿಕೊಂಡು ಸರಿಪಡಿಸುವುದು. ಹಾಗೆಯೇ ವಿರೋಧ ರಾಜಕೀಯ ಎಂದರೆ ದೇಶದ ಸಾಧನೆಗಳನ್ನು ಕಡಿಮೆ ಮಾಡುವುದು ಅಲ್ಲ; ಅವುಗಳನ್ನು ಮತ್ತಷ್ಟು ಬಲಪಡಿಸಲು ಒತ್ತಡ ತರುವುದು.

ಈ ವಿವಾದ ನಮಗೆ ಎರಡು ಪಾಠಗಳನ್ನು ಕಲಿಸುತ್ತದೆ: ಸಂಸ್ಥೆಗಳು ವಿಶ್ವಾಸಾರ್ಹತೆ ಕಾಪಾಡಬೇಕು ಹಾಗೂ ರಾಜಕೀಯ ಚರ್ಚೆ ತತ್ವಾಧಾರಿತವಾಗಿರಬೇಕು. ಒಂದು ತಪ್ಪು ಘಟನೆ ಭಾರತ ಎಐ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ಅದನ್ನು ನಾವು ಹೇಗೆ ಸರಿಪಡಿಸುತ್ತೇವೆ – ಅದೇ ನಮ್ಮ ರಾಷ್ಟ್ರದ ಪರಿಪಕ್ವತೆಯನ್ನು ತೋರಿಸುತ್ತದೆ.

ರಾಷ್ಟ್ರದ ಏಳಿಗೆ ಟೀಕೆಯಿಂದಲ್ಲ, ತಿದ್ದುವ ಮನೋಭಾವದಿಂದ ಸಾಧ್ಯ. ಒಂದು ತಪ್ಪನ್ನು ದೊಡ್ಡದಾಗಿಸುವುದಕ್ಕಿಂತ ಪರಿಹಾರ ಸೂಚಿಸುವುದೇ ದೇಶಭಕ್ತಿ. ಸಾಮಾಜಿಕ ಮಾಧ್ಯಮದ ಕೋಪ ಕ್ಷಣಿಕ; ಆದರೆ ದೇಶದ ಪ್ರತಿಷ್ಠೆ ಶಾಶ್ವತ. ವಿಮರ್ಶೆ ಬೇಕು, ಆದರೆ ಅವಮಾನವಲ್ಲ. ನಿರ್ಮಾಣವೇ ನಿಜವಾದ ರಾಜಕೀಯ.

–ಜಿ.ನಾಗೇಂದ್ರ, ಕಾವೂರು, ಸಂಡೂರು

ತೆರೆಯಿತು ಉ.ಕ. ಭಾಗ್ಯದ ಬಾಗಿಲು

ಉತ್ತರ ಕನ್ನಡದ ಭಾಗ್ಯ ಮನೆ ಬಾಗಿಲಿಗೆ ಬಂದಂತಿದ್ದು, ಎಲ್ಲದಕ್ಕೂ ಉತ್ತರ ಸಿಗುವ ಸಾಧ್ಯತೆಗಳು ಗೋಚರಿಸುತ್ತಿವೆ.

ಇದೇನಪ್ಪಾ, ಹೊಸತು. ಇಲ್ಲಿಯ ತನಕ, ಉತ್ತರವನ್ನೇ ಕಾಣದ ಉತ್ತರಕನ್ನಡದ ಭವಿಷ್ಯವೇ ಬದಲಾಗುತ್ತಿದೆಯೆ ಅಂತ ಅನಿಸಿದರೆ, ಅದಕ್ಕೆ ಉತ್ತರ ಇದೇ ಫೆಬ್ರುವರಿ 22 ಕ್ಕೆ ನಮಗೆಲ್ಲ ಸಿಗಲಿದೆ.

ಅಂದು, ನಮ್ಮ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಯ ಪ್ರವಾಸ ಕೈಗೊಳ್ಳಲಿದ್ದು, ಇಲ್ಲಿಯ ತನಕ ಯಾವೆಲ್ಲ ಕಾರಣಗಳಿಂದ ನಾವು ನಿರುತ್ತರರಾಗಿದ್ದೇವೋ ಅವಕ್ಕೆಲ್ಲ ಸಮರ್ಪಕ ಉತ್ತರ ಸಿಗಲಿದೆ. ಬಹು ಚರ್ಚಿತ ಮತ್ತು ಹೋರಾಟಕ್ಕೆ ಎಡೆ ಮಾಡಿಕೊಟ್ಟ 'ಜಿಲ್ಲಾ ಸ್ಪೆಷಾಲಿಟಿ ಆಸ್ಪತ್ರೆ'ಗೆ ಬಂಧಮುಕ್ತಿ ದೊರೆಯುವಂತೆ ಕಾಣುತ್ತಿದೆ. ಮುಖ್ಯಮಂತ್ರಿಗಳು 450 ಹಾಸಿಗೆಯ ಆಸ್ಪತ್ರೆಯ ಕಟ್ಟಡ ಉದ್ಘಾಟಿಸಲಿದ್ದಾರೆ! ಇದು ಬಹಳ ವರ್ಷದ ಕೂಗಾಗಿತ್ತು.

ಇದರ ಜತೆಗೇ ಅಂಕೋಲಾ – ಮಂಜಗುಣಿ, ಗಂಗಾವಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಸೇತುವೆ ಉದ್ಘಾಟನೆ, ಖಾನಾಪುರದಲ್ಲಿ ಸೇತುವೆ ನಿರ್ಮಾಣ, ಯಲ್ಲಾಪುರ ಪಟ್ಟಣದ ನಿರೀಕ್ಷಣಾ ಮಂದಿರದ ಹೊಸ ಕಟ್ಟಡ ನಿರ್ಮಾಣ, ಮುಂಡಗೋಡಿನಲ್ಲಿ ಹೊಸ ಪ್ರವಾಸಿ ಮಂದಿರದ ಉದ್ಘಾಟನೆ ನಡೆಯಲಿದೆ.

ಈಗ ಹೇಳಿ, ಉತ್ತರ ಕನ್ನಡ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಅನ್ನದಿರಲಾದೀತೆ? ಕಾರವಾರದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವಿಚಾರವೊಂದೇ ನಮ್ಮ ಜಿಲ್ಲೆಯ ಚಿತ್ರಣ ಬದಲಿಸಬಹುದು. ಅಷ್ಟೊಂದು ಅವಶ್ಯಕತೆಯ ವಿಷಯ. ಈಗ ಅದಕ್ಕೊಂದು ಕಾಯಕಲ್ಪ ಸಿಗುತ್ತಿದೆ ಅಂದಂತಾಯಿತು.

ಇಷ್ಟಕ್ಕೇ ಎಲ್ಲವೂ ಆಗೇ ಹೋಯಿತೆಂದು ಬೀಗುವ ಅಗತ್ಯವೂ ಇಲ್ಲ. ಇದು ಹೊಸ ಕಟ್ಟಡದ ಉದ್ಘಾಟನೆ ಅಷ್ಟೇ. ಆಗಬೇಕಾದ್ದು ಇನ್ನೂ ಸಾಕಷ್ಟಿದೆ. ಆದರೂ ಶುರುವಾಯಿತಲ್ಲ ಎಂಬ ಸಮಾಧಾನ, ಸಂತೋಷ!

ಕಟ್ಟಡವೂ ತಯಾರಾಗಿ, ಸುಸಜ್ಜಿತ ಸಲಕರಣೆ, ವೈದ್ಯರೊಂದಿಗೆ ಪ್ರಾರಂಭಗೊಳ್ಳುವತ್ತ ಇನ್ನು ಮುಂದೆ ನಮ್ಮ ಚಿತ್ತ ಇದ್ದರೆ ಸಾಕೆ ?

–ಶಂಕರನಾರಾಯಣ ಭಟ್, ಮಾಡಗೇರಿ

ಲ್ಯಾಟಿನ್ ಅಮೆರಿಕದಲ್ಲಿ ದೊಡ್ಡ ಪಾಲುದಾರ

ಭಾರತ-ಬ್ರೆಜಿಲ್ ವ್ಯಾಪಾರ ಒಪ್ಪಂದ



• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೋ ಲುಲಾ ಡಾ ಸಿಲ್ವಾ ಶನಿವಾರ ಹೈದರಾಬಾದ್ ಹೌಸ್‌ನಲ್ಲಿ ನಿಯೋಗ ಮಟ್ಟದ ಮಾತುಕತೆ ನಡೆಸಿದ್ದಾರೆ. ಮಹತ್ವಾಕಾಂಕ್ಷೆಯ ವ್ಯಾಪಾರ ಗುರಿಗಳು, ಅತ್ಯಾಧುನಿಕ ತಂತ್ರಜ್ಞಾನ ಸಹಕಾರ ಮತ್ತು ಜಾಗತಿಕ ದಕ್ಷಿಣ ಕುರಿತ ಸಮಾನ ದೃಷ್ಟಿಕೋನಗಳು ಮಾತುಕತೆಯಲ್ಲಿ ನಿರ್ಣಾಯಕ ವಿಷಯಗಳಾಗಿದ್ದವು ಎಂದು ತಿಳಿದುಬಂದಿದೆ.

ವಾರ್ಷಿಕವಾಗಿ ದ್ವಿಪಕ್ಷೀಯ ವ್ಯಾಪಾರವನ್ನು 30 ಶತಕೋಟಿ ಡಾಲರ್ ಗಡಿ ದಾಟಿಸುವ ಬದ್ಧತೆಯನ್ನು ಪ್ರಧಾನಿ ಮೋದಿ ಸಭೆಯ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದರು. ಇದಕ್ಕೆ 2030ರ ಗಡಿ ಹಾಕಿಕೊಳ್ಳಲಾಗಿದೆ. ಬ್ರೆಜಿಲ್ ಅನ್ನು ಲ್ಯಾಟಿನ್ ಅಮೆರಿಕದಲ್ಲಿ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ಎಂದು ಪ್ರಧಾನಿ ಬಣ್ಣಿಸಿದ್ದಾರೆ.

ಎರಡು ರಾಷ್ಟ್ರಗಳ ನಡುವಿನ ವ್ಯಾಪಾರವನ್ನು ಕೇವಲ ಅಂಕಿಅಂಶಗಳಲ್ಲ-ಇದು ನಂಬಿಕೆಯ ಪ್ರತಿಬಿಂಬ ಎಂದು ವ್ಯಾಖ್ಯಾನಿಸಲಾಗಿದೆ. ಭಾರತ-ಮೆರ್ಕೋಸೂರ್ ವ್ಯಾಪಾರ ಒಪ್ಪಂದದ ವಿಸ್ತರಣೆ, ಎರಡೂ ದೇಶಗಳ ನಡುವಿನ ಆರ್ಥಿಕ ಸಹಕಾರವನ್ನು ಗಾಢವಾಗಿಸುವ ಪ್ರಮುಖ ಕಾರ್ಯವಿಧಾನವಾಗಲಿದೆ ಎಂಬುದರ ಬಗ್ಗೆ ಒಮ್ಮತ ವ್ಯಕ್ತವಾಗಿದೆ.

ತಂತ್ರಜ್ಞಾನ ಮತ್ತು ಆವಿಷ್ಕಾರ: ತಂತ್ರಜ್ಞಾನದ ವಿಷಯದಲ್ಲಿ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಕ್ಕಾಗಿ ಶ್ರೇಷ್ಠತೆಯ ಕೇಂದ್ರ ಸ್ಥಾಪಿಸುವ ಪ್ರಯತ್ನಗಳಿಗೆ ಪ್ರಧಾನಿ ಮೋದಿ ಒತ್ತು ನೀಡಿದ್ದಾರೆ. ಕೃತಕ ಬುದ್ಧಿಮತ್ತೆ, ಸೂಪರ್ ಕಂಪ್ಯೂಟರ್‌ಗಳು, ಸೆಮಿಕಂಡಕ್ಟರ್‌ಗಳು ಮತ್ತು ಬ್ಲಾಕ್‌ಚೈನ್‌ನಲ್ಲಿ ಸಹಕಾರವನ್ನು ಆದ್ಯತೆಯೆಂದು ಗುರುತಿಸಲಾಗಿದ್ದು, ತಂತ್ರಜ್ಞಾನ ಎಲ್ಲರಿಗೂ ತಲುಪಬೇಕು ಮತ್ತು ಜಾಗತಿಕ ದಕ್ಷಿಣದಾದ್ಯಂತ ಸಮಗ್ರ ಪ್ರಗತಿಗೆ ಸೇತುವೆಯಾಗಿ ಕಾರ್ಯನಿರ್ವಹಿಸಬೇಕು ಎಂದು ಎರಡೂ ರಾಷ್ಟ್ರಗಳು ಒಪ್ಪಿಕೊಂಡಿವೆ.

ಜಾಗತಿಕ ದಕ್ಷಿಣ ಮತ್ತು ರಾಜತಾಂತ್ರಿಕತೆ: ಭಾರತ ಮತ್ತು ಬ್ರೆಜಿಲ್‌ನ ಸಮಾನ ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಜಾಗತಿಕ ಜವಾಬ್ದಾರಿಗಳಿಗೆ ಒತ್ತು ನೀಡಲಾಯಿತು. ಭಾರತ ಮತ್ತು ಬ್ರೆಜಿಲ್ ಒಟ್ಟಾಗಿ ಕೆಲಸ ಮಾಡುವಾಗ, ಜಾಗತಿಕ ದಕ್ಷಿಣದ ಧ್ವನಿ ಬಲವಾಗುತ್ತದೆ ಮತ್ತು ಹೆಚ್ಚು ಆತ್ಮವಿಶ್ವಾಸದಿಂದ ಕೂಡಿರುತ್ತದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ವೈದ್ಯಕೀಯ ಒಪ್ಪಂದ

ಭಾರತ ಮತ್ತು ಬ್ರೆಜಿಲ್ ಶನಿವಾರ ಔಷಧೀಯ ಮತ್ತು ವೈದ್ಯಕೀಯ ಉತ್ಪನ್ನಗಳ ನಿಯಂತ್ರಣ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸಲು ತಿಳಿವಳಿಕೆ ಒಪ್ಪಂದವನ್ನು (ಎಂಒಯು) ವಿನಿಮಯ ಮಾಡಿಕೊಂಡವು. ಭಾರತದ ಸೆಂಟ್ರಲ್ ಡ್ರಗ್ಸ್ ಸ್ಟ್ಯಾಂಡರ್ಡ್ ಕಂಟ್ರೋಲ್ ಆರ್ಗನೈಸೇಶನ್ (ಸಿಡಿಎಸ್‌ಸಿಒ) ಮತ್ತು ಬ್ರೆಜಿಲಿಯನ್ ಹೆಲ್ತ್ ರೆಗ್ಯುಲೇಟರಿ ಏಜೆನ್ಸಿ (ಎ ಎನ್ ವಿಐ ಎಸ್‌ಎ) ನಡುವೆ ಈ ತಿಳಿವಳಿಕೆ ಒಪ್ಪಂದವನ್ನು ವಿನಿಮಯ ಮಾಡಿಕೊಳ್ಳಲಾಗಿದ್ದು, ಇದು ಎರಡೂ ದೇಶಗಳ ನಡುವಿನ ಆಳವಾದ ನಿಯಂತ್ರಕ ಸಹಯೋಗದ ಪ್ರಮುಖ ಹೆಜ್ಜೆಯಾಗಿದೆ.

ರಾ.ಹೆದ್ದಾರಿಗಳಲ್ಲಿ ಜೇನು ಕಾರಿಡಾರ್

ಆಯ್ದ ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ದೇಶದ ಮೊದಲ ಮೀಸಲಾದ ಬೀ ಕಾರಿಡಾರ್‌ಗಳನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್‌ಎಚ್‌ಎಐ) ಘೋಷಿಸಿದೆ. ಇದರೊಂದಿಗೆ ಭಾರತದ ಹೆದ್ದಾರಿ ಜಾಲ ಜೀವವೈವಿಧ್ಯತೆಯ ಜೀವನಾಡಿಯೆನಿಸಲಿದೆ. ಸೌಂದರ್ಯ ದ್ವಿಗುಣಗೊಳ್ಳಲಿದೆ. ಈ ಯೋಜನೆ ಪರಾಗಸ್ಪರ್ಶಕಗಳನ್ನು ರಕ್ಷಿಸುವ ಮತ್ತು ಪರಿಸರ ಸಮತೋಲನವನ್ನು ಬಲಪಡಿಸುವ ಗುರಿ ಹೊಂದಿದೆ. ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಹಸಿರು ಅಭ್ಯಾಸಗಳನ್ನು ಸಂಯೋಜಿಸುವ ಈ ಪ್ರಯತ್ನ ಗಮನ ಸೆಳೆದಿದೆ.

- ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ಭಾರತದ ಮೊದಲ ಬೀ ಕಾರಿಡಾರ್ ಅಭಿವೃದ್ಧಿ
- ಋತುಗಳಾದ್ಯಂತ ಅರಳುವ ಸ್ಥಳೀಯ ಹೂಬಿಡುವ ಪ್ರಭೇದಗಳ ಮೇಲೆ ಗಮನ
- 2026-27 ರಲ್ಲಿ ಸುಮಾರು 40 ಲಕ್ಷ ಮರಗಳನ್ನು ನೆಡಲಾಗುವುದು.
- ಸುಮಾರು ಶೇ.60 ತೋಪುಗಳನ್ನು ಪರಾಗಸ್ಪರ್ಶಕ ಕಾರಿಡಾರ್‌ಗಳಿಗೆ ಮೀಸಲಿಡಲಾಗಿದೆ.
- ಆರಂಭಿಕ ಹಂತದಲ್ಲಿ ಕನಿಷ್ಠ ಮೂರು ಕಾರಿಡಾರ್‌ಗಳನ್ನು ಗುರುತಿಸಲಾಗಿದೆ

ಎನ್‌ಎಚ್‌ಎಐ ಘೋಷಣೆ
ಹೆದ್ದಾರಿಗಳಲ್ಲಿ ಮಕರಂದ, ಪರಾಗಸ್ಪರ್ಶ ಖಾತರಿ



ಅಲಂಕಾರದಿಂದ ಪರಿಸರ ವಿಜ್ಞಾನದವರೆಗೆ

ಅನೇಕ ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ರಸ್ತೆಬದಿಯ ತೋಟಗಳು ಅಲಂಕಾರಿಕ ಉದ್ದೇಶ ಮಾತ್ರ ಹೊಂದಿದ್ದವು. ಹೆದ್ದಾರಿಗಳ ನೋಟವನ್ನು ಸುಂದರಗೊಳಿಸಲು ಮರಗಳ ಸಾಲನ್ನು ಬೆಳೆಸುವ ಯೋಜನೆ ಬದಲಾವಣೆ ಕಂಡಿದೆ. ಎನ್‌ಎಚ್‌ಎಐ ಈಗ ಹೂಬಿಡುವ ಮರಗಳು, ಪೊದೆಗಳು, ಗಿಡಮೂಲಿಕೆಗಳು ಮತ್ತು ಹುಲ್ಲುಗಳನ್ನು ಒಳಗೊಂಡ ಜೇನುನೊಣ ಸ್ನೇಹಿ ಸಸ್ಯವರ್ಗವನ್ನು ಬೆಳೆಸುವ ಪ್ರಯತ್ನಕ್ಕೆ ಮುಂದಾಗಿದೆ. ಸ್ವರಾಜ್ಯ ಮಾರ್ಗ ಹೆದ್ದಾರಿಯ ಹಸಿರು ಬದಿಗಳನ್ನು ಅಲಂಕಾರಕ್ಕಿಂತಲೂ ಕ್ರಿಯಾತ್ಮಕ ಪರಿಸರ ವ್ಯವಸ್ಥೆಗಳಾಗಿ ಪರಿವರ್ತಿಸುವುದು ಇದರ ಉದ್ದೇಶವಾಗಿದೆ. ವರ್ಷವಿಡೀ ಜೇನ್ನೊಣಗಳಿಗೆ ಆಹಾರದ ಸ್ಥಿರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಕಾರಿಡಾರ್ ವಿನ್ಯಾಸಗೊಳಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಬೇವು, ಜಾಮುನ್, ಮಹುವಾ, ಪಲಾಶ್, ಕರಂಜ್ ಮತ್ತು ಸಿರಿಗಳಂತಹ ಸ್ಥಳೀಯ ಪ್ರಭೇದಗಳನ್ನು ತೋಟಗಾರಿಕೆಗಾಗಿ ಗುರುತಿಸಲಾಗಿದೆ. ಸ್ಥಳೀಯ ಪ್ರಭೇದಗಳ ಆಯ್ಕೆ, ಸ್ಥಳೀಯ ಪರಿಸರ ವ್ಯವಸ್ಥೆಯನ್ನು ಬೆಂಬಲಿಸುವ ಮತ್ತು ಹಂತಹಂತವಾಗಿ ಹೂಬಿಡುವಂತೆ ನೋಡಿಕೊಳ್ಳುವ ಉದ್ದೇಶ ಹೊಂದಲಾಗಿದೆ.

ಕೃಷಿ ಮತ್ತು ಜೀವವೈವಿಧ್ಯಕ್ಕೆ ಉತ್ತೇಜನ

ಜೇನುನೊಣಗಳಂತಹ ಪರಾಗಸ್ಪರ್ಶಕಗಳು ಬೆಳೆ ಉತ್ಪಾದನೆ ಮತ್ತು ಆಹಾರ ಭದ್ರತೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಆವಾಸಸ್ಥಾನದ ನಷ್ಟ ಮತ್ತು ಪರಿಸರದ ಒತ್ತಡದಿಂದಾಗಿ ಅವುಗಳ ಕುಸಿತ ಜಾಗತಿಕ ಕಳವಳ ಹೆಚ್ಚಿಸಿದೆ. ಹೆದ್ದಾರಿಗಳ ಉದ್ದಕ್ಕೂ ವರ್ಷದುದ್ದಕ್ಕೂ ಹಸಿರು ವಾತಾವರಣವನ್ನು ಸೃಷ್ಟಿಸುವ ಮೂಲಕ, ಈ ಯೋಜನೆ, ಆವಾಸಸ್ಥಾನಗಳನ್ನು ಪುನಃಸ್ಥಾಪಿಸುವ ಮತ್ತು ಪರಾಗಸ್ಪರ್ಶ ಪ್ರಕ್ರಿಯೆಯನ್ನು ಸುಧಾರಿಸುವ ಗುರಿ ಹೊಂದಿದೆ. ಪರಾಗಸ್ಪರ್ಶಕಗಳ ಉಪಸ್ಥಿತಿಯನ್ನು ಹೆಚ್ಚಿಸುವ ಮೂಲಕ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೃಷಿ ಉತ್ಪಾದಕತೆಯನ್ನು ಬಲಪಡಿಸಲು ಕಾರಿಡಾರ್‌ಗಳು ಸಹಾಯ ಮಾಡುತ್ತವೆ. ಈ ಕ್ರಮ ಹೆದ್ದಾರಿ ನಿರ್ಮಾಣವನ್ನು ಪರಿಸರ ಸುಸ್ಥಿರತೆಯೊಂದಿಗೆ ಜೋಡಿಸುವ ವಿಶಾಲ ಪ್ರಯತ್ನಕ್ಕೆ ಮುನ್ನುಡಿಯಾಗಿದ್ದು, ಸರ್ಕಾರದ ದೂರಗಾಮಿ ಚಿಂತನೆಯನ್ನು ಪ್ರತಿಬಿಂಬಿಸುತ್ತದೆ.

ಜಾಗತಿಕ ಕ್ರಮದ ಭಾಗ

ಈ ಕ್ರಮದೊಂದಿಗೆ ಭಾರತ ಜಾಗತಿಕ ಪ್ರಯತ್ನದಲ್ಲಿ ತನ್ನ ಪಾಲನ್ನು ನೀಡಲಿದೆ. 2015ರಿಂದ ಓಸ್ಲೋದ ಬೀ ಹೆದ್ದಾರಿ ಕಾರ್ಯನಿರ್ವಹಿಸುತ್ತಿದೆ. ಯುಎಸ್ ಪೊಲಿನೇಟರ್ ಹೆದ್ದಾರಿ ಕಾಯಿದೆ ಇದೇ ರೀತಿಯ ಆಲೋಚನೆಗಳನ್ನು ಮುಂದಿಟ್ಟಿದೆ. ಆದರೆ, ಇದು ತಜ್ಞರು ರೇಖೀಯ ಮೂಲಸೌಕರ್ಯ ಪರಿಸರ ಎಂದು ಕರೆಯುವ ಭಾರತದ ಮೊದಲ ಪ್ರಯತ್ನ. ರಸ್ತೆ ಜಾಲಗಳನ್ನು ಜೀವವೈವಿಧ್ಯತೆಯ ವಾಹಕಗಳಾಗಿ ಬಳಸುತ್ತಿರುವುದು ಭಾರತದಲ್ಲಿ ಇದೇ ಮೊದಲು.



ಜೇನುನೊಣಗಳಿಗೆ ಸಹಾಯ ಏಕೆ?

ಈ ಯೋಜನೆಯ ಹಿಂದೆ ಶಾಂತವಾದ ಆದರೆ ಗಂಭೀರವಾದ ಬಿಕ್ಕಟ್ಟಿದೆ. ಆವಾಸಸ್ಥಾನದ ನಷ್ಟ, ಏಕ ಪ್ರಕಾರ ಕೃಷಿಯಿಂದ ಮತ್ತು ತ್ವರಿತ ನಗರೀಕರಣದಿಂದಾಗಿ ಭಾರತ ಮತ್ತು ವಿಶ್ವದಾದ್ಯಂತ ಜೇನುನೊಣಗಳ ಸಂಖ್ಯೆ ಸ್ಥಿರವಾಗಿ ಕುಸಿಯುತ್ತಿದೆ. ಜೇನುಹುಳುಗಳು ಮತ್ತು ಇತರ ಕೀಟಗಳು 87 ಪ್ರಮುಖ ಆಹಾರ ಬೆಳೆಗಳನ್ನು ಮತ್ತು ವಿಶ್ವದ ಕೃಷಿ ಪ್ರದೇಶದ 35 ಪ್ರತಿಶತವನ್ನು ಪರಾಗಸ್ಪರ್ಶ ಮಾಡುತ್ತವೆ. ಪರಾಗಸ್ಪರ್ಶ ಕಡಿಮೆಯಾದಾಗ ಅಥವಾ ಕಣ್ಮರೆಯಾದಾಗ, ರೈತರು ಮೊದಲು ಇದರ ಪರಿಣಾಮ ಅನುಭವಿಸುತ್ತಾರೆ. ಕಡಿಮೆ ಪರಾಗಸ್ಪರ್ಶ ಎಂದರೆ ಹಣ್ಣುಗಳು, ತರಕಾರಿಗಳು ಮತ್ತು ಎಣ್ಣೆಕಾಳುಗಳ ಕಡಿಮೆ ಇಳುವರಿ, ಆಹಾರ ಭದ್ರತೆ ಮತ್ತು ಗ್ರಾಮೀಣ ಆದಾಯಗಳೆರಡರ ಮೇಲೂ ಪರಿಣಾಮ ಬೀರುತ್ತದೆ. ಭಾರತ ಜೇನು ಉತ್ಪಾದನೆಯಲ್ಲಿ ಗಮನಾರ್ಹ ದಾಪುಗಾಲು ಇಟ್ಟಿದೆ. ಜೇನು ಉತ್ಪಾದನೆ 70-75 ಸಾವಿರ ಮೆಟ್ರಿಕ್ ಟನ್‌ಗಳಿಂದ ಒಂದು ದಶಕದಲ್ಲಿ 2025ರ ವೇಳೆಗೆ ಸುಮಾರು 1.25 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಏರಿದೆ. ಆದರೆ ಜೇನುನೊಣಗಳಿಗೆ ಮೇವು ಇರದಿದ್ದರೆ ಆ ಬೆಳವಣಿಗೆಗೆ ಅಪಾಯವಿದೆ.

ಜಾರಿ ಮತ್ತು ಗುರಿಗಳು

ಈ ಯೋಜನೆಯನ್ನು 2026-27ರ ಆರ್ಥಿಕ ವರ್ಷದಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಈ ಅವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ಸುಮಾರು 40 ಲಕ್ಷ ಮರಗಳನ್ನು ನೆಡಲು ಎನ್‌ಎಚ್‌ಎಐ ಯೋಜಿಸಿದೆ. ಈ ತೋಟಗಳಲ್ಲಿ ಸುಮಾರು 60 ಪ್ರತಿಶತ, ಬೀ ಕಾರಿಡಾರ್ ಯೋಜನೆಯ ಭಾಗವಾಗುವ ನಿರೀಕ್ಷೆಯಿದೆ. ಮೊದಲ ಹಂತದಲ್ಲಿ ಕನಿಷ್ಠ ಮೂರು ಪ್ರತ್ಯೇಕ ಪರಾಗಸ್ಪರ್ಶಕ ಕಾರಿಡಾರ್‌ಗಳನ್ನು ಪ್ರಸ್ತಾಪಿಸಲಾಗಿದೆ. ಕ್ಷೇತ್ರವಾರು ಘಟಕಗಳು ವಿವಿಧ ಕೃಷಿ-ಹವಾಮಾನ ವಲಯಗಳಲ್ಲಿ ಸೂಕ್ತವಾದ ಹೆದ್ದಾರಿಗಳನ್ನು ಗುರುತಿಸಲಿವೆ ಮತ್ತು ಸ್ಥಳೀಯ ಪರಿಸ್ಥಿತಿಗಳ ಆಧಾರದ ಮೇಲೆ ಪ್ರಭೇದಗಳ ಆಯ್ಕೆಯನ್ನು ಅಂತಿಮಗೊಳಿಸುತ್ತವೆ. ಅಧಿಕಾರಿಗಳು ಇದು ಹವಾಮಾನ-ಸೂಕ್ಷ್ಮ ಯೋಜನೆಯತ್ತ ಒಂದು ಹೆಜ್ಜೆ ಎಂದು ವಿವರಿಸುತ್ತಾರೆ. ಇಲ್ಲಿ ಸಾರಿಗೆ ಮೂಲಸೌಕರ್ಯ ಪರಿಸರದ ಗುರಿಗಳನ್ನೂ ಪೂರೈಸುತ್ತದೆ. ಈ ಪ್ರಯೋಗ ಯಶಸ್ವಿಯಾದರೆ, ಈ ಮಾದರಿಯನ್ನು ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಹೆದ್ದಾರಿ ಜಾಲಗಳಲ್ಲಿ ಅಳವಡಿಸಿಕೊಳ್ಳುವ ಯೋಜನೆಯಿದೆ.

ಸೆಮಿಕಂಡಕ್ಟರ್‌ನಿಂದ ಉದ್ಯೋಗ ಸೃಷ್ಟಿ

• **ಹೊಸದಿಲ್ಲಿ:** ಸೆಮಿಕಂಡಕ್ಟರ್ ಸೌಲಭ್ಯದ ಸ್ಥಾಪನೆಯು ಪೂರಕ ಕೈಗಾರಿಕೆಗಳನ್ನು ಆಕರ್ಷಿಸುತ್ತದೆ. ಇದು ಅಂತಿಮವಾಗಿ ಹೆಚ್ಚಿನ ಉದ್ಯೋಗ ಗಳನ್ನು ಸೃಷ್ಟಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.

ಉತ್ತರ ಪ್ರದೇಶದಲ್ಲಿ ಎಚ್‌ಸಿಎಲ್-ಫಾಕ್ಸ್‌ಕಾನ್ ಸೆಮಿಕಂಡಕ್ಟರ್ ಸೌಲಭ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಇದು ಸೆಮಿಕಂಡಕ್ಟರ್ ಚಿಪ್‌ಗಳಲ್ಲಿ ರಾಷ್ಟ್ರದ ಸ್ವಾವಲಂಬನೆಗಾಗಿ ಪ್ರಮುಖ ಮೈಲಿಗಲ್ಲು ಎಂದು ಹೇಳಿದ್ದಾರೆ. ಉತ್ತರ ಪ್ರದೇಶವು ದೇಶದ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯ ಭಾಗವಾಗುತ್ತಿರುವುದಕ್ಕೆ ನಾವು ಹೆಮ್ಮೆಪಡುತ್ತೇವೆ. ಈ ಸೆಮಿಕಂಡಕ್ಟರ್ ಘಟಕವು ರಾಜ್ಯಕ್ಕೆ ಹೊಸ ಮನ್ನಣೆಯನ್ನು ನೀಡುತ್ತದೆ. ಇದಲ್ಲದೆ, ಇದು ಉದ್ಯೋಗವನ್ನು ಹೆಚ್ಚಿಸುತ್ತದೆ. ಈ ಸುಧಾರಿತ ಸೌಲಭ್ಯವು 2028ರ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ಕಿರುಸುದ್ದಿ

ಏ.1ರಿಂದ ಹೆದ್ದಾರಿ ಪ್ಲಾಜಾ: ಡಿಜಿಟಲ್ ಪಾವತಿ ಮಾತ್ರ

• **ಹೊಸದಿಲ್ಲಿ :** ಮುಂಬರುವ ಏ. 1 ರಿಂದ ಭಾರತೀಯ ಎನ್‌ಎಚ್‌ಎಐ ವ್ಯಾಪ್ತಿಯಲ್ಲಿರುವ ಎಲ್ಲಾ ರಾಷ್ಟ್ರೀಯ ಹೆದ್ದಾರಿ ಟೋಲ್ ಪ್ಲಾಜಾಗಳಲ್ಲಿ ನಗದು ಪಾವತಿ ವ್ಯವಸ್ಥೆಯನ್ನು ಸ್ಥಗಿತಗೊಳಿಸಲು ಚಿಂತನೆ ನಡೆದಿದೆ. ಇದಕ್ಕೆ ಬದಲಾಗಿ ಸಂಪೂರ್ಣ ಡಿಜಿಟಲ್ ರಾಷ್ಟ್ರೀಯ ಹೆದ್ದಾರಿ ಟೋಲ್ ಪರಿಸರ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪ್ರಕಟನೆ ತಿಳಿಸಿದೆ. ಇದರಂತೆ, ವಾಹನ ಸವಾರರು ಡಿಜಿಟಲ್ ಅಥವಾ ಯುಪಿಐ ಮೋಡ್ ಮೂಲಕ ಮಾತ್ರ ಶುಲ್ಕವನ್ನು ಪಾವತಿಸಲು ಅನುಮತಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿದೆ.

ಮೆರಿಟೈಮ್ ಕಾನ್‌ಕ್ಲೇವ್ 2026 ಉದ್ಘಾಟನೆ

• **ಪಣಜಿ:** ಮಾದಕವಸ್ತು ಕಳ್ಳಸಾಗಣೆ ಮತ್ತು ಅಕ್ರಮ ಮೀನುಗಾರಿಕೆ ಸೇರಿದಂತೆ ಹೆಚ್ಚುತ್ತಿರುವ ಪ್ರಾದೇಶಿಕ ಸವಾಲುಗಳನ್ನು ಎದುರಿಸಲು ಹಿಂದು ಮಹಾಸಾಗರದ 14 ರಾಷ್ಟ್ರಗಳ ಪ್ರತಿನಿಧಿಗಳನ್ನು ಒಗ್ಗೂಡಿಸುವ ಗೋವಾ ಮೆರಿಟೈಮ್ ಕಾನ್‌ಕ್ಲೇವ್ 2026 ಅನ್ನು ನೌಕಾ ಸಿಬ್ಬಂದಿ ಮುಖ್ಯಸ್ಥ ಅಡ್ಮಿರಲ್ ದಿನೇಶ್ ತ್ರಿಪಾಠಿ ಶನಿವಾರ ಉದ್ಘಾಟಿಸಿದರು. ಬಾಂಗ್ಲಾದೇಶ, ಇಂಡೋನೇಷ್ಯಾ, ಕೊಮೊರೊಸ್, ಮಲೇಷ್ಯಾ, ಕೀನ್ಯಾ, ಸಿಂಗಾಪುರ, ಮಡಗಾಸ್ಕರ್, ಥೈಲ್ಯಾಂಡ್, ಮ್ಯಾನ್ಮಾರ್, ಮಾಲ್ಡೀವ್ಸ್, ಮಾರಿಷಸ್, ಸಿಶೆಲ್ಸ್, ಶ್ರೀಲಂಕಾ ಮತ್ತು ತಾಂಜಾನಿಯಾ ಸೇರಿದಂತೆ ಹಿಂದು ಮಹಾಸಾಗರದ ದೇಶಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದಾರೆ.

ಇಸ್ರೇಲ್ ದಾಳಿಗೆ ಹಿಜ್ಬುಲ್ಲಾ ಉಗ್ರನೂ ಸೇರಿ 10 ಸಾವು

• **ಲೆಬನಾನ್:** ಲೆಬನಾನ್ ಮೇಲೆ ಇಸ್ರೇಲ್ ಸೇನೆ ಶನಿವಾರ ನಡೆಸಿದ ವಾಯುದಾಳಿಗೆ ಹಿರಿಯ ಹಿಜ್ಬುಲ್ಲಾ ಉಗ್ರ ಕಮಾಂಡರ್ ಹುಸ್ಸೇನ್ ಮೊಹಮ್ಮದ್ ಯಾಘಿ ಸಹಿತ 8 ಮಂದಿ ಉಗ್ರರು ಬಲಿಯಾಗಿದ್ದಾರೆ.



ಮೂರು ಮಕ್ಕಳು ಸೇರಿ 10 ಮಂದಿ ಮೃತಪಟ್ಟಿದ್ದು, 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ. ಲೆಬನಾನ್ ರಾಜಧಾನಿ ಮೇಲೆ ಇಸ್ರೇಲ್ ಸೇನೆ ನಡೆಸಿದ ವಾಯುದಾಳಿಗೆ ಹಲವು ಕಟ್ಟಡಗಳು ನೆಲಸಮಗೊಂಡಿವೆ. ರಿಯಾಕ್ ಮೇಲಿನ ದಾಳಿ ವೇಳೆ ಹಿಜ್ಬುಲ್ಲಾ ಉಗ್ರ ನಾಯಕ ಹುಸೈನ್ ಹತನಾಗಿದ್ದಾನೆ.

ಬಾಂಗ್ಲಾ ವೀಸಾ ಸೇವೆ ಪುನರಾರಂಭಿಸಿದ ತಾರಿಕ್

• **ಹೊಸದಿಲ್ಲಿ:** ಪ್ರಮುಖ ರಾಜತಾಂತ್ರಿಕ ಬೆಳವಣಿಗೆಯೊಂದರಲ್ಲಿ, ಎರಡು ತಿಂಗಳ ನಿಷೇಧ ಕೊನೆಗೊಳಿಸಿ ಭಾರತದಲ್ಲಿನ ತನ್ನೆಲ್ಲಾ ವೀಸಾ ಸೇವೆಗಳನ್ನು ಬಾಂಗ್ಲಾದೇಶ ಪುನರಾರಂಭಿಸಿದೆ. ತಾರಿಕ್ ರೆಹಮಾನ್ ಅವರು ಅಧಿಕಾರ ಸ್ವೀಕರಿಸುತ್ತಲೇ ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಈ ನಿಲುವು ತಳೆದಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಭಾರತ ಮತ್ತು ಬಾಂಗ್ಲಾ ನಡುವಿನ ದ್ವಿಪಕ್ಷೀಯ ಸಂಬಂಧ ಅತ್ಯಂತ ಕೆಳಮಟ್ಟವನ್ನು ತಲುಪಿತ್ತು. ಪ್ರವಾಸ, ವೈದ್ಯಕೀಯ, ವ್ಯವಹಾರ, ಉದ್ಯೋಗ ಸೇರಿ ಎಲ್ಲಾ ವಿಭಾಗಗಳ ವೀಸಾ ಸೇವೆಗಳನ್ನು ತನ್ನ ಹೊಸದಿಲ್ಲಿ, ಅಗರ್ತಲಾ ಮತ್ತು ಸಿಲಿಗುರಿ ಕಚೇರಿಗಳಲ್ಲಿ ಶುಕ್ರವಾರ ಪುನರಾರಂಭಿಸಿದೆ. ತಾರಿಕ್ ರೆಹಮಾನ್ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೂರು ದಿನಗಳ ನಂತರ ಬಾಂಗ್ಲಾ ಈ ನಿರ್ಧಾರ ತೆಗೆದುಕೊಂಡಿದೆ. ಡಿಸೆಂಬರ್‌ನಲ್ಲಿ ಮುಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರ ಭಾರತದಲ್ಲಿನ ತನ್ನ ವೀಸಾ ಸೇವೆಗಳನ್ನು ರದ್ದುಗೊಳಿಸಿತ್ತು. ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧ ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಇದು ಪ್ರಮುಖ ಹೆಜ್ಜೆಯಾಗಿದೆ. ಬಾಂಗ್ಲಾ ಹೇರಿದ್ದ ವೀಸಾ ನಿಷೇಧದಿಂದಾಗಿ ಗಡಿ ಪ್ರದೇಶದಲ್ಲಿನ ಸಾವಿರಾರು ಜನರ ಜೀವನದ ಮೇಲೆ ತುಸು ಪರಿಣಾಮ ಬೀರಿತ್ತು.

ಭಾರತದ ವೀಸಾ ಸೇವೆ ಪುನರಾರಂಭ: ಬಾಂಗ್ಲಾ ನಡೆಗೆ ಧನಾತ್ಮಕ ಪ್ರತಿಕ್ರಿಯೆ ನೀಡಿದ ಭಾರತವೂ ಬಾಂಗ್ಲಾದಲ್ಲಿನ ತನ್ನ ವೀಸಾ ಸೇವೆಗಳನ್ನು ಪುನರಾರಂಭಿಸಿದೆ. ಭಾರೀ ಬಹುಮತದೊಂದಿಗೆ ಬಿಎನ್‌ಪಿ ಗೆದ್ದಿದ್ದರಿಂದ ತಾರಿಕ್ ರೆಹಮಾನ್ ನಿರ್ಧಾರವೇ ಅಂತಿಮವಾಗಲಿದೆ.

ಮಾರ್ಚ್ ತಿಂಗಳಾಂತ್ಯಕ್ಕೆ ನಕ್ಸಲ್‌ವಾದ ಕೊನೆ: ಶಾ

• **ಗುವಾಹಟಿ:** ಎಡಪಂಥೀಯ ಉಗ್ರವಾದವನ್ನು ಇದೇ ಮಾರ್ಚ್ 31ರೊಳಗೆ ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಹೇಳಿದ್ದಾರೆ. ಈ ಬೆಳವಣಿಗೆಯಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ ಪಾತ್ರವನ್ನು ಅವರು ಶ್ಲಾಘಿಸಿದ್ದಾರೆ.

ಗುವಾಹಟಿಯಲ್ಲಿ ನಡೆದ ಕೇಂದ್ರ ಮೀಸಲು ಪೊಲೀಸ್ ಪಡೆಯ 87ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಶಾ, ಕಳೆದ ಮೂರು ವರ್ಷಗಳಲ್ಲಿ ಮಾವೋವಾದಿಗಳ ಪಿಡುಗನ್ನು ನಿರ್ಮೂಲನೆ ಮಾಡುವಲ್ಲಿ ಸಾಧಿಸಿದ ಪ್ರಗತಿಗಾಗಿ ಮೀಸಲು ಪಡೆಯನ್ನು ಶ್ಲಾಘಿಸಿದರು. ಸಿಆರ್‌ಪಿಎಫ್ ಮತ್ತು ಅದರ ಕೋಬ್ರಾ ಬೆಟಾಲಿಯನ್‌ಗಳ ನಿರ್ಣಾಯಕ ಪಾತ್ರದಿಂದಾಗಿ ಭಯೋತ್ಪಾದಕ ದಾಳಿಗಳನ್ನು ವಿಫಲಗೊಳಿಸಲು ಸಾಧ್ಯವಾಯಿತು. 370ನೇ ವಿಧಿಯನ್ನು ರದ್ದುಪಡಿಸಿದ ನಂತರ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡ ಕೀರ್ತಿ ಗಡಿ ಭದ್ರತಾ ಪಡೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರೊಂದಿಗೆ ಸಿಆರ್‌ಪಿಎಫ್‌ನದ್ದಾಗಿದೆ.

ಮುಂದಿನೈದು ವರ್ಷದಲ್ಲಿ ನುಸುಳುಕೋರರರ ನಿರ್ನಾಮ: ಮುಂದಿನ ಐದು ವರ್ಷಗಳಲ್ಲಿ ಅಕ್ರಮ ವಲಸಿಗರನ್ನು ಮತದಾರರ ಪಟ್ಟಿಯಿಂದ ಮಾತ್ರವಲ್ಲದೆ ದೇಶದಿಂದಲೂ ಹೊರಹಾಕಲಾಗುವುದು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ ಶಾ, ಕಾಂಗ್ರೆಸ್ ನಾಯಕ ಒಮ್ಮೆ ನುಸುಳುಕೋರರನ್ನು ತೆಗೆದುಹಾಕಲಾಗುವುದು ಎಂದು ಹೇಳಿದ್ದರು. ಆದರೆ ಅಕ್ರಮ ವಲಸಿಗರು ಅದರ ಮತಬ್ಯಾಂಕ್ ಆಗಿರುವುದರಿಂದ ಕಾಂಗ್ರೆಸ್ ಹಾಗೆ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಹಲವೆಡೆ ಬಾಂಬ್ ದಾಳಿಗೆ ಲಷ್ಕರೆ, ಜೆಇಎಂ ಸಿದ್ಧತೆ

• **ಹೊಸದಿಲ್ಲಿ :** ಪಾಕ್ ಬೆಂಬಲಿತ ಭಯೋತ್ಪಾದಕ ಸಂಘಟನೆಗಳಾದ ಲಷ್ಕರ್ ಮತ್ತು ಜೈಶ್ ಮೊಹಮ್ಮದ್ ಉಗ್ರರು ಕಾಶಿ ವಿಶ್ವನಾಥ ದೇಗುಲ, ಅಕ್ಷರಧಾಮ ಸಹಿತ ದಿಲ್ಲಿ ಮತ್ತು ಉತ್ತರಪ್ರದೇಶಗಳ ಪ್ರಮುಖ ದೇಗುಲಗಳ ಮೇಲೆ ಐಇಡಿ ದಾಳಿ ಸಹಿತ ಆತ್ಮಾಹುತಿ ದಾಳಿ ನಡೆಸುವ ಸಂಭಾವ್ಯತೆ ಇದೆ. ಮಾರ್ಚ್-ಏಪ್ರಿಲ್‌ನಲ್ಲಿ ನಡೆವ, ಅಪಾರ ಭಕ್ತಪ್ರವಾಹ ಸೇರುವ ಹೋಳಿ, ರಾಮನವಮಿಯಂತಹ ಉತ್ಸವಗಳ ಸಂದರ್ಭದಲ್ಲೇ ಬಾಂಬ್ ದಾಳಿ ನಡೆಸುವ ಆತಂಕವಿದೆ ಎಂದು ಗುಪ್ತಚರ ಮೂಲಗಳು ಎಚ್ಚರಿಸಿವೆ. ಇಸ್ಲಾಮಾಬಾದ್ ಮಸೀದಿಯಲ್ಲಿ ಈಚೆಗೆ ಸಂಭವಿಸಿದ ಸ್ಫೋಟಕ್ಕೆ ಪ್ರತೀಕಾರವಾಗಿ ಪಾತಕಿಗಳು ದಿಲ್ಲಿ, ಉ.ಪ್ರ.ದೇಗುಲಗಳ ಮೇಲೆ ದಾಳಿಗೆ ಸಂಚು ನಡೆಸಿವೆ ಎಂದು ಬೇಹುಗಾರಿಕಾ ಮೂಲಗಳು ತಿಳಿಸಿದೆ.

ಝುಲ್ಮ್ ಕಾ ಬದ್ಲಾ ಕೋಡ್ ಹೆಸರಲ್ಲಿ ಬಲು ಅಪರೂಪವೆಂಬಂತೆ ಜೆಇಎಮ್ ಮತ್ತು ಎಲ್‌ಇಟಿ ಸೆಲ್‌ಗಳು ಜಂಟಿಯಾಗಿ ದಾಳಿಗೆ ಸಜ್ಜಾಗುತ್ತಿವೆ. ರಾವಲ್ಪಿಂಡಿಯ ಹ್ಯಾಂಡ್ಲರ್‌ಗಳ ಸಹಕಾರದೊಂದಿಗೆ ದಾಳಿ ನಡೆಯಲಿದ್ದು, ಜೈಶ್‌ನ ಮಸೂದ್ ಅಜರ್ ಮತ್ತು ಲಷ್ಕರ್ ಸಂಸ್ಥಾಪಕ ಹಫೀಜ್ ಸಯೀದ್‌ನ ಸಹಚರರು ಈ ದಾಳಿಯ ಪ್ರಮುಖ ಸೂತ್ರಧಾರರು ಎಂದು ಬೇಹುಗಾರಿಕಾ ಮೂಲಗಳು ತಿಳಿಸಿವೆ. ಸಾಂಸ್ಕೃತಿಕ ಮಹತ್ವವನ್ನು ಗಮನಿಸಿಕೊಂಡು ದಿಲ್ಲಿ ಮತ್ತು ಉತ್ತರಪ್ರದೇಶದ ದೇವಾಲಯಗಳನ್ನು ಐಇಡಿ ದಾಳಿಗೆ ಪಾತಕಿಗಳು ಟಾರ್ಗೆಟ್ ಮಾಡಿಕೊಂಡಿದ್ದಾರೆ. ಅಕ್ಷರಧಾಮ, ಕಾಶಿ ವಿಶ್ವನಾಥ ದೇವಾಲಯ ಜತೆ ಉಗ್ರರು ಪಟ್ಟಿ ಮಾಡಿರುವ ಇತರ ಕ್ಷೇತ್ರಗಳ ಯಾದಿಯಲ್ಲಿ ಅಯೋಧ್ಯೆಯ ಶ್ರೀರಾಮ ಮಂದಿರ ಕೂಡ ಒಳಗೊಂಡಿದೆ.

ಗಯಾನಾ ಉಪರಾಷ್ಟ್ರಪತಿ ಅಯೋಧ್ಯೆ ಭೇಟಿ



• **ಅಯೋಧ್ಯೆ:** ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಭಾಗವಹಿಸಲು ಆಗಮಿಸಿದ ಗಯಾನಾದ ಉಪರಾಷ್ಟ್ರಪತಿಗಳಾದ ಭರತ ಜಗದೇವ ತಮ್ಮ ದೇಶಕ್ಕೆ ತೆರಳುವ ಮೊದಲು ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರದ ದರ್ಶನವನ್ನು ಪಡೆಯಲು ಶನಿವಾರ ಅಯೋಧ್ಯೆಯ ರಾಮ ಮಂದಿರಕ್ಕೆ ಭೇಟಿ ನೀಡಿ ರಾಮಲಲಾ ಹಾಗೂ ರಾಮ ಪರಿವಾರ ದರ್ಶನದ ನಂತರ ಜನ್ಮಭೂಮಿ ಆವರಣದಲ್ಲಿರುವ ಮಂದಿರಗಳ ದರ್ಶನದವನ್ನು ಪಡೆದರು. ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಚಂಪತ್ ರಾಯ ಅವರ ಜತೆ ಮಂದಿರಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಚರ್ಚಿಸಿದರು.

ಭಾರತ ಕೃತಕ ಬುದ್ಧಿಮತ್ತೆ ಶೃಂಗಸಭೆಯಲ್ಲಿ ಕಾಂಗ್ರೆಸ್ ಪ್ರತಿಭಟನೆ

ಕೈ ನಡೆಗೆ ಪ್ರತಿಪಕ್ಷಗಳ ಆಕ್ಷೇಪ

• **ಹೊಸದಿಲ್ಲಿ:** ಭಾರತ ಕೃತಕ ಬುದ್ಧಿಮತ್ತೆ ಶೃಂಗಸಭೆ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಶರ್ಟ್‌ರಹಿತ ಪ್ರತಿಭಟನೆ ದೇಶದ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಈ ಘಟನೆಗೆ ವಿರೋಧ ವ್ಯಕ್ತಪಡಿಸಿ ಬಿಜೆಪಿ ಕಾರ್ಯಕರ್ತರು ಶನಿವಾರ ಹಲವಾರು ರಾಜ್ಯಗಳಲ್ಲಿ ಆಂದೋಲನ ನಡೆಸಿದರು. ಜಾಗತಿಕ ವೇದಿಕೆಯಲ್ಲಿ ಭಾರತದ ಕೀರ್ತಿಗೆ ಧಕ್ಕೆಯುಂಟಾಗಿದೆ ಎಂದು ಆಡಳಿತ ಪಕ್ಷ ಸೇರಿದಂತೆ ಕೆಲವು ಪ್ರತಿಪಕ್ಷಗಳೂ ಟೀಕಿಸಿವೆ.



ಮಹಾರಾಷ್ಟ್ರದ ಥಾಣೆಯಲ್ಲಿ ನ್ಯಾಯಾಲಯಕ್ಕೆ ವಿಚಾರಣೆಗೆ ತೆರಳುತ್ತಿದ್ದ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಾಹನಕ್ಕೆ ಬಿಜೆಪಿ ಕಾರ್ಯಕರ್ತರು ಕಪ್ಪು ಧ್ವಜ ಪ್ರದರ್ಶಿಸಿದರು. ಇದೇ ವೇಳೆ ಭಾರತೀಯ ಜನತಾ ಯುವ ಮೋರ್ಚಾ ಕಾರ್ಯಕರ್ತರು ಜಮ್ಮು, ಜೈಪುರ್, ಪಟನಾ, ಬೆಂಗಳೂರು, ಪಂಚಕುಲಾ, ಇಂದೋರ್ ಸೇರಿದಂತೆ ಹಲವು ನಗರಗಳಲ್ಲಿ ಪ್ರತಿಭಟನೆ ನಡೆಸಿದರು.

ಬಿಜೆಪಿ ಆಕ್ರೋಶ: ಪ್ರತಿಭಟನೆ ಕುರಿತು ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಇದು ಕೇವಲ ನಕಾರಾತ್ಮಕ ರಾಜಕೀಯವಲ್ಲ, ರಾಷ್ಟ್ರದ್ರೋಹಕ್ಕೆ ಸಮಾನ,'' ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

ಈ ರೀತಿ ವರ್ತಿಸಬಾರದಿತ್ತು!

ಕಾಂಗ್ರೆಸ್‌ನ ಮಿತ್ರ ಪಕ್ಷ ಎಸ್‌ಪಿ ಮುಖ್ಯಸ್ಥ ಅಖಿಲೇಶ್‌ಯಾದವ್ ಅವರೂ ಪ್ರತಿಭಟನೆ ಬಗ್ಗೆ ಅಸಹನೆ ವ್ಯಕ್ತಪಡಿಸಿದ್ದಾರೆ. ಅಂಥ ವೇದಿಕೆಗಳಲ್ಲಿ ಈ ರೀತಿ ವರ್ತಿಸಬಾರದಿತ್ತು ಎಂದಿದ್ದಾರೆ. ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ, ಈ ಕೃತ್ಯ ತೀವ್ರ ಆಕ್ಷೇಪಾರ್ಹ ಮತ್ತು ಖಂಡನೀಯ ಎಂದು ಹೇಳಿದ್ದಾರೆ. ಹಾಗೆಯೇ, ಆರ್‌ಜೆಡಿ ನಾಯಕ ಮನೋಜ್ ಕುಮಾರ್ ಝಾ ಅವರು, ಕೆಲವು ತೊಂದರೆಗಳು ಇರುವುದು ಸಹಜ. ಆದರೆ, ಈ ರೀತಿ ಕಾಂಗ್ರೆಸ್ ವರ್ತಿಸಬಾರದಿತ್ತು ಎಂದಿದ್ದಾರೆ. ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕ ವೈಎಸ್ ಜಗನ್ ಮೋಹನ್ ರೆಡ್ಡಿ, ಯಾರೂ ಭಾರತವನ್ನು ಅವಮಾನಿಸಬಾರದು ಎಂದು ಹೇಳಿದ್ದಾರೆ. ಟಿಆರ್‌ಎಸ್ ನಾಯಕ ಕೆ.ಟಿ. ರಾಮಾ ರಾವ್, ಜಾಗತಿಕ ವೇದಿಕೆಗಳಲ್ಲಿ ಇಂತಹ ಆಂದೋಲನಗಳು ದೇಶದ ಚಿತ್ರಣಕ್ಕೆ ಹಾನಿಕಾರಕ ಎಂದಿದ್ದಾರೆ.

ಸಮಾನ ಕೃತಕ ಬುದ್ಧಿಮತ್ತೆಗೆ 88 ದೇಶಗಳ ಸಂಪೂರ್ಣ ಬೆಂಬಲ

ಎಐ ದಿಲ್ಲಿ ಘೋಷಣೆ ಅಂಗೀಕಾರ

• **ಹೊಸದಿಲ್ಲಿ:** ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಜಾಗತಿಕ ಏಕಮನಸ್ಸಿನ ಮಹತ್ವದ ಬೆಳವಣಿಗೆಯಾಗಿ 88 ದೇಶಗಳು ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳು ಎಐ ಇಂಪ್ಯಾಕ್ಟ್ ಕುರಿತ ದಿಲ್ಲಿ ಘೋಷಣೆಯನ್ನು ಅಂಗೀಕರಿಸಿವೆ. ಎಐ ಪ್ರಯೋಜನಗಳು ಮಾನವಕುಲದಾದ್ಯಂತ ಸಮಾನವಾಗಿ ಹಂಚಿಕೆಯಾಗಬೇಕು ಎಂಬ ಬದ್ಧತೆಯನ್ನು ಘೋಷಣೆ ಒತ್ತಿಹೇಳಿದೆ.

ಎಐ ಇಂಪ್ಯಾಕ್ಟ್ ಸಮ್ಮೇಳನ 2026ರ ಸಮಾರೋಪದಲ್ಲಿ ಅಂಗೀಕರಿಸಲಾದ ಈ ಘೋಷಣೆ, ಸಹಕಾರಾತ್ಮಕ, ನಂಬಿಕೆಗೆ ಪಾತ್ರ, ಸ್ಥೈರ್ಯಶೀಲ ಮತ್ತು ಕಾರ್ಯಕ್ಷಮ ಎಐ ವ್ಯವಸ್ಥೆಗಳ ಅಭಿವೃದ್ಧಿಗೆ ಹಂಚಿಕೊಂಡ ದೃಷ್ಟಿಕೋನವನ್ನು ವಿವರಿಸುತ್ತದೆ. ಸಮಾನತೆ, ಪ್ರವೇಶ ಹಾಗೂ ಜಾಗತಿಕ ಸಹಕಾರ ಆಧಾರಿತ ಎಲ್ಲರಿಗೂ ಎಐ ಎಂಬ ಕರೆಯನ್ನು ಭಾರತ ಮುಂದಿಟ್ಟಿದೆ.

ಸರ್ವಜನ ಹಿತಾಯ, ಸರ್ವಜನ ಸುಖಾಯ ತತ್ವದಿಂದ ಪ್ರೇರಿತ ಘೋಷಣೆ, ಎಐಯ ಭರವಸೆ ಅದರ ಲಾಭಗಳು ಎಲ್ಲರಿಗೂ ತಲುಪಿದಾಗ ಮಾತ್ರ ಸಾಕಾರಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದೆ. ಅಂತಾರಾಷ್ಟ್ರೀಯ ಸಹಕಾರ ಬಲಪಡಿಸುವುದು, ಬಹುಪಕ್ಷೀಯ ಪಾಲ್ಗೊಳ್ಳುವಿಕೆ ಹೆಚ್ಚಿಸುವುದು ಹಾಗೂ ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಗೌರವ ನೀಡುವ ಅಗತ್ಯವನ್ನೂ ಉಲ್ಲೇಖಿಸಿದೆ.

ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, 'ಮಾನವಕೇಂದ್ರಿತ ಎಐ ಕುರಿತ ಭಾರತದ ದೃಷ್ಟಿಯನ್ನು ವಿಶ್ವ ಒಪ್ಪಿಕೊಂಡಿದೆ. ಎಐ ಸಂಪನ್ಮೂಲಗಳ ಜನತಂತ್ರೀಕರಣದ ಮೂಲಕ ತಂತ್ರಜ್ಞಾನ ಸಮಾಜದ ಪ್ರತಿಯೊಬ್ಬರಿಗೂ ತಲುಪುವ ದಾರಿಗೆ ಬೆಂಬಲ ವ್ಯಕ್ತವಾಗಿದೆ,' ಎಂದರು.

ಅಮೆರಿಕ, ಚೀನಾದಂತಹ ದೇಶಗಳ ಒಪ್ಪಿಗೆ

ಏಳು ಅಂಶಗಳ ಆಧಾರ: ಘೋಷಣೆ ಏಳು ಪ್ರಮುಖ ಅಂಶಗಳ ಆಧಾರದ ಮೇಲೆ ರೂಪುಗೊಂಡಿದ್ದು, ಎಐ ಸಂಪನ್ಮೂಲಗಳ ಜನತಂತ್ರೀಕರಣ, ಆರ್ಥಿಕ ವೃದ್ಧಿ ಮತ್ತು ಸಾಮಾಜಿಕ ಹಿತ, ಸುರಕ್ಷಿತ ಮತ್ತು ನಂಬಿಕೆಗೆ ಪಾತ್ರ ಎಐ, ವಿಜ್ಞಾನ ಕ್ಷೇತ್ರದ ಬಳಕೆ, ಸಾಮಾಜಿಕ ಸಬಲೀಕರಣ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸ್ಥೈರ್ಯಶೀಲ-ನವೀನ ಎಐ ವ್ಯವಸ್ಥೆಗಳತ್ತ ಗಮನ ಹರಿಸಿದೆ.

ಅಧಿಕೃತ ಪ್ರಕಟಣೆಯ ಪ್ರಕಾರ, ಅಮೆರಿಕಾ, ಚೀನಾ, ಬ್ರಿಟನ್, ರಷ್ಯಾ, ಫ್ರಾನ್ಸ್, ಆಸ್ಟ್ರೇಲಿಯಾ ಸೇರಿದಂತೆ ಹಲವು ಅಭಿವೃದ್ಧಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಘೋಷಣೆಗೆ ಬೆಂಬಲ ಸೂಚಿಸಿವೆ. ಒಟ್ಟು 118 ದೇಶಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದವು.

ಕಿರುಸುದ್ದಿ

ಫೆ.24ರಂದು ರಾಜ್ಯಪಾಲರ ಪ್ರವಾಸ

◆**ವಿಜಯನಗರ:** ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಅವರು ಫೆ.24ರಂದು ವಿಶೇಷ ವಿಮಾನದ ಜಿಂದಾಲ್‌ಗೆ ಆಗಮಿಸುವರು.

ಜಿಂದಾಲ್‌ನಿಂದ ಮಧ್ಯಾಹ್ನ 2.10ಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಆಗಮಿಸಿ ಸಂಜೆ 5 ಗಂಟೆಗೆ 34ನೇ ಘಟಿಕೋತ್ಸವದಲ್ಲಿ ಭಾಗವಹಿಸಿ ರಾತ್ರಿ 7.55 ಕ್ಕೆ ಜಿಂದಾಲ್‌ಗೆ ಪ್ರಯಾಣಿಸಿ ಅಲ್ಲಿಂದ ಬೆಂಗಳೂರಿಗೆ ತೆರಳುವರು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪಕ್ಷಾತೀತವಾಗಿ ಹೋರಾಟ ನಡೆಸಿ



◆**ಬಳ್ಳಾರಿ:** ನಗರದ ಈದ್ಗಾ ಮೈದಾನಕ್ಕೆ ಸಂಬಂಧಿಸಿದ 11.5 ಎಕರೆ ಭೂಮಿಗೆ ಸಂಬಂಧಿಸಿ ಸಮುದಾಯದ ಕೆಲ ಮುಖಂಡರು ಮಾತನಾಡುತ್ತಿದ್ದು, ಅಕ್ರಮದ ಬಗ್ಗೆ ಧ್ವನಿ ಎತ್ತಿದ್ದು, ಸ್ವಾಗತಾರ್ಹ. ಆದರೆ, ನಗರದ ಅವಂಭಾವಿ ಪ್ರದೇಶದ 103 ಎಕರೆ, ಟಿಪ್ಪುಸುಲ್ತಾನ್ ಇನಾಂ 30 ಎಕರೆ ಜಮೀನುಗಳನ್ನೂ ಕೆಲ ಪಟ್ಟಭದ್ರ ಶಕ್ತಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸಲು ಮುಂದಾಗಿದ್ದು, ಇದರ ವಿರುದ್ಧವೂ ನಮ್ಮ ಸಮುದಾಯದ ಮುಖಂಡರು, ಪಕ್ಷಾತೀತವಾಗಿ ಹೋರಾಟ ನಡೆಸಬೇಕು ಎಂದು ವಕ್ಫ್ ಮಂಡಳಿ ಅಧ್ಯಕ್ಷ ಹಾಗೂ ಬುಡಾ ಮಾಜಿ ಅಧ್ಯಕ್ಷ ಹುಮಾಯೂನ್ ಖಾನ್ ಅವರು ಸಲಹೆ ನೀಡಿದರು. ನಗರದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈದ್ಗಾ ಮೈದಾನಕ್ಕೆ ಸಂಬಂಧಿಸಿದ 11.5 ಎಕರೆ ಭೂಮಿ ಕಬಳಿಸುವ ಯತ್ನ ಕೆಲವರಿಂದ ವ್ಯವಸ್ಥಿತವಾಗಿ ನಡೆದಿತ್ತು, ಇದನ್ನು ಗಮನಿಸಿ, ಕೂಡಲೇ ಎಚ್ಚೆತ್ತುಗೊಂಡು ಸಂಬಂಧಿಸಿದವರ ವಿರುದ್ಧ ದೂರು ದಾಖಲಿಸಿ, ಭೂಮಿ ರಕ್ಷಣೆಗೆ ಪ್ರಾಮಾಣಿಕವಾಗಿ ಶ್ರಮಿಸಲಾಗಿದೆ. ಕಬಳಿಸುವ ಯತ್ನ ಒಮ್ಮೆ ಅಲ್ಲ, ಆಗಾಗ್ಗೆ ನಡೆದಿತ್ತು. ಬಿಟ್ಟು ಬಿಡದೇ ಅದರ ಬೆನ್ನತ್ತಿ, ಅವರೆಲ್ಲರ ವಿರುದ್ಧ ಹೋರಾಟ ಮಾಡಿದ್ದೇವೆ, ಕಾನೂನು ಹೋರಾಟವನ್ನು ಮಾಡಲಾಗಿದೆ ಎಂದು ಹೇಳಿದರು. ಬಿಜೆಪಿಯಲ್ಲಿ ಗುರುತಿಸಿಕೊಂಡ ರಿಜ್ವಾನ್ ಸೇರಿದಂತೆ ಇತರರು, ನಮ್ಮ ಬಗ್ಗೆ ವಿನಾಕಾರಣ ಆರೋಪ ಮಾಡಿದ್ದು, ಇದು ಸರಿಯಲ್ಲ, ನಾನು ಕೂಡಾ ಈದ್ಗಾ ಮೈದಾನಕ್ಕೆ ಸೇರಿದ 11.5 ಎಕರೆ ಜಮೀನು ಕುರಿತು ಸಾಕಷ್ಟು ಹೋರಾಟ ಮಾಡಿರುವೆ. ನಾನು ಯಾವತ್ತೂ ಮಾಧ್ಯಮದ ಎದುರು ಯಾವುದೇ ಹೇಳಿಕೆಗಳನ್ನು ನೀಡಿಲ್ಲ, ಇದು ನಮ್ಮ ಸಮಾಜದ ಕೆಲಸ ಎಂದು ಅತ್ಯಂತ ಪ್ರಾಮಾಣಿಕವಾಗಿ ಶ್ರಮಿಸಿದ್ದೇನೆ ಎಂದರು. ವಿವಿಧ ಮುಖಂಡರು ಇದ್ದರು.

ನೂತನ ಮಾರುಕಟ್ಟೆ ಉದ್ಘಾಟಿಸಿದ ಶಾಸಕ



◆**ಬಳ್ಳಾರಿ:** ಬೀದಿ ಬದಿ ವ್ಯಾಪಾರಿಗಳಿಗೆ ಅನುಕೂಲವಾಗಲು ನೂತನ ತರಕಾರಿ ಹಾಗೂ ಹೂವು ಮಾರುಕಟ್ಟೆಯನ್ನು ನಿರ್ಮಿಸಲಾಗಿದೆ ಎಂದು ನಗರ ಶಾಸಕ ನಾರಾ ಭರತ್ ರೆಡ್ಡಿ ತಿಳಿಸಿದರು.

ನಗರದ 1ನೇ ವಾರ್ಡ್ ವ್ಯಾಪ್ತಿಯ ಪಾರ್ವತಿ ನಗರದ (ಕೇಂದ್ರ ಕಾರಾಗೃಹದ ಬಳಿ) ಶಾಸಕರ ಅನುದಾನದಲ್ಲಿ ಅಂದಾಜು 29.33 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಿದ್ದ ನೂತನ ಮಾರುಕಟ್ಟೆ ಪ್ರಾಂಗಣಕ್ಕೆ ಶನಿವಾರ ಉದ್ಘಾಟಿಸಿ ಮಾತನಾಡಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಆಗುತ್ತಿದ್ದ ತೊಂದರೆ ಗಮನಿಸಿ, ವ್ಯಾಪಾರಿಗಳಿಗೆ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ನೂತನ ಮಾರುಕಟ್ಟೆಯ ನಿರ್ಮಾಣ ಮಾಡಲಾಗಿದೆ, ಇದರ ಸದ್ಬಳಕೆ ಆಗಬೇಕು, ಈ ಮೊದಲು ಇಲ್ಲಿದ್ದ ವ್ಯಾಪಾರಿಗಳೇ ಮಳಿಗೆಗಳನ್ನು ಪಡೆದು ವ್ಯಾಪಾರ ಮಾಡಬೇಕು ಎಂದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ವಾರ್ಡಿನ ಪಾಲಿಕೆಯ ಸದಸ್ಯ ಗುಡಿಗಂಟಿ ಹನಮಂತು, ಮಾಜಿ ಮೇಯರ್, ಹಾಲಿ ಸದಸ್ಯೆ ಎಂ.ರಾಜೇಶ್ವರಿ ಸುಬ್ಬರಾಯುಡು, ಸದಸ್ಯ ಪೇರಂ ವಿವೇಕ್, ಪಾಲಿಕೆಯ ಆಯುಕ್ತ ಮಂಜುನಾಥ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು, ಮುಖಂಡರಾದ ಸುಬ್ಬರಾಯುಡು, ಮಹಮ್ಮದ್ ಭಾಯ್, ಪರಶುರಾಮುಡು, ಹಗರಿ ಗೋವಿಂದ, ಪದ್ಮಾ, ಥಿಯೇಟರ್ ಶಿವು ಸೇರಿದಂತೆ ಇತರರಿದ್ದರು.

ಶಾಲೆ ಪಕ್ಕದಲ್ಲೇ ಬಯಲು ಶೌಚ

▸ವಾಗೀಶ್ ವೀ.ಪಾಟೀಲ



◆**ರಾಯಚೂರು:** ಗ್ರಾಮದಲ್ಲೊಂದು ರಸ್ತೆ, ಅದರ ಪಕ್ಕದಲ್ಲೊಂದು ಚರಂಡಿ. ಇದನ್ನು ಚರಂಡಿ ಎನ್ನುವುದಕ್ಕಿಂತ ಕೊಳಚೆ ಪ್ರದೇಶ, ಅದಕ್ಕೆ ಹೊಂದಿಕೊಂಡಂತೆ ನೂರಾರು ಮಕ್ಕಳು ವ್ಯಾಸಂಗ ಮಾಡುತ್ತಿರುವ ಶಾಲೆ. ಈ ಗ್ರಾಮದ ಮುಖ್ಯರಸ್ತೆ ಆಗಿರುವ ಇದು ಸಮಾಚಾರಕ್ಕಲ್ಲ ಇದು ಕೆಲ ಗ್ರಾಮಸ್ಥರ ಬಯಲು ಶೌಚದ ಸ್ಥಳವಾಗಿದೆ.

ಇಂತಹುದೊಂದು ಈ ಶಾಲೆ ಇರುವುದು ತಾಲೂಕಿನ ಯಕ್ಲಾಸಪುರ ಗ್ರಾಮದಲ್ಲಿನ ಸರ್ಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆ. ರಸ್ತೆಯ ಮತ್ತು ಚರಂಡಿ ಪಕ್ಕದಲ್ಲಿರುವ ಶಾಲೆಗೆ ಗ್ರಾಮದ ಹೆಚ್ಚಿನ ಜನತೆ ಬಳಸಿದ ಕಲುಷಿತ ನೀರು ಇಲ್ಲಿನೇ ಬರುತ್ತದೆ. ಚರಂಡಿ ಅವ್ಯವಸ್ಥಿತವಾಗಿರದ ಕಾರಣಕ್ಕೆ ಶಾಲೆಗೆ ಕಟ್ಟಡಕ್ಕೆ ಹೊಂದಿಕೊಂಡೇ ಕೊಳೆತ ನೀರಿದೆ. ಅದು ಗಬ್ಬೆದ್ದು ನಾರುತ್ತಿದೆ. ಇಂತಹ ಪರಿಸರದಲ್ಲಿನೇ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ.

ದಿಗಂತ ವಿಶೇಷ

ಇಂದಿಗೂ ಗ್ರಾಮೀಣ ಭಾಗಗಳಲ್ಲಿನ ಶಾಲೆಗಳನ್ನು ಆಡು ಭಾಷೆಯಲ್ಲಿ ಸಾಲಿ(ಶಾಲೆ)ಗುಡಿ ಎಂತಲೇ ಕರೆಯಲಾಗುತ್ತದೆ. ಗುಡಿ ಎಂದರೆ ಅದರ ಸುತ್ತಲಿನ ಪ್ರದೇಶ ಸಹಜವಾಗಿ ಶಾಂತ, ಸುಂದರ ಮತ್ತು ಶುಭ್ರವಾಗಿರುತ್ತದೆ. ಆದರೆ ಈ ಶಾಲೆ ಇರುವ ಪ್ರದೇಶ ಇದ್ದಕ್ಕೆ ತದ್ವಿರುದ್ಧವಾಗಿದೆ.

ನಗರದಿಂದ ಜಿಲ್ಲಾಡಳಿತ ಭವನಕ್ಕೆ ಹೋಗುವ ಮುಖ್ಯ ರಸ್ತೆಯೂ ಇದಾಗಿದೆ. ಈ ರಸ್ತೆಯ ಎರಡೂ ಬದಿಗಳಲ್ಲಿ ಪ್ರತಿ ನಿತ್ಯ ಒಂದಡಿ ಜಾಗ ಖಾಲಿ ಇಲ್ಲದಂತೆ ಬಯಲು ಶೌಚವನ್ನು ಮಾಡಲಾತ್ತದೆ. ಇಂತಹ ಅವ್ಯವಸ್ಥೆಯ ಜಾಗದಲ್ಲಿದೆ ದೇವಾಲಯ ಎಂದೆನಿಸಿಕೊಳ್ಳುವ ಈ ಊರ ಶಾಲೆ.

ಈ ಶಾಲೆಗೆ ಸಂಬಂಧಿಸಿದ ಎರಡಾಳೆತ್ತರದ ಸಿಂಟೆಕ್ಸ್ ದುರ್ನಾತವಿರುವಚರಂಡಿಯಪಕ್ಕದಲ್ಲಿದೆಎನ್ನುವುದಕ್ಕಿಂತ ಚರಂಡಿಯಲ್ಲಿದೆ ಎಂದರೆ ತಪ್ಪಾಗಲಾರದು. ಜಿಲ್ಲಾಡಳಿತ ಭವನದಿಂದ ಕೂಗಳತೆ ದೂರದಲ್ಲಿನೇ ಈ ಗ್ರಾಮ ಮತ್ತು ಶಾಲೆಯಿದೆ. ಈ ಮಾರ್ಗ ನಗರದಿಂದ ಜಿಲ್ಲಾಡಳಿತ ಭವನಕ್ಕೆ ತೆರಳುವುದಕ್ಕೆ ಹತ್ತಿರವಾಗುವುದರಿಂದ ಅನೇಕರು ಇದೇ ಮಾರ್ಗವಾಗಿ ತೆರಳುತ್ತಾರೆ. ಆದರೆ, ಯಕ್ಲಾಸಪುರ ಗ್ರಾಮದ ಈ ಶಾಲೆಯ ಹತ್ತಿರ ಬಂದಕೂಡಲೆ ಜನತೆ ಕಣ್ಣು ಮುಚ್ಚಿಕೊಂಡು ಹೋಗುವುದಕ್ಕೆ ಸಾಧ್ಯವಾಗದ ಹಿನ್ನಲೆಯಲ್ಲಿ ಶೌಚವನ್ನು ಕಂಡು ಕಾಣದವರಂತೆ ದುರ್ನಾತದಿಂದ ತಪ್ಪಿಸಿಕೊಳ್ಳುವುದಕ್ಕೆ ಅನಿವಾರ್ಯವಾಗಿ ಮೂಗು ಮುಚ್ಚಿಕೊಂಡು ಹೋಗುತ್ತಾರೆ.

ದೇಶದಲ್ಲಿ ಬಯಲು ಶೌಚ ನಿರ್ಮೂಲನೆ ಮಾಡಬೇಕೆಂಬ ಉದ್ದೇಶದಿಂದ ಪ್ರತಿ ವರ್ಷ ಸಾವಿರಾರು ಕೋಟಿ ಅನುದಾನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವೆಚ್ಚಮಾಡುತ್ತಿದ್ದರೂ ಬಯಲು ಶೌಚ ಪೀಡುಗನ್ನು ನಿರ್ಮೂಲನೆ ಮಾಡುವುದಕ್ಕೆ ಇಂದಿಗೂ ಸಾಧ್ಯವಾಗುತ್ತಿಲ್ಲ ಎನ್ನುವುದಕ್ಕೆ ಈ ಗ್ರಾಮ ಸಾಕ್ಷಿಯಾಗಿ ನಿಲ್ಲುತ್ತದೆ.

ಶೌಚಾಲಯ ನಿರ್ಮಾಣಕ್ಕೆ ಗಮನಹರಿಸಿ

ಸ್ವಾತಂತ್ರ್ಯ ಪೂರ್ವದಲ್ಲಿ (1941 ಜು.7ರಂದು) ಸ್ಥಾಪಿತವಾದ ಈ ಶಾಲೆಯ ದುರ್ಗತಿ ಹೀಗಿರುವಾಗ ಇನ್ನು ನಗರ ಪ್ರದೇಶದಿಂದ ದೂರದಲ್ಲಿರುವ ಗ್ರಾಮಗಳಲ್ಲಿನ ಶಾಲೆಗಳ ಸ್ಥಿತಿಗತಿಯನ್ನು ಊಹಿಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಬಯಲು ಶೌಚದಂತಹ ದುರವಸ್ಥೆಯನ್ನು ತಪ್ಪಿಸುವುದಕ್ಕೆ ಸಾಮೂಹಿಕ ಶೌಚಾಲಯಗಳನ್ನಾದರೂ ನಿರ್ಮಿಸುವತ್ತ ಗಮನಕೊಡಬೇಕಾಗಿದೆ.

ಈ ಗ್ರಾಮ ನಗರ ಪ್ರದೇಶದ ವ್ಯಾಪ್ತಿಗೆ ಬರುತ್ತದೆ. ಪಾಲಿಕೆ ವ್ಯಾಪ್ತಿಯಲ್ಲಿ ಸುಲಭ ಶೌಚಾಲಯಗಳ ನಿರ್ಮಾಣಕ್ಕೆ ಎಂಟು ಕೋಟಿ ರೂ. ಅನುದಾನ ಮೀಸಲಿಡಲಾಗಿದೆ. ಈ ಅನುದಾನದಲ್ಲಿ ಇದೇ ಗ್ರಮಾದಲ್ಲಿನ ಸಾಮೂಹಿಕ ಶೌಚಾಲಯದ ಅಭಿವೃದ್ಧಿ ಸೇರಿದಂತೆ ಚರಂಡಿ ನಿರ್ಮಾಣವನ್ನು ಮಾಡಲು ಕ್ರಮ ಕೈಗೊಳ್ಳಲಾಗುವುದು.

■ ನಿತೀಶ ಕೆ., ಜಿಲ್ಲಾಧಿಕಾರಿ

ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯ ಬೆಳೆಸಿಕೊಳ್ಳಿ: ಹಿರೇಮನಿ

◆**ಯಲಬುರ್ಗಾ:** ವಿದ್ಯಾರ್ಥಿಗಳು ಅತ್ಯಂತ ನಿಷ್ಠೆ ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡುವದರ ಜೊತೆಗೆ ತಮ್ಮ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಕಡ್ಡಾಯವಾಗಿ ರೂಡಿಸಿಕೊಂಡು ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಪರೋಪಕಾರಿಯಾಗಿ ಹಾಗೂ ಸಮಾಜ ಹಾಗೂ ದೇಶಕ್ಕೆ ಕೊಡುಗೆ ನೀಡುವಂತಾಗಬೇಕು ಎಂದು ಪ್ರಭಾರಿ ಮುಖ್ಯೋಪಾಧ್ಯಾಯ ಮುದಿಯಪ್ಪ ಹಿರೇಮನಿ ಹೇಳಿದರು.

ಪಟ್ಟಣದ ಶ್ರೀಸಿದ್ದರಾಮೇಶ್ವರ ನಗರದಲ್ಲಿರುವ ಸ.ಹಿ.ಪ್ರಾ.ಶಾಲೆ ನಂ.1ರಲ್ಲಿ ಜರುಗಿದ ಏಳನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಸರಸ್ವತಿ ಪೂಜಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರಾಥಮಿಕ ಶಿಕ್ಷಣ ಎನ್ನುವದು ನಿಮ್ಮ ಶೈಕ್ಷಣಿಕ ಜೀವನದ ಬುನಾದಿ ಇದ್ದಂತೆ ಇಲ್ಲಿಂದಲೇ ನೀವು ಉನ್ನತ ಗುರಿಯ ಆಶಯದೊಂದಿಗೆ ನಿರಂತರ ಅಭ್ಯಾಸ ಮಾಡಬೇಕು ಅದರಿಂದ ನಿಮ್ಮ ತಂದೆ-ತಾಯಿ ಹಾಗೂ ವಿದ್ಯೆ ಕಲಿಸಿದ ಗುರುಗಳಿಗೆ ಗೌರವ ತಂದುಕೊಟ್ಟಂತೆ ಆಗುತ್ತದೆ ಮತ್ತು ನಮ್ಮ ಶಾಲೆ ನಿಮ್ಮ ಗ್ರಾಮ ಎಲ್ಲದರ ಕೀರ್ತಿ ನಿಮ್ಮ ಕೈಯಲ್ಲಿದೆ ಅದರಂತೆ ಎಲ್ಲರೂ ಅಭ್ಯಾಸ ಮಾಡಿ ಯಾವುದೇ ಕಾರಣಕ್ಕೂ ನಿಮ್ಮ ವಿದ್ಯಾಭ್ಯಾಸ ನಿಲ್ಲಿಸಬೇಡಿ ಸರಕಾರ ಶಿಕ್ಷಣಕ್ಕೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುತ್ತದೆ ಅದರ ಸದುಪಯೋಗ ಪಡೆದುಕೊಂಡು ಮುಂದೆ ಸಾಗಿ ಎಂದು ವಿದ್ಯಾರ್ಥಿಗಳಿಗೆ ಹಾರೈಸಿದರು.

ಶಿಕ್ಷಕರಾದ ಜಗದೀಶ್ಚಂದ್ರ, ವಿಜಯ ಗಡ್ಡದ , ಸುಧಾ ಬಟ್ಟೂರು, ನಿಖಿತಾ, ಶಾರದಾದೇವಿ, ಗೌರಮ್ಮ, ಪವಿತ್ರಾ, ಶ್ರೀದೇವಿ ಹಾಗೂ ಮುಖಂಡರಾದ ಪ್ರಕಾಶ,ಸುರೇಶ, ಬಸವರಾಜ, ಮುತ್ತಣ್ಣ, ಸೇರಿದಂತೆ ಅನೇಕ ಪಾಲಕರು ಹಾಜರಿದ್ದರು.



ಯುವಕರ ರಾಜಕೀಯ ಪ್ರವೇಶ ಅತ್ಯಗತ್ಯ



◆**ಯಾದಗಿರಿ:** ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಪ್ರವೇಶ ಮಾಡುವ ಅಗತ್ಯ ಇಂದಿನ ದಿನಗಳಲ್ಲಿ ಹೆಚ್ಚಿದೆ ಎಂದು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಮಲ್ಲನಗೌಡ ಪಾಟೀಲ್ ಹತ್ತಿಕುಣಿ ತಿಳಿಸಿದರು.

ಇಲ್ಲಿನ ಮಾಜಿ ಶಾಸಕ ವೆಂಕಟರಡ್ಡಿ ಮುದ್ನಾಳ್ ಅವರ ಜನಸಂಪರ್ಕ ಕಾರ್ಯಾಲಯದಲ್ಲಿಶನಿವಾರ ರಾಜ್ಯ ಬಿಜೆಪಿ ಕಾರ್ಯಕಾರಿಣಿಯ ನೂತನ ಸದಸ್ಯರಾದ ಮಹೇಶರಡ್ಡಿ ಮುದ್ನಾಳ್ ಅವರನ್ನು ಹತ್ತಿಕುಣಿ ಬಿಜೆಪಿ ಹೋಬಳಿ ನಾಯಕರು ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ದೇಶದಲ್ಲಿ ಯುವಶಕ್ತಿ ಬಲಿಷ್ಠವಾಗಬೇಕು ಎಂಬುದು ಪ್ರಧಾನಿ ನರೇಂದ್ರ ಮೋದಿ ಅವರ ಕನಸಾಗಿದೆ ಎಂದರು.

ಮಹೇಶರಡ್ಡಿ ಉತ್ತಮ ಸಂಘಟಕರಾಗಿದ್ದು, ಪಕ್ಷದ ಚಟುವಟಿಕೆಗಳಲ್ಲಿ ಸದಾ ಸಕ್ರಿಯರಾಗಿದ್ದಾರೆ. ಅವರ ತಾತಾ ವಿಶ್ವನಾಥರಡ್ಡಿ ಮುದ್ನಾಳ್ ಒಬ್ಬ ಸ್ವಾತಂತ್ರ್ಯ ಸೇನಾನಿಯಾಗಿದ್ದರು. ತಂದೆ ಹಾಗೂ ದೊಡ್ಡಪ್ಪ ಶಾಸಕರಾಗಿ ಯಾದಗಿರಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಹೀಗಾಗಿ ಮಹೇಶರಡ್ಡಿ ಅವರಿಗೆ ರಾಜಕೀಯದ ಅನುಭವವಿದೆ ಎಂದು ಹೇಳಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಮಹೇಶರಡ್ಡಿ ಮುದ್ನಾಳ್, ಪಕ್ಷದ ಕಾರ್ಯಕರ್ತರ ಮತ್ತು ಮುಖಂಡರ ಸಲಹೆ ಮತ್ತು ಮಾರ್ಗದರ್ಶನ ಪಡೆದು ಕ್ಷೇತ್ರದಲ್ಲಿ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡುತ್ತೇನೆ ಎಂದರು.

ಪ್ರಮುಖರಾದ ಖಂಡಪ್ಪ ದಾಸನ್, ಶರಣಗೌಡ ಬಾಡಿಯಾಳ, ರಾಮರಡ್ಡಿ ಮೂಲಿಮನಿ, ಸ್ವಾಮಿದೇವ ದಾಸನಕೇರಿ, ದೇವೀಂದ್ರಪ್ಪ ಖಂಡಪನೂರ್, ಹೀರಾಸಿಂಗ್ ಪವಾರ್, ಶರಣಪ್ಪ ಬಾರನೂರ, ತಿಮ್ಮಣ್ಣ ಇದ್ಲಿ, ಮಲ್ಲಿಕಾರ್ಜುನ ಗೌಡಗೇರಾ, ಸಾಹೇಬಗೌಡ ಪಾಟೀಲ್, ಶರಣಗೌಡ ಪಾಟೀಲ್, ಮಲ್ಲು ಗೌಡಗೇರಾ, ಮಲ್ಲಿ ಬೂದರು, ಸೋಮರಾಯ ಬಾಚವಾರ, ಮಲ್ಲಿಕಾರ್ಜುನ ಸಂಗಪ್ಪನೂರ, ಹಣಮಂತ ಪೂಜಾರಿ, ಸೋಮು ಪೂಜಾರಿ, ಶೇಖರ ಹೊಸಳ್ಳಿ, ಕಮಲಿಬಾಯಿ ಸೌದಾಗರ, ಗೋಪಾಲ ರಾಮುನಾಯಕ ತಾಂಡಾ, ಈಶ್ವರ ಬಾಚವಾರ ಇದ್ದರು.

ಭಾರತ ಮಾತೆಯ ಚಿತ್ರದ ಭವ್ಯ ಮೆರವಣಿಗೆ



◆**ಗಂಗಾವತಿ:** ನಗರದಲ್ಲಿ ಹಿಂದೂ ಸಮ್ಮೇಳನದ ಅಂಗವಾಗಿ ಪಶ್ಚಿಮ ಭಾಗದ 1ನೇ ವಾರ್ಡಿನಿಂದ 6ನೇ ವಾರ್ಡ್‌ನ ವರೆಗೆ ಭಾರತ ಮಾತೆಯ ಚಿತ್ರದ ಭವ್ಯ ಮೆರವಣಿಗೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಭಾಗವಹಿಸಿದ್ದರು.

ಪುಟ್ಟ ಮಕ್ಕಳು ಛದ್ಮದಾರಿ ವೇಶವನ್ನು ಧರಿಸಿ ಟ್ರ್ಯಾಕ್ಟರ್ ಮೇಲೆ ನಿಂತುಕೊಂಡು ನೋಡುಗರ ಮನ ಸೆಳೆಯುತ್ತಿದ್ದರು. ಹಿರಿಯರು ಕಿರಿಯರು ಕೇಸರಿ ವಸ್ತ್ರವನ್ನು ಕೊರಳಲ್ಲಿ ಹಾಕಿಕೊಂಡು, ಭಗವಾಧ್ವಜಗಳನ್ನು ಪುಟ್ಟ ಮಕ್ಕಳಿಂದ ಹಿಡಿದು ಮಹಿಳೆಯರು ಹಾಗೂ ಹಿರಿಯರು ಡೊಳ್ಳು ಕುಣಿತದ ಮೂಲಕ ಮೆರವಣಿಗೆ ನಡೆಯಿತು.

ಈ ಸಂದರ್ಭದಲ್ಲಿ ಕಲ್ಮಠ ಶ್ರೀಗಳು, ಮಾಜಿ ಸಂಸದರಾದ ಶಿವರಾಮ ಗೌಡ್ರು, ಮಾಜಿ ಕಾಡ ಅಧ್ಯಕ್ಷರಾದ ತಿಪ್ಪೇರುದ್ರಸ್ವಾಮಿ, ವೀರಭದ್ರಪ್ಪ ನಾಯಕ, ಹಿಂದೂ ಸಮ್ಮೇಳನ ಸಮಿತಿಯ ನಗರ ಸಂಯೋಜಕರಾದ ಡಾ.ಅಮರ್‌ಪಾಟೀಲ ಹಾಗೂ ಅನೇಕ ಹಿರಿಯರು ಯುವ ಮಿತ್ರರು ಪಾಲ್ಗೊಂಡಿದ್ದರು.

ಬಿರು ಬಿಸಿಲಿನಲ್ಲೇ ಬಸ್‌ಗೆ ಕಾಯುವ ಪ್ರಯಾಣಿಕರು

▸ಪುಷ್ಪವತಿ ಜಿಎಂ ಬಸಯ್ಯ



◆**ಕುರುಗೋಡು:** ಪಟ್ಟಣದ ಪ್ರಮುಖ ವೃತ್ತದಲ್ಲಿ ಬೆಳಗ್ಗೆಯಿಂದ ಸಂಜೆ ವರೆಗೆ ಬಳ್ಳಾರಿ ಹಾಗೂ ಇತರೆ ಊರುಗಳಿಗೆ ತೆರಳುವ ಪ್ರಯಾಣಿಕರು ಸಂಚರಿಸುವ ಸಂಖ್ಯೆಯು ಹೆಚ್ಚಾಗಿದ್ದು ಆದರೆ ಮಿನಿ ತಂಗುದಾಣ ಇಲ್ಲದ ಕಾರಣ ಮಹಿಳೆಯರು ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ರಸ್ತೆ ಪಕ್ಕದಲ್ಲಿ ಕಡು ಬಿಸಿಲಲ್ಲಿ ಬಸ್‌ಗಾಗಿ ಕಾಯುವಂತ ಸ್ಥಿತಿ ಇಲ್ಲಿದೆ. ಹಲವುಬಾರಿ ಕ್ಷೇತ್ರದ ಶಾಸಕರು ತಂಗುದಾಣ ನಿರ್ಮಾಣ ಭರವಸೆ ಹುಸಿಯಾಗಿದೆ.

ದಿಗಂತ ವಿಶೇಷ

ತಾಲೂಕು ಕೇಂದ್ರ ಪ್ರಮುಖ ವೃತ್ತದಲ್ಲಿ ಬಹಳ ವರ್ಷಗಳಿಂದ ಬಸ್ ನಿಲ್ದಾಣ ಅವಶ್ಯವಿದ್ದು, ಈ ಬಗ್ಗೆ ವಿವಿಧ ಸಂಘಟನೆಗಳು ನಿರ್ಮಿಸಲು ಮನವಿ ನೀಡಿದರೂ ಸಂಬಂಧಿಸಿದ ಸ್ಥಳೀಯ ಆಡಳಿತ ಅಧಿಕಾರಿಗಳು, ಜನಪ್ರತಿನಿಧಿಗಳಾಗಲಿ ಗಮನಹರಿಸದೆ ನಿರ್ಮಾಣ ಮಾಡುವ ಗೋಜಿಗು ಹೋಗಿಲ್ಲ.

ಸಾರ್ವಜನಿಕರಿಗೆಮತ್ತುವೃದ್ಧರಿಗೆಮಹಿಳೆಯರಿಗೆ ವಿದ್ಯಾರ್ಥಿಗಳಿಗೆ ಉರಿ ಬಿಸಿಲಿನಲ್ಲಿ ನಿಂತು ಚಾತಕ ಪಕ್ಷಿಯಂತೆ ಬಸ್‌ಗಾಗಿ ಎದುರು ನೋಡುತ್ತಾರೆ ವಿಪರ್ಯಾಸ ಎಂದರೆ ಕುಳಿತುಕೊಳ್ಳಲು ಮತ್ತು ನಿಂತುಕೊಳ್ಳಲು ಯಾವುದೇ ವ್ಯವಸ್ಥೆ ಮಾಡಿಲ್ಲ, ನೆತ್ತಿ ಸುಡುವ ಉರಿ ಬಿಸಿಲಿಗೆ ಪುಟ್ಟ ಮಕ್ಕಳು ವೃದ್ಧರು, ಮಹಿಳೆಯರು, ಹಲವು ವರ್ಷಗಳಿಂದ ನಿಂತು ಬಸ್‌ಗಾಗಿ ಕಾಯಬೇಕಾದ ಪರದಾಟ ಇನ್ನೂ ತಪ್ಪಿಲ್ಲ.

ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಜನಪ್ರತಿನಿಧಿಗಳು ಇತ್ತ ಗಮನ ಹರಿಸಿ ಶೀಘ್ರವಾಗಿ ಸಾರ್ವಜನಿಕರ ಬಹುದಿನಗಳ ಬೇಡಿಕೆ ಮಿನಿ ಬಸ್ ನಿಲ್ದಾಣ ನಿರ್ಮಿಸಬೇಕೆಂಬುದು ಪ್ರಯಾಣಿಕರ ಅಭಿಪ್ರಾಯವಾಗಿದೆ.

ಪಟ್ಟಣದ ಹೃದಯ ಭಾಗದಲ್ಲಿನ ಪ್ರಮುಖವಾಗಿ ಜಿಲ್ಲೆ ಸೇರಿದಂತೆ ಕಂಪ್ಲಿ ಕುಡಿತಿನಿ ಶಿರಿಗುಪ್ಪ, ಜಿಂದಾಲ್, ಗ್ರಾಮೀಣ ಭಾಗಕ್ಕೆ ಪ್ರಮುಖ ಕೇಂದ್ರ ಬಿಂದುವಾಗಿದೆ.

ಸರ್ಕಾರಕ್ಕೆ ಜನರ ತೆರಿಗೆ ಹಣ ಕೇಳುವುದು ಬಿಟ್ಟರೆ ಅಭಿವೃದ್ಧಿ ವಿಷಯದಲ್ಲಿ ಜಾಣ ಕುರುಡು, ಇನ್ನೂ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಆಡಳಿತಕ್ಕೆ ಮಿನಿ ಬಸ್ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ ಗಮನ ಇಲ್ಲದಾಗಿರುವುದು ಬಹಳ ವರ್ಷಗಳ ತಂಗುದಾಣ ನಿರ್ಮಾಣದ ಕನಸು ಕನಸಾಗಿಯೇ ಉಳಿದಿದೆ.

■ ದೊಡ್ಡಬಸಪ್ಪ, ಮಲ್ಲಿಕಾರ್ಜನ, ವಿದ್ಯಾರ್ಥಿಗಳು

ಪಟ್ಟಣದ ಹೃದಯ ಭಾಗದಲ್ಲಿ ಇರುವ ಈಶ್ವರ ಪಾರ್ಕ ಸ್ಥಳ ಸಾರಿಗೆ ಇಲಾಖೆಗೆ ಅಂಸ್ತರಿಸಿದ್ದು, ಮುಂದಿನ ಸಾರಿಗೆ ಇಲಾಖೆ ಪ್ರಕೀಯೇ ಬಹುತೇಕ ಜರುಗಿದ್ದು, ಅನುದಾನದಲ್ಲಿ ನಿರ್ಮಿಸಲಾಗುತ್ತದೆ.

■ ದತ್ತಾತ್ರೇಯ ಹೆಗಡೆ, ಪುರಸಭೆ ಮುಖ್ಯಾಧಿಕಾರಿ

ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ: ಹಾಲಕೇರಿ



◆**ಕುಕನೂರು:** ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಿ ಮುಂದಿನ ಕಾಲೇಜ್ ಅಭ್ಯಾಸಕ್ಕೆ ಪಾದರ್ಪಣೆ ಮಾಡಲಿರುವವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ ಎಂದು ಇಟಗಿಯ ಪಿಎಂಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದ ಪ್ರಾಚಾರ್ಯರಾದ ರಾಮರಡ್ಡಪ್ಪ ಹಾಲಕೇರಿ ಹೇಳಿದರು.

ತಾಲೂಕಿನ ಇಟಗಿ ಗ್ರಾಮದ ಪಿಎಂಶ್ರೀ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಶುಕ್ರವಾರ ದಿವಸ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಎಲ್ಲ ವಿದ್ಯಾರ್ಥಿಗಳು ಉದ್ಯುತ್ತಮ ಅಂಕ ಪಡೆದು ಶಾಲೆಗೆ ಹಾಗೂ ಪಾಲಕರ ಒಳ್ಳೆಯ ಹೆಸರು ಬೇಕು. ಉನ್ನತ ಶಿಕ್ಷಣಕ್ಕೆ ಈ ಎಸ್ಸೆಸ್ಸೆಲ್ಸಿ ಉತ್ತಮ ಅಡಿಪಾಯ ಆದರಿಂದಾಗಿ ಎಲ್ಲ ನಮ್ಮ ವಿದ್ಯಾರ್ಥಿಗಳು ಮುಂದಿನ ಅವರ ವಿದ್ಯಾಭ್ಯಾಸದ ಭವಿಷ್ಯ ಉತ್ತಮವಾಗಿ ಇರಲಿ ಎಂದರು.

ಪ್ರತಿ ವರ್ಷ ನಮ್ಮ ತಂದೆಯ ಸ್ಮರಣಾರ್ಥ ನಮ್ಮ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಟಾಪರ್ ಆದಂತ ಮೂರುವಿದ್ಯಾರ್ಥಿಗಳಿಗೆಪ್ರಥಮ5000, ದ್ವಿತೀಯ, 3000 ತೃತೀಯ 2000, ರೂಪಾಯಿಗಳನ್ನು ನೀಡಿ ಸನ್ಮಾನಿಸಿ ಸತ್ಕರಿಸಲಾಗುವುದು ಇದು ನಾನು ಈ ಶಾಲೆಯಲ್ಲಿ ಎಲ್ಲಿವರೆಗೂ ಕಾರ್ಯನಿರ್ವಹಿಸುತ್ತೇನೆ ಅಲ್ಲಿಯವರೆಗೆ ಈ ಕಾರ್ಯ ಪ್ರತಿ ವರ್ಷ ನಡೆಯಲಿದೆ ಎಂದರು.

ಆದರ್ಶ ಶಾಲೆಯ ಕನ್ನಡ ಶಿಕ್ಷಕ ಶರಣಪ್ಪ ಬೋಮಲೇಕರ್, ಹಾಗೂ ಅತಿಥಿ ಶಿಕ್ಷಕರಿಗೆ, ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಶಾಲೆಯ ಹಳೆಯ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಎಸ್‌ಡಿಎಂಸಿ ಅಧ್ಯಕ್ಷ ಕಳಕನಗೌಡ ಸಾದರ್, ಗವಿಸಿದ್ದಪ್ಪ ಗೋಳಗಣ್ಣನವರ್, ಹಿರಿಯ ಶಿಕ್ಷಕರಾದ ಸಂಗಪ್ಪ ಚಳಗೇರಿ, ಶಿಕ್ಷಕರಾದ ಜಗದೀಶ ಅಜ್ಜಣ್ಣನವರ್, ರಂಗಪ್ಪ ಓಲೇಕರ್, ಜಯಪ್ಪ ಕನಕಮ್ಮನವರ್, ಬಸಮ್ಮ ಮೇಟಿ, ಶರಣಪ್ಪ ಬೊಮಲೇಕರ್ , ರೋಹಿಣಿ, ಸಂತೋಷ್ ಕುಮಾರಿ, ವಿರೂಪಾಕ್ಷಪ್ಪ ಮ್ಯಾಲಿ , ನಾಗರಾಜ್ ಸುನಗ, ಶ್ರೀದೇವಿ ಬೆಳದಡಿ, ಮಹೇಶ್ ರಾಮದುರ್ಗ, ಮುರಾರಿ ಭಜಂತ್ರಿ, ರಮೇಶ್ ಕೆ.ಟಿ., ಶ್ವೇತಾಹಳ್ಳಿ, ಪೂಜಾ ತಟ್ಟಿ, ಶ್ವೇತಾ ಬನ್ನಿಕೊಪ್ಪ, ವಿಜಯಲಕ್ಷ್ಮೀ ಹಿರೇಮಠ, ಮಯೂರ್ ತಳವಾರ್, ಹನುಮಂತ್ ಇಟಗಿ, ಭೀಮಾಂಬಿಕಾ, ರೋಬಿಯ ಲಕ್ಕುಂಡಿ, ರಹಿಮನ್ ಹಾಗೂ ಬಸವರಾಜ ಸೇರಿದಂತೆ ಶಾಲಾ ಸಿಬ್ಬಂದಿ ವಿದ್ಯಾರ್ಥಿಗಳ ಪಾಲಕರು ಹಾಗೂ ಶಿಕ್ಷಕರು ಇತರರು ಉಪಸ್ಥಿತರಿದ್ದರು.

ಎಐ ಸಮಿಟ್‌ನಲ್ಲಿ ಕಾಂಗ್ರೆಸ್ ವರ್ತನೆ ಲಜ್ಜಾಸ್ಪದ: ಜೋಶಿ

◆**ಕಲಬುರಗಿ:** ಇಂಡಿಯಾ ಎಐ ಸಮಿಟನಲ್ಲಿ ವಿಶ್ವದ 20 ರಾಷ್ಟ್ರಗಳ ಅಧ್ಯಕ್ಷರು, 45 ಸಚಿವರು ಹಾಗೂ ಸುಮಾರು 150 ದೇಶಗಳಿಂದ ಪ್ರಮುಖ ಪ್ರತಿನಿಧಿಗಳು ಭಾಗವಹಿಸಿದ ಸಂದರ್ಭದಲ್ಲಿ ಯೂತ್ ಕಾಂಗ್ರೆಸ್ ಪಕ್ಷದ ವರ್ತನೆ ಅತ್ಯಂತ ಲಜ್ಜಾಸ್ಪದ. ಭಾರತದ ಸಾಧನೆಯನ್ನು ಸಂಭ್ರಮಿಸುವ ಬದಲು ಗಲಾಟೆ ಸೃಷ್ಟಿಸಲು ಪ್ರಯತ್ನಿಸಿದ್ದು, ಜೊತೆಗೆ ಭಾರತದ ಬೆಳವಣಿಗೆಗೆ ಅಡ್ಡಿಯಾಗಲು ಯತ್ನಿಸುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಆಕ್ರೋಶ ವ್ಯಕ್ತಪಡಿಸಿದರು.



ನಗರದ ಪಿಡಿಎ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಗತ್ತಿನ ಅತಿ ದೊಡ್ಡ ಇನ್ನೋವೇಶನ್‌ನಲ್ಲಿ ಭಾಗಿಯಾಗಲು ಬಂದಾಗ ಗಲಾಟೆ ಸೃಷ್ಟಿ ಮಾಡಿದ್ದು, ದೇಶಕ್ಕೆ ಹಾಗೂ ವಿಕಸಿತ ಭಾರತದ ಕನಸು ಬಯಸುತ್ತಿರುವವರಿಗೆ ದೊಡ್ಡ ಶಾಕ್ ಆಗಿದೆ. ಬೌದ್ಧಿಕವಾಗಿ ದಿವಾಳಿಯಾಗಿರುವ ಹಾಗೂ ದಾರಿ ತಪ್ಪಿದ ಮಗನಿಂದಾಗಿ ಕಾಂಗ್ರೆಸ್ ಸಂಪೂರ್ಣವಾಗಿ ಹಳಿ ತಪ್ಪಿದ ಪರಿಣಾಮ ಈ ರೀತಿ ವರ್ತನೆ ತೋರಿದೆ. ಕೂಡಲೇ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ಪಕ್ಷದ ವತಿಯಿಂದ ಆಗಿರುವ ಲೋಪಕ್ಕೆ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು. ಅಮೆರಿಕದ ಸುಪ್ರೀಂಕೋರ್ಟ್ ಅಮೆರಿಕದ ಟ್ಯಾರಿಫ್‌ಗಳ ಕುರಿತು ನೀಡಿದ ಆದೇಶದ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಅಮೆರಿಕದ ಉನ್ನತ ನ್ಯಾಯಾಲಯವು ಕೆಲವು ತೀರ್ಪುಗಳನ್ನುನೀಡಿದೆಯೆಂದುನಾನುಮಾಧ್ಯಮಗಳಲ್ಲಿ ಓದಿದ್ದೇನೆ. ಭಾರತ ಸರ್ಕಾರವು ಅದನ್ನು ಅಧ್ಯಯನ ಮಾಡಲಿದೆ. ಅದರ ಕುರಿತು ಯಾವ ರೀತಿಯ ಪ್ರತಿಕ್ರಿಯೆ ನೀಡಬೇಕೋ ಅದನ್ನು ವಾಣಿಜ್ಯ ಸಚಿವಾಲಯ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಉತ್ತರ ನೀಡುತ್ತದೆ. ನಾನಲ್ಲ ಎಂದರು.

ಪ್ರಜಾಪ್ರಭುತ್ವದ ಕೊಲೆ: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿದ ಜೋಶಿ, ಸ್ನೇಹಮಯಿ ಕೃಷ್ಣ ಅವರ ಬಂಧನವನ್ನು ಪ್ರಶ್ನಿಸಿದರು. ಯಾವುದೇ ದೂರು ದಾಖಲಾಗದಿದ್ದರೂ ಕೃಷ್ಣ ಅವರನ್ನು ಬಂಧಿಸಿರುವುದು ಪ್ರಜಾಪ್ರಭುತ್ವಕ್ಕೆ ವಿರೋಧವಾದುದು. ಈ ಬಗ್ಗೆ ನ್ಯಾಯಾಧೀಶರೇ ಸರ್ಕಾರಕ್ಕೆ ಛೀಮಾರಿ ಹಾಕಿದ್ದಾರೆ. ಮುಖ್ಯಮಂತ್ರಿಗಳೇ, ನಿಮಗೆ ನಾಚಿಕೆಯಾಗುವುದಿಲ್ಲವೇ? ಕೂಡಲೇ ಅವರನ್ನು ಬಿಡುಗಡೆ ಮಾಡಿ, ದಾಖಲೆಗಳನ್ನು ನೀಡಲು ಅವರಿಗೆ ಅವಕಾಶ ಕೊಡಿ ನ್ಯಾಯಾಲಯವನ್ನು ಎದುರಿಸಿ ಎಂದು ಆಗ್ರಹಿಸಿದರು.ಮುಸ್ಲಿಮರಿಗೆ ನಮಾಜ್ ಮಾಡಲು ಅವಕಾಶ ನೀಡುವ ಸರ್ಕಾರ, ಹಿಂದೂಗಳ ಮೆರವಣಿಗೆಗೆ ಏಕೆ ಅಡ್ಡಿಪಡಿಸುತ್ತದೆ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಇಂತಹ ಕೋಮು ಪ್ರಚೋದಿತ ಘಟನೆಗಳು ನಡೆಯುತ್ತಿವೆ. ಪೊಲೀಸರು ಅಯೋಗ್ಯರ ಮಾತು ಕೇಳಿ ಇಲಾಖೆಗೆ ಕೆಟ್ಟ ಹೆಸರು ತರಬಾರದು. ಬಾಂಗ್ಲಾದ ಅಕ್ರಮ ವಲಸಿಗರಿಗೆ ಹಸಿರು ಹಾಸಿಗೆ ಹಾಸುವ ಸರ್ಕಾರ, ದೇಶದ ಭಕ್ತರ ಮೆರವಣಿಗೆಯನ್ನು ಹತ್ತಿಕ್ಕುತ್ತಿದೆ ಎಂದು ಗುಡುಗಿದರು.

ಶಾಸಕ ಬಸವರಾಜ್ ಮತ್ತಿಮಡು, ಮಾಜಿ ಸಂಸದ ಡಾ. ಉಮೇಶ್ ಜಾಧವ, ಮುಖಂಡರಾದ ದತ್ತಾತ್ರೇಯ ಪಾಟೀಲ್ ರೇವೂರ್, ರಾಜಕುಮಾರ ಪಾಟೀಲ್ ತೆಲ್ಕೂರ್, ಶಶಿಲ್ ನಮೋಶಿ, ಅಶೋಕ್ ಬಗಲಿ ಸೇರಿದಂತೆ ಹಲವು ಗಣ್ಯರು ಹಾಗೂ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ಮತಾಂಧ ಮುಸ್ಲಿಂ ಶಕ್ತಿಯ ಹಾವಳಿ ಹೆಚ್ಚಾಗಿದೆ. ಕೇವಲ ಓಟಿಗಾಗಿ ಈ ರೀತಿ ಮಾಡುವುದು ಸರಿಯಾದ ಬೆಳವಣಿಗೆಯಲ್ಲ. ಗಣೇಶನ ಮೆರವಣಿಗೆ ವೇಳೆ, ಶಿವಾಜಿ ಜಯಂತಿ ವೇಳೆ ಹಲ್ಲೆ ನಡೆಯುತ್ತಿವೆ. ರಾಜ್ಯದ ಎಲ್ಲಾ ಆಗು ಹೋಗುಗಳ ಬಗ್ಗೆ ಜನ ಗಮನಿಸುತ್ತಿದ್ದಾರೆ ಎಂಬುದನ್ನು ರಾಜ್ಯ ಸರ್ಕಾರ ಮರೆಯಬಾರದು.

■ ಪ್ರಹ್ಲಾದ ಜೋಶಿ, ಕೇಂದ್ರ ಸಚಿವ

ಮಸೀದಿಗೆ ದಾರಿ ಮಾಡಲು ಜಾಗ ಒತ್ತುವರಿ

◆**ಕೊಪ್ಪಳ:** ಮಸೀದಿಗೆ ದಾರಿ ಮಾಡಲು ಐತಿಹಾಸಿಕ ಹುಲಿಕೆರೆ ಒತ್ತುವರಿ ಮಾಡಿದ್ದು, ಇದನ್ನು ಬಿಜೆಪಿ ಕಾರ್ಯಕರ್ತರು ಖಂಡಿಸಿ ಪ್ರತಿಭಟನೆ ನಡೆಸಿದರು.

ಶನಿವಾರ ಬೆಳಗ್ಗೆ ಹುಲಿಕೆರೆಗೆ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಜಮಾಯಿಸಿ ಘೋಷಣೆ ಕೂಗಿದರು. ಕೆರೆಯಲ್ಲಿಯೇ ರಸ್ತೆ ನಿರ್ಮಿಸಿ ಕಾನೂನು ಉಲ್ಲಂಘಿಸಿದ್ದಾರೆ. ತೆರವು ಕಾರ್ಯಾಚರಣೆ ಆರಂಭವಾಗುವವರೆಗೆ ಪಟ್ಟು ಬಿಡದೆ ಅಧಿಕಾರಿ, ಜನಪ್ರತಿನಿಧಿಗಳನ್ನು ತರಾಟೆ ತೆಗೆದುಕೊಂಡರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, 88 ಎಕರೆ ವಿಸ್ತಾರ ಹೊಂದಿದ ಕೆರೆ ನೂರಾರು ವರ್ಷಗಳ ಇತಿಹಾಸ ಹೊಂದಿದೆ. ಕೊಪ್ಪಳ ಕೋಟೆಗೆ ಹೊಂದಿಕೊಂಡಿದ್ದು, ಪ್ರಾಕೃತಿಕ ಸೌಂದರ್ಯ ಹೊಂದಿದೆ. ನಿರ್ವಹಣೆ ಕೊರತೆ ಕಾರಣ ವರ್ಷದಿಂದ ವರ್ಷಕ್ಕೆ ಅತಿಕ್ರಮವಾಗುತ್ತಿದೆ. ಬಲದಂಡೆ ಭಾಗದಲ್ಲಿ ಶಿವರಾತ್ರೇಶ್ವರ ದೇವಾಲಯವಿದೆ. ಹಿಂಭಾಗದಲ್ಲಿ ಮಸೀದಿ ಮಾಡಲಾಗಿದೆ. ದಾರಿ ಮಾಡುವ ಉದ್ದೇಶದಿಂದ ಕೆರೆ ಕೋಡಿ ಬಗೆದು ತುಂಬಿದ್ದ ಕೆರೆ ನೀರು ಖಾಲಿ ಮಾಡಲಾಗಿದೆ. ಬೇಸಿಗೆ ಸಮೀಪಿಸಿದ್ದು, ಈ ಹಂತದಲ್ಲಿ ಕೆರೆ ನೀರು ಬರಿದಾಗಿಸಲಾಗಿದೆ. ಬಳಿಕ ಶಿವರಾತ್ರೇಶ್ವರ ದೇವಾಲಯಕ್ಕೆ ಹೊಂದಿಕೊಂಡು ಕೆರೆ ಮಧ್ಯ ಭಾಗದಲ್ಲಿ 15 ಅಡಿ ಅಗಲದ ರಸ್ತೆ ನಿರ್ಮಿಸಲಾಗಿದೆ. ಈ ಬಗ್ಗೆ ನಗರಸಭೆ, ಜಿಲ್ಲಾಧಿಕಾರಿಗಳಿಗೂ ಮಾಹಿತಿ ನೀಡಿಲ್ಲವೆಂದು ? ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ವಿಷಯ ತಿಳಿಯುತ್ತಲೇ ನಗರಸಭೆ ಪೌರಾಯುಕ್ತ ವೆಂಕಟೇಶ ನಾಗನೂರ, ನಗರಠಾಣೆ ಪಿಐ ಜಯಪ್ರಕಾಶ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದರು.



ಫೋನ್‌ನಲ್ಲಿ ಎಂಪಿ-ಎಂಎಲ್‌ಸಿ ಟಾಕ್ ವಾರ್

ಸಂಸದ ರಾಜಶೇಖರ ಹಿಟ್ನಾಳ ಕರೆ ಮಾಡಿ ವಿಪ ಸದಸ್ಯೆ ಜತೆ ಮಾತನಾಡಿ ಸಮಾಧಾನಿಸಲು ಯತ್ನಿಸಿದರು. ದೇವಾಲಯ ಸಮಿತಿ ಹಾಗೂ ದರ್ಗಾ ಸಮಿತಿಯವರೊಂದಿಗೆ ಮಾತುಕತೆ ನಡೆಸಿ ರಸ್ತೆ ನಿರ್ಮಾಣಕ್ಕೆ ಸೂಚಿಸಿದ್ದಾಗಿ ಹೇಳಿದರು. ಕೆರೆ ಅಭಿವೃದ್ಧಿ ನಿಯಮಗಳು ಗೊತ್ತಿಲ್ಲವಾ ಎಂದು ಹೇಮಲತಾ ಕೆಂಡವಾದರು. ಹಾಗಿದ್ದಲ್ಲಿ ಸರ್ವೇ ಮಾಡಿಸಿ ಅತಿಕ್ರಮಣ ತೆರವು ಮಾಡಿ ಎಂದು ಸಂಸದರು ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಗಣೇಶ ಹೊರತಟ್ನಾಳ, ಮಹಾಲಕ್ಷ್ಮೀ ಕಂದಾರಿ, ಸೋಮಣ್ಣ ಹಳ್ಳಿ, ಮಹೇಶ ಅಂಗಡಿ, ಮಂಜುನಾಥ, ದೇವರಾಜ ಹಾಲಸಮುದ್ರ ಇತರರಿದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ವಿನಂತಿ ನಮ್ಮ ತಾಯಿಯವರಾದ ಶ್ರೀಮತಿ ಪದ್ಮಾತಿಮ್ಮೇಗೌಡ ರವರು ಅವರ ಜೀವಿತಾ ಅವಧಿಯಲ್ಲಿ ದಿನಾಂಕ:07-08-2025 ರಂದು ಶ್ರೀಸುಭಾಷ್ ಚಂದ್ರಬೋಸ್ ಬಿನ್ ಜೆ.ಸಿದ್ದರಾಮೇಗೌಡ, ಸುಮಾರು 42ವರ್ಷ,ನಂ.31,ಇನ್ ಫ್ಯಾನ್‌ಟ್ರಿ ರಸ್ತೆ, ರಾಕ್ ಗಾರ್ಡನ್ ಎದುರು ಫೈಯರ್ ಸ್ಟೇಷನ್ ಹತ್ತಿರ, ಸಂಜಯ್ ಗಾಂಧಿನಗರ ಬಳ್ಳಾರಿ-583104 ಎನ್ನುವ ವ್ಯಕ್ತಿಗೆ ಚಿಕ್ಕಮಗಳೂರು, ಕಸಬಾ ದಾಸರಹಳ್ಳಿ ಹೋಬಳಿ,ಅರಸಿನಗುಪ್ಪೆ ಗ್ರಾಮದ ಸರ್ವೇನಂ.52/54ರಲ್ಲಿರುವ 1ಎಕರೆ ಜಮೀನನ್ನು ಅಧಿಕಾರ (ಜಿಪಿಎ) ಸಾರ್ವತ್ರಿಕ ಮುಖ್ತಿಯಾರನಾಮೆ ಮಾಡಿ ಕೊಟ್ಟಿದ್ದು, ಸದರಿ ನಮ್ಮ ತಾಯಿಯವರಾದ ಶ್ರೀಮತಿ ಪದ್ಮಾ ತಿಮ್ಮೆಗೌಡ ರವರು ದಿನಾಂಕ:10-09-2025 ರಂದು ನಿಧನರಾದ ಪ್ರಯುಕ್ತ ನಾವುಗಳು ಅಂದರೆ ಅವರ ಮಕ್ಕಳುಗಳಾದ ಶ್ರೀಮತಿ ಸಿ.ಟಿ.ಯುವರಾಣಿ ಡಾ.ಸಿ.ಟಿ.ಪುನಿತ ಮತ್ತು ಸಿ.ಟಿ. ವೆಂಕಟೇಶ ಆದ ನಾವುಗಳು ಮೇಲ್ಕಂಡ ಅಧಿಕಾರ ಪತ್ರವನ್ನು ವಜಾಮಾಡಿರುತ್ತೇವೆ ಎಂಬ ಅಂಶವನ್ನು ಸಾರ್ವಜನಿಕರ ಗಮನಕ್ಕೆ ತರುತ್ತಾ ಈ ಜಮೀನಿನ ಬಗ್ಗೆ ಯಾವುದೇ ತರವಾದ ಕೊಂಡುಕೊ ಳ್ಳುವಿಕೆ ಮುಂತಾದ ವ್ಯವಹಾರ ಮಾಡಬಾರದೆಂದು ಮನವರಿಕೆ ಮಾಡಿಕೊಂಡಿರುತ್ತೇವೆ. ಹಾಗೇನಾದರೂ ಒಂದು ವೇಳೆ ವ್ಯವಹಾರ ಮಾಡಿದಲ್ಲಿ ಅದಕ್ಕೆ ನೀವೆ ಸಂಪೂರ್ಣ ಹೊಣೆ ಗಾರರಾಗಿರುತ್ತೀರಿ. ಎಂಬ ವಿಷಯವನ್ನು ಸಾರ್ವಜನಿಕರಿಗೆ ತಿಳಿಯಪಡಿಸಿರುತ್ತೇವೆ.

ಸಹಿ/- 1)ಸಿ.ಟಿ.ವೆಂಕಟೇಶ, 2)ಸಿ.ಟಿ.ಯುವರಾಣಿ, 3)ಸಿ.ಟಿ.ಪುನಿತ

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತಿ, ವಿಜಯಪುರ

ತಾಲೂಕ ಪಂಚಾಯತ ಕಾರ್ಯಾಲಯ, ನಿಡಗುಂದಿ

ಇ-ಮೇಲ್: eonidagundi007@gmail.com

ಸಂ:ತಾಪನಿ/ಟೆಂಡರ್/2025-26 ದಿನಾಂಕ:18.02.2026

ಅಲ್ಪಾವಧಿ ಟೆಂಡರ ಪ್ರಕಟಣೆ

2025-26 ನೇ ಸಾಲಿನ ತಾಲೂಕ ಪಂಚಾಯತ್ ನಿಡಗುಂದಿ ಕಾರ್ಯಾಲಯದ ಅನಿರ್ಬಂದಿತ ಯೋಜನೆಯಡಿ, ಅಂಗವಿಕಲರಿಗಾಗಿ ಮೀಸಲಿರಿಸಿದ ಅನುದಾನದಲ್ಲಿ ಗ್ರಂಥಾಲಯ ಸಾಮಗ್ರಿಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳನ್ನು ಪೂರೈಸಲು ಈ ಪ್ರೋಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳನ್ನು https://eproc.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ: 20.02.2026 ರಿಂದ ಪಡೆಯಬಹುದಾಗಿದೆ.

Tender Information Library: RDPR/2025-26/IND13625 Name: Procurement of Library Furniture and Educational Materials.

ಸಹಿ/- ಕಾರ್ಯನಿರ್ವಾಹಕ ಅಧಿಕಾರಿಗಳು,ತಾಲೂಕು ಪಂಚಾಯತ,ನಿಡಗುಂದಿ

ವಾಸಾಸಂಇ/ವಿಜಯಪುರ/728/ಕೆಎಸ್‌ಎಂಸಿಎ/2025-26

ಜಿಲ್ಲಾ ಶಸ್ತ್ರಚಿಕಿತ್ಸಕರ ಕಚೇರಿ, ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ

ದೂರವಾಣಿ ಸಂ: 08152-222035 ಇ-ಮೇಲ್: dskolar@gmail.com

ಸಂಖ್ಯೆ: ಎಸ್.ಎನ್.ಆರ್/ಗ್ರೂಪ್-ಡಿ/ಹೊರಗುತ್ತಿಗೆ/22/2025-26

ದಿನಾಂಕ: 19.02.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026-27 ನೇ ಸಾಲಿಗೆ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿಗೆ ವಿವಿಧ ಹುದ್ದೆಗಳ ಮಾನವ ಸಂಪನ್ಮೂಲ ಸೇವೆಗಳು, ಪಥ್ಯಾಹಾರ ಪದಾರ್ಥಗಳು ಹಾಗೂ ಔಷಧಿಗಳು/ಸರ್ಜಿಕಲ್ ಡಿಸ್ಪೋಸಬಲ್ಸ್ ಸರಬರಾಜಿಗೆ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ಟೆಂಡರ್‌ದಾರರಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ-ಟೆಂಡರ್ ನಮೂನೆಗಳು ಹಾಗೂ ಷರತ್ತು ನಿಬಂಧನೆಗಳನ್ನು **http://kppp.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ. ಟೆಂಡರ್‌ಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ನಿಯಮಗಳು ಹಾಗೂ ಟೆಂಡರ್ ಸಮಿತಿಯ ಇತರೆ ಷರತ್ತಿಗೆ ಒಳಪಟ್ಟಿರುತ್ತದೆ. **(1)** ನಾನ್‌ಕ್ಲಿನಿಕಲ್ ಸೇವೆಗಳನ್ನು ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ನಾನ್‌ಕ್ಲಿನಿಕಲ್ ಸೇವೆ/23/2025-26, ದಿನಾಂಕ: 19.02.2026. ಟೆಂಡರ್ ಮೊತ್ತ ರೂ: 1,87,60,417/-, ಇ.ಎಂ.ಡಿ. ರೂ. 4,69,010/-, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 20.03.2026 ಸಂಜೆ 5.00 ರವರೆಗೆ. (2)** ಗ್ರೂಪ್-ಡಿ ಸೇವೆಗಳನ್ನು ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಗ್ರೂಪ್-ಡಿ/ಹೊರಗುತ್ತಿಗೆ/22/2025-26, ದಿನಾಂಕ: 19.02.2026, ಟೆಂಡರ್ ಮೊತ್ತ ರೂ: 2,18,39,117, ಇ.ಎಂ.ಡಿ. ರೂ. 5,46,000/-, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 20.03.2026 ಸಂಜೆ 5.00 ರವರೆಗೆ. (3)** ಒಳ ರೋಗಿಗಳಿಗೆ ಪಥ್ಯಾಹಾರಕ್ಕಾಗಿ ಆಹಾರ ಪಥಾರ್ಥಗಳು ಹಾಗೂ ಬ್ರೆಡ್ ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ:ಎಸ್.ಎನ್.ಆರ್/ಪಥ್ಯಾಹಾರ/01/2025-26, ದಿನಾಂಕ: 19.02.2026, ಟೆಂಡರ್ ಮೊತ್ತ ರೂ: 78,35,075 ಲಕ್ಷ, ಇ.ಎಂ.ಡಿ. ರೂ. 1,95,876/-, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 20.03.2026ಸಂಜೆ 5.00 ರವರೆಗೆ. (4)** ಔಷಧಿಗಳು, ಸರ್ಜಿಕಲ್ ಡಿಸ್ಪೋಸಬಲ್ಸ್ ಸರಬರಾಜು ಮರು ಟೆಂಡರ್ (2ನೇ ಕರೆ): ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಸರಬ/ಆರ್‌ಸಿ/53/2025-26, ದಿನಾಂಕ: 19.02.2026, ಟೆಂಡರ್ ಮೊತ್ತ ರೂ: 50 ಲಕ್ಷ, ಇ.ಎಂ.ಡಿ. ರೂ. 1,00,000/-, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 02.03.2026 ಸಂಜೆ 5.00 ವರೆಗೆ**. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಸ್ತ್ರಚಿಕಿತ್ಸಕರು, ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ, ಕೋಲಾರ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು, ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:507/ಕೆಎಸ್‌ಎಂಸಿಎ/2025-26

ಜಿಲ್ಲಾ ಪಂಚಾಯತ್ ಧಾರವಾಡ

ಕಾರ್ಯನಿರ್ವಾಹಕ ಇಂಜನೀಯರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ - 580001.
ದೂರವಾಣಿ: 0836-2442316 ಇ-ಮೇಲ್: zpeddwd@rediffmail.com

ಸಂಖ್ಯೆ: ಪಂ.ರಾ.ಇಂ.ವಿ.ಧಾ/ಸ.ಇಂ.-2/2025-26/4796 ದಿನಾಂಕ: 20-02-2026

ಅಲ್ಪಾವಧಿ ಟೆಂಡರ್ ಪ್ರಕಟಣೆ-41/2025-26 (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವಿಷಯ : ಟೆಂಡರ್ ದಿನಾಂಕಗಳನ್ನು ಮುಂದೂಡುವ ಕುರಿತು.

ಉಲ್ಲೇಖ : ಈ ಕಛೇರಿ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 41/4769 ದಿನಾಂಕ: 18-02-2026.

ಉಲ್ಲೇಖಿತ ಈ ಕಛೇರಿ ಟೆಂಡರ್ ಪ್ರಕಟಣೆಯಲ್ಲಿ **ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರ್, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ** ಇವರಿಂದ ಸರ್ಕಾರಿ ಆದೇಶ ಸಂಖ್ಯೆ: No.FD 876 Exp-12/2017, Bangalore, Dated: 15-09-2017 ರನ್ವಯ ಕಾಮಗಾರಿಗಳ ಐಟಂವಾರು ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ನಿಗದಿತ ನಮೂನೆಯಲ್ಲಿ ಪಂ.ರಾ.ಇಂ. ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ KW-2 & 3 ರಲ್ಲಿಯ ನಿಬಂಧನೆಗೊಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 2000 ರನ್ವಯ ಇ-ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಪ್ರಕಟಣೆಯನ್ನು ಹೊರಡಿಸಲಾಗಿತ್ತು, ಆದರೆ ತಾಂತ್ರಿಕ ಕಾರಣಗಳಿಂದ ಈ ಕೆಳಗಿನ ಇಂಡೆಂಟ್‌ಗಳ, ಟೆಂಡರ್‌ಗಳ ದಿನಾಂಕಗಳನ್ನು ಈ ಕೆಳಗಿನಂತೆ ಮುಂದೂಡಲಾಗಿದೆ.

Indent Numbers:

General : 24428, 24618, 24859

ಕ್ಯಾಲೆಂಡರ್ ಆಫ್ ಇವೆಂಟ್ಸ್: 1) ಟೆಂಡರ್ ದಾಖಲೆಗಳನ್ನು ದಿನಾಂಕ: **23-02-2026** ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **03-03-2026 ರಂದು ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದು. **2)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **04-03-2026 ರಂದು ಸಂಜೆ 4.30 ಗಂಟೆಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ. 3)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **09-03-2026 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.**

ಕಾಮಗಾರಿಯ ಹೆಸರು / ಗುತ್ತಿಗೆದಾರರ ಅರ್ಹತೆ / ಟೆಂಡರ್ ನಿಯಮ / ಟೆಂಡರ್ ಷರತ್ತುಗಳು / ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ / ಇ.ಎಂ.ಡಿ ಮೊತ್ತ ಇತ್ಯಾದಿ ವಿವರಗಳಿಗೆ ವೆಬ್‌ಸೈಟ್: **https://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರ್‌ನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- (ಆರ್.ಎಂ. ಸೊಪ್ಪಿಮಠ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ. ವಿಭಾಗ, ಧಾರವಾಡ.

ವಾಸಾಸಂಇ/ಧಾರವಾಡ/1268/ಅಡ್ವರ್ಟೋರ್/2025-26

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು



ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಪಂಚಾಯತ ರಾಜ್ ಇಂಜಿನಿಯರಿಂಗ್ ವಿಭಾಗ
ಆಲಿಗದ್ದಾ, ಬೈತ್ ಕೊಲ್, ಕಾರವಾರ-581302
ದೂರವಾಣಿ: 08382-220556(ಕ) ಇ-ಮೇಲ್: predkarwar@gmail.com

ಕ್ರ.ಸಂ: ಪಂ.ರಾ.ಇಂ/ವಿ.ಕಾ/ಪಿ.ಬಿ/2025-26/1484 ದಿನಾಂಕ: 21-02-2026

ಟೆಂಡರ್ ತಿದ್ದುಪಡಿ ಪ್ರಕಟಣೆ

ಈ ಕಛೇರಿಯಿಂದ ಆಹ್ವಾನಿಸಲಾದ ಹೊನ್ನಾವರ ತಾ: ಹಳದೀಪುರ ಪಂ ಮೂಡಗಣಪತಿ ದೇವಸ್ಥಾನದಿಂದ ಜೈನಬಸಿದಿ ರಸ್ತೆ ಸುಧಾರಣೆ ಹಾಗೂ ಹಳದೀಪುರ ಪಂ.ದ ಕಿರಬೈಲ್ ರಸ್ತೆ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತವು ರೂ. 30.00 ಲಕ್ಷದ ಬದಲಾಗಿ ರೂ. 37.00 ಎಂದು ಪರಿಗಣಿಸಿಕೊಳ್ಳತಕ್ಕದ್ದು.

ಟೆಂಡರ ಪ್ರಕಟಣೆ ಸಂಖ್ಯೆ: 46/2025-26 ದಿನಾಂಕ: 17.02.2026

ಕಾಮಗಾರಿಯ ಹೆಸರು: ಹೊನ್ನಾವರ ತಾ: ಹಳದೀಪುರ ಪಂ ಮೂಡಗಣಪತಿ ದೇವಸ್ಥಾನದಿಂದ ಜೈನಬಸಿದಿ ರಸ್ತೆ ಸುಧಾರಣೆ ಹಾಗೂ ಹಳದೀಪುರ ಪಂ.ದ ಕಿರಬೈಲ್ ರಸ್ತೆ ನಿರ್ಮಾಣ

ಇಂಡೆಂಟ್: **RDPR/2025-26/RD/WORK_INDENT24651**

DIPR/KWR/KSMCA/1136/ 25-26 dt. 21.02.2026

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರವಾರ

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ಬಳ್ಳಾರಿ.

ಸಂ.ಲೋಇ/ಕಾನಿಇ/ಬವಿ/ಟಿಎಸ್-1/2025-26/6024 ದಿನಾಂಕ : 18-02-2026.

ಟೆಂಡರ್ ತಿದ್ದುಪಡಿ ಪ್ರಕಟಣೆ

ವಿಷಯ: 4059 ಮಾನ್ಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ (CMIDP) ಯೋಜನೆ ಅಡಿಯಲ್ಲಿ ಆಹ್ವಾನಿಸಲಾಗಿದ್ದ ಕಾಮಗಾರಿಗಳ ಟೆಂಡರ್ ತಿದ್ದುಪಡಿ ಬಗ್ಗೆ.

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-1/5949/2025-26 ದಿನಾಂಕ: 16-02-2026

ಮೇಲಿನ ಉಲ್ಲೇಖದಲ್ಲಿನ ಈ ಕಛೇರಿ ಟೆಂಡರ್ ಪ್ರಕಟಣೆಯಲ್ಲಿ ಆಹ್ವಾನಿಸಿದ್ದ ಕಾಮಗಾರಿಗಳ ಪೈಕಿ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಇಂಡೆಂಟ್ ಸಂಖ್ಯೆಗಳಲ್ಲಿ ಬದಲಾವಣೆಯಾಗಿದ್ದು, ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಇದನ್ನು ಗಮನಿಸಲು ಕೋರಿದೆ. ಇನ್ನುಳಿದ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಬದಲಾವಣೆಗಳಿದ್ದಲ್ಲಿ ಪ್ರತ್ಯೇಕವಾಗಿ ತಿಳಿಯಪಡಿಸಲಾಗುವುದು.

ಕ್ರ ಸಂ	ಈ ಮೊದಲು ಪ್ರಕಟಿಸಲಾದ ಕಾಮಗಾರಿಯ ಇಂಡೆಂಟ್ ಸಂಖ್ಯೆ	ಬದಲಾಯಿತ ಇಂಡೆಂಟ್
1)	PWD/2025-26/RD/WORK_INDENT33375	PWD/2025-26/RD/WORK_INDENT33732

ಡಿಐಪಿಆರ್/ಬಳ್ಳಾರಿ/1035/ಕೆಎಸ್‌ಎಂಸಿಎ/2025-26

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರವರ ಕಛೇರಿ. ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್
ತಾ: ಗಂಗಾವತಿ ಜಿ:ಕೊಪ್ಪಳ

ಸಂ:ಕಾನಿಅ/ಕನೀನಿನಿ/ನಂ.2ಕಾವಿವಕ್ಯಾಂ/ತಾಂಶಾ/ಸಇ-4/ಟೆಂಡರ್/2025-26/1577 ದಿ:20-02-2026

ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್ ಕಛೇರಿಯಿಂದ ಕರ್ನಾಟಕ ಲೋಕೊಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್ https://kppp.karnataka.gov.in ಮುಖಾಂತರ ಈ ವಿಭಾಗದಡಿ ಬರುವ Indent No:KNNL/2025-26/BR/WORK_INDENT3970 ಕಾಮಗಾರಿಯ ಶೇಕಡವಾರು ಟೆಂಡರನ್ನು ಎರಡು ಲಕೋಟೆಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿಗಳ ಇನ್ನು ಇತರೆ ಹೆಚ್ಚಿನ ವಿವರಗಳನ್ನು https://kppp.karnataka.gov.in ಜಾಲದಿಂದ ಪಡೆಯಬಹುದು. ಪೂರ್ವ ಬಿಡ್ ಸಭೆಯನ್ನು ಕಾರ್ಯಪಾಲಕ ಅಭಿಯಂತರರು ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿಕ್ಯಾಂಪ್ ಕಛೇರಿಯಲ್ಲಿ ದಿನಾಂಕ: **25-02-2026** ರಂದು ಬೆಳಿಗ್ಗೆ 11:00 ಘಂಟೆಗೆ ನಿರ್ವಹಿಸಲಾಗುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **09-03-2026** ರ ಮಧ್ಯಾಹ್ನ 4:30 ಘಂಟೆಯವರೆಗೆ ಮತ್ತು ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: **11-03-2026** ರಂದು ಬೆಳಿಗ್ಗೆ 10:30 ಘಂಟೆಗೆ ಮತ್ತು ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: **13-03-2026** ರಂದು ಬೆಳಿಗ್ಗೆ 10:30 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದೆಂದು ನಿಗದಿಪಡಿಸಲಾಗಿರುತ್ತದೆ. ಟೆಂಡರನ್ನು ಯಾವುದೆ ಸಂದರ್ಭದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್
ತಾ: ಗಂಗಾವತಿ ಜಿ: ಕೊಪ್ಪಳ

ಡಿಐಪಿಆರ್/ಕೊಪ್ಪಳ/702/ಕೆಎಸ್‌ಎಂಸಿಎ/2025-26

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025-26 ದಿನಾಂಕ: 20-02-2026

ಅಲ್ಪಾವಧಿ / ಇ-ಟೆಂಡರ್ ಅಧಿಸೂಚನೆ

ಉಲ್ಲೇಖ : ಜಾಹಿರಾತು ನಂ:-1119 ದಿನಾಂಕ:- 21-01-2026

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್ 2025-26ನೇ ಸಾಲಿನ 15ನೇ ಹಣಕಾಸು ಯೋಜನೆ ಹಾಗೂ ಸನ್ 2025-26ನೇ ಸಾಲಿನ ವಾರ್ಡ ವಾರು ಅನುದಾನ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ **(SC)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 1) ಇಂಡೆಂಟ್ ನಂ-**55538** ರೂ. **16.50**ಲಕ್ಷ, 2) ಇಂಡೆಂಟ್ ನಂ-**55534** ರೂ. **18.50**ಲಕ್ಷ, 3) ಇಂಡೆಂಟ್ ನಂ- **55552** ರೂ. **6.10**ಲಕ್ಷ, 4) ಇಂಡೆಂಟ್ ನಂ-**55465** ರೂ. **5.75**ಲಕ್ಷ, 5) ಇಂಡೆಂಟ್ ನಂ-**53181** ರೂ. **11.09**ಲಕ್ಷ.

ಪರಿಶಿಷ್ಟ ಪಂಗಡದ **(ST)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 6) ಇಂಡೆಂಟ್ ನಂ-**55562** ರೂ. **30.00**ಲಕ್ಷ, 7) ಇಂಡೆಂಟ್ ನಂ-**55548** ರೂ. **4.00**ಲಕ್ಷ, 8) ಇಂಡೆಂಟ್ ನಂ-**42588** ರೂ. **80.00**ಲಕ್ಷ

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 9) ಇಂಡೆಂಟ್ ನಂ-**55546** ರೂ. **25.00**ಲಕ್ಷ

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 10) ಇಂಡೆಂಟ್ ನಂ-**55521** ರೂ. **2.96**ಲಕ್ಷ, 11) ಇಂಡೆಂಟ್ ನಂ-**55547** ರೂ. **12.00**ಲಕ್ಷ, 12) ಇಂಡೆಂಟ್ ನಂ-**55394** ರೂ. **20.00**ಲಕ್ಷ, 13) ಇಂಡೆಂಟ್ ನಂ-**53182** ರೂ. **4.00**ಲಕ್ಷ, 14) ಇಂಡೆಂಟ್ ನಂ-**54695** ರೂ. **5.10**ಲಕ್ಷ.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 15) ಇಂಡೆಂಟ್ ನಂ-**55404** ರೂ. **7.00**ಲಕ್ಷ, 16) ಇಂಡೆಂಟ್ ನಂ-**55256** ರೂ. **12.58**ಲಕ್ಷ, 17) ಇಂಡೆಂಟ್ ನಂ-**55255** ರೂ. **4.45**ಲಕ್ಷ, 18) ಇಂಡೆಂಟ್ ನಂ-**54368** ರೂ. **21.00**ಲಕ್ಷ, 19) ಇಂಡೆಂಟ್ ನಂ-**54619** ರೂ. **16.45**ಲಕ್ಷ, 20) ಇಂಡೆಂಟ್ ನಂ-**55257** ರೂ. **22.82**ಲಕ್ಷ, 21) ಇಂಡೆಂಟ್ ನಂ-**55258** ರೂ. **12.42**ಲಕ್ಷ, 22) ಇಂಡೆಂಟ್ ನಂ-**55571** ರೂ. **44.00**ಲಕ್ಷ, 23) ಇಂಡೆಂಟ್ ನಂ-**55557** ರೂ. **28.00**ಲಕ್ಷ, 24) ಇಂಡೆಂಟ್ ನಂ-**55559** ರೂ. **19.00**ಲಕ್ಷ, 25) ಇಂಡೆಂಟ್ ನಂ-**55554** ರೂ. **30.00**ಲಕ್ಷ, 26) ಇಂಡೆಂಟ್ ನಂ-**55403** ರೂ. **10.00**ಲಕ್ಷ, 27) ಇಂಡೆಂಟ್ ನಂ-**55496** ರೂ. **17.10**ಲಕ್ಷ, 28) ಇಂಡೆಂಟ್ ನಂ- **SE7354** ರೂ. **14.75**ಲಕ್ಷ

ಮರು ಕರೆ ಕಾಮಗಾರಿ

ಪರಿಶಿಷ್ಟ ಜಾತಿ **(SC)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 29) ಇಂಡೆಂಟ್ ನಂ-**52872** ರೂ. **15.00**ಲಕ್ಷ (2ನೇ ಕರೆ), 30) ಇಂಡೆಂಟ್ ನಂ-**52387** ರೂ. **3.10**ಲಕ್ಷ (2ನೇ ಕರೆ), 31) ಇಂಡೆಂಟ್ ನಂ-**53504** ರೂ. **7.70**ಲಕ್ಷ (2ನೇ ಕರೆ), 32) ಇಂಡೆಂಟ್ ನಂ-**53963** ರೂ. **6.90**ಲಕ್ಷ (2ನೇ ಕರೆ), 33) ಇಂಡೆಂಟ್ ನಂ-**54176** ರೂ. **10.00**ಲಕ್ಷ (2ನೇ ಕರೆ), 34) ಇಂಡೆಂಟ್ ನಂ-**54259** ರೂ. **12.31**ಲಕ್ಷ (2ನೇ ಕರೆ)

ಪರಿಶಿಷ್ಟ ಪಂಗಡದ **(ST)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 35) ಇಂಡೆಂಟ್ ನಂ-**52870** ರೂ. **4.13**ಲಕ್ಷ (2ನೇ ಕರೆ), 36) ಇಂಡೆಂಟ್ ನಂ-**52391** ರೂ. **13.25**ಲಕ್ಷ (2ನೇ ಕರೆ), 37) ಇಂಡೆಂಟ್ ನಂ-**52868** ರೂ. **8.60**ಲಕ್ಷ (2ನೇ ಕರೆ), 38) ಇಂಡೆಂಟ್ ನಂ-**54260** ರೂ. **7.80**ಲಕ್ಷ (2ನೇ ಕರೆ)

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 39) ಇಂಡೆಂಟ್ ನಂ-**53042** ರೂ. **10.00**ಲಕ್ಷ (2ನೇ ಕರೆ),

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 40) ಇಂಡೆಂಟ್ ನಂ-**53039** ರೂ. **24.00**ಲಕ್ಷ (2ನೇ ಕರೆ), 41) ಇಂಡೆಂಟ್ ನಂ-**53453** ರೂ. **25.00**ಲಕ್ಷ (2ನೇ ಕರೆ), 42) ಇಂಡೆಂಟ್ ನಂ-**52389** ರೂ. **6.00**ಲಕ್ಷ (2ನೇ ಕರೆ), 43) ಇಂಡೆಂಟ್ ನಂ-**52880** ರೂ. **18.20**ಲಕ್ಷ (2ನೇ ಕರೆ), 44) ಇಂಡೆಂಟ್ ನಂ-**53982** ರೂ. **7.00**ಲಕ್ಷ (2ನೇ ಕರೆ), 45) ಇಂಡೆಂಟ್ ನಂ-**53984** ರೂ. **2.35**ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 46) ಇಂಡೆಂಟ್ ನಂ-**53040** ರೂ. **21.60**ಲಕ್ಷ (2ನೇ ಕರೆ), 47) ಇಂಡೆಂಟ್ ನಂ-**53041** ರೂ. **5.06**ಲಕ್ಷ (2ನೇ ಕರೆ), 48) ಇಂಡೆಂಟ್ ನಂ-**53263** ರೂ. **16.00**ಲಕ್ಷ (2ನೇ ಕರೆ), 49) ಇಂಡೆಂಟ್ ನಂ-**51425** ರೂ. **4.90**ಲಕ್ಷ (3ನೇ ಕರೆ), 50) ಇಂಡೆಂಟ್ ನಂ-**51128** ರೂ. **10.00**ಲಕ್ಷ (3ನೇ ಕರೆ), 51) ಇಂಡೆಂಟ್ ನಂ-**52224** ರೂ. **10.00**ಲಕ್ಷ (3ನೇ ಕರೆ), 52) ಇಂಡೆಂಟ್ ನಂ-**52220** ರೂ. **10.00**ಲಕ್ಷ (3ನೇ ಕರೆ), 53) ಇಂಡೆಂಟ್ ನಂ-**51582** ರೂ. **16.47**ಲಕ್ಷ (3ನೇ ಕರೆ), 54) ಇಂಡೆಂಟ್ ನಂ-**48667** ರೂ. **12.00**ಲಕ್ಷ (3ನೇ ಕರೆ), 55) ಇಂಡೆಂಟ್ ನಂ-**52281** ರೂ. **4.00**ಲಕ್ಷ (3ನೇ ಕರೆ), 56) ಇಂಡೆಂಟ್ ನಂ-**44165** ರೂ. **5.00**ಲಕ್ಷ (5ನೇ ಕರೆ), 57) ಇಂಡೆಂಟ್ ನಂ-**39194** ರೂ. **6.00**ಲಕ್ಷ (5ನೇ ಕರೆ), 58) ಇಂಡೆಂಟ್ ನಂ-**43491** ರೂ. **5.40**ಲಕ್ಷ (5ನೇ ಕರೆ), 59) ಇಂಡೆಂಟ್ ನಂ-**49588** ರೂ. **6.85**ಲಕ್ಷ (5ನೇ ಕರೆ), 60) ಇಂಡೆಂಟ್ ನಂ-**48813** ರೂ. **25.00**ಲಕ್ಷ (5ನೇ ಕರೆ), 61) ಇಂಡೆಂಟ್ ನಂ-**44540** ರೂ. **6.45**ಲಕ್ಷ (7ನೇ ಕರೆ), 62) ಇಂಡೆಂಟ್ ನಂ-**44538** ರೂ. **6.45**ಲಕ್ಷ (7ನೇ ಕರೆ), 63) ಇಂಡೆಂಟ್ ನಂ-**48033** ರೂ. **32.00**ಲಕ್ಷ (2ನೇ ಕರೆ), 64) ಇಂಡೆಂಟ್ ನಂ-**42611** ರೂ. **55.00**ಲಕ್ಷ (4ನೇ ಕರೆ), 65) ಇಂಡೆಂಟ್ ನಂ-**50157** ರೂ. **7.60**ಲಕ್ಷ (3ನೇ ಕರೆ), 66) ಇಂಡೆಂಟ್ ನಂ-**44230** ರೂ. **8.95**ಲಕ್ಷ (4ನೇ ಕರೆ), 67) ಇಂಡೆಂಟ್ ನಂ-**46141** ರೂ. **5.00**ಲಕ್ಷ (5ನೇ ಕರೆ), 68) ಇಂಡೆಂಟ್ ನಂ-**37838** ರೂ. **4.00**ಲಕ್ಷ (6ನೇ ಕರೆ), 69) ಇಂಡೆಂಟ್ ನಂ-**44536** ರೂ. **6.45**ಲಕ್ಷ (6ನೇ ಕರೆ), 70) ಇಂಡೆಂಟ್ ನಂ-**46020** ರೂ. **18.00**ಲಕ್ಷ (6ನೇ ಕರೆ), 71) ಇಂಡೆಂಟ್ ನಂ-**45540** ರೂ. **17.60**ಲಕ್ಷ (6ನೇ ಕರೆ), 72) ಇಂಡೆಂಟ್ ನಂ-**45514** ರೂ. **8.20**ಲಕ್ಷ (6ನೇ ಕರೆ), 73) ಇಂಡೆಂಟ್ ನಂ-**44209** ರೂ. **3.75**ಲಕ್ಷ (6ನೇ ಕರೆ), 74) ಇಂಡೆಂಟ್ ನಂ-**28054** ರೂ. **49.10**ಲಕ್ಷ (5ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: **0836:2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ : **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ: **23-02-2026** ಪಡೆಯಬಹುದಾಗಿದೆ.

ಕ್ರ ಸಂ 08, 10 ರಿಂದ 12 27, 28 39 ರಿಂದ 41 65 ರಿಂದ 74ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 04-03-2026 ರಂದು ಸಾಯಂಕಾಲ 4.00 ಗಂಟೆಯವರೆಗೆ.

ಕ್ರ ಸಂ 08, 10 ರಿಂದ 12 27, 28 39 ರಿಂದ 41 65 ರಿಂದ 74ರ ಟೆಂಡರ್ ತೆರೆಯುವ ದಿನಾಂಕ: 05-03-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು.

ಕ್ರ ಸಂ 08ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 09-03-2026 ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಕ್ರ ಸಂ 01 ರಿಂದ 07, 09 13 ರಿಂದ 26, 29 ರಿಂದ 38 42 ರಿಂದ 64ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 10-03-2026 ರಂದು ಸಾಯಂಕಾಲ 4.00 ಗಂಟೆಯವರೆಗೆ

ಕ್ರ ಸಂ 01 ರಿಂದ 07, 09 13 ರಿಂದ 26, 29 ರಿಂದ 38 42 ರಿಂದ 64ರ ಟೆಂಡರ್ ತೆರೆಯುವ ದಿನಾಂಕ: 11-03-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು

ಕ್ರ ಸಂ 64ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 16-03-2026 ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/1267/ದೇಶಪಾಂಡೆಪಬ್ಲಿಸಿಟಿ/2025-26

ನಗರಸಭಾ ಕಾರ್ಯಾಲಯ ಹೊಸಪೇಟೆ.

ಕ್ರಸಂ:ನಸಹೊ/ತಾಂತ್ರಿಕ/ಕಾಮಗಾ/ನಗರಸಭೆ ನಿಧಿ/ ಟೆಂಡರ್/2025-26. ದಿನಾಂಕ:20-02-2026

ಟೆಂಡರಿಗಾಗಿಆಹ್ವಾನ (ಐ.ಎಫ್.ಟಿ.) ಪ್ರಕಟಣೆ(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ)

2025-26ನೇ ಸಾಲಿನ ನಗರಸಭೆ ನಿಧಿ ಅನುದಾನದ ಅಡಿಯಲ್ಲಿ ಈ ಕೆಳಗಿನ ಕೆಲಸಗಳಿಗಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ (2020-2025 ನೇ ಸಾಲಿನಲ್ಲಿ ನೊಂದಾಯಿತ) ಸೂಕ್ತ ದರ್ಜೆಯಲ್ಲಿ ನೊಂದಾಯಿತ ಅರ್ಹಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್‌ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು**www.kppp.karnataka.govt.in**ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ-ಪ್ರೋಕ್ಯೂರ್‌ಮೆಂಟನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1)ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **06-03-2026ಸಂಜೆ 5.00 ಗಂಟೆಗೆ**
2)ಟೆಂಡರ್‌ಗಳನ್ನು ತೆರೆಯುವ ದಿನಾಂಕ: **07-03-2026 ಸಂಜೆ 5.30 ಗಂಟೆಗೆ**
3)ಟೆಂಡರ್‌ಗಳನ್ನು ತೆರೆಯುವ ಸ್ಥಳ: **ನಗರಸಭೆ, ಹೊಸಪೇಟೆ.**

ಕ್ರ ಸಂ	ಪ್ಯಾಕೇಜ್ ಸಂಖ್ಯೆ	ಇಂಡೆಂಟ್ ನಂಬರ್	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
		2025-26ನೇ ಸಾಲಿನ ನಗರಸಭೆ ನಿಧಿ	
1	-	DMA/2025-26/EL/WORK_INDENT53610	8.52
2	-	DMA/2025-26/EL/WORK_INDENT55550	5.40

ಸಹಿ/-ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2025-26/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/546

ಸಹಿ/-ಪೌರಾಯುಕ್ತರು, ನಗರಸಭೆ ಹೊಸಪೇಟೆ.

ಕರ್ನಾಟಕ ಸರಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿಗಳ ಕಾರ್ಯಾಲಯ ಕಲಬುರಗಿ.

e-mail : dlokalaburgi.hfws@karnatak.gov.in, dlogulbarga@gmail.com

REF NO: DHFWS/2025-26/IND1937/Call-2 ದಿನಾಂಕ : 21-02-2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ ::

5903

ಎಡದಿಂದ ಬಲಕ್ಕೆ
2.ಅರಿ-ಮರ ಒಳಗೊಂಡ ಅನುಮಾನ (5)
5.ಮಂಚದ ಕಡೆಯಲ್ಲಿ ಅಂಗ ಸೇರಿದೆ (3)
6.ಮೊಳಕೆಯೊಡೆಯುವಿಕೆ-ಚಿಗುರು (3)
7.ಕಂಡ ಕನಸು ದಿಟವಾಗುವಿಕೆ (4)
9.ದಿನದ ಅಶುಭ ಸಮಯ (4)
10.ಸೊಗಸಿನಿಂದ ಕೂಡಿದ್ದು-ಸುಂದರವಾದುದು (4)
11.ಅಜ್ಞಾನವೆಂಬ ಸ್ವಭಾವ ತಿರುಗಿದೆ (4)
13. ಗಾಡಿಯ ನಡುವೆ ಇಂದ್ರಜಾಲ ವಿದ್ಯೆಯಿದೆ (3)
15.ಆಶೀರ್ವಾದ ಸಂಕಲ್ಪ (3)
16.ಕಣ್ತಪ್ಪಿಸಿ ತಿರುಗಾಡು (5)

ಮೇಲಿನಿಂದ ಕೆಳಕ್ಕೆ
1.ಕಷ್ಟಕಾಲಕ್ಕೆ ಇರಲೆಂದು ತೆಗೆದಿಟ್ಟ ಹಣ (4)
2.ಅಂಗದನು ಏರಿದ ಬೆಟ್ಟ (2)
3.ಹತೋಟಿ ತಲೆಕೆಳಗಾಗಿದೆ (2)
4.ಬಲದ ನಡುವೆ ಕ್ಷಾಮವಡಗಿದೆ (4)
8.ಬಟ್ಟೆಯ ತಾತ್ಕಾಲಿಕ ವಸತಿ (3)
9.ಗಟ್ಟಿಯಾದ ಕೂಗು ಎಂಬರ್ಥದ ರಾಕ್ಷಸ ರಾಜ (3)
10.ಮೀನು ಸಂಗ್ರಹಣೆಯ ಆಗರ (4)
12.ಬುದ್ಧಿ ವಿಕಲ್ಪವಾಗು (4)
14.ತಕ್ಕಡಿಯಲ್ಲಿ ಕುದುರೆ ಜೀನನ್ನು ಉಲ್ಟಾ ಇಟ್ಟಿದ್ದಾರೆ (2)
15.ಹರಸು ಎಂದು ಬೇಡಿಕೊಂಡದ್ದು ಈ ಆಕಳನ್ನು (2)

5902 ಉತ್ತರ

ಎಡದಿಂದ ಬಲಕ್ಕೆ:
2.ಮಹಾಭಾರತ
5.ಶಿಬಿರ 7.ಅಂಬರ
9.ತಾಂಡವ 11.ಕಡೆಗಾಲ
13.ವಿನಾಯಿಸು
16.ನಗೆಗಾರ 17.ಕಾಕಸ್ನಾನ

ಮೇಲಿನಿಂದ ಕೆಳಕ್ಕೆ:
1.ಕಾಶಿ 2.ಮರ 3.ಅಂತ
4.ಧೀರ 6.ಬಿಡುಗಡೆ
8.ಬಡಪಾಯಿ 9.ತಾಂಬೂಲ
10.ವಿಭವ 11.ಕಡಲತೀರ
12.ಗಾಗುಬ್ಬಿಗೆ
14.ನಾಶಕಾರಕ
15.ಸುರಸಂತಾನ

ಕಿರುಸುದ್ದಿ


ಜಮ್ಮು-ಕಾಶ್ಮೀರ ತಂಡದ ಆಟಗಾರರಿಂದ ಅಭ್ಯಾಸ



◆ **ಹುಬ್ಬಳ್ಳಿ:** ನಗರದಲ್ಲಿ ವಾಸ್ತವ್ಯ ಹೂಡಿದ ಜಮ್ಮು ಹಾಗೂ ಕಾಶ್ಮೀರ ತಂಡದ ಆಟಗಾರರು ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶನಿವಾರ ಅಭ್ಯಾಸ ನಡೆಸಿದರು. ಇನ್ನೂ ಕರ್ನಾಟಕ ತಂಡವೂ ಭಾನುವಾರ ನಗರಕ್ಕೆ ಆಗಮಿಸಲಿದ್ದು, ಮಧ್ಯಾಹ್ನ ಅಭ್ಯಾಸ ನಡೆಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಕ್ರೀಡಾಂಗಣಕ್ಕೆ ಬಂದ ಆಟಗಾರರು, ಎರಡು ಗಂಟೆ ತಾಲೀಮು ನಡೆಸಿದರು. ನಂತರ ಪಿಚ್ ವೀಕ್ಷಣೆ ಮಾಡಿದರು. ಕೋಚ್ ಅಜಯ್ ಶರ್ಮಾ ಮಾರ್ಗದರ್ಶನದಲ್ಲಿ ಆಟಗಾರರು ಸ್ಥಳೀಯ ಚಾಂಪಿಯನ್ಸ್ ನೆಟ್ ಕ್ರಿಕೆಟ್ ಅಕಾಡೆಮಿ, ಎಸ್‌ಡಿಎಂ ಕ್ರಿಕೆಟ್ ಅಕಾಡೆಮಿ ತಂಡದ ಆಟಗಾರರ ಎಸೆತಗಳನ್ನು ಎದುರಿಸಿದರು. ಕೆಲ ಹೊತ್ತು ಥ್ರೋಡೌನ್ ಎಸೆತಗಳನ್ನು ಆಡಿದರು. ಆರಂಭ ಆಟಗಾರರಾದ ಶುಭಂ ಖಜೂರಿಯಾ, ಯಾವರ್ ಹಸನ್, ವಿಕೆಟ್ ಕೀಪರ್ ಕನ್ಹಯ್ಯ ವಾಧ್ವಾನ್, ಶುಭಂ ಪುಂಡಿರ್, ದಿಕ್ಷಾಂತ್ ಕುಂಡಾಲ್ ಸೇರಿ ಕೆಲ ಆಟಗಾರರು ಮಾತ್ರ ಅಭ್ಯಾಸದಲ್ಲಿ ಪಾಲ್ಗೊಂಡರು. ತಂಡದ ನಾಯಕ ಪರಾಸ್ ಡೋಗ್ರಾ, ಅಬ್ದುಲ್ ಸಮದ್, ಅಕಿಬ್ ನಬಿ ಇತರರು ಅಭ್ಯಾಸಕ್ಕೆ ಬರಲಿಲ್ಲ.

ಬಾಗಲಕೋಟೆ ಘಟನೆ ರಾಜಕೀಯ ಪ್ರೇರಿತ: ತಿಮ್ಮಾಪೂರ

◆ **ರಬಕವಿ-ಬನಹಟ್ಟಿ:** ಶಿವಾಜಿ ಜಯಂತಿ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಪ್ರಕರಣ ರಾಜಕೀಯ ಪ್ರೇರಿತದಿಂದ ಕೂಡಿದೆಯೆಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ಹೇಳಿದರು.



ಬನಹಟ್ಟಿಯಲ್ಲಿ ಕಾರ್ಯಕ್ರಮವೊಂದರಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರೇ ತಪ್ಪು ಮಾಡಲಿ ಅಂಥವರಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿ. ಈ ಪ್ರಕರಣದಲ್ಲಿ ಭಾಗಿಯಾದವರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಮೇಲ್ನೋಟಕ್ಕೆ ಇದೊಂದು ರಾಜಕೀಯ ಪ್ರೇರಿತವೆಂಬುದಾಗಿ ತಿಮ್ಮಾಪೂರ ಸ್ಪಷ್ಟಪಡಿಸಿದರು.

ಸವದಿ ಮಾತಾಡ್ಲಿ, ನಾವ್ ಕೆಲ್ಸಾ ಮಾಡ್ತೀವಿ: ಈಚೆಗೆ ತೇರದಾಳ ವಿಧಾನಸಭಾ ಕ್ಷೇತ್ರದಲ್ಲಿ ಅನುದಾನ ತರುವಲ್ಲಿ ರಾಜಕೀಯ ಕೆಸರೆರಚಾಟ ಬಲು ಜೋರಾಗಿದೆ. ಮಹಿಷವಾಡಗಿ ಸೇತುವೆ ಕಾಮಗಾರಿಗೆ ಹೆಚ್ಚುವರಿ 10 ಕೋಟಿ ರೂ.ಗಳನ್ನು ಒದಗಿಸುವಲ್ಲಿ ನಾನೂ ಶ್ರಮಿಸಿರುವುದಾಗಿ ಹೇಳಿರುವ ಸಿದ್ದು ಕೊಣ್ಣೂರ ಪರ ಬ್ಯಾಟಿಂಗ್ ಮಾಡಿದ ಸಚಿವ ಆರ್.ಬಿ. ತಿಮ್ಮಾಪೂರ ಮಾತನಾಡಿ, ಸವದಿಯವರು ಹೇಳಿಕೆ ನೀಡುತ್ತಾ ಹೋಗಲಿ ನಾವೂ ಹಾಗೂ ನಮ್ಮ ನೇತೃತ್ವದ ಕ್ಷೇತ್ರದ ನಾಯಕರುಗಳು ಕೆಲಸ ಮಾಡುತ್ತಲೇ ಇರುತ್ತೇವೆಯೆಂದು ತೀಕ್ಷ್ಣವಾಗಿ ಸವದಿ ಹೇಳಿಕೆಗೆ ಪ್ರತಿಕ್ರಿಯಿಸಿದರು. ಇದೇ ಸಂದರ್ಭ ದಿ.ದೇವರಾಜ ಅರಸು ನಿಗಮದಿಂದ 150 ಫಲಾನುಭವಿಗಳಿಗೆ ಹೊಲಿಗೆ ಯಂತ್ರ ನೀಡುವದರಲ್ಲಿಯೂ ನಿಗಮದ ಅಧ್ಯಕ್ಷರು ಒದಗಿಸಿದ್ದಾರೆ. ನೈಜ ಫಲಾನುಭವಿಗಳಿಗೆ ಅರ್ಹ ವಸ್ತುಗಳನ್ನು ನೀಡುವದು ತಪ್ಪೇ? ಶಾಸಕರಾದವರು ಇತರೆ ಫಲಾನುಭವಿಗಳಿಗೂ ಒದಗಿಸುವ ಕಾರ್ಯ ನಿಗಮದ ಅಧ್ಯಕ್ಷರು ಮಾಡಿರುವುದರಲ್ಲಿ ತಪ್ಪೇನು? ಎಂದು ವ್ಯಾಖ್ಯಾನಿಸಿದರು.

ಇಬ್ಬರ ಬಂಧನ

◆ **ಭಟ್ಕಳ:** ಪಟ್ಟಣದ ವಸತಿಗೃಹವೊಂದರ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸೇವನೆ ಮಾಡಿ ತೂರಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ಯಲ್ವಡಿಕವೂರ ಪುರವರ್ಗ ನಿವಾಸಿ ಅಬ್ದುಲ್ ಜಬಾಲಿ ಮಹ್ಮದ ಸಲಾವುದ್ದೀನ್ (27) ಹಾಗೂ ಬೆಂಗಳೂರಿನ ಆರ್.ಟಿ.ನಗರ ನಿವಾಸಿ ಮಹ್ಮಮ ಮುಯೀನ್ ಸಿರಾಜುದ್ದೀನ್ (25) ಬಂಧಿತ ಆರೋಪಿಗಳು. ಇಬ್ಬರನ್ನು ವೈದ್ಯಕೀಯ ತಪಾಷಣೆ ನಡೆಸಿದ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಧ್ಯರಾತ್ರಿ ಕಾರು ತಡೆದು ದರೋಡೆ

◆ **ಚನ್ನಮ್ಮನ ಕಿತ್ತೂರು:** ಕಿತ್ತೂರು ಅಳ್ನಾವರ ರಾಜ್ಯ ಹೆದ್ದಾರಿಯಲ್ಲಿ ಮಧ್ಯರಾತ್ರಿ ದ್ವಿಚಕ್ರ ವಾಹನದಲ್ಲಿ ಬಂದ 8 ಜನರ ಗುಂಪು ಕಾರು ತಡೆದು ಬೆದರಿಕೆ ಹಾಕಿ 15 ಗ್ರಾ. ತೂಕದ ರೂ. 2ಲಕ್ಷ ಮೌಲ್ಯದ ಬಂಗಾರದ ಆಭರಣ ದರೋಡೆ ಮಾಡಿಕೊಂಡು ಪರಾರಿಯಾಗಿರುವ ಘಟನೆ ಶನಿವಾರ ಕಿತ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮುಂಬೈದಿಂದ ಕಂಪನಿಯ ಕೆಲಸಕ್ಕಾಗಿ ಮಂಗಳೂರಿನ ಸುರತ್ಕಲಗೆ ತೆರಳುತ್ತಿದ್ದಾಗ ಮುಂಬೈ ನಿವಾಸಿ ವೈಭವ ಮೋಹನ ವ್ಯವಹಾರೆ ಕಾರಿನಲ್ಲಿ ತೆರಳುತ್ತಿದ್ದಾಗ ತಾಲೂಕಿನ ಕುಲವಳ್ಳಿ ಗ್ರಾಮದ ಹತ್ತಿರದ ಕಿತ್ತೂರು ಅಳ್ನಾವರ ರಾಜ್ಯ ಹೆದ್ದಾರಿಯಲ್ಲಿ ಮಧ್ಯರಾತ್ರಿ ಕಾರು ಅಡಗಟ್ಟಿ ದ್ವಿಚಕ್ರ ವಾಹನಗಳಲ್ಲಿ ಬಂದ ಅಪರಿಚಿತ 8 ಜನರ ಗುಂಪು ಕಾರು ತಡೆದು ಬೆದರಿಕೆ ಹಾಕಿ 15 ಗ್ರಾಮ ತೂಕದ ಬಂಗಾರದ ಆಭರಣ ಮತ್ತು ಕಾರಿಗೆ ಕಲ್ಲಿನಿಂದ ಹಾನಿ ಮಾಡಿ ದರೋಡೆ ಮಾಡಿಕೊಂಡು ಪರಾರಿಯಾಗಿದ್ದಾರೆ. ಆರೋಪಿಗಳ ಪತ್ತೆಗಾಗಿ ಪೊಲೀಸ್ ತನಿಖೆ ನಡೆಯುತ್ತಿದೆ.

ಹಳೆ ವಿದ್ಯಾರ್ಥಿಗಳ ಸಮಾವೇಶ | ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅಭಿಪ್ರಾಯ

ವಿಕಸಿತ ಭಾರತಕ್ಕೆ ವಿದ್ಯಾರ್ಥಿಗಳ ಪಾತ್ರ ಮುಖ್ಯ

◆ **ಕಲಬುರಗಿ:** ಯುವ ವಿದ್ಯಾರ್ಥಿಗಳ ಸಮೂಹಗಳ ಕೊಡುಗೆ ಭಾರತವನ್ನು ವಿಕಸಿತ ರಾಷ್ಟ್ರವನ್ನಾಗಿ ರೂಪಿಸುವ ಕನಸಿಗೆ ಯುವ ವಿದ್ಯಾರ್ಥಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ದೇಶದ ಭವಿಷ್ಯವಾದ ಯುವಶಕ್ತಿಯ ವಿದ್ಯಾಭ್ಯಾಸ, ಸಂಶೋಧನಾ ಮನೋಭಾವ ಮತ್ತು ಸಾಮಾಜಿಕ ಹೊಣೆಗಾರಿಕೆ ರಾಷ್ಟ್ರ ನಿರ್ಮಾಣದ ಭದ್ರ ಬುನಾದಿಯಾಗಿವೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಶನಿವಾರ ನಗರದ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಪಿಡಿಎ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಮಾವೇಶ-2026ನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಕಸಿತ ಭಾರತ 2047 ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ತಂತ್ರಜ್ಞಾನ, ವಿಜ್ಞಾನ, ಕೃಷಿ ಮತ್ತು ಉದ್ಯಮಿತ್ವ ಕ್ಷೇತ್ರಗಳಲ್ಲಿ ಹೊಸ ಆವಿಷ್ಕಾರಗಳು ಮಾಡಬೇಕಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಸ್ಟಾರ್ಟ್‌ಅಪ್ ಸಂಸ್ಕೃತಿ, ಕೌಶಲ್ಯಾಭಿವೃದ್ಧಿ ಮತ್ತು ಸಾಮಾಜಿಕ ಸೇವೆಗಳಲ್ಲಿ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆ ದೇಶದ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗೆ ನೆರವಾಗುತ್ತಿದೆ.

ಪರಿಸರ ಸಂರಕ್ಷಣೆ, ಸ್ವಚ್ಛತೆ, ಡಿಜಿಟಲ್ ಶಿಕ್ಷಣ ಮತ್ತು ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಯುವ ಸಮೂಹ ಮುಂಚೂಣಿಯಲ್ಲಿ ನಿಲ್ಲುವ ಮೂಲಕ ಸಮಾನತೆ ಮತ್ತು ಸದೃಢತೆಯ ಭಾರತ ನಿರ್ಮಾಣ ಸಾಧ್ಯವಾಗುತ್ತದೆ ಎಂದರು.

ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರ: ಭಾರತವು ಜಾಗತಿಕ ಆರ್ಥಿಕ ವೇದಿಕೆಯಲ್ಲಿ ತನ್ನ ಪ್ರಭಾವ ದಿನದಿಂದ ದಿನಕ್ಕೆ ಹೆಚ್ಚಿಸಿಕೊಂಡು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗುವ ದಿಕ್ಕಿನಲ್ಲಿ ಸಾಗುತ್ತಿದೆ. ಪ್ರಸ್ತುತ ಅಮೆರಿಕ ಮತ್ತು ಚೀನಾ ಬಳಿಕ ಭಾರತ ಮೂರನೇ ಸ್ಥಾನ ಸಾಧಿಸುವ ಸಾಧ್ಯತೆಗಳಿವೆ ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಉತ್ಪಾದನಾ ವಲಯ, ಸೇವಾ ಕ್ಷೇತ್ರ ಮತ್ತು ಡಿಜಿಟಲ್ ಆರ್ಥಿಕತೆಯಲ್ಲಿ ಕಂಡುಬರುವ ವೇಗದ ಬೆಳವಣಿಗೆ ಈ ಸಾಧನೆಗೆ ಪೂರಕವಾಗಿದೆ ಎಂದರು.



> ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಸಾವಿರಾರು ಎಂಜಿನಿಯರ್‌ಗಳನ್ನು ಸೃಷ್ಟಿಸಿದ ಸಂಸ್ಥೆ. ಗುಣಾತ್ಮಕ ಶಿಕ್ಷಣ ನೀಡಬೇಕೆಂಬ ದೂರದೃಷ್ಟಿಯಿಂದ ಸಂಸ್ಥೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. 1979ರಲ್ಲಿ ನಾನು ಸಹ ಇಲ್ಲಿಯೇ ಪದವಿ ಮುಗಿಸಿ, 1986ರಲ್ಲಿ ಎಂಜಿನಿಯರಿಂಗ್ ಮುಗಿಸಿದ್ದೇನೆ. ನಾವು ಕಲಿತ ಶಾಲೆ, ಕಾಲೇಜು ಮತ್ತು ಸಂಸ್ಥೆಗಳಿಗೆ ಚಿರಋಣಿ ಆಗಿರಬೇಕು. ಗುರು ಮತ್ತು ಶಿಕ್ಷಕರಿಗೆ ಸದಾ ಸ್ಮರಿಸಬೇಕು.
> ■ ಈಶ್ವರ್ ಖಂಡ್ರೆ, ಸಚಿವ

> ಗ್ಲೋಬಲ್ ಅಲ್ಯುಮ್ನಿ ಮೀಟ್ ಕಾರ್ಯಕ್ರಮ ಕೇವಲ ಸಂಸ್ಥೆಯ ಹೆಮ್ಮೆಯ ಪ್ರತಿಬಿಂಬವಲ್ಲ, ಪಿಡಿಎಎಸಿಇ ಪ್ರತಿನಿಧಿಸುವ ದೀರ್ಘಕಾಲದ ಸೇವಾ ಪರಂಪರೆಯ ಪ್ರತಿಫಲ. ಸಮಾಜ ಪರಿವರ್ತನೆಗೆ ಶಿಕ್ಷಣವೇ ಆಸ್ತಿ ಎಂಬ ಸಂದೇಶ ರವಾನಿಸಿ 11 ಪದವಿ ಕೋರ್ಸ್,10 ಸ್ನಾತಕೋತ್ತರ ಕೋರ್ಸ್ ಮತ್ತು 13 ಸಂಶೋಧನಾ ಕೇಂದ್ರಗಳೊಂದಿಗೆ ರಾಷ್ಟ್ರದ ಪರಿಣಿತ ಮಾನವ ಸಂಪನ್ಮೂಲ ನಿರ್ಮಾಣಕ್ಕೆ ಮಹತ್ತರ ಕೊಡುಗೆ ನೀಡಿದೆ.
> ■ ಶಶೀಲ್ ನಮೋಶಿ, ಅಧ್ಯಕ್ಷ ಹೆಚ್ಕೆಇ ಸಂಸ್ಥೆ

ಸಚಿವ ಶರಣಬಸಪ್ಪಾ ದರ್ಶನಾಪುರ ಮಾತನಾಡಿ, ಹಳೆಯವಿದ್ಯಾರ್ಥಿಗಳಸಮಾಗಮ ಇದೊಂದು ಒಳ್ಳೆಯ ಕೆಲಸವಾಗಿದೆ. ಬರುವಂತಹ ದಿನಗಳಲ್ಲಿ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡುವ ಮೂಲಕ ವಿದ್ಯಾರ್ಥಿಗಳಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕಾಗಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ಲೇಸ್ಮೆಂಟ್ ಸಿಕ್ಕಾಗ ಮಾತ್ರ ಸಂಸ್ಥೆಗೆ ಅನುಕೂಲವಾಗಲಿದ್ದು, ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ, ಕೌಶಲ್ಯ ತುಂಬುವಂತಾಗಲಿ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಹೋಗಬೇಕು ಎಂಬುದು ನಮ್ಮ ಕನಸಾಗಿದೆ ಎಂದರು.

ಡಾ.ಎಸ್.ಆರ್.ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರೀಮಿಯರ್ ಎನರ್ಜಿ ಸಂಸ್ಥಾಪಕ ಸುರೇಂದ್ರ ಪಾಲಸಿಂಗ ಸಲೂಜಾ, ಸಂಸ್ಥೆಯ ಅಧ್ಯಕ್ಷ ಶಶೀಲ್ ನಮೋಶಿ, ನಿವೃತ್ತ ಐಪಿಎಸ್ ಪೂರ್ವ ಡಿಜಿಪಿ ರಾಘವೇಂದ್ರ ಔರಾದ್ಕರ್, ಎಂಎಲ್ಸಿ ಸುನೀಲ್ ವಲ್ಲಾಪುರೆ, ಜಗದೇವ ಗುತ್ತೇದಾರ್, ವಿಜಯಕುಮಾರ್ ದೇಶಮುಖ್, ಉಪಾಧ್ಯಕ್ಷ ರಾಜಾ ಭೀಮಳ್ಳಿ, ಉದಯಕುಮಾರ್ ಚಿಂಚೋಳಿ, ಕಾರ್ಯದರ್ಶಿ ಕೈಲಾಸ ಪಾಟೀಲ್, ಅರುಣಕುಮಾರ್ ಪಾಟೀಲ್, ಡಾ.ಶರಣಬಸಪ್ಪ ಹರವಾಳ, ಅನಿಲ ಪಟ್ಟಣ, ಡಾ. ರಜನೀಶ್ ವಾಲಿ, ಡಾ. ಕಿರಣ ದೇಶಮುಖ್, ಮಾಜಿ ಸಂಸದ ಉಮೇಶ್ ಜಾಧವ್, ಶಾಸಕ ಬಸವರಾಜ ಮತ್ತಿಮಡು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶೃಂಗಸಭೆಯಲ್ಲಿ ಕಾಂಗ್ರೆಸ್ ವರ್ತನೆಗೆ ಕಾಗೇರಿ ಟೀಕೆ

◆ **ಕಾರವಾರ:** ಇಡೀ ಜಗತ್ತೇ ಇವತ್ತು ಭಾರತದತ್ತ ಮುಖ ಮಾಡಿ ನಿಂತಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತವು ಜಾಗತಿಕ ಕೃತಕಬುದ್ಧಿಮತ್ತೆ ಶೃಂಗಸಭೆಯನ್ನು ಆಯೋಜಿಸುವ ಮೂಲಕ ತಾಂತ್ರಿಕ ಲೋಕದ ಅಧಿಪತಿಯಾಗಿ ವಿಜೃಂಭಿಸುತ್ತಿರುವ ಸಂದರ್ಭದಲ್ಲಿ ನಮ್ಮ ಮನೆಯೊಳಗಿನ ವಿರೋಧಿಗಳಾದ ಕಾಂಗ್ರೆಸ್ಸಿಗರು ಈ ಶೃಂಗಸಭೆಯ ವಿರುದ್ಧ ಬೀದಿಗಿಳಿದು ಪ್ರತಿಭಟನೆ ಮಾಡುತ್ತಿರುವುದು ಅತ್ಯಂತ ಲಜ್ಜೆಗೆಟ್ಟ ಮತ್ತು ಅಸಹ್ಯಕರವಾದ ಕೆಲಸವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಟೀಕಿಸಿದ್ದಾರೆ.



ಈ ಕುರಿತಾಗಿ ಹೇಳಿಕೆ ನೀಡಿರುವ ಅವರು, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರು ಭಾರತವನ್ನು ಜಾಗತಿಕ ವೇದಿಕೆಯ 'ಕೇಂದ್ರ ಬಿಂದು' ಎಂದು ಬಣ್ಣಿಸಿದರೆ, ಯುಎನ್ ಮುಖ್ಯಸ್ಥ ಆಂಟೋನಿಯೊ ಗುಟೆರೆಸ್ ಅವರು ಭಾರತವನ್ನು 'ಗ್ಲೋಬಲ್ ಸೌತ್' ಅಂದರೆ ಅಭಿವೃದ್ಧಿಶೀಲ ರಾಷ್ಟ್ರಗಳ ಗಟ್ಟಿಯಾದ ಧ್ವನಿ ಎಂದು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಗೂಗಲ್ನ ಸುಂದರ್ ಪಿಚೈ ಮತ್ತು ಮೈಕ್ರೋಸಾಫ್ಟ್‌ನ ಬ್ರಾಡ್ ಸ್ಮಿತ್ ಅಂತಹ ವಿದೇಶಿ ದಿಗ್ಗಜರು ನಮ್ಮ ದೇಶದ ತಾಂತ್ರಿಕ ಕಸುವನ್ನು ಕಂಡು ಬೆರಗಾಗಿದ್ದಾರೆ. ಇಂತಹ ಹೆಮ್ಮೆಯ ಸಂದರ್ಭದಲ್ಲಿ ವಿಶ್ವದಮೂಲೆಮೂಲೆಯಿಂದನಾಯಕರು ಬಂದು ಭಾರತದ ಪ್ರಗತಿಯನ್ನು ಕೊಂಡಾಡುತ್ತಿದ್ದರೆ.

ಇಲ್ಲಿನ ಕಾಂಗ್ರೆಸ್ ಮಂದಿ ಮಾತ್ರ ಹೊಟ್ಟೆ ಕಿಚ್ಚಿನಿಂದ ದೇಶದ ಇಮೇಜ್‌ನ್ನು ಕೆಡಿಸಲು ಹವಣಿಸುತ್ತಿದ್ದಾರೆ. ಇದು ನೇರವಾದ 'ದೇಶದ್ರೋಹವಲ್ಲದೆ ಮತ್ತೇನೂ ಅಲ್ಲ, ವಿದೇಶದ ನೆಲದಲ್ಲಿ ನಿಂತು ನಮ್ಮ ದೇಶದ ಪ್ರಜಾಪ್ರಭುತ್ವಕ್ಕೆ ಮಸಿ ಬಳಿಯುವ ರಾಹುಲ್ ಗಾಂಧಿ ಅವರ ಈ 'ಮತಿಹೀನ' ಹಾಗೂ 'ರಾಷ್ಟ್ರಪ್ರೇಮವಿಲ್ಲದ' ವರ್ತನೆಗೆ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದಿದ್ದಾರೆ.

ಮೂರು ಹೋರಿಗಳ ರಕ್ಷಣೆ



◆ **ಯಲ್ಲಾಪುರ:** ಅಕ್ರಮವಾಗಿ ಕಸಾಯಿಖಾನೆಗೆ ಸಾಗಾಟ ಮಾಡುತ್ತಿದ್ದ ಮೂರು ದಷ್ಟಪುಷ್ಟ ಹೋರಿಗಳನ್ನು ಶನಿವಾರ ತಾಲೂಕಿನ ಗುಳ್ಳಾಪುರದ ಬಳಿ ರಕ್ಷಣೆ ಮಾಡಿದ್ದಾರೆ. ಮಹರಾಷ್ಟ್ರ ಪಾಸಿಂಗ್ ಲಾರಿಯಲ್ಲಿ ಈ ಹೋರಿಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿತ್ತು. ಈ ಮಾಹಿತಿ ಗೊತ್ತಾಗಿ ಗೋಭಕ್ತ ಸಂಜಯ್ ಪಿಳ್ಳೈ ಮತ್ತು ಅವರ ಗೋಪ್ರೇಮಿ ಮಿತ್ರರು ಸೇರಿ ಲಾರಿ ಚೇಸ್ ಮಾಡಿ ಹೋರಿಗಳನ್ನು ರಕ್ಷಣೆ ಮಾಡಿ ಪೊಲೀಸ್ ಸುಪರ್ದಿಗೆ ಒಪ್ಪಿಸಿದರು. ವಿಷಯ ತಿಳಿದ ತಕ್ಷಣ ಹರಿಪ್ರಕಾಶ ಕೋಣೆಮನೆ, ಪ್ರಸಾದ್ ಹೆಗಡೆ ಅವರ ಜೊತೆಗೂಡಿ ಪೊಲೀಸ್ ಠಾಣೆಗೆ ತೆರಳಿ ಈ ಬಗ್ಗೆ ಪೊಲೀಸ್ ಅಧಿಕಾರಿಗಳ ಜೊತೆ ಚರ್ಚಿಸಿ ಗೋಹಂತಕರ ಮೇಲೆ ಸೂಕ್ತ ಪ್ರಕರಣ ದಾಖಲಿಸಿ, ಗೋ ಸಂರಕ್ಷಣೆಗೆ ಅಗತ್ಯ ಕ್ರಮಕೈಗೊಳ್ಳಲು ಆಗ್ರಹಿಸಿದರು. ಪಿಎಸ್ಐ ರಾಜಶೇಖರ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದರು. ರಕ್ಷಿಸಿರುವ ಗೋವುಗಳ ಸಂರಕ್ಷಣೆಗೆ ಬಿಗಿ ಕ್ರಮದ ಭರವಸೆ ನೀಡಿದ್ದಾರೆ. ಮೂರು ಗೋವುಗಳು ಸ್ವರ್ಣವಲ್ಲಿ ಮಠ ನಿರ್ವಹಿಸುತ್ತಿರುವ ಕರಡೊಳ್ಳಿ ಗೋಶಾಲೆಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಂಕೋಲಾ-ಗೋಕರ್ಣ ಸಂಪರ್ಕಿಸುವ ಸೇತುವೆ: ಇಂದು ಸಿಎಂರಿಂದ ಉದ್ಘಾಟನೆ



◆ **ಅಂಕೋಲಾ:** ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ ಗಂಗಾವಳಿ ನದಿಗೆ ನಿರ್ಮಿಸಿರುವ ಅಂಕೋಲಾ ಗೋಕರ್ಣ ಸಂಪರ್ಕಿಸುವ ಸೇತುವೆಯ ಉದ್ಘಾಟನಾ ಕಾರ್ಯಕ್ರಮ ಇಂದು ಬೆಳಗ್ಗೆ 11 ಗಂಟೆಗೆ ಮಂಜಗುಣಿಯಲ್ಲಿ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇತುವೆ ಲೋಕಾರ್ಪಣೆಗೊಳಿಸಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮತ್ತು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರ ಘನ ಉಪಸ್ಥಿತಿ ಇರಲಿದೆ.

ಸೇತುವೆ ನಿರ್ಮಾಣದ ರೂವಾರಿ ಕಾರವಾರ ಅಂಕೋಲಾ ಕ್ಷೇತ್ರದ ಶಾಸಕ ಸತೀಶ ಸೈಲ್ ಅವರು ಅಧ್ಯಕ್ಷತೆ ವಹಿಸಲಿದ್ದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ ಜಾರಕಿಹೊಳಿ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ರುದ್ರಪ್ಪ ಪಾಟೀಲ್, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಚ್.ಸಿ.ಬಾಲಕೃಷ್ಣ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಕುಮಟಾ ಶಾಸಕ ದಿನಕರ ಶೆಟ್ಟಿ, ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ, ಶಿರಸಿ ಶಾಸಕ ಭೀಮಣ್ಣ ನಾಯ್ಕ, ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ, ವಿಧಾನ ಪರಿಷತ್ ಸದಸ್ಯರುಗಳಾದ ಎಸ್.ವಿ.ಸಂಕನೂರು, ಶಾಂತಾರಾಮ ಸಿದ್ದಿ, ಗಣಪತಿ ಉಳ್ವೇಕರ್, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ಐಶ್ವರ್ಯ ಮಹಾದೇವ್ ಮೊದಲಾದವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಅತ್ತೆ ಸಾಯಲೆಂದು ದೇವರಿಗೆ ಹರಕೆ!

◆ **ಮುಗಳಖೋಡ:** ಇವತ್ತಿನ ದಿನಗಳಲ್ಲಿ ಭಕ್ತರು ನಾನಾ ರೀತಿಯಲ್ಲಿ ಹಾಗೂ ವಿಚಿತ್ರ ಬೇಡಿಕೆಗಳನ್ನಿಟ್ಟು ದೇವರ ಮೊರೆ ಹೋಗುತ್ತಿರುವುದು ಕಂಡು ಬರುತ್ತಿವೆ. ಅಂತಹ ಘಟನೆಗಳ ಪೈಕಿ ಇತ್ತೀಚಿಗೆ ಮುಗಳಖೋಡ ಪಟ್ಟಣ ಸಮೀಪದ ಖಣದಾಳ ಗ್ರಾಮದಲ್ಲಿ ಫೆ.13ರಿಂದ 17ರವರೆಗೆ ನಡೆದ ಶ್ರೀ ಹುಲಿಕಾಂತೇಶ್ವರ ಜಾತ್ರಾ ಮಹೋತ್ಸವದಲ್ಲಿ ಭಕ್ತರೊಬ್ಬರು ಮುಂದಿನ ವರ್ಷ ಬರುವ ಜಾತ್ರೆಯ ಒಳಗಾಗಿ 'ನನ್ನ ಕಷ್ಟ ದೂರ ಮಾಡಿ ನನ್ನ ಅತ್ತೆ ಸಾಯಲಿ' ಎಂದು ವಿಚಿತ್ರ ಹರಕೆಯೊಂದನ್ನು ಬಿಳಿ ಹಾಳೆಯ ಮೇಲೆ ಬರೆದು ನೂರು ರೂಪಾಯಿ ನೋಟಿನ ಜೊತೆಗೆ ಹಚ್ಚಿ ಶ್ರೀ ಹುಲಿಕಾಂತೇಶ್ವರ ದೇವರ ಕಾಣಿಕೆಯ ಹುಂಡಿಯಲ್ಲಿ ಹಾಕಿ ದೇವರಲ್ಲಿ ತಮ್ಮ ಬೇಡಿಕೆ ಇಟ್ಟಿದ್ದಾರೆ.



ಫೆ.17ರಂದು ವಿಶೇಷ ಜಾತ್ರೆ ಮುಗಿದ ನಂತರ ಹುಲಿಕಾಂತೇಶ್ವರ ಜಾತ್ರಾ ಕಮಿಟಿಯವರು ಹುಂಡಿಯನ್ನು ತೆಗೆದು ಹಣ ಎಣಿಕೆ ಮಾಡುವ ಸಂದರ್ಭದಲ್ಲಿ ಈ ವಿಚಿತ್ರ ಹರಕೆಯ ಚೀಟಿ ಸಿಕ್ಕಿದೆ. ಹುಂಡಿಯಲ್ಲಿ ಸಿಕ್ಕ ಈ ವಿಚಿತ್ರ ಬೇಡಿಕೆಯ ಚೀಟಿಯ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಓಡಾಡುತ್ತಿದೆ. ನೋಡಿದ ಜನರಲ್ಲಿ ಎಂತಹ ವಿಚಿತ್ರ ಎಂಬ ಭಾವ ಮೂಡುವುದರ ಜೊತೆಗೆ ಗ್ರಾಮಸ್ಥರಲ್ಲಿ ಕಳವಳವನ್ನು ಹುಟ್ಟು ಹಾಕಿದೆ. ಅತ್ತೆಯ ಕಾಟಕ್ಕೆ ಬೆಸತ್ತವರು ಸೊಸೆಯೋ? ಅಥವಾ ಅಳಿಯನೊ? ಎಂಬುದು ಯಕ್ಷಪ್ರಶ್ನೆಯಾಗಿದೆ. ಹಲವು ವರ್ಷಗಳಿಂದ ಹುಲಿಕಾಂತೇಶ್ವರ ಜಾತ್ರೆ ನಡೆದುಕೊಂಡು ಬರುತ್ತಿದೆ. ಆದರೆ, ಇಂತಹ ವಿಚಿತ್ರ ಬೇಡಿಕೆ ಬಂದಿರುವುದು ಇದೇ ಮೊದಲ ಬಾರಿ. ಚೀಟಿಯನ್ನು ಯಾರು ಹಾಕಿದ್ದಾರೆ ಎಂಬ ಕಳವಳ ಶುರುವಾಗಿದೆ ಎಂದು ಹುಲಿಕಾಂತೇಶ್ವರ ಕಮಿಟಿಯ ಅಧ್ಯಕ್ಷ ರಾಮಕೃಷ್ಣ ದಳವಾಯಿ ಹಾಗೂ ಸದಸ್ಯ ಶಂಕರ ಸುತಾರ ತಿಳಿಸಿದ್ದಾರೆ.

ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನ

ಬಿಜೆಪಿ ಕಾರ್ಯಕರ್ತರ ಬಂಧನ, ಬಿಡುಗಡೆ

◆ **ಹುಬ್ಬಳ್ಳಿ:** ದೆಹಲಿಯಲ್ಲಿ ನಡೆಯುತ್ತಿರುವ ಎಐ ಶೃಂಗ ಸಭೆ ವೇಳೆ ಕಾಂಗ್ರೆಸ್ ಕಾರ್ಯಕರ್ತರ ಅರಬೆತ್ತಲೆ ಪ್ರತಿಭಟನೆ ನಡೆಸಿರುವುದನ್ನು ಖಂಡಿಸಿ ಹು-ಧಾ ಮಹಾನಗರ ಬಿಜೆಪಿ ಯುವ ಮೋರ್ಚಾ ಮುಖಂಡರು ಹಾಗೂ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಈ ವೇಳೆ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಸ್ಥಳದಲ್ಲಿದ್ದ ಪೊಲೀಸರು ಅವರನ್ನು ವಶಕ್ಕೆ ಪಡೆದರು.

ಶನಿವಾರ ಇಲ್ಲಿಯ ಕಾರವಾರ ರಸ್ತೆ ಇಎಸ್ಐ ಆಸ್ಪತ್ರೆ ಹತ್ತಿರ ಸಮಾವೇಶಗೊಂಡ ಪ್ರತಿಭಟನಾಕಾರರು ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದ ಬಿಜೆಪಿ ಕಾರ್ಯಕರ್ತರು ಏಕಾಏಕಿ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಪೊಲೀಸರು ಸಾಕಷ್ಟು ಸಮಾಧಾನ ಪಡಿಸಿದರೂ ಜಗ್ಗದ ಬಿಜೆಪಿ ಕಾರ್ಯಕರ್ತರು, ಬ್ಯಾರಿಕೇಡ್‌ಗಳನ್ನು ತಳ್ಳಾಡಿ ಮುತ್ತಿಗೆ ಹಾಕಲು ಯತ್ನಿಸಿದರು. ಆಗ ಪೊಲೀಸರು ಬಿಜೆಪಿ ಕಾರ್ಯಕರ್ತರನ್ನು ವಶಕ್ಕೆ ಪಡೆದು ಬಳಿಕ ಬಿಟ್ಟರು.



ಈ ವೇಳೆ ಹು-ಧಾ ಪೂರ್ವ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅನುಪಕುಮಾರ ಬಿಜವಾಡ ಮಾತನಾಡಿ, ಕಾಂಗ್ರೆಸ್ ಕಾರ್ಯಕರ್ತರು ವಿದೇಶದ ಗಣ್ಯರ ಮುಂದೆ ದೇಶದ ಮರ್ಯಾದೆ ಕೆಡಿಸುವ ಕೆಲಸ ಮಾಡಿದ್ದಾರೆ. ಪ್ರಧಾನಿ ಮೋದಿ ಅವರು ದೇಶ ಅಭಿವೃದ್ಧಿ ಶ್ರಮಿಸುತ್ತಿದ್ದು, ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ ಬೆಳೆಸಬೇಕು ಎಂಬ ಆಶಯ ಹೊಂದಿದ್ದಾರೆ. ಆದರೆ, ಕಾಂಗ್ರೆಸ್ ಅದರ ವಿರುದ್ಧ ನಡೆದುಕೊಳ್ಳುತ್ತಿರುವುದು ಖಂಡನೀಯ. ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರು ದೇಶದ ಘನತೆ ಹಾಳು ಮಾಡುವುದು ರೂಢಿಸಿಕೊಂಡಿದ್ದಾರೆ. ಪೂರ್ವಾಗ್ರಹ ಪೀಡಿತರಾಗಿ ಜಾತಿಕಮಟ್ಟದಲ್ಲಿ ಭಾರತಕ್ಕೆ ಕೆಟ್ಟ ಹೆಸರು ತರುವ ಪ್ರಯತ್ನವನ್ನು ಕಾಂಗ್ರೆಸ್ ಕೈ ಬಿಡಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಜನರೇ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಪೂರ್ವ ಕ್ಷೇತ್ರದ ಅಧ್ಯಕ್ಷ ಮಂಜು ಕಾಟಕರ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಪ್ರೀತಮ ಅರಕೇರಿ, ಮಂಡಳ ಯುವ ಮೋರ್ಚಾ ಅಧ್ಯಕ್ಷ ಪ್ರವೀಣ ಕುಬಸದ, ರಾಜ್ಯ ಒಬಿಸಿ ಮೋರ್ಚಾ ಉಪಾಧ್ಯಕ್ಷ ಸತೀಶ ಶೇಜವಾಡಕರ, ರಂಗಾ ಕಠಾರೆ, ಮಂಜುನಾಥ ಚಿಂತಗಿಂಜಲ, ಗುರು ಬನ್ನಿಕೊಪ್ಪ, ನಾಗರತ್ನಾ ಬಳ್ಳಾರಿ, ಅರುಣ ಹುದಲಿ ಇದ್ದರು.

ಅಭಿವೃದ್ಧಿ ಹೆಸರಿನಲ್ಲಿ ಪರಿಸರ ನಾಶ ಸಲ್ಲ: ಹೆಬ್ಳಿಕರ್

◆ **ಅಂಕೋಲಾ:** ಕೇಣಿ ವಾಣಿಜ್ಯ ಬಂದರು ಯೋಜನೆಯ ಹೆಸರಿನಲ್ಲಿ ಸರ್ಕಾರ ಸ್ಥಳೀಯರ ಮೇಲೆ ದಬ್ಬಾಳಿಕೆ ನಡೆಸಲು ಹೊರಟಿರುವುದು ಜನವಿರೋಧಿ ನೀತಿಯಾಗಿದ್ದು ಸ್ಥಳೀಯರಿಗೆ ಬೇಡವಾದ ಯೋಜನೆಗಳನ್ನು ಕಾರ್ಯಗತಗೊಳಿಸಲು ಯಾರಿಗೂ ಅಧಿಕಾರವಿಲ್ಲ ಎಂದು ಖ್ಯಾತ ಚಲನಚಿತ್ರ ನಟ ಪರಿಸರ ಹೋರಾಟಗಾರ ಸುರೇಶ ಹೆಬ್ಳಿಕರ್ ಹೇಳಿದರು.

ಕೇಣಿ ಕಡಲ ತೀರಕ್ಕೆ ಭೇಟಿ ನೀಡಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಉತ್ತರ ಕನ್ನಡ ಜಿಲ್ಲೆಯ ಪ್ರಾಕೃತಿಕ ಸೌಂದರ್ಯ ಬೇರೆ ಎಲ್ಲೂ ಕಾಣಲು ಸಾಧ್ಯವಿಲ್ಲ. ಅಭಿವೃದ್ಧಿಯ ಹೆಸರಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಪರಿಸರವನ್ನು ನಾಶ ಮಾಡುವ ಪ್ರಯತ್ನಗಳನ್ನು ಸಹಿಸಲು ಸಾಧ್ಯವಿಲ್ಲ ಕೇಣಿ ವಾಣಿಜ್ಯ ಬಂದರು ಯೋಜನೆಯ ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು.



ಸಮುದ್ರವನ್ನು ನಂಬಿ ಸ್ಥಳೀಯ ಜನರು ತಮ್ಮ ಜೀವನ ನಿರ್ವಹಣೆ ನಡೆಸುತ್ತಿದ್ದು ಸುಂದರ ಕಡಲು ಅದೆಷ್ಟೋ ಜೀವಿಗಳಿಗೆ ಆಶ್ರಯ ತಾಣವಾಗಿದೆ. ಸ್ಥಳೀಯ ಜನರ ಮತ್ತು ಜೀವಕೋಟಿಗಳ ಬದುಕಿನ ಮೇಲೆ ಪರಿಣಾಮ ಬೀರುವ ಯೋಜನೆಗೆ ಕಾನೂನಿನಲ್ಲಿ ಅವಕಾಶವಿಲ್ಲ ಅಭಿವೃದ್ಧಿಯ ಹೆಸರಿನಲ್ಲಿ ವಿನಾಶಕ್ಕೆ ದಾರಿ ಮಾಡಿಕೊಡದಂತೆ ಸುಪ್ರೀಂಕೋರ್ಟ್ ಸಹ ಹೇಳಿದ್ದು ಸುಳ್ಳು ಯೋಜನಾ ವರದಿಗಳನ್ನು ನೀಡಿ ಕೇಣಿ ವಾಣಿಜ್ಯ ಬಂದರು ಯೋಜನೆಯನ್ನು ಕಾರ್ಯಗತ ಮಾಡಲು ಹೊರಟರೆ ಅಲ್ಲೋಲ ಕಲ್ಲೋಲ ಆಗಲಿದೆ. ಜನ ಬೀದಿಗಿಳಿದರೆ ಯಾವ ಸರ್ಕಾರವೂ ಉಳಿಯುವುದಿಲ್ಲ ಎಂದ ಅವರು, ಜಿಲ್ಲೆಯಲ್ಲಿ ಈಗಾಗಲೇ ಕಾರವಾರ ಮತ್ತು ಬೆಲೇಕೇರಿಗಳಲ್ಲಿ ಬಂದರುಗಳಿದ್ದು ಮಂಗಳೂರಿನಲ್ಲಿ ದೊಡ್ಡ ಬಂದರು ಇದೆ. ಆ ಬಂದರುಗಳನ್ನು ಬಳಕೆ ಮಾಡುವುದನ್ನು ಬಿಟ್ಟು ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಜನಜೀವನ ಇರುವಲ್ಲಿ.

ಪರಿಸರಕ್ಕೆ ಮಾರಕವಾದ ಕೆಂಪು ಯೋಜನೆ ಅಡಿಯಲ್ಲಿ ಬರುವ ಬಂದರು ನಿರ್ಮಾಣದಿಂದ ಯಾರಿಗೆ ಏನು ಲಾಭ ಈ ರೀತಿಯ ಅಭಿವೃದ್ಧಿ ಬೇಕಾಗಿಲ್ಲ ಎಂದು ಹೇಳಿದರು. ಜನರ ಕಣ್ಣೀರು ಮತ್ತು ಪ್ರಕೃತಿಯ ಶಾಪ ಇರುವ ಯಾವ ಯೋಜನೆಗಳೂ ಯಶಸ್ವಿಯಾಗುವುದಿಲ್ಲ ಪಶ್ಚಿಮ ಘಟ್ಟ, ಪ್ರಕೃತಿಯ ಉಳಿವಿಗಾಗಿ ಹಲವಾರು ಹೋರಾಟಗಳನ್ನು ನಡೆಸಿದ್ದು ಕೇಣಿ ಜನತೆಯ ಹೋರಾಟದೊಂದಿಗೆ ಸದಾ ಇರುವುದಾಗಿ ಹೆಬ್ಳಿಕರ್ ತಿಳಿಸಿದರು.


ಸರ್ವ ಸಮಾಜಗಳ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ವಿ.ಎನ್.ನಾಯಕ, ಪ್ರಮುಖರುಗಳಾದ ಕೇಶವ ನಾಯ್ಕ, ಪ್ರಮೋದ ಬಾನಾವಳಿಕರ್, ಸಂಜೀವ ಬಲೆಗಾರ, ಸವಿತಾ ಕಲ್ಮಠ ಮೊದಲಾದವರು ಇದ್ದರು.

ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಿ: ಭೇಂಡೆ

◆ **ಹುಬ್ಬಳ್ಳಿ:** ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಪ್ರಾಥಮಿಕ ಶಿಕ್ಷಣದಿಂದಲೇ ಮಕ್ಕಳಿಗೆ ಪಾಲಕರು ಹಾಗೂ ಶಿಕ್ಷಕರು ಉತ್ತಮ ಶಿಕ್ಷಣ, ಸಂಸ್ಕಾರ ನೀಡಬೇಕು. ಇದರಿಂದ ಮಕ್ಕಳು ಜೀವನದಲ್ಲಿ ಯಶಸ್ಸು ಕಾಣುತ್ತಾರೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಹೇಳಿದರು.

ಶನಿವಾರ ಹಳೇಹುಬ್ಬಳ್ಳಿಯ ಸರ್ಕಾರಿ ಮಾದರಿ ಶಾಲೆ ನಂ.1ರಲ್ಲಿ ಶನಿವಾರ ಆಯೋಜಿಸಿದ್ದ ವೈಟ್ ಬೋರ್ಡ್ ಉದ್ಘಾಟನೆ, ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ 8ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜ್ಞಾನ ಪ್ರಾಪ್ತಿಯಾಗಲು ವಿದ್ಯಾರ್ಥಿಗಳಿಗೆ ಶ್ರದ್ಧೆ ಅವಶ್ಯಕ. ಅಪಾರ ಜ್ಞಾನ ಸಂಪಾದನೆಯಿಂದ ಆ ವ್ಯಕ್ತಿ ಅಸಾಮಾನ್ಯನಾಗಿ ಬೆಳೆಯುತ್ತಾನೆ. ಈ ನಿಟ್ಟಿನಲ್ಲಿ ಬಾಲ್ಯದಿಂದಲೇ ಮಕ್ಕಳಲ್ಲಿ ಶ್ರದ್ಧಾಭಾವ ನಿರ್ಮಾಣ ಮಾಡಬೇಕಾದ ಜವಾಬ್ದಾರಿ ಶಿಕ್ಷಕ ಮತ್ತು ಪಾಲಕರ ಮೇಲಿದೆ ಎಂದರು.



ಶಾಲೆಗಳ ಸುಧಾರಣೆಗೆ ಶಿಕ್ಷಕರು, ವಿದ್ಯಾರ್ಥಿಗಳು, ಪಾಲಕರು ಹಾಗೂ ಸಮಾಜದ ಕೊಡುಗೆ ಇರಲೇಬೇಕು. ಈ ನಿಟ್ಟಿನಲ್ಲಿ ಮಕ್ಕಳಲ್ಲಿನ ಏಕಾಗ್ರತೆ, ಅವರ ಆಸಕ್ತಿದಾಯಕ ವಿಷಯಗಳ ಬಗ್ಗೆ ಮನವರಿಕೆ ಮಾಡಿಕೊಂಡು ಶಿಕ್ಷಣ ನೀಡುವ ಮೂಲಕ ಭವಿಷ್ಯದಲ್ಲಿ ಉತ್ತಮ ಪ್ರಜೆಗಳನ್ನಾಗಿ ಮಾಡುವ ಗುರುತರ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ತಿಳಿಸಿದರು.

ಶಾಲೆಯಲ್ಲಿ ಶಿಕ್ಷಣ ದೊರೆತರೆ, ಮನೆಯಲ್ಲಿ ಪಾಲಕರು ಸಂಸ್ಕಾರ ಕಲಿಸಬೇಕು. ಮಕ್ಕಳು ಶಾಲೆಯಲ್ಲಿ ಕೇವಲ 6 ಗಂಟೆ, ಇನ್ನುಳಿದ 18 ಗಂಟೆಗಳನ್ನು ಮನೆಯಲ್ಲೇ ಕಳೆಯುವುದರಿಂದ ಶಿಕ್ಷಕರಿಗಿಂತ ಪಾಲಕರಿಗೆ ಹೆಚ್ಚಿನ ಜವಾಬ್ದಾರಿ ಇರಬೇಕಿದೆ ಎಂದು ಹೇಳಿದರು.

ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, ಸಿದ್ಧಾರೂಢರ ಪರಮ ಶಿಷ್ಯ ಗುರುನಾಥಾರೂಢರ ಪ್ರೇರಣೆಯಿಂದ ಮಕ್ಕಳು ಸರಿಯಾಗಿ ವಿದ್ಯಾಭ್ಯಾಸ ಮಾಡಿ ಹುಬ್ಬಳ್ಳಿಗೆ ಕೀರ್ತಿ ತರಬೇಕು. ಇದೇ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದರು ಎಂಬುದೇ ಹೆಮ್ಮೆಯ ಸಂಗತಿ. ಅವರ ಶಾಲಾ ಸುಧಾರಣೆಯ ದೃಷ್ಟಿಯಿಂದ ನಾವೆಲ್ಲ ನಿಮ್ಮ ಜೊತೆಗಿದ್ದೇವೆ. ಅಗತ್ಯ ಸಹಕಾರ ನೀಡಲು ಸಿದ್ಧರಿದ್ದೇವೆ ಎಂದರು.

ಶ್ರೀ ಸಿದ್ಧಾರೂಢ ಮಠ ಟ್ರಸ್ಟ್ ಕಮಿಟಿಯ ಚೇರ್ಮನ್ ಚನ್ನವೀರ ಮುಂಗುರವಾಡಿ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿಜಯ ನಾಯಕ ದಂಪತಿ ಶಾಲೆಗೆ ವೈಟ್ ಬೋರ್ಡ್‌ಗಳನ್ನು ದೇಣಿಗೆಯಾಗಿ ನೀಡಿದರು. ಬಳಿಕ ಮಕ್ಕಳಿಂದ ಸಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ಸ್ವರ್ಣ ಸಮೂಹ ಸಂಸ್ಥೆಗಳ ಎಂಡಿ ಡಾ.ವಿ.ಎಸ್.ವಿ ಪ್ರಸಾದ, ಎಂಎಸ್‌ಐಎಲ್ ಮಾಜಿ ನಿರ್ದೇಶಕ ವೀರಭದ್ರಪ್ಪ ನಿಡಗುಂದಿ, ಪಾಲಿಕೆ ಸದಸ್ಯ ಇಕ್ಬಾಲ್ ನವಲೂರ, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎಂ.ಫಡ್ನೇಶಿ, ಎಸ್ಡಿಎಂಸಿ ಅಧ್ಯಕ್ಷೆ ರಶ್ಮಿ ಭಾವಿಕಟ್ಟಿ, ಮುಖ್ಯೋಪಾಧ್ಯಾಯರಾದ ವಿ.ಡಿ.ಕಾನಡೆ, ಎಚ್.ಎಂ.ಕುಂದರಗಿ, ಮಾಧ್ಯಮಿಕ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಕೈದಿಗಳಿಗೆ ಗಾಂಜಾ ಸರಬರಾಜು ಪ್ರಕರಣ

ಡಿಐಜಿ ಟಿ.ಪಿ.ಶೇಷ ಕಾರಾಗೃಹಕ್ಕೆ ಭೇಟಿ, ಪರಿಶೀಲನೆ

◆ **ಹುಬ್ಬಳ್ಳಿ:** ಇಲ್ಲಿಯ ವಿಶ್ವೇಶ್ವರ ನಗರದ ಉಪ ಕಾರಾಗೃಹದಲ್ಲಿ ಕೈದಿಗಳಿಗೆ ಗಾಂಜಾ ಸರಬರಾಜು ಆಗುತ್ತಿದೆ ಎಂಬ ವಿಡಿಯೋ ವೈರಲ್ ಆದ ಹಿನ್ನೆಲೆ ಉತ್ತರ ವಲಯ ಕಾರಾಗೃಹ ಡಿಐಜಿ ಟಿ.ಪಿ.ಶೇಷ ಅವರು ಕಾರಾಗೃಹಕ್ಕೆ ಶನಿವಾರ ಭೇಟಿ ನೀಡಿ ಪರಿಶೀಲಿಸಿದರು.

ಉಪನಗರ ಕಾರಾಗೃಹದ ಸಿಬ್ಬಂದಿಯಿಂದ ಈ ಘಟನೆ, ವಿಡಿಯೋ ವೈರಲ್ ಕುರಿತು ಅಗತ್ಯ ಮಾಹಿತಿ ಪಡೆದರು. ಕಾರಾಗೃಹ ಡಿಜಿಪಿ ಅಲೋಕ ಕುಮಾರ ಅವರಿಗೆ ಘಟನೆ ಕುರಿತು ವರದಿ ನೀಡುವುದಾಗಿ ತಿಳಿಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ವೈರಲ್ ಆದ ವಿಡಿಯೋ 2025 ಡಿಸೆಂಬರ್‌ನಲ್ಲಿ ಮಾಡಿರುವುದಾಗಿದೆ. ಕೆಲವರು ದುರುದ್ದೇಶದಿಂದ ಈಗ ವೈರಲ್ ಮಾಡಿ ಕಾರಾಗೃಹ ಇಲಾಖೆ ಹೆಸರು ಕೆಡಿಸುವ ಕೆಲಸ ಮಾಡಿದ್ದಾರೆ. ಕಾರಾಗೃಹಗಳ ಸುಧಾರಣೆ ತರಲು ಡಿಜಿಪಿ ಅಲೋಕಕುಮಾರ ಅವರ ನೇತೃತ್ವದಲ್ಲಿ ಹಲವಾರು ಕ್ರಮ ಕೈಗೊಳ್ಳಲಾಗುತ್ತಿದ್ದು, ಹಿನ್ನಡೆಯಾಗಲಿ ಎಂಬ ಉದ್ದೇಶದಿಂದ ಈ ಕೃತ್ಯ ವೆಸಗಿದ್ದಾರೆ ಎಂದರು.

ಈ ಘಟನೆ ಸಂಬಂಧಿಸಿ ನಮ್ಮ ಸಿಬ್ಬಂದಿ ಕರ್ತವ್ಯ ಲೋಕ ಕಂಡು ಬಂದಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ ವಿಡಿಯೋ ಪ್ರಕರಣದಲ್ಲಿ ಭಾಗಿಯಾದ 10 ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಬಹುಶಃ ಮೊಬೈಲ್ ಜೈಲ್ ಹಿಂದಿನ ಗೋಡೆಯಿಂದ ಯಾರೋ ಎಸೆದಿರಬಹುದು ಎಂದು ತಿಳಿಸಿದರು.

ಜೈಲಿನಲ್ಲಿ 132 ಜನ ಖೈದಿಗಳಿದ್ದು, ಕೇವಲ 35 ಜನ ಜೈಲು ಸಿಬ್ಬಂದಿ ಇದ್ದಾರೆ. ಸಿಬ್ಬಂದಿ ಕೊರತೆ ಇದೆ. ಈ ಜೈಲಿಗೆ 80 ಜನ ಸಿಬ್ಬಂದಿ ಅವಶ್ಯಕತೆ ಇದೆ. ವಿಡಿಯೋದಲ್ಲಿ ಕಂಡು ಬಂದಿದ್ದು, ಜೈಲಿನಲ್ಲಿ ಮಾಡಿದ ಫಲಾವಾಗಿದೆ. ಮೊಬೈಲ್ ನಿಂದ ವಿಡಿಯೋ ಮಾಡಿದೆ ಎನ್ನಲು ಸಾಧ್ಯವಿಲ್ಲ. ಪೆನ್ ಕ್ಯಾಮೆರಾದಿಂದ ಮಾಡಿರಬಹುದು. 10 ಜನರ ಆರೋಪಿಗಳ ವಿರುದ್ಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಹೇಳಿದರು.

ಪ್ರಜ್ವಲ್ ಎಂಬ ಆರೋಪಿ ವಿಡಿಯೋ ವೈರಲ್ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಆತ ಜೈಲಿನಲ್ಲಿ ಗಲಾಟೆ ಮಾಡುವ ಮಾಹಿತಿ ಬಂದಿದ್ದರಿಂದ ಬೇರೆ ಜಿಲ್ಲೆಯ ಜೈಲಿಗೆ ಸ್ಥಳಾಂತರ ಮಾಡಲಾಗಿದೆ. ಇಲಾಖೆಗೆ ಕೆಟ್ಟು ಹೆಸರು ತರವು ಉದ್ದೇಶದಿಂದ ಮಾಡಿದ್ದಾರೆ ಎಂದು ತಿಳಿಸಿದರು.

ಕಿರುಸುದ್ದಿ

ಅಧ್ಯಕ್ಷರಾಗಿ ಆಯ್ಕೆ



ನರಗುಂದ: ಸಮೀಪದ ಭೋಪಾಳಪೂರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಚುನಾವಣೆ ಜರುಗಿದ್ದು, ಅಧ್ಯಕ್ಷರಾಗಿ ಮಹಾಂತೇಶ ಸಾಲಿಮಠ, ಉಪಾಧ್ಯಕ್ಷರಾಗಿ ಮಲ್ಲಪ್ಪ ಕಣ್ಣೂರ ಆಯ್ಕೆಯಾಗಿದ್ದಾರೆಂದು ರಿಟರ್ನಿಂಗ್ ಅಧಿಕಾರಿಗಳು ತಿಳಿಸಿದ್ದಾರೆ. ನಿರ್ದೇಶಕರಾಗಿ ಮಹೇಶಪ್ಪ ಸಾಂಬ್ರಾಣಿ, ಗುರುಸಿದ್ದಪ್ಪ ಹೊಂಬಳ, ಯಲ್ಲಪ್ಪ ನಾವಲ್ಲಿ, ಸಂಗನಗೌಡ ಪಾಟೀಲ, ವಿರೂಪಾಕ್ಷಪ್ಪ ಕಾಡದರ, ಬಸವರಾಜ ಜೋಗಿ, ಭೀಮಪ್ಪ ತಳವಾರ, ಸಂಗಪ್ಪ ಹೂಗಾರ, ಪ್ರೇಮಾ ಹೊಂಬಳ ಆಯ್ಕೆಯಾಗಿದ್ದಾರೆ.

ಚಂದ್ರಕಾಂತರಿಗೆ ಬಹುಮಾನ



ನರಗುಂದ: ಪಟ್ಟಣದ ರಾಷ್ಟ್ರ ಪ್ರಶಸ್ತಿ ವಿಜೇತ ಯುವ ಗಾಯಕ ಪಂ.ಚಂದ್ರಕಾಂತ ಇನಾಮದಾರ ಅವರಿಗೆ ಗಣಕರಂಗ, ಧಾರವಾಡದಿಂದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ಆಯೋಜಿಸಲಾದ ರಾಜ್ಯಮಟ್ಟದ ಕಥೆ ಹಾಗೂ ಕಾವ್ಯವಾಚನ ಸ್ಪರ್ಧೆಯಲ್ಲಿ ಮೆಚ್ಚುಗೆಯ ಬಹುಮಾನ ಪ್ರಧಾನ ಮಾಡಲಾಯಿತು.

ದತ್ತಿ ಉಪನ್ಯಾಸ ಇಂದು

ಗದಗ: ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಫೆ.22 ರಂದು ಬೆಳಗ್ಗೆ 10ಕ್ಕೆ ನಡೆಯಲಿರುವ ಬಸವದಳದ 1686 ನೇ ಶರಣ ಸಂಗಮದಲ್ಲಿ ನಿರಂಜನರಿಂದ ಹರ್ಡೇಕರ ಮಂಜಪ್ಪನವರ 140 ನೇ ಜಯಂತಿ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಧ್ಯಕ್ಷತೆ ಎಸ್.ಎನ್.ಹಾರಿ ವಹಿಸುವರು. ಉಪನ್ಯಾಸಕ ತೋಟಪ್ಪ ಕರದಾನಿ ಮಾತನಾಡುವರು. ಕೆ.ಎ.ಬಳಿಗೇರ, ಎಂ.ಬಿ.ಲಿಂಗದಾಳ ಆಗಮಿಸುವರು ಎಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿ ತಿಳಿಸಿದ್ದಾರೆ.

ಜೋಡೆತ್ತುಗಳ ಸಾವು

ಮುಂಡರಗಿ: ರಾಮೇನಹಳ್ಳಿ ಗ್ರಾಮದ ವೆಂಕಟೇಶ ಬಾಗಳಿ ಎಂಬ ರೈತನಿಗೆ ಸೇರಿದ ಎರಡು ಎತ್ತುಗಳು ಮೃತಪಟ್ಟಿದ್ದು, ಬಡರೈತನಿಗೆ ಬಹಳ ನಷ್ಟವಾಗಿದೆ. ಕೇವಲ 1 ಎಕ್ರೆ ಭೂಮಿಯನ್ನು ಹೊಂದಿರುವಂತ ವೆಂಕಟೇಶ ಬಾಗಳಿ ಬೇರೆಯವರ ಹೊಲಗಳನ್ನು ಲಾವಣಿ ಪಡೆದುಕೊಂಡು ಕೃಷಿ ಮಾಡಿಕೊಂಡು ಸುಮಾರು 1 ಲಕ್ಷ 20 ಸಾವಿರ ಖರ್ಚು ಮಾಡಿ ಎತ್ತು ತಂದಿದ್ದ. ರೈತ ವೆಂಕಟೇಶ ಬಾಗಳಿ ಮನೆಯ ಪಕ್ಕದಲ್ಲಿ ಎತ್ತುಗಳನ್ನು ಕಟ್ಟಿದ್ದ ರೈತನ ಎರಡು ಎತ್ತುಗಳು ವಿಷಾಹಾರ ಸೇವಿಸಿ ಸಾವಿಗೀಡಾಗಿವೆ. ಘಟನಾ ಸ್ಥಳಕ್ಕೆ ತಾಲೂಕು ಪಶು ವೈದ್ಯಾಧಿಕಾರಿ ಡಾ. ತಿಗರಿಮಠ ಆಗಮಿಸಿ ಈ ಘಟನೆಯ ಪರಿಶೀಲನೆ ನಡೆಸಿದರು. ಹೆಚ್ಚಿನ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು. ಕಳೆದ 15 ದಿನಗಳಲ್ಲಿ ರಾಮೇನಹಳ್ಳಿ ಗ್ರಾಮದಲ್ಲಿ 3 ಆಕಳುಗಳು 2 ಎತ್ತುಗಳು ವಿಷಾಹಾರ ಸೇವಿಸಿ ಮೃತಪಟ್ಟಿರುವ ಘಟನೆ ಜರುಗಿದ್ದು, ಆದ್ದರಿಂದ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಬಸಮ್ಮ ಅಕ್ಕಿ ನಿಧನ



ನರಗುಂದ: ಪಟ್ಟಣದ ಸಿದ್ದನಬಾವಿ ಓಣಿ ನಿವಾಸಿ ಬಸಮ್ಮ ಸಂಗಪ್ಪ ಅಕ್ಕಿ(92) ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಾಲ್)

ಗೆಜ್ಜೆ ಶೇಂಗಾ	4529-8912
ಅಜವಾನ	4369-11005
ಅಲಸಂದಿಕಾಳು	5189-6342
ಕಡಲೆ	1689-5511
ಉದ್ದು	4712-5977
ಬಿಳಿಜೋಳ	5589-5589
ಹವೀಜ	4111-9515
ಒಣಮೆಣಸಿನಕಾಯಿ	2129-74200
ಹೆಸರು	517-7711
ಹುರಳಿ	1827-4137
ಜೋಳ	2301-4619
ಗೋವಿನಜೋಳ	1321-1800
ಸಾಸವಿ	5212-5244
ರಾಗಿ	2459-2459
ಸಾಸವಿ	5221-5244
ರಾಗಿ	2459-2459
ಸಬ್ಬಸಿಗೆ	4677-4677
ಕುಸಬಿ	4019-5606
ಸೂರ್ಯಕಾಂತಿ	6269-6809
ತೊಗರಿ	4012-5869
ಗೋಧಿ	1999-4677
ಸಜ್ಜೆ	3400-3400



ಗದಗ: ಗದಗ-ಬೆಟಗೇರಿ ಲಯನ್ಸ್ ಕ್ಲಬ್, ಐಎಂಎ, ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ನಗರದಲ್ಲಿ ನೇತ್ರದಾನದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಜಾಥಾ ಜರುಗಿತು. ರ್‍ಯಾಲಿಯಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ರಾಜು ವೇರ್ಣೆಕರ, ರಾಜಣ್ಣ ಮಲ್ಲಾಡದ, ರೇಣುಕಪ್ರಸಾದ ಹಿರೇಮಠ, ಆನಂದ ಪೋತ್ನೀಸ್, ರಮೇಶ ಶಿಗ್ಲಿ, ನಿತೀಶ್ ಸಾಲಿ, ಡಾ. ಶ್ರೀಧರ ಕುರಡಗಿ, ಮಂಜುನಾಥ ವೀರಲಿಂಗಯ್ಯನಮಠ, ಎಸ್.ಕೆ.ಶೆಟ್ಟರ ಇತರರಿದ್ದರು.

ಗದಗದಿಂದ ವಿವಿಧ ನಗರಗಳಿಗೆ ಬಸ್ ಸಂಚಾರ

ಗದಗ: ನಗರದ ಹೊಸ ಬಸ್ ನಿಲ್ದಾಣದಲ್ಲಿ ಧರ್ಮಸ್ಥಳ ಹಾಗೂ ಮಂಗಳೂರು ನಗರಕ್ಕೆ ನೇರ ಬಸ್ ಸಂಚಾರಕ್ಕೆ ಟೇಪ್ ಕತ್ತರಿಸುವ ಮೂಲಕ ಚಾಲನೆ ನೀಡಿದರು.

ಗದಗ ಮಾರ್ಗವಾಗಿ ಹೊರಡುವ ಬಸ್ಸು ಲಕ್ಷ್ಮೇಶ್ವರ, ಹಾವೇರಿ, ರಾಣೇಬೆನ್ನೂರ, ಹರಿಹರ, ಶಿವಮೊಗ್ಗ, ಕಡೂರು, ಉಡುಪಿ, ಚಿಕ್ಕಮಗಳೂರು, ಉಜಿರೆ, ಧರ್ಮಸ್ಥಳಕ್ಕೆ ತಲುಪುವ 2 ಬಸ್‌ಗಳು ಪ್ರತಿದಿನ ಸಂಜೆ 7 ಗಂಟೆಗೆ ಗದಗ ಬಸ್ ನಿಲ್ದಾಣದಿಂದ ಹೊರಡುತ್ತದೆ. ಬಸ್‌ನ ಪ್ರಯಾಣದ ದರ 455 ರೂಪಾಯಿ ಇರುತ್ತದೆ. ಗದಗ ಮಾರ್ಗವಾಗಿ ಹೊರಡುವ ಬಸ್ ಹುಬ್ಬಳ್ಳಿ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಕುಂದಾಪುರ, ಉಡುಪಿ, ಮಂಗಳೂರುಗೆ ತಲುಪುವ 2 ಬಸ್‌ಗಳು ಪ್ರತಿದಿನ ಬೆಳಗ್ಗೆ 8 ಗಂಟೆಗೆ ಗದಗ ಬಸ್ ನಿಲ್ದಾಣದಿಂದ ಹೊರಡುತ್ತದೆ ಬಸ್‌ನ ಪ್ರಯಾಣದ ದರ 472 ರೂಪಾಯಿ ಇರುತ್ತದೆ.

ಪ್ರಮುಖರಾದ ಮೀನಾಕ್ಷಿ ಬೆನಕಣ್ಣವರ, ಸಾವಿತ್ರಿ ಹೂಗಾರ, ವಿಭಾಗೀಯ ನಿಯಂತ್ರಣಾಧಿಕಾರಿ ಪರಶುರಾಮ್ ಗಡೆದ, ವಿಭಾಗೀಯ ತಾಂತ್ರಿಕ ಶಿಲ್ಪಿ ಇಟಗಿ, ವಿಭಾಗೀಯ ಸಂಚಾರಾಧಿಕಾರಿ ಪಿ.ವಿ.ಮೆತ್ರಿ, ಡಿಪೋ ಮ್ಯಾನೆಜರ್ ಬಿ.ಎಲ್. ಗೆನ್ನೂರು, ಬೆಟಗೇರಿ ಡಿಪೋ ಮ್ಯಾನೇಜರ್ ರೋಹಿನಿ ಆರ್.ಬಿ., ನಿಲ್ದಾಣಾಧಿಕಾರಿ ಎಂ.ಬಿ.ತಿಮ್ಮನಗೌಡ್ರು, ಸಾರಿಗೆ ನಿಯಂತ್ರಕ ಎಸ್.ಎಫ್. ಸಂಗಣ್ಣನವರ, ಎ.ಎಸ್. ಅಂಗಡಿ, ಬಿ.ಎನ್.ಪಾಟೀಲ್, ಎಸ್.ಎನ್. ಕಡೆಮನಿ ಇದ್ದರು.



ಗದಗ: ನಗರದ ಹೊಸ ಬಸ್ ನಿಲ್ದಾಣದಲ್ಲಿ ಧರ್ಮಸ್ಥಳ ಹಾಗೂ ಮಂಗಳೂರು ನಗರಕ್ಕೆ ನೇರ ಬಸ್ ಸಂಚಾರಕ್ಕೆ ಟೇಪ್ ಕತ್ತರಿಸುವ ಮೂಲಕ ಚಾಲನೆ ನೀಡಲಾಯಿತು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬಿ.ಬಿ.ಅಸೂಟಿ, ಗ್ಯಾರಂಟಿ ಸಮಿತಿಯ ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಜಿ, ಗ್ಯಾರಂಟಿ ಸಮಿತಿ ಸದಸ್ಯ ಕೆ.ಎಚ್.ಪಾಟೀಲ್ ಇತರರಿದ್ದರು.

ಭಾವೈಕ್ಯತಾ ದಿನಾಚರಣೆ | ಗ್ರಂಥಗಳ ಬಿಡುಗಡೆ | ಎಚ್.ಕೆ. ಪಾಟೀಲ ಹೇಳಿಕೆ

ವಚನಗಳಿಗೆ ಕಾನೂನಾತ್ಮಕ ಸಶಕ್ತೀಕರಣಕ್ಕೆ ಚಿಂತನೆ



ಕಥೆಗಳು, ಗ್ರಂಥಗಳ ಲೋಕಾರ್ಪಣೆ

ಡಾ.ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡ ತೋಂಟದಾರ್ಯ ಸಂಸ್ಥಾನಮಠ ಸಾಹಿತ್ಯ ಪ್ರಕಟಣೆಗಳು; ತಾತ್ವಿಕ ಸ್ವರೂಪ, ಮಾಯದಂಥಾ ಬೆಳದಿಂಗಳ, ಚಲವಾದಿ ಗೌರಮ್ಮನ ಕಥೆಗಳು, ಗ್ರಂಥಗಳು ಲೋಕಾರ್ಪಣೆಗೊಂಡವು. ತೋಂಟದಾರ್ಯ ಮಠದ ವಚನ ಪಾಠಶಾಲೆಯ ಉದ್ಘಾಟನೆ ನೆರವೇರಿತು.

ಗದಗ: ಬಸವಾದಿ ಶರಣರ ವಚನಗಳು ಸಾರ್ವತ್ರಿಕ ಮನ್ನಣೆ ಪಡೆದಿರುವ ಸರ್ವಸಮ್ಮತ ಮೌಲ್ಯಗಳಾಗಿದ್ದು ಸಮಾಜದಲ್ಲಿ ಇವುಗಳು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರುವ ನಿಟ್ಟಿನಲ್ಲಿ ವಚನಗಳಿಗೆ ಕಾನೂನಿನ ಬಲ ತಂದು ಅವುಗಳನ್ನು ಸಶಕ್ತೀಕರಣಗೊಳಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಶನಿವಾರ ನಗರದ ತೋಂಟದಾರ್ಯ ಮಠದಲ್ಲಿ ಲಿಂ.ಡಾ.ತೋಂಟದ ಸಿದ್ಧಲಿಂಗ ಸ್ವಾಮೀಜಿ 77ನೇ ಜಯಂತಿ ಅಂಗವಾಗಿ ಭಾವೈಕ್ಯತಾ ದಿನಾಚರಣೆ, ಗ್ರಂಥಗಳ ಬಿಡುಗಡೆ, ವಚನ ಪಾಠಶಾಲೆ ಉದ್ಘಾಟನೆ ಮತ್ತು ಸಂಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇಂದು ವಚನ ಪಾಠಶಾಲೆ ಉದ್ಘಾಟನೆ ಮಾಡಿದ್ದು ಸಂತಸದ ಸಂಗತಿಯಾಗಿದ್ದು, ಇಂದು ಡಾ.ತೋಂಟದ ಸಿದ್ಧಲಿಂಗ ಸ್ವಾಮೀಜಿ ನಮ್ಮ ನಡುವೆ ಇದ್ದರೆ ರಾಜ್ಯ ಸರ್ಕಾರ ವಚನಗಳಿಗೆ ಕಾನೂನಿನ ಬಲತುಂಬಲು ಹೊರಟಿರುವ ನಡೆಯನ್ನು ಖಂಡಿತ ಶ್ಲಾಘಿಸುತ್ತಿದ್ದರು ಎಂದರು.

> **ಸಿದ್ಧಲಿಂಗ ಶ್ರೀಗಳ ಪೂರ್ವಾಶ್ರಮದ ಹೆಸರು ಸಿದ್ಧರಾಮ. ಇಂದಿನ ಪೂಜ್ಯರ ಹೆಸರು ಸಿದ್ಧರಾಮ ಸ್ವಾಮೀಜಿ. ಲಿಂಗೈಕ್ಯ ಗುರುಗಳ ಪ್ರತಿರೂಪವೇ ಇಂದಿನ ಶ್ರೀಗಳಾಗಿದ್ದಾರೆ. ಲಿಂಗೈಕ್ಯ ಸಿದ್ಧಲಿಂಗ ಶ್ರೀಗಳ ಅನನ್ಯ ಪ್ರೀತಿ ಹಾಗೂ ಕೃಪಾಶೀರ್ವಾದಕ್ಕೆ ನಾನು ಪಾತ್ರನಾಗಿದ್ದೇನೆ. ಅವರ ಪಟ್ಟಾಧಿಕಾರ ರಜತ ಮಹೋತ್ಸವ ಸಮಾರಂಭದಲ್ಲಿ ನನ್ನಿಂದ ಕಲ್ಯಾಣದ ಹಾದಿ ಗ್ರಂಥ ಬರೆಸಿದರು. ಅವರ ಜಯಂತಿಯಲ್ಲಿ ನನ್ನ ಕುರಿತು ಪುಸ್ತಕ ಬಿಡುಗಡೆಯಾಗುತ್ತಿರುವುದು ನನ್ನ ಸೌಭಾಗ್ಯ.**
> ■ ಸಿದ್ಧಲಿಂಗ ಪಟ್ಟಣಶೆಟ್ಟಿ, ಸಾಹಿತಿ

ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಮಾತನಾಡಿದರು. ಪ್ರಶಿಕ್ಷಣಾರ್ಥಿಗಳಿಂದ ವಚನ ನೃತ್ಯ ಜರುಗಿತು. ಸಾನ್ನಿಧ್ಯ ಜ.ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ವಹಿಸಿದ್ದರು. ಪ್ರೊ. ಎಸ್.ಎಸ್. ಪಟ್ಟಣಶೆಟ್ಟರ, ಶಾಂತಲಿಂಗ ಸ್ವಾಮೀಜಿ, ಮಾಜಿ ಸಚಿವ ಎಸ್.ಎಸ್.ಪಾಟೀಲ, ಮಾಜಿ ಸಂಸದ ಐ.ಜಿ.ಸನದಿ, ಮಾಜಿ ಶಾಸಕ ಸೀಮಾ ಮಸೂತಿ ಇದ್ದರು.

ಸಿದ್ಧಲಿಂಗ ಶ್ರೀಗಳು ಕೋಟಿಗೊಬ್ಬರು

ಸಿದ್ಧಲಿಂಗ ಶ್ರೀಗಳ ಜಯಂತಿಯು ಅವರ ಸಾಧನೆ ಮೆಲುಕು ಹಾಕಲು ಇರುವ ಅವಕಾಶ ಎಂದು ನಾನು ಭಾವಿಸಿದ್ದೇನೆ. ತಮ್ಮ ಸಾಧನೆಗಳೊಂದಿಗೆ ಅಜರಾಮರರಾಗಿದ್ದಾರೆ. ಶ್ರೀಮಠದ ಪೀಠಕ್ಕೆ ಬಂದಾಗಿನಿಂದ ಅವರು ಲಿಂಗೈಕ್ಯರಾಗುವ ವರೆಗೆ ಅವರ ಸಾಧನೆಗಳು ಅಪರಿಮಿತವಾಗಿದ್ದು, ನೂರಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ನೀಡಿದ್ದಾರೆ. ಮುಖ್ಯವಾಗಿ ಬಸವತತ್ವವನ್ನು ವಿಶ್ವದಾದ್ಯಂತ ಪಸರಿಸಿದ ಮಹಾನ್ ಗರಿಮೆ ಶ್ರೀಗಳಿಗಿದೆ. ಸಿದ್ಧಲಿಂಗ ಶ್ರೀಗಳು ಕೋಟಿಗೊಬ್ಬರಾಗಿದ್ದು, ಇಂಥ ಮಹಾತ್ಮರ ಒಡನಾಟ ದೊರೆತಿದ್ದು ನಮ್ಮ ಸೌಭಾಗ್ಯ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಹೇಳಿದರು.

- ಬಸವತತ್ವಗಳ ಕಟ್ಟುನಿಟ್ಟಿನ ಪರಿಪಾಲಕರಾಗಿದ್ದ ಲಿಂ.ಸಿದ್ಧಲಿಂಗ ಶ್ರೀಗಳು ತೋಂಟದಾರ್ಯ ಮಠದ ಜಾತ್ರೆಗೆ ಹೊಸ ಭಾಷ್ಯ ಬರೆದು ಜಾತ್ರೆಗಳನ್ನು ಜನೋಪಯೋಗಿ ಹಾಗೂ ಸಮಾಜಮುಖಿಯಾಗಿ ಆಚರಿಸುವ ಪರಂಪರೆ ಹಾಕಿಕೊಟ್ಟರು
- ಇಂದಿನ ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಕೂಡಾ ಅದೇ ಪರಂಪರೆಯನ್ನು ಮುಂದುವರೆಸಿದ್ದು ಇಂದು ಹೆಸರಾಂತ ಸಾಹಿತಿಗಳಾದ ಸಿದ್ಧಲಿಂಗ ಪಟ್ಟಣಶೆಟ್ಟಿಯವರ ಕುರಿತ ಗ್ರಂಥಗಳನ್ನು ಬಿಡುಗಡೆ ಮಾಡುವ ಭಾಗ್ಯ ನನಗೆ ದೊರೆತಿದೆ ಎಂದ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ

ಬಿಜೆಪಿ ಕಾರ್ಯಕರ್ತರಿಂದ ಪ್ರತಿಭಟನೆ

ಲಕ್ಷ್ಮೇಶ್ವರ: ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗೆ ಸಂಬಂಧಪಟ್ಟಂತೆ ಶನಿವಾರ ಗುತ್ತಿಗೆದಾರರಿಂದ ಲಂಚದ ಹಣ ಪಡೆಯುತ್ತಿದ್ದ ವೇಳೆ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು ಶಿರಹಟ್ಟಿ ಮತಕ್ಷೇತ್ರದ ಶಾಸಕ ಡಾ. ಚಂದ್ರು ಲಮಾಣಿ, ಪಿಎ ಮಂಜುನಾಥ ವಾಲ್ಮೀಕಿ ಮತ್ತು ಸಂಬಂಧ ಗುರು ಲಮಾಣಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ ಘಟನೆಗೆ ಸಂಬಂಧಿಸಿದಂತೆ ಶಾಸಕ ಡಾ.ಚಂದ್ರು ಲಮಾಣಿ ಅವರನ್ನು ಅವರದ್ದೇ ಬಾಲಾಜಿ ಆಸ್ಪತ್ರೆಯಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂಬ ಸುದ್ದಿ ಹರಡುತ್ತಿದ್ದಂತೆಯೇ ದೌಡಾಯಿಸಿದ ಬಿಜೆಪಿ ಕಾರ್ಯಕರ್ತರು ಮತ್ತು ಅವರ ಅಭಿಮಾನಿಗಳು ಕಾಂಗ್ರೆಸ್ ಪಕ್ಷ ಮತ್ತು ಕೆಲ ಪ್ರಮುಖ ಕಾಂಗ್ರೆಸ್ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

ಮಧ್ಯಾಹ್ನ 2 ಗಂಟೆ ಹೊತ್ತಿನಿಂದ ಸಂಜೆ 8 ಗಂಟೆವರೆಗೂ ಆಸ್ಪತ್ರೆಯ ಮುಂದೆ ನೂರಾರು ಕಾರ್ಯಕರ್ತರು ಜಮಾವಣೆಗೊಂಡಿದ್ದರು. ಕೆಲ ಕಾರ್ಯಕರ್ತರು ರಸ್ತೆ ತಡೆ ನಡೆಸುವ ಪ್ರಯತ್ನ ಮಾಡಿದರು. ಈ ವೇಳೆ ಪೊಲೀಸರು ಮತ್ತು ಕಾರ್ಯಕರ್ತರ ನಡುವೆ ವಾಗ್ವಾದ ನಡೆದು ಕೆಲ ಹೊತ್ತು ಪ್ರಕ್ಷುಬ್ಧ ವಾತಾವರಣ ನಿರ್ಮಾಣಗೊಂಡಿತ್ತು. ಬಿಜೆಪಿ ಕಾರ್ಯಕರ್ತರಾದ ಶಂಕರ ಮರಾಠೆ, ಬಸವರಾಜ ಚಕ್ರಸಾಲಿ, ನವೀನ ಹಿರೇಮಠ, ಗಂಗಾಧರಮೆಣಸಿನಕಾಯಿ, ನಾಗರಾಜ ಲಕ್ಕುಂಡಿ, ಮಲ್ಲಿಕಾರ್ಜುನ ಹಣಜಿ, ಕುಮಾರಸ್ವಾಮಿ ಹಿರೇಮಠ, ತಾವರೆಪ್ಪ ಲಮಾಣಿ ಸೇರಿ ಅನೇಕ ಕಾರ್ಯಕರ್ತರು ಮಾತನಾಡಿ, ಶಾಸಕರ ಮೇಲಿನ ಲಂಚದ ಆರೋಪ ಕಾಂಗ್ರೆಸ್ ಪಕ್ಷದ ನಾಯಕರ ಷಡ್ಯಂತ್ರವಾಗಿದೆ. ವಿಧಾನಸಭೆ ಅಧಿವೇಶನದಲ್ಲಿ ಮತ್ತು ಇತ್ತೀಚೆಗೆ ಬೆಳ್ಳಟ್ಟಿ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಸರಕಾರದ ವೈಫಲ್ಯಗಳನ್ನು ಎತ್ತಿ ತೋರಿಸಿದ್ದರು. ಗಟ್ಟಿಧ್ವನಿಯ ಶಾಸಕರ ಏಳಿಗೆ ಸಹಿಸದ ಕೆಲ ಕಾಂಗ್ರೆಸ್ ನಾಯಕರು, ವಿರೋಧಿಗಳು ಮತ್ತೂ ಓರ್ವ ಸ್ವಾಮೀಜಿಯೂ ಸೇರಿ ಮಾಡಿದ ಷಡ್ಯಂತ್ರವಾಗಿದೆ. ಲಂಚದ ಹಣ ಪಡೆದಿರುವುದು ಸುದ್ದ ಸುಳ್ಳು ಆರೋಪ. ಗುತ್ತಿಗೆದಾರ ಕಾಂಗ್ರೆಸ್ ಏಜೆಂಟ್ ಆಗಿದ್ದು ಇದು ನಮ್ಮ ಶಾಸಕರ ಹೆಸರಿಗೆ ಮಸಿ ಬಳಿಯುವ ಪ್ರಯತ್ನವಾಗಿದೆ. ಇದು ಕಾರ್ಯಕರ್ತರಿಗೆ ಸಾಕಷ್ಟು ನೋವು ತರಿಸಿದ್ದು ಇದಕ್ಕೆ ತಕ್ಕ ಉತ್ತರ ನೀಡುತ್ತೇವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ರೈತರು ಬೆಳೆಗೆ ತಾವೇ ದರ ನಿರ್ಧರಿಸುವಂತಾಗಲಿ

ನರೇಗಲ್ಲ: ರೈತರು ತಮ್ಮ ಉತ್ಪನ್ನಗಳಿಗೆ ಬೇಡಿಕೆಯಿರುವ ಮಾರುಕಟ್ಟೆಗಳನ್ನು ಗುರುತಿಸಬೇಕು. ಉತ್ಪನ್ನಗಳನ್ನು ಸರಿಯಾದ ಸಮಯ ಮತ್ತು ಸ್ಥಳದಲ್ಲಿ ಮಾರಾಟ ಮಾಡಬೇಕು. ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸೂಕ್ತ ತಂತ್ರಗಳನ್ನು ಬಳಸಬೇಕು ಮತ್ತು ಅವರು ಬೆಳೆದ ಬೆಳೆಗೆ ಅವರೇ ದರವನ್ನು ನಿರ್ಧರಿಸುವಂತೆ ಆಗಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮುತ್ತಣ್ಣ ಚೌಡರಡ್ಡಿ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಸಮೀಪದ ಅಬ್ಬಿಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ರೋಣ ಮತ್ತು ಗ್ರಾಮ ಘಟಕ ಅಬ್ಬಿಗೇರಿ ಇವರ ಸಂಯುಕ್ತ ಆಶ್ರಯದಲ್ಲಿ ವೃತ್ತಿ ಮಾರ್ಗದರ್ಶನ ಮತ್ತು ಮಕ್ಕಳ ಸಂತೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಾಲೆಗಳಲ್ಲಿ ಇಂತಹ ರೈತ ಉತ್ಪನ್ನ ಮಾರುಕಟ್ಟೆಗಳನ್ನು ಆಯೋಜಿಸಿದಾಗ ಮಾರುಕಟ್ಟೆ ಕೌಶಲ್ಯಗಳನ್ನು ತಿಳಿಯಲು ವಿದ್ಯಾರ್ಥಿಗಳಿಗೆ ಅವಕಾಶ ನೀಡುತ್ತವೆ. ವಿದ್ಯಾರ್ಥಿಗಳೇ ಇಲ್ಲಿ ಮಾರಾಟಗಾರರು ಆಗಿರುವದರಿಂದ ತಮ್ಮ ಉತ್ಪನ್ನಗಳನ್ನು ಹೇಗೆ ಪರಿಣಾಮಕಾರಿಯಾಗಿ ಮಾರಾಟ ಮಾಡಬೇಕೆಂದು ಸಹಾಯ ಮಾಡುತ್ತವೆ ಎಂದರು.

ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕಾಧ್ಯಕ್ಷ ಸಂಗಣ್ಣ ಪವಾಡಶೆಟ್ಟಿ ಮಾತನಾಡಿ, ರೈತ ಸಂತೆ ಮಾರುಕಟ್ಟೆಗಳು ರೈತರಿಗೆ ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲು ಒಂದು ವೇದಿಕೆಯನ್ನು ಒದಗಿಸುತ್ತವೆ. ಈ ಮಾರುಕಟ್ಟೆಗಳು ದಲ್ಲಾಳಿಗಳನ್ನು ತಪ್ಪಿಸಿ, ರೈತರಿಗೆ ಉತ್ತಮ ಬೆಲೆಗಳನ್ನು ಪಡೆಯಲು ಸಹಾಯ ಮಾಡುತ್ತವೆ. ಇಂತಹ ಸಂತೆಗಳನ್ನು ಶಾಲೆಗಳಲ್ಲಿ ಆಯೋಜಿಸುವುದರಿಂದ ವಿದ್ಯಾರ್ಥಿಗಳಿಗೆ ನೇರ ಮಾರುಕಟ್ಟೆಗಳ ಜ್ಞಾನ, ಮಹತ್ವ, ಮಾರಾಟ ಕ್ರಿಯೆ, ರೈತ ಮತ್ತು ವ್ಯಾಪಾರಸ್ಥರ ಸಂಬಂಧದ ಬಗ್ಗೆ ತಿಳುವಳಿಕೆ ನೀಡುತ್ತವೆ ಎಂದರು. ಮೇಘರಾಜ ಭಾವಿ ಮಾತನಾಡಿದರು. ಸಂತೆಗಳಲ್ಲಿರುವಂತೆ ಟೊಮೆಟೊ, ಈರುಳ್ಳಿ, ಗಜ್ಜರಿ, ಸೇವತೆಕಾಯಿ, ಹೂಕೋಸು, ಆಲೂಗಡ್ಡೆ, ಮೆಣಸಿನಕಾಯಿ, ಚವಳೆಕಾಯಿ, ಬೀಟರೂಟ, ಹೀರೆಕಾಯಿ, ಮೂಲಂಗಿ, ಕರಿಬೇವು, ಕೋತಂಬರಿ, ಪಾಲಕ್, ಹುಳಿಚಿಕ್ಕ, ಮೆಂತೆಪಲ್ಲೆ, ಲಿಂಬೆಹಣ್ಣು ಇತರೆ ತರಕಾರಿ ಹೂವು-ಹಣ್ಣುಗಳು ಸಂತೆಯಲ್ಲಿ ಮಾರಲ್ಪಟ್ಟವು. ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು, ರೈತರು ಸಂತೆಗಳಲ್ಲಿ ತರಕಾರಿ ಖರೀದಿಸಿದರು. ಬಸವರಾಜ ಪಲ್ಲೇದ, ಸಂಗಣ್ಣ ದಂಡಿನ, ರಾಮು ಚೌಹಾನ್, ಶೇಕಣ್ಣ ಕಮ್ಮಾರ, ಕಾವ್ಯಾ ಸೋಮನಕಟ್ಟಿ, ಲೀಲಾ ಚಿತ್ರಗಾರ, ಮೇಘರಾಜ ಭಾವಿ, ವೀರಯ್ಯ ಆರಳಿಕಟ್ಟಿ, ಬಸವರಾಜ ಹಡಪದ, ಬಸವರಾಜ ಹೊಸಮನಿ, ವೀರಣ್ಣ ಕಾಳಗಿ, ಮೈಲಾರಪ್ಪ ಚವಡಿ, ಮಲ್ಲಪ್ಪ ಯಂಡಿಗೇರಿ, ಸಂಗಮೇಶ ನೀರಲೋಟಿ, ಮಹಾದೇವಿ ಅಸೂಟಿ, ಶಿವಪ್ಪ ಆರೇರ, ಯಮನೂರಸಾಹೇಬ ಬಿಚ್ಚುಮನಿ, ಯಲ್ಲಪ್ಪ ಭಾಸಲಾಪುರ, ಸಿದ್ದು ಕಂಠಿ, ರುದ್ರಯ್ಯ ಸಾಲಿಮಠ, ಆರ್.ವಾಯ್ ಕೆಲ್ಲೂರ, ಆರ್ ಎಂ ಗೊಡಚಪ್ಪನವರ, ಆರ್.ಎಸ್ ಗೌಡರ, ಕವಿತಾ ಬಂಡ್ರಿ, ಶಾಜಿದಾ ಬೇಗಂ, ರತ್ನಮ್ಮ ಪವಾಡಶೆಟ್ರ, ಬಿ.ಜಿ.ಕ್ಯಾತನ ಗೌಡ್ರ, ಎಲ್.ಬಿ.ಉಪ್ಪಾರ, ಹಾಲಪ್ಪ, ಪ್ರಕಾಶ ಮಡಿವಾಳರ ಇತರರಿದ್ದರು.



ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದಿ ಸಾಧನೆ ಮಾಡಲಿ: ಹೇಮಂತ್‌ಗೌಡ ಪಾಟೀಲ

ಮುಂಡರಗಿ: ಜಗದ್ಗುರು ತೋಂಟದ ಸಿದ್ದಲಿಂಗೇಶ್ವರ ಕೋಟಿ ಪ್ರೌಢಶಾಲೆಯನ್ನು 42 ವರ್ಷಗಳ ಹಿಂದೆ ಹಿರಿಯರ ಪರಿಶ್ರಮದಿಂದ ಕಟ್ಟಿ ಬೆಳೆಸಲಾಗಿದೆ. ಆ ಹಿರಿಯರಲ್ಲಿ ನಮ್ಮ ತಂದೆಯವರಾದ ದಿವಂಗತ ವಿ.ಎಚ್. ಪಾಟೀಲ್ ಅವರು ಸಂಸ್ಥಾಪಕ ಅಧ್ಯಕ್ಷರಾಗಿ ಹಲವಾರು ವರ್ಷಗಳಿಂದ ಶಾಲೆಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಮಕ್ಕಳು ಶ್ರದ್ಧೆಯಿಂದ ಚೆನ್ನಾಗಿ ಓದಿ ಅತ್ಯುತ್ತಮ ಫಲಿತಾಂಶವನ್ನು ಎಲ್ಲರೂ ಪಡೆದುಕೊಳ್ಳಬೇಕು ಎಂದು ತಾಲೂಕು ಬ್ಲಾಕ್ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಹೇಮಂತ್‌ಗೌಡ ಪಾಟೀಲ ಹೇಳಿದರು.

ಅವರು ಇಲ್ಲಿಯ ಭುವನೇಶ್ವರಿ ವಿದ್ಯಾವರ್ಧಕ ಸಮಿತಿಯ ಜಗದ್ಗುರು ತೋಂಟದ ಸಿದ್ದಲಿಂಗೇಶ್ವರ ಕೋಟಿ ಪ್ರೌಢಶಾಲೆಯ 2ನೇ ವಾರ್ಷಿಕ ಸ್ನೇಹ ಸಮ್ಮೇಳದ ನಿಮಿತ್ತ ಹಮ್ಮಿಕೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಂಡರಗಿ ತಾಲೂಕು ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಡಿ.ಡಿ. ಮೊರನಾಳ ಮಾತನಾಡಿ, ಪಾಲಕರು ತಮ್ಮ ಮಕ್ಕಳನ್ನ ಚೆನ್ನಾಗಿ ಓದಿಸಬೇಕು ಎಂದರು.

ಶಾಲಾ ಸಮಿತಿಯ ಗೌರವ ಕಾರ್ಯದರ್ಶಿ ಎ. ವೈ.ನವಲಗುಂದ ಅಧ್ಯಕ್ಷತೆ ವಹಿಸಿದ್ದರು. 2025-26ನೇ ಸಾಲಿನ ವರ್ಷದ ಕಾರ್ಯಕ್ರಮಗಳ ಹಾಗೂ ಶಾಲಾ ವಿದ್ಯಾರ್ಥಿಗಳ ಸಾಧನೆಗಳ ವಿವರಗಳನ್ನು ಒಳಗೊಂಡ ವರದಿ ವಾಚನವನ್ನು ಸಮಿತಿಯ ಸದಸ್ಯ ಆರ್.ಬಿ. ಹಕ್ಕಂಡಿ ಓದಿದರು. ಭುವನೇಶ್ವರಿ ವಿದ್ಯಾವರ್ಧಕ ಸಮಿತಿಯ ಸದಸ್ಯರಾದ ಎನ್.ಎಸ್.ಶೇಡದ್, ವೆಂಕಟೇಶ್ ಗುಗ್ಗರಿ, ಮಂಜುನಾಥ್ ಗದ್ದಿ, ಶಿವಾನಂದ ಬಂಡಿವಡ್ಡರ, ಅಲಿಸಾಬ್ ನದಾಫ್, ಮಲ್ಲಪ್ಪ ನಾಯ್ಕರ, ದೇವೇಂದ್ರಪ್ಪ ರಾಮೇನಹಳ್ಳಿ, ರಾಮಣ್ಣ ನಿಟ್ಟಾಲಿ, ಶಶಿಧರ್ ಅಡರಕಟ್ಟ, ಪ್ರದೀಪ್ ನಾಯಕ್ ಉಪಸ್ಥಿತರಿದ್ದರು. ಶಾಲೆಯ ಮುಖ್ಯೋಪಾಧ್ಯಾಯ ಮಂಜುನಾಥ ತೆಗ್ಗಿನಮನಿ ಸ್ವಾಗತಿಸಿದರು. ಶಿಕ್ಷಕ ಆರ್.ವಿ. ಅರ್ಕಸಾಲಿಂ ನಿರೂಪಿಸಿದರು. ಶಿಕ್ಷಕ ಎಂ. ಟಿ. ಮಾಳಪುರ್ ವಂದಿಸಿದರು.



ರೈತರ ಆರ್ಥಿಕ ಪ್ರಗತಿಗೆ ಅತ್ಯಾಧುನಿಕ ಹೈನುಗಾರಿಕೆ ಪರಿಹಾರ: ಎಚ್‌ಕೆ ಪಾಟೀಲ

ಗದಗ: ಪಶು ಸಂಗೋಪನೆ ಮತ್ತು ಪ್ರಾಣಿ ಕಲ್ಯಾಣ ಕ್ಷೇತ್ರದಲ್ಲಿ ಸಮಗ್ರ ಅಭಿವೃದ್ಧಿಗೆ ತಾಂತ್ರಿಕ ಜ್ಞಾನ ವಿನಿಮಯ ಅತ್ಯಾವಶ್ಯಕ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅಭಿಪ್ರಾಯಪಟ್ಟರು.



ನಾಗಾವಿಯ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗ್ರಾಮ ಗಂಗೋತ್ರಿಯಲ್ಲಿ ಆವರಣದಲ್ಲಿ ಜಿಲ್ಲಾ ಪಂಚಾಯತ್, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಪ್ರಾಣಿ ಕಲ್ಯಾಣ ಮಂಡಳಿ, ಕರ್ನಾಟಕ ಪಶು ವೈದ್ಯಕೀಯ ಸಂಘ ಹಾಗೂ ಹ್ಯೂಮೇನ್ ವರ್ಲ್ಡ್ ಫಾರ್ ಅನಿಮಲ್ ಇಂಡಿಯಾ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಪಶು ಸಂಗೋಪನೆ ಹಾಗೂ ಪ್ರಾಣಿ ಕಲ್ಯಾಣ ಮಾಸಾಚರಣೆ ಅಂಗವಾಗಿ ಬೆಳಗಾವಿ ವಿಭಾಗ ಮಟ್ಟದ ತಾಂತ್ರಿಕ ಸಮ್ಮೇಳನ ಶನಿವಾರ ಉದ್ಘಾಟಿಸಿ ಮಾತನಾಡಿದರು. ಪಶುಪಾಲನಾ ಕ್ಷೇತ್ರ ಗ್ರಾಮೀಣ ಆರ್ಥಿಕತೆಯ ಬೆನ್ನೆಲುಬಾಗಿದ್ದು, ವೈಜ್ಞಾನಿಕ ಪದ್ಧತಿ, ಹೊಸ ತಂತ್ರಜ್ಞಾನ ಮತ್ತು ಪ್ರಾಣಿ ಕಲ್ಯಾಣದ ಮೌಲ್ಯಗಳನ್ನು ಸಮನ್ವಯಗೊಳಿಸುವ ಮೂಲಕ ರೈತರ ಆದಾಯವನ್ನು ಹೆಚ್ಚಿಸಬಹುದು ಎಂದರು. ಉತ್ತರ ಕರ್ನಾಟಕ ಭಾಗದಲ್ಲಿ ಹೈನುಗಾರಿಕೆ ಕ್ಷೇತ್ರದ ಬೆಳವಣಿಗೆ ನಿಧಾನಗತಿಯಲ್ಲಿ ಸಾಗಿದೆ, ರಾಜ್ಯದ ಕೋಲಾರ, ಮಂಡ್ಯ ಸೇರಿದಂತೆ ಮಹಾರಾಷ್ಟ್ರ ರಾಜ್ಯದಲ್ಲಿ ಹೈನುಗಾರಿಕೆ ರೈತರಿಗೆಲ್ಲ ಲಾಭದಾಯಕ ಕಸುಬಾಗಿದೆ. ಅವರಿಗೆ ಸಾಧ್ಯವಾಗಿದ್ದು ಇಲ್ಲಿ ಏಕೆ ಸಾಧ್ಯವಾಗಿಲ್ಲ ಎಂಬ ಚರ್ಚೆಯಾಗಲಿ ಎಂದರು. ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ನಿರ್ದೇಶಕ ಡಾ.ಪಿ.ಶ್ರೀನಿವಾಸ, ವಿಶ್ವವಿದ್ಯಾಲಯದ ಕುಲಪತಿ (ಪ್ರಭಾರ) ಹಾಗೂ ಕುಲಸಚಿವ ಪ್ರೊ.ಡಾ.ಸುರೇಶ್ ನಾಡಗೌಡರ, ಪಶು ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಎಸ್.ಜಿ.ಯಲಗೋಡ, ಪಶು ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ.ಬಿ.ರಾಮಚಂದ್ರ, ಬೀದರ ಕೆವಿಎಫ್‌ಎಸ್‌ಯು ಉಪಕುಲಪತಿ ಡಾ.ಸುರೇಶ್ ಹೊನ್ನಪ್ಪಗೊಳ, ಕೃಷ್ಣ ಇಸ್ಲೂರ, ಹ್ಯೂಮೇನ್ ವರ್ಲ್ಡ್ ಫಾರ್ ಅನಿಮಲ್ ಇಂಡಿಯಾ ಫೌಂಡೇಶನ್ ಪ್ರತಿನಿಧಿ ರಮೇಶ್ ಭಜಂತ್ರಿ ಇದ್ದರು. ಉಪನಿರ್ದೇಶಕ ಡಾ.ಎಚ್.ಬಿ.ಹುಲಗಣ್ಣವರ ಸ್ವಾಗತಿಸಿದರು. ಪಶು ವೈದ್ಯಕೀಯ ಸಂಘದ ಅಧ್ಯಕ್ಷ ಡಾ. ಆರ್.ವೈ. ಗುರಿಕಾರ ಮಾತನಾಡಿದರು. ಪ್ರೊ.ಬಾಹುಬಲಿ ಜೈನರ ನಿರ್ವಹಿಸಿದರು.

ಪುಲಿಗೆರೆ ಉತ್ಸವ: ಪಲ್ಲಕ್ಕಿ ಮೆರವಣಿಗೆ



ಲಕ್ಷ್ಮೇಶ್ವರ: ಇನ್ಫೋಸಿಸ್ ಪ್ರತಿಷ್ಠಾನದಿಂದ ನಡೆಯುತ್ತಿರುವ 9ನೇ ವರ್ಷದ ಪುಲಿಗೆರೆ ಉತ್ಸವ ಅಂಗವಾಗಿ ಶನಿವಾರ ಪುಲಿಗೆರೆಯ ಆರಾಧ್ಯ ದೈವ ಸೋಮೇಶ್ವರನ ಉತ್ಸವ ಮೂರ್ತಿಯನ್ನಿರಿಸಿದ ಪಲ್ಲಕ್ಕಿ ಮೆರವಣಿಗೆ ಸಕಲ ವಾದ್ಯ ವೈಭವಗಳೊಂದಿಗೆ ಅದ್ದೂರಿಯಾಗಿ ನೆರವೇರಿತು. ಮೆರವಣಿಗೆಯಲ್ಲಿ ಕೊಣ್ಣೂರಿನ ರಾಯಣ್ಣ ಮಹಿಳಾ ಡೊಳ್ಳು ಮೇಳ, ನಂದಿಕೋಲು ಕುಣಿತ, ವಾದ್ಯಮೇಳಗಳು, ಪೂರ್ಣಕುಂಭ ಮೆರವಣಿಗೆ ರಂಗು ಹೆಚ್ಚಿಸಿದ್ದವು.

ಮೆರವಣಿಗೆಯಲ್ಲಿ ಶಾಸಕ ಡಾ. ಚಂದ್ರು ಲಮಾಣಿ, ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲ್ ಕುಲಕರ್ಣಿ, ಚಂಬಣ್ಣ ಬಾಳಿಕಾಯಿ, ಡಾ. ಪಿ.ಡಿ. ತೋಟದ, ಸುರೇಶ ರಾಚನಾಯಕ, ಎಸ್.ಪಿ. ಪಾಟೀಲ, ವಿರೂಪಾಕ್ಷಪ್ಪ ಆದಿ, ಈಶ್ವರ ಮೆಡ್ಲೇರಿ, ಡಾ. ಎಸ್.ಜಿ. ಹೂವಿನ, ಕಿರಣ ನವಲೆ, ಪ್ರಕಾಶ ಉಪನಾಳ, ಬಸವರಾಜ ಮೆಣಸಿನಕಾಯಿ, ಸಿದ್ದನಗೌಡ ಬಳ್ಳೊಳ್ಳಿ, ಮಯೂರಗೌಡ ಪಾಟೀಲ, ಐ.ಎಸ್.ಮಡಿವಾಳರ, ಶಿವಯೋಗಿ ಅಂಕಲಕೋಟಿ, ರಾಜಶೇಖರ ಶಿಗ್ಲಿಮಠ, ರುದ್ರಪ್ಪ ನರೆಗಲ್, ನಾರಾಯಣಪ್ಪ ಗಾರ್ಗಿ,ನಾರಾಯಣಸಾ ಪವಾರ, ಈರಣ್ಣ ಮುಳುಗುಂದ, ನಂದೀಶ ಬಂಡಿವಾಡ, ಜಿ ಎಸ್ ಗುಡಗೇರಿ, ಗಂಗಾದರಯ್ಯ ಪುರಾಣಿಕಮಠ ಇತರರಿದ್ದರು.

ಕಡಲೆಕಾಳು ಖರೀದಿ ಕೇಂದ್ರಕ್ಕೆ ಚಾಲನೆ

ಶಿರಹಟ್ಟಿ: ಕಡಲೆ ಬೆಳೆಯನ್ನು ಬೆಂಬಲ ಬೆಲೆ ಯೋಜನೆಯಡಿ ಎಫ್‌ಎಕ್ಯೂ ಗುಣಮಟ್ಟದ ಕಡಲೆಕಾಳನ್ನು ಪ್ರತಿ ಕ್ವಿಂಟಾಲ್‌ಗೆ ನಿಗದಿಪಡಿಸಿದ ರೂ. 5875 ರಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ವಯ ತಾಲೂಕಿನ ರೈತರಿಂದ ಖರೀದಿಸಲು ಖರೀದಿ ಕೇಂದ್ರ ತೆರೆದಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಿ.ತಾ.ಒ.ಮಾ.ಸ. ಸಂಘದ ಅಧ್ಯಕ್ಷ ವಿಶ್ವನಾಥ ಕಪ್ಪತ್ತನವರ ಹೇಳಿದರು.

ಇಲ್ಲಿಯ ಶಿರಹಟ್ಟಿ ತಾಲೂಕು ಒಕ್ಕಲೂತನ ಮಾರಾಟ ಸಹಕಾರ ಸಂಘದಲ್ಲಿ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಎಫ್‌ಎಕ್ಯೂ ಗುಣಮಟ್ಟದ ಕಡಲೆಕಾಳು ಖರೀದಿ ಕೇಂದ್ರಕ್ಕೆ ಶನಿವಾರ ಚಾಲನೆ ನೀಡಿ ಮಾತನಾಡಿ, ಈ ಬಾರಿ ಗುರಿಗಿಂತಲೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಕಡಲೆ ಬೆಳೆ ಬಿತ್ತನೆ ಮಾಡಿ ಫಸಲು ತೆಗೆಯಲಾಗಿದೆ. ಉತ್ತಮವಾಗಿ ಮತ್ತು ಯೋಗ್ಯ ಬೆಂಬಲ ಬೆಲೆ ರೈತರಿಗೆ ನೀಡಲಾಗುವುದು ಎಂದರು. ಸಂಘದ ಕಾರ್ಯದರ್ಶಿ ಮಹೇಶ ಮತ್ತೂರ ಮಾತನಾಡಿ, ರೈತರು ಮಾರುಕಟ್ಟೆಯಲ್ಲಿ ಬೇಕಾಬಿಟ್ಟಿ ದರಕ್ಕೆ ಮಾರಾಟ ಮಾಡದೇ ಸರ್ಕಾರ ನಿಗದಿ ಪಡಿಸಿದ ಬೆಂಬಲ ಬೆಲೆ ದರಕ್ಕೆ ಕಡಲೆಕಾಳು ಮಾರಾಟ ಮಾಡಬೇಕು. ಸರ್ಕಾರದ ನಿಯಮಾವಳಿ ಪ್ರಕಾರ ತಮ್ಮ ಖಾತೆಗೆ ಹಣ ಜಮಾ ಆಗಲಿದೆ ಎಂದರು. ತಿಪ್ಪಣ್ಣ ಕೊಂಚಿಗೇರಿ, ಸಂದೀಪ ಕಪ್ಪತ್ತನವರ, ಸಂದೇಶ ಗಾಣಿಗೇರ, ಸುರಣ್ಣ ಕಪ್ಪತ್ತನವರ, ಉಮೇಶ ಗಾಣಿಗೇರ, ಮಹೇಶ ತಳವಾರ ಇತರರಿದ್ದರು.



ಸ್ಥಳೀಯ ಭಾಷೆ ಕಡೆಗಣಿಸದಿರಿ: ಶ್ರೀಗಳು



ನರಗುಂದ: ವಿಶ್ವದಾದ್ಯಂತ 7,000 ಭಾಷೆಗಳು ಬಳಕೆಯಲ್ಲಿದ್ದರೂ, ಔಪಚಾರಿಕ ಶಿಕ್ಷಣದಲ್ಲಿ ಕೇವಲ 351 ಭಾಷೆಗಳನ್ನಷ್ಟೇ ಬಳಸಲಾಗುತ್ತಿದೆ. ಜಾಗತೀಕರಣ, ನಗರೀಕರಣ ಮತ್ತು ಇಂಗ್ಲಿಷ್ ಭಾಷೆಯ ಪ್ರಾಬಲ್ಯದಿಂದ ಅನೇಕ ಸ್ಥಳೀಯ ಭಾಷೆಗಳು ಅಳಿವಿನಂಚಿಗೆ ತಲುಪಿದ್ದು ಕಳವಳದ ಸಂಗತಿ. ನಮ್ಮ ಮಾತೃಭಾಷೆಯಾದ ಕನ್ನಡವನ್ನು ನಾವು ಕಡೆಗಣಿಸದೆ ಯುವ ಸಮುದಾಯ ಕನ್ನಡದ ಬಗ್ಗೆ ಹೆಚ್ಚೆಚ್ಚು ಜಾಗೃತಿ ಮತ್ತು ಅಭಿಮಾನವನ್ನು ತೋರಬೇಕಾಗಿದೆ ಎಂದು ಬೈರನಹಟ್ಟಿಯ ಶಾಂತಲಿಂಗ ಶ್ರೀಗಳು ಹೇಳಿದರು.

ಅವರು ತಾಲೂಕಿನ ಬೈರನಹಟ್ಟಿ ಗ್ರಾಮದ ದೊರೆಸ್ವಾಮಿ ವಿರಕ್ತಮಠದಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಹಾಗೂ ಶ್ರೀ ದೊರೆಸ್ವಾಮಿ ವಿವಿಧೋದ್ದೇಶ ಟ್ರಸ್ಟ್ ಇವರ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಾತೃಭಾಷಾ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿ, ವರದಿಗಳ ಪ್ರಕಾರ ಸುಮಾರು 34 ಸಾವಿರ ಕನ್ನಡ ಶಾಲೆಗಳು ಮುಚ್ಚುಲಾಗುವುದೆಂಬುದು ದುರ್ದೈವದ ಸಂಗತಿಯಾಗಿದೆ ಎಂದರು.

ಉಪನ್ಯಾಸಕ ಪ್ರೊ.ಬಿ.ಎಂ. ಲಂಕೆನ್ನವರ ಮಾತನಾಡಿ, ಶಾಲೆಗಳಲ್ಲಿ ಮಾತೃಭಾಷಾ ಆಧಾರಿತ ಶಿಕ್ಷಣ ವ್ಯವಸ್ಥೆ, ಸ್ಥಳೀಯ ಸಾಹಿತ್ಯ ಮತ್ತು ಜನಪದ ಕಲೆಗಳ ಉತ್ತೇಜನ, ಡಿಜಿಟಲ್ ವೇದಿಕೆಗಳಲ್ಲಿ ಸ್ಥಳೀಯ ಭಾಷೆಗಳ ಬಳಕೆ, ಯುವ ಪೀಳಿಗೆಯಲ್ಲಿ ಭಾಷಾ ಗೌರವ ಮೂಡಿಸುವ ಅಭಿಯಾನಗಳನ್ನು ನಡೆಸುವ ಮೂಲಕ ಕನ್ನಡ ಭಾಷೆಯನ್ನು ಬಲಪಡಿಸಬೇಕು ಎಂದರು. ನವಲಗುಂದ ಗವಿಮಠದ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮುಖ್ಯೋಪಾಧ್ಯಾಯರಾಗಿ ಬಡ್ತಿ ಹೊಂದಿದ ವಿ.ಜಿ. ಬೋಗಾರ ಅವರನ್ನು ಶ್ರೀಮಠದಿಂದ ಸತ್ಕರಿಸಲಾಯಿತು. ಶಿಕ್ಷಕರಾದ ಎಸ್.ಎಸ್. ಪಾಟೀಲ, ನಿವೃತ್ತ ಉಪನ್ಯಾಸಕ ಎಸ್.ಬಿ. ಭಜಂತ್ರಿ, ಪ್ರೊ. ಆರ್.ಕೆ. ಐನಾಪೂರ, ಪ್ರೊ. ಆರ್.ಬಿ. ಚಿನಿವಾಲರ ಇತರರಿದ್ದರು. ಮಹಾಂತೇಶ ಹಿರೇಮಠ ನಿರ್ವಹಿಸಿದರು.

ಆಳ್ವಾಸ್ ಸಾಂಸ್ಕೃತಿಕ ವೈಭವ ನಾಳೆ

ಗದಗ: ಉಸಿರು ಫೌಂಡೇಶನ್ 10ನೇ ವರ್ಷದ ಸಂಭ್ರಮೋತ್ಸವ ಪ್ರಯುಕ್ತ ಆಳ್ವಾಸ್ ನುಡಿಸಿರಿ-ವಿರಾಸತ್ ಘಟಕದಿಂದ 500 ವಿದ್ಯಾರ್ಥಿ ಕಲಾವಿದರಿಂದ ಭಾರತೀಯ ನೃತ್ಯ ಕಾರ್ಯಕ್ರಮ ನಗರದ ವಿದ್ಯಾದಾನ ಶಿಕ್ಷಣ ಸಮಿತಿ ಮೈದಾನದಲ್ಲಿ ಫೆ.23ರಂದು ನಡೆಯಲಿದೆ ಎಂದು ಉಸಿರು ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಶರಣ್ ಪಾಟೀಲ ಮಾಹಿತಿ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾರ್ಯಕ್ರಮದ ಸಾನ್ನಿಧ್ಯ ಜ.ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ವಹಿಸಿಕೊಳ್ಳಲಿದ್ದು, ಉದ್ಘಾಟನೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಬಸವರಾಜ ಬೊಮ್ಮಾಯಿ, ಜಿ.ಎಂ.ಸಿದ್ದೇಶ್ವರ, ಶಾಸಕ ಸಿ.ಸಿ.ಪಾಟೀಲ, ಮುರಗೇಶ ನಿರಾಣಿ, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ನೆರವೇರಿಸಲಿದ್ದಾರೆ. ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಆಳ್ವ ಅಧ್ಯಕ್ಷ ಡಾ.ಎಂ.ಮೋಹನ, ಶಾಸಕ ಎಸ್.ವಿ.ಸಂಕನೂರ, ಶಾಸಕ ಡಾ.ಚಂದ್ರು ಲಮಾಣಿ, ಅನಿಲ ಮೆಣಸಿನಕಾಯಿ, ಲಿಂಗರಾಜ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿರಲಿದ್ದಾರೆ ಎಂದರು. ಆಳ್ವಾಸ್ ಸಾಂಸ್ಕೃತಿಕ ವೈಭವ ರಾಷ್ಟ್ರಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದು, ಈ ಕಲಾವಿದರು ಗದಗದಲ್ಲಿ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವುದು ಸಂತೋಷದ ವಿಷಯವಾಗಿದೆ. ನಮ್ಮ ಸಂಸ್ಕೃತಿಯನ್ನು ಆಳ್ವಾಸ್ ಬಿತ್ತರಿಸುತ್ತಿದೆ ಎಂದರು.

ಈ ವೇಳೆ ಶಿವಾನಂದ ಪಲ್ಲೇದ, ಉಮೇಶ್ ಹಿರೇಮಠ, ಈರಣ್ಣ ಬಾಳಿಕಾಯಿ, ಸಂಗಮೇಶ, ನಾಗೇಶ ಹುಬ್ಬಳ್ಳಿ, ಬಸವರಾಜ ಗಡ್ಡೆಪ್ಪನವರ, ಅಯ್ಯಪ್ಪ ಅಂಗಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕಿರುಸುದ್ದಿ

ಜಿಲ್ಲೆಗೆ ಮುತಾಲಿಕ್, ಕೆರೆಹಳ್ಳಿ ಪ್ರವೇಶಕ್ಕೆ ನಿಷೇಧ

ಬಾಗಲಕೋಟೆ: ಶ್ರೀರಾಮ ಸೇನೆ ಪ್ರಮೋದ ಮುತಾಲಿಕ್ ಹಾಗೂ ಹಿಂದೂ ಮುಖಂಡ ಪುನೀತ್ ಕೆರೆಹಳ್ಳಿ ಅವರಿಗೆ ಬಾಗಲಕೋಟೆ ಜಿಲ್ಲೆ ಪ್ರವೇಶಕ್ಕೆ ಶುಕ್ರವಾರದಿಂದ ಒಂದು ತಿಂಗಳ ಕಾಲ ನಿಷೇಧ ಹೇರಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಅ ನೀಡಿರುವ ಅವರು, ನಗರದಲ್ಲಿ ಶಿವಾಜಿ ಜಯಂತಿ ಮೆರವಣಿಗೆ ವೇಳೆ ಕಲ್ಲು ತೂರಾಟ ಆಗಿ ನಗರದ ಪರಿಸ್ಥಿತಿ ಸರಿಯಲ್ಲದ ಕಾರಣ, ಫೆ.21ರಿಂದ ಮಾರ್ಚ್ 21ರ ವರೆಗೆ ಈ ಇಬ್ಬರಿಗೂ ಜಿಲ್ಲೆ ಪ್ರವೇಶಕ್ಕೆ ನಿಷೇಧ ಹೇರಲಾಗಿದೆ ಎಂದು ತಿಳಿಸಿದ್ದಾರೆ.

ಇಬ್ಬರ ವಿರುದ್ಧ ಕೇಸ್ ದಾಖಲು

ಬಾಗಲಕೋಟೆ: ಗುರುವಾರ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ನಗರದ ಮಾರುಕಟ್ಟೆಯ ಹತ್ತಿರ ಕಲ್ಲು ತೂರಾಟ ನಡೆಸಿದ ಇಬ್ಬರ ವಿರುದ್ಧ ಬಾಗಲಕೋಟೆ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಎಸ್ಪಿ ಸಿದ್ದಾರ್ಥ ಗೋಯಲ್, ಬಾಗಲಕೋಟೆಯ ಅಶೋಕ ಬಾರಕೇರ ಹಾಗೂ ಸಿದ್ದಪ್ಪ ಘೇರಡೆ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಅಶೋಕ ಕಲ್ಲು ತೂರಿ ಓಡಿ ಹೋಗುವಾಗ ಬಿದ್ದು ಗಾಯಮಾಡಿಕೊಂಡಿದ್ದು, ನಮ್ಮ ಸಿಬ್ಬಂದಿ ಅವರಿಗೆ ಕೂಡಲೇ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ ಎಂದು ತಿಳಿಸಿದ್ದಾರೆ.

ವಿರಾಟ ಹಿಂದೂ ಸಮ್ಮೇಳನ | ಮಂಗೇಶ ಭೇಂಡೆ ಕರೆ

ಹಿಂದೂ ಅಸ್ಮಿತೆ ಉಳಿವಿಗೆ ಒಗ್ಗೂಡಿ

ಧಾರವಾಡ: ಭಾರತ ಇಬ್ಭಾಗಿಸಲು ದುಶ್ಶಕ್ತಿಗಳು ಹೊಂಚು ಹಾಕಿವೆ. ಹೀಗಾಗಿ ಹಿಂದೂ ಧರ್ಮದ ಅಸ್ಮಿತೆ ಉಳುವಿಗೆ ಹಿಂದುಗಳೆಲ್ಲ ಒಗ್ಗೂಡುವಂತೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಹೇಳಿದರು.

ಮದಿಹಾಳ ಉಪನಗರ ಹಿಂದೂ ಸಮ್ಮೇಳನ ಸಮಿತಿ, ಮದಿಹಾಳದಲ್ಲಿ ಶನಿವಾರ ಹಮ್ಮಿಕೊಂಡ ಹಿಂದೂ ವಿರಾಟ್ ಸಮ್ಮೇಳನ ಉದ್ಘಾಟಿಸಿ, ಭಾರತ ಇಬ್ಭಾಗಿಸಲು ದುಷ್ಟಶಕ್ತಿಗಳಿಗೆ ನಮ್ಮ ರಾಜಕೀಯ ನಾಯಕರು ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಜಗತ್ತಿನಲ್ಲಿ ಅಧಿಕ ಯುವ ಜನಾಂಗ ಹೊಂದಿದ ದೇಶ ಭಾರತ. ಹೀಗಾಗಿ ನಮ್ಮ ದೇಶ ದುರ್ಬಲಗೊಳಿಸಲು ನಮ್ಮ ಯುವಜನತೆ ಮಾದಕ ವಸ್ತುಗಳ ದಾಸರಾಗಿ ಮಾಡುವ ದುಷ್ಟರ ಕೂಟ ಏರ್ಪಟ್ಟಿದೆ. ಇದೊಂದು ಅಂತಾರಾಷ್ಟ್ರೀಯ ಷಡ್ಯಂತ್ರ ಎಂದು ತಿಳಿಸಿದರು.

ಹಿಂದು ಹೆಣ್ಣು ಮಕ್ಕಳ ಅಪಹರಣ, ಲವ್ ಜಿಹಾದಿ ಮೂಲಕ ಮುಸ್ಲಿಂರು ಮತ್ತು ಶಿಕ್ಷಣ, ಸಮಾಜ ಸೇವೆ ಹೆಸರಿನಲ್ಲಿ ಕ್ರೈಸ್ತರು ಹಿಂದೂಗಳ ಮತಾಂತರ ಮಾಡುವ ಹುನ್ನಾರ ನಡೆಸಿವೆ. ಪಾಲಕರು ಮಕ್ಕಳ ಕಡೆಗೆ ಹೆಚ್ಚು ಗಮನ ಹರಿಸಲು ಭೇಂಡೆ ಸಲಹೆ ನೀಡಿದರು.



ಭವ್ಯ ಶೋಭಾಯಾತ್ರೆ
ಹಿಂದೂ ಸಮ್ಮೇಳನದ ಅಂಗವಾಗಿ ಮುರುಘಾಮಠದಿಂದ ಪ್ರಾರಂಭವಾದ ಭವ್ಯ ಶೋಭಾಯಾತ್ರೆ, ಅದ್ದೂರಿ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಈ ಮೆರವಣಿಗೆಗೆ ಸಾಂಪ್ರದಾಯಿಕ ಡೊಳ್ಳು ಕುಣಿತ, ವೀರಗಾಸೆ, ಕೇಸರಿ ಧ್ವಜ ಹಿಡಿದ ಯುವಕರ ಜೈ ಘೋಷ ಕಳೆ ತಂದಿತು.

ಪಾಕಿಸ್ತಾನ, ಬಾಂಗ್ಲಾದೇಶ ಹಾಗೂ ಚೀನಾ ಬೆಂಬಲಿತ ಕಮ್ಯುನಿಷ್ಟರು, ನಕ್ಸಲ್ ಹಾಗೂ ಮಾರ್ಕ್ಸವಾದಿ ಸಂಘಟನೆಗಳು ದೇಶದ ಅನ್ನ ತಿಂದು, ನೀರು ಕುಡಿದು ದೇಶದ್ರೋಹ ಮಾಡುವುದು ನಾಚಿಗೇಡು. ಹಿಂದೂಗಳೆಲ್ಲ ಜಾಗೃತರಾಗಬೇಕು ಎಂದು ಹೇಳಿದರು.

ಹಿಂದೂಗಳು ಒಗ್ಗೂಡಿದರೆ, ಜಗತ್ತು ಆಳುವ ಶಕ್ತಿ ಬರಲಿದೆ. ಈ ಕಾರಣಕ್ಕೆ ದೇಶದ ಒಳ ಹೊರಗೂ ಹಿಂದೂ ಸಮಾಜ ಒಡೆಯುವ ಹುನ್ನಾರ ನಡೆಯುತ್ತಿದೆ. ಹಿಂದೂ ಸಮಾಜ ಬಲಗೊಳ್ಳಲು ಮೊದಲು ಕುಟುಂಬಗಳು ಗಟ್ಟಿಯಾಗಬೇಕು ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಅಮ್ಮಿನಬಾವಿ ಅಭಿನವ ಶಾಂತಲಿಂಗ ಶಿವಾಚಾರ್ಯ ಶ್ರೀಗಳು, ಚದುರಿ ಹೋಗಿರುವ ಹಿಂದೂ ಸಮಾಜ ಒಗ್ಗೂಡಿಸುವಲ್ಲಿ ಈ ಸಮ್ಮೇಳನ ಮುಖ್ಯ ಪಾತ್ರ ವಹಿಸಲಿವೆ. ನಾವು ಸಂಘಟಿತರಾದರೆ ಯಾವುದೇ ಬಾಹ್ಯ ಸವಾಲುಗಳನ್ನು ಎದುರಿಸಲು ಸಾಧ್ಯ. ಸಮಾಜದಲ್ಲಿ ಶಾಂತಿ, ಏಕತೆ, ಸನಾತನ ಧರ್ಮ ಉಳುವಿಗೆ ಶ್ರಮಿಸಲು ಹೇಳಿದರು.

ವೇದಿಕೆಯಲ್ಲಿ ಸಮ್ಮೇಳನ ಸಮಿತಿ ಅಧ್ಯಕ್ಷ ರಮೇಶಸಿಂಗ್ ಠಾಕೂರ್, ಉಪಾಧ್ಯಕ್ಷೆ ಸರೋಜಾ ಹಿರೇಮಠ, ಕಾರ್ಯದರ್ಶಿ ಮಂಜುನಾಥ ಮಕ್ಕಳಗೇರಿ, ಬಾಲಕೃಷ್ಣ ಜೋಶಿ ಇದ್ದರು. ಮಂಜುನಾಥ ಬಟ್ಟೂರ ಸ್ವಾಗತಿಸಿದರು ಹಾಗೂ ರಾಜೇಶ ಶಿಂಧೆ ನಿರೂಪಿಸಿದರು.

ವಿರಾಟ ಹಿಂದೂ ಸಮ್ಮೇಳನ: ಭವ್ಯ ಶೋಭಾಯಾತ್ರೆ



ಬಾಗಲಕೋಟೆ: ವಿರಾಟ ಹಿಂದೂ ಸಮ್ಮೇಳನದ ಬೃಹತ್ ಶೋಭಾಯಾತ್ರೆ ನವನಗರ ಸೆಕ್ಟರ್ ನಂ.32ರ ಉದ್ಭವ ಗಣಪತಿ ದೇವಸ್ಥಾನದಿಂದ ಹಿಂದೂ ವಿರಾಟ ಸಮ್ಮೇಳನದ ಅಂಗವಾಗಿ ಬೃಹತ್ ಶೋಭಾಯಾತ್ರೆ ವೈಭವದಿಂದ ನಡೆಯಿತು.

ನವನಗರದ ಸೆಕ್ಟರ್ ನಂ.30ರ ಉದ್ಭವ ಭಜರಂಗಿ ಗಣೇಶ ದೇವಸ್ಥಾನದಿಂದ ಆರಂಭಗೊಂಡ ಶೋಭಾಯಾತ್ರೆ ಕೋರಮ್ಮದೇವಿ ದೇವಸ್ಥಾನದಿಂದ ನವನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ವೀರಭದ್ರೇಶ್ವರ ದೇವಸ್ಥಾನ ತಲುಪಿ ಸಾರ್ವಜನಿಕ ಸಭೆಯಾಗಿ ಮಾರ್ಪಟ್ಟಿತು.

ಶೋಭಾಯಾತ್ರೆಯಲ್ಲಿ ಸುಮಂಗಲಿಯರ ಕುಂಭಮೇಳ, ಕೋಲಾಟ ಗಮನಸೆಳೆಯಿತು. ಡೊಳ್ಳು, ಹಲಗೆ, ಕರಡಿ ಮಜಲು ಬ್ಯಾಂಡ್ ಬಾಜಾಗಳೊಂದಿಗೆ ಮೆರವಣಿಗೆ ನಡೆಯಿತು.

ಮೆರವಣಿಗೆ ಸಾಗುವ ಮಾರ್ಗದಲ್ಲಿ ಸ್ವಾಗತ ಕಮಾನ್, ಕೇಸರಿ ಭಾವುಟ ರಾರಾಜಿಸುತ್ತಿದ್ದವು. ಜತೆಗೆ ಸಕಲ ಸಮಾಜ ಮಹಾಪುರುಷರ ಸ್ತಬ್ಧಚಿತ್ರ ಮೆರವಣಿಗೆ ಗಮನಸೆಳೆಯಿತು.

ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಹಣಮಂತ ನಿರಾಣಿ, ಮಾಜಿ ಶಾಸಕ ವೀರಣ್ಣ ಚರಂತಿಮಠ, ವಿ.ಪ.ಮಾಜಿ ಸದಸ್ಯ ಅರುಣ್ ಶಹಾಪುರ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಜಿ.ಎನ್.ಪಾಟೀಲ, ಎಂ.ಆರ್.ಸಿಂಧೆ, ಸುರೇಶ ಮಾಗಿ, ಹೂವಪ್ಪ ರಾಠೊಡ, ಸತ್ಯನಾರಾಯಣ ಹೇಮಾದ್ರಿ, ಬಸಲಿಂಗಪ್ಪ ನಾವಲಗಿ, ಕುಮಾರಸ್ವಾಮಿ ಹಿರೇಮಠ, ಕಿರಣ್ ಪವಾಡಶೆಟ್ಟರ, ಪ್ರಭು ಹಡಗಲಿ, ಯಲ್ಲಪ್ಪ ಬೆಂಡಿಗೇರಿ, ಶಿವಾನಂದ ಟವಳಿ, ಬಸವರಾಜ ಯಂಕಂಚಿ, ವೀರಣ್ಣ ಹಳೇಗೌಡರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಕುಮ್ಮಕ್ಕು ನೀಡಿದವರ ಬಗ್ಗೆ ತನಿಖೆಯಾಗಲಿ: ಚರಂತಿಮಠ

ಬಾಗಲಕೋಟೆ: ಶಿವಾಜಿ ಮಹಾರಾಜರ ಶೋಭಾಯಾತ್ರೆ ಮೇಲೆ ಕಲ್ಲು ಎಸೆಯಲು ಕುಮ್ಮಕ್ಕು ನೀಡಿದವರು ಯಾರೆಂಬುದು ಬಯಲಾಗಬೇಕು, ಆ ನಿಟ್ಟಿನಲ್ಲಿ ಸೂಕ್ತ ತನಿಖೆ ನಡೆಯಬೇಕೆಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಒತ್ತಾಯಿಸಿದರು.

ನಗರದ ಖಾಸಗಿ ಆಸ್ಪತ್ರೆಯಲ್ಲಿ ಕಲ್ಲೇಸೆತದಿಂದ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಹಿಂದೂ ಕಾರ್ಯಕರ್ತ ಪ್ರಕಾಶ ಅರಕೇರಿ ಅವರ ಆರೋಗ್ಯವನ್ನು ವಿಚಾರಿಸಿ ಅವರು ಮಾತನಾಡಿದರು.

ಛತ್ರಪತಿ ಶಿವಾಜಿ ಮಹಾರಾಜರ ಶೋಭಾಯಾತ್ರೆಯ ಮೇಲೆ ಮಸೀದಿಯಿಂದ ಕಲ್ಲು ತೂರಾಟ ನಡೆಸಿರುವ ವಿಡಿಯೋ ಈಗ ಜಗಜ್ಜಾಹಿರಾಗಿದೆ. ಸತ್ಯ ಎನು ಎಂಬುವುದು ಎಲ್ಲರಿಗೂ ಗೊತ್ತಾಗಿದೆ.

ಅಲ್ಲಿಂದ ಮೂರು ಕಲ್ಲುಗಳು ತೂರಿ ಬಂದಿದ್ದು ಒಂದು ಎಸ್ಪಿ ಅವರ ಮೇಲೆ, ಪೊಲೀಸ್ ಸಿಬ್ಬಂದಿ ಹಾಗೂ ಪ್ರಕಾಶ ಎಂಬುವವರ ಮೇಲೆ ಬಿದ್ದು ಗಾಯಗಳಾಗಿದ್ದು ಸತ್ಯ, 8 ಜನರನ್ನು ಬಂಧನ ಮಾಡಲಾಗಿದೆ. ಪ್ರಾರ್ಥನೆಗಾಗಿರುವ ಮಸೀದಿಗಳಲ್ಲಿ ಕಲ್ಲು ಚಪ್ಪಲಿ ಹೇಗೆ ಬಂದವು, ಮಸೀದಿಗಳು ಕಲ್ಲು ಒಗೆಯಲು, ಇವೆಯಾ, ಮೊದಲು ಮಸೀದಿಗೆ ಬೀಗ ಹಾಕಿ ಸಂಬಂಧ ಪಟ್ಟವರನ್ನು ತನಿಖೆ ಮಾಡಿ.

ಶಿವಾಜಿ ಜಯಂತಿ ಮೆರವಣಿಗೆ ಮೇಲೆ ಕಲ್ಲು ಎಸೆತ ಪ್ರಕರಣ



ಈ ಕೃತ್ಯಕ್ಕೆ ಕಾರಣರಾದ ಕುಮ್ಮಕ್ಕು ನೀಡಿದವರು ಯಾರು ಎಂಬ ಸತ್ಯ ಬಯಲಾಗಲಿ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ಕೂಡಲೇ ಸಾರ್ವಜನಿಕರ ಸಂಚಾರಕ್ಕೆ ಆ ರಸ್ತೆಯನ್ನು ಮುಕ್ತಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಸವರಾಜ ಹುನಗುಂದ, ಕಪ್ಪಯ್ಯ ಮುತ್ತಿನಮಠ, ಚಂದ್ರು ರಾಮೋಡಗಿ, ಶಂಕರ ಕದಮ್, ಬಾಲಪ್ಪ ಅಂಬಿಗೇರ, ಸಂಗಣ್ಣ ಹಿತ್ತಲಮನಿ, ಸಂತೋಷ ಅರಕೇರಿ, ಅನೇಕರು ಇದ್ದರು.

ಉತ್ಪನ್ನ ಮಾರಾಟಕ್ಕೆ ಹೊಸ ಮಾರ್ಗ ಅವಶ್ಯ: ಬೊಮ್ಮಾಯಿ

ಹುಬ್ಬಳ್ಳಿ: ಅತಿ ದೊಡ್ಡ ಮಾರುಕಟ್ಟೆ ಭಾರತವಾಗಿದ್ದು, ಉದ್ಯಮದಲ್ಲಿ ಉತ್ಪನ್ನ ಮಾರಾಟ ಮಾಡಲು ಹೊಸ ಹೊಸ ಮಾರ್ಗಗಳನ್ನು ಕಂಡುಕೊಳ್ಳಲಿ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ಹಿಂದೂ ಆರ್ಥಿಕ ಮಹಾಸಂಗಮ

ನಗರದಲ್ಲಿ ಖಾಸಗಿ ಹೋಟೆಲ್‌ವೊಂದರಲ್ಲಿ ಹಿಂದೂ ಎಕನಾಮಿಕ್ ಫೋರಂ, ಎಚ್‌ಇಎಫ್ ಹುಬ್ಬಳ್ಳಿ ಧಾರವಾಡ ಶಾಖೆವತಿಯಿಂದ ಶನಿವಾರ ಏರ್ಪಡಿಸಿದ್ದ ಹಿಂದೂ ಆರ್ಥಿಕ ಮಹಾಸಂಗಮದ ಎರಡನೇ ದಿನದ ಸಮಾವೇಶದಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಹೆಚ್ಚಿನ ಗ್ರಾಹಕರು ಇದ್ದಾರೆ. ಇದನ್ನು ಉತ್ಪಾದಕತೆ ಆಧಾರಿತ ಸಮಾಜವಾಗಿ ಪರಿವರ್ತಿಸಬೇಕಾಗಿದೆ. ಉತ್ಪನ್ನಗಳನ್ನು ಮಾರಾಟ ಮಾಡಿದರೆ ಸಾಲದು. ಜತೆಗೆ ಗುಣಮಟ್ಟದ ಸೇವೆಯನ್ನು ನೀಡಬೇಕು. ಗ್ರಾಹಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು. ಇದುವೇ ಹಿಂದೂ ಎಕನಾಮಿಕ್ ಫೋರಂನ ಮೂಲ ತತ್ವವಾಗಲಿ ಎಂದರು.



ಪ್ರತಿಯೊಬ್ಬ ಹಿಂದೂ ಉದ್ಯಮಶೀಲ ಮನಸ್ಸು ಹೊಂದಿ ಅದರಂತೆ ಮುಂದಡಿ ಇಟ್ಟರೆ ಅದನ್ನು ತಡೆಯಲು ಯಾವುದೇ ಶಕ್ತಿಗೂ ಸಾಧ್ಯವಿಲ್ಲ. ಸಶಕ್ತ ಭಾರತವೇ ಪ್ರಧಾನಿ ಮೋದಿ ಅವರ ಕನಸಾಗಿದೆ ಎಂದು ಹೇಳಿದರು.

ದ್ವಿತೀಯ ಸ್ತರದ ನಗರಗಳತ್ತ ಕಂಪನಿಗಳು ಬರಬೇಕು, ಜಗತ್ತಿನ ಯಾವುದೇ ದೇಶದಲ್ಲಿ ಆರ್ಥಿಕ ಹಿಂಜರಿತ ಇದ್ದರೂ ಭಾರತವು ಬೆಳೆಯುತ್ತಿರುವ ಆರ್ಥಿಕತೆಯಾಗಿದೆ ಎಂದರು.

ಬಯೋಯೂಯೆಲ್ ಕಂಪನಿಯನ್ನು ತೆಲಂಗಾಣದಲ್ಲಿ ಸ್ಥಾಪನೆ ಮಾಡಲು ನಮ್ಮವರೇ ಆದ ನಿರಾಣಿಯವರು ಮುಂದಾಗಿದ್ದಾರೆ. ಸರ್ಕಾರ ಇಲ್ಲಿ ಜಾಗ ನೀಡಿ ಸೌಲಭ್ಯ ಕೊಡದೇ ಇರುವುದಕ್ಕೆ ಅವರು ಬೇರೆಡೆ ಹೋದರು ಎಂದು ಬೇಸರ ವ್ಯಕ್ತಪಡಿಸಿದರು.

ಎಚ್‌ಇಎಫ್ ಜಂಟಿ ಪ್ರಧಾನ ಕಾರ್ಯದರ್ಶಿ ಶ್ರೀ ಸ್ವಾಮಿ ವಿಗ್ಯಾನಾನಂದಜೀ ಮಾತನಾಡಿ, ಸ್ವಾತಂತ್ರ್ಯ ನಂತರ ಹಂತ ಹಂತವಾಗಿ ಭಾರತ ಬೆಳೆಯುತ್ತ ಬಂದಿದೆ. ಜ್ಞಾನವನ್ನು ಆರ್ಥಿಕ ಪ್ರಗತಿಗೆ ಬಳಸಿಕೊಂಡು ಗ್ರಾಮ ಮಟ್ಟದಿಂದ ಬೆಳವಣಿಗೆ ಸಾಧಿಸಬೇಕಾಗಿದೆ. ಹಿಂದೂ ಸಮಾಜವನ್ನು ಸಮೃದ್ಧಗೊಳಿಸುವುದು ಫೋರಂನ ಉದ್ದೇಶ. ಇದಕ್ಕಾಗಿ ಫೋರಂ ಎಲ್ಲ ಕಡೆ ಕೆಲಸ ಮಾಡಲಿದೆ ಎಂದರು.

> ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಎಂಬ ಪುರುಷಾರ್ಥಗಳನ್ನು ಭಾರತೀಯರು ಪಾಲಿಸುತ್ತಾರೆ. ಭಾರತ ಸನಾತನ ಧರ್ಮದ ತಾಣವಾಗಿದೆ. ಹಿಂದೂಗಳು ಇಂದಿನ ಜ್ಞಾನಯುಗದಲ್ಲಿ ಸ್ಪರ್ಧೆಯನ್ನು ಅರಿತುಕೊಂಡು ಮುಂದೆ ಸಾಗಬೇಕಿದೆ.
> ■ ಬಸವರಾಜ ಬೊಮ್ಮಾಯಿ, ಸಂಸದ

ಹಿಂದೂ ಆರ್ಥಿಕ ಮಹಾಸಂಗಮದಲ್ಲಿ ದೇಶದ ವಿವಿಧ ಕಡೆಗಳಿಂದ ನೂರಾರು ಉದ್ಯಮಶೀಲರು ಪಾಲ್ಗೊಂಡಿದ್ದರು. ಅನೇಕರು ತಮ್ಮ ಔದ್ಯಮಿಕ ಯಶಸ್ಸಿನ ಬಗ್ಗೆ ಅನುಭವ ಹಂಚಿಕೊಂಡರು.

ಎಚ್‌ಇಎಫ್ ಹುಧಾ ಶಾಖೆ ಅಧ್ಯಕ್ಷ ವಿಜೇಶ್ ಸೈಗಲ್, ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ, ಗೌತಮ ಬಾಫಣಾ, ಗಿರೀಶ ಮಾನೆ, ಇತರರು ಇದ್ದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ಜಿಲ್ಲೆಗೆ ಸಿಎಂ, ಡಿಸಿಎಂ

•**ಕಾರವಾರ:** ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಫೆ.22ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದು, ಅಂದು ಬೆ.11.50 ಕ್ಕೆ ಮಂಜುಗುಣಿ ಗ್ರಾಮದಲ್ಲಿ, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಕಾರವಾರ ವತಿಯಿಂದ, ಅಂಕೋಲಾ ತಾಲೂಕಿನ ಮಂಜುಗುಣಿ ಗ್ರಾಮದಿಂದ ಕುಮಟಾ ತಾಲೂಕಿನ ಗಂಗಾವಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ನಂತರ ಮಧ್ಯಾಹ್ನ 12.45 ಕ್ಕೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಲೋಕೋಪಯೋಗಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಮತ್ತು ಯಲ್ಲಾಪುರ ತಾಲೂಕಿನ ಬಾನಾಪುರ ತಾಳಗುಪ್ಪ ರಾಜ್ಯ ಹೆದ್ದಾರಿ–93 ರ ಕಿ.ಮೀ 82.50 ರಲ್ಲಿ ಸೇತುವೆ ನಿರ್ಮಾಣ, ಯಲ್ಲಾಪುರ ಪಟ್ಟಣದ ನಿರೀಕ್ಷಣಾ ಮಂದಿರದ ಹೊಸ ಕಟ್ಟಡ ನಿರ್ಮಾಣ ಹಾಗೂ ಮುಂಡಗೋಡ ತಾಲೂಕಿನ ಹೊಸ ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸಚಿವ ಜಾರಕಿಹೊಳಿ ಜಿಲ್ಲಾ ಪ್ರವಾಸ

•**ಕಾರವಾರ:** ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಉಕ ಜಿಲ್ಲೆಯಲ್ಲಿ ಫೆ.22 ಮತ್ತು 23ರಂದು ಪ್ರವಾಸ ಕೈಗೊಂಡಿದ್ದು, ಫೆ.22 ರಂದು ಸಂಜೆ 6 ಗಂಟೆಗೆ ಹೊನ್ನಾವರದ ಪ್ರಭಾತನಗರ ಸೆಂಟ್ ಅಂತೋಣಿ ಮೈದಾನದಲ್ಲಿ ಹೊನ್ನಾವರ ಉತ್ಸವ ಸಮಿತಿಯಿಂದ ಆಯೋಜಿಸಿರುವ ಹೊನ್ನಾವರ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಕುಮಟಾದಲ್ಲಿ ವಾಸ್ತವ್ಯ ಮಾಡಲಿದ್ದಾರೆ. ಫೆ.23ರಂದು ಬೆಳಗ್ಗೆ 11 ಗಂಟೆಗೆ ಕುಮಟಾ ತಾಲೂಕಿನ ಹೆಗ್ಡೆ ಗ್ರಾಮದಲ್ಲಿ ಅಘನಾಶಿನಿ ನದಿಗೆ ನಬಾರ್ಡ್ ವತಿಯಿಂದ ನಿರ್ಮಾಣವಾಗಿರುವ ಸೇತುವೆ ಪರಿಶೀಲನೆ ನಡೆಸಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಕುಮಟಾ ತಾಲೂಕಿನ ಕಲಭಾಗ್ ಬರ್ಗಿ– ಊರಕೇರಿ ರಸ್ತೆಯಲ್ಲಿ ಮೂವತ್ತುಗುಂಡಿ ಸೇತುವೆ ಪುನರ್ ನಿರ್ಮಾಣ ಕಾಮಗಾರಿಯ ಅಡಿಗಲ್ಲು ಕಾರ್ಯಕ್ರಮ ನೆರವೇರಿಸಲಿದ್ದು, ಮಧ್ಯಾಹ್ನ 1 ಗಂಟೆಗೆ ಹೊನ್ನಾವರ ತಾಲೂಕಿನ ಹಳದೀಪುರದಲ್ಲಿ ಪಾದಿಕೆರೆಯ ಸೇತುವೆ ಪರಿಶೀಲನೆ ನಡೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ್ಯಾಯಾಧೀಶೆಯಾಗಿ ಡಯಾಸ್ ನೇಮಕ



•**ಹೊನ್ನಾವರ:** ತಾಲೂಕಿನ ಕೆಳಗಿನ ಮೂಡ್ಕಣಿ ಗ್ರಾಮದ ಬ್ಲ್ಯಾಂಚ್ ಡಯಾಸ್ ದಂಪತಿಗಳ ಪುತ್ರಿ ಮಾಫ್ರೆಡ್ ಡಯಾಸ್ ಅವರು ಸಿವಿಲ್ ನ್ಯಾಯಾಧೀಶೆಯಾಗಿ ನೇಮಕಗೊಂಡಿದ್ದಾರೆ. ಇತ್ತೀಚೆಗೆ ನಡೆದ ಸಿವಿಲ್ ನ್ಯಾಯಾಧೀಶರ ನೇಮಕಾತಿ ಪರೀಕ್ಷೆಯಲ್ಲಿ ಮೊದಲ ಹಂತದಲ್ಲಿಯೇ ತೇರ್ಗಡೆಗೊಂಡು ಸರ್ಕಾರಿ ನ್ಯಾಯಾಲಯದ ಸಿವಿಲ್ ನ್ಯಾಯಾಧೀಶೆಯಾಗಿ ನೇಮಕಗೊಂಡಿದ್ದಾರೆ. ಊರ ನಾಗರಿಕರು ಅವರನ್ನು ಅಭಿನಂದಿಸಿದ್ದಾರೆ. ಮಾಫ್ರೆಡ್ ಡಯಾಸ ಅವರು ಕಳೆದ ಡಿಸೆಂಬರ್ ತಿಂಗಳಲ್ಲಿ ಪಟ್ಟಣದ ಗಾಂಧಿ ನಗರದ ನಿವಾಸಿ ಇಗ್ನೇಷಿಯಸ್ ಆಸ್ಪತ್ರೆಯ ನರ್ಸಿಂಗ್ ಕಾಲೇಜಿನ ಬಸ್ ಚಾಲಕ ಜೋಸೆಫ್ ಪರ್ನಾಂಡಿಸ್ ದಂಪತಿಗಳ ಪುತ್ರನನ್ನು ವಿವಾಹವಾಗಿ ಈಗ ಹೊನ್ನಾವರ ನಿವಾಸಿಯಾಗಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60089	69099
ಬಿಳಿಗೋಟು	29399	43299
ಕೆಂಪುಗೋಟು	28199	44190
ಚೆಟ್ಟಿ	39298	52099
ರಾಶಿ	53529	58199
ಚಾಲಿ	40899	50200
ಬಿ.ಕಾಳುಮೆಣಸು	88099	88099



ಶಿರಸಿ: ನಗರದ ಸುಗಮ ಸಂಚಾರ ಹಾಗೂ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ, ಮುಸ್ಲಿಂ ಗಲ್ಲಿಯಿಂದ ಕೋಟೆ ಗಲ್ಲಿಯವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಭೀಮಣ್ಣ ನಾಯ್ಕ ಚಾಲನೆ ನೀಡಿದರು. ಈ ವೇಳೆ ನಗರಸಭೆಯ ಪ್ರಮುಖರು, ಮುಖಂಡರು ಇತರರಿದ್ದರು.

ಮಾ.8ಕ್ಕೆ ಪ್ರತಿಭಾ ಪುರಸ್ಕಾರ, ಪುಸ್ತಕ ಬಿಡುಗಡೆ

•**ಅಂಕೋಲಾ:** ಸ್ವಾತಂತ್ರ್ಯ ಯೋಧ ಬಹುಮುಖಿ ಅಭಿವೃದ್ಧಿ ಹರಿಕಾರ ಬಾಸಗೋಡ ಬೊಮ್ಮಯ್ಯ ರಾಕು ನಾಯಕ ಗಾಂವಕರ ಹಾಗೂ ಆದರ್ಶ ಗೃಹಿಣಿ ಪಾರ್ವತಿ ಗಾಂವಕರ ಮತ್ತು ಗಾಂವಕರ ಕುಟುಂಬದ ಹಿರಿಯರ ನೆನಪಿನಲ್ಲಿ ಸಂಘಟಿಸಲ್ಪಟ್ಟಿರುವ 13 ನೇ ವರ್ಷದ ಯುವ ಪ್ರತಿಭಾ ಪುರಸ್ಕಾರ ಮತ್ತು ಉಪನ್ಯಾಸ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮ 2026 ನೇ ಮಾ.8 ರಂದು ಸಂಜೆ 4 ಗಂಟೆಗೆ ಸಾಧನಾ ವೇದಿಕೆ ಸ್ವಾತಂತ್ರ್ಯ ಸಂಗ್ರಾಮ ಭವನದಲ್ಲಿ ನಡೆಯಲಿದೆ. ಉದ್ಘಾಟಕರಾಗಿ ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಚಲನಚಿತ್ರ ನಟಿ ಹರ್ಷಿಕಾ ಪೂಣಚ್ಚ ಇವರು ನಡೆಸಿಕೊಡಲಿದ್ದು, ಅಧ್ಯಕ್ಷತೆಯನ್ನು ಕರಾವಳಿ ಮುಂಜಾವು ದಿನಪತ್ರಿಕೆ ಕಾರವಾರ ಇದರ ವ್ಯವಸ್ಥಾಪಕ ಸಂಪಾದಕರಾದ ಗಂಗಾಧರ ಹಿರೇಗುತ್ತಿ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಕೆಎಲ್‌ಇಎಸ್ ಡಾ.ಪ್ರಭಾಕರ ಕೋರೆ, ಬೆಳಗಾವಿಯ ಡಾ.ರಣಜಿತ ಬಲರಾಜ್ಯ ನಾಯಕ ಕೆಂಚನ್‌ವಾರಿಗೆ ಗೌರವಾರ್ಪಣೆ ನಡೆಯಲಿದೆ. ಡಾ. ರಣಜಿತ್‌ಅವರಿಂದ ರಾಷ್ಟ್ರ ನಿರ್ಮಾಣದಲ್ಲಿ ಯುವ ಜನಾಂಗದ ಪಾತ್ರ ಉಪನ್ಯಾಸ ನಡೆಯಲಿದೆ. ಉಕ ಜಿಲ್ಲೆಯ 10 ವಿವಿಧ ಕ್ಷೇತ್ರಗಳ ಯುವ ಪ್ರತಿಭೆಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಚರಿತ್ರೆಯಲ್ಲಿ ಅಮರಳಾದ ಅಂಕೋಲಾ ವಾಸರೆಯ ಮಹಾದೇವಿ ನಾಯಕರ ನೆನಪಿನ ಕಾರ್ಯಕ್ರಮ ಮತ್ತು ನ್ಯಾಯಮೂರ್ತಿ ನಾಗಮೋಹನದಾಸರವರು ಬರೆದ 'ಸಂವಿಧಾನ ಓದು' ಪುಸ್ತಕ ವಿದ್ಯಾ ಸಂಸ್ಥೆಗಳಿಗೆ ಕೊಡುಗೆ ಕಾರ್ಯಕ್ರಮ ಮತ್ತು ಯಕ್ಷ ನೃತ್ಯ ಹಾಗೂ ಗಾಯನ ಕಾರ್ಯಕ್ರಮ ಜರುಗಲಿದೆಯೆಂದು ಗಾಂವಕರ ಮೆಮೋರಿಯಲ್ ಫೌಂಡೇಶನ್ ಬಾಸಗೋಡ ಅಧ್ಯಕ್ಷರಾದ ದೇವಾನಂದ ಬೊಮ್ಮಯ್ಯ ಗಾಂವಕರ ಹಾಗೂ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹೊನ್ನಾವರ: ವಿದ್ಯಾರ್ಥಿಗಳಿಗೆ ಹಣಕಾಸು ನಿರ್ವಹಣೆ, ಮತ್ತು ಮಾರಾಟ ಕೌಶಲ್ಯಗಳನ್ನು ಕಲಿಸುವ ಉದ್ದೇಶದಿಂದ ಅರೆಅಂಗಡಿ ಎಸ್‌ಎಸ್‌ಕೆಪಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆಹಾರ ಮೇಳ ನಡೆಯಿತು.

ಗಂಗಾವಳಿ ಸೇತುವೆ, ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ ಇಂದು ಲೋಕಾರ್ಪಣೆ

ವರವಾಗಲಿದೆಯೇ ಸಿಎಂ ಭೇಟಿ ?

▸ನಾಗರಾಜ ಶೆಟ್ಟಿ

•**ಅಂಕೋಲಾ:** ಉತ್ತರ ಕನ್ನಡ ಜಿಲ್ಲೆಯ ಕಾರವಾರ ಅಂಕೋಲಾ ಕ್ಷೇತ್ರಕ್ಕೆ ಇಂದು ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸಿ ಅಂಕೋಲಾದಲ್ಲೀ ಗೋಕರ್ಣ ಗಂಗಾವಳಿ ಸೇತುವೆಯ ಲೋಕಾರ್ಪಣೆ ಮತ್ತು ಕಾರವಾರದಲ್ಲಿ ಕಿಮ್ಸ್ ಆವರಣದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆಯ ಕಟ್ಟಡದ ಉದ್ಘಾಟನೆ ನೆರವೇರಿಸಲಿದ್ದು, ಮುಂದಿನ ಸಾಲಿನ ಬಜೆಟ್ ಅಧಿವೇಶನ ಆರಂಭವಾಗುವುದಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಜಿಲ್ಲೆಗೆ

ಮುಖ್ಯಮಂತ್ರಿಗಳ ಭೇಟಿ ಜಿಲ್ಲೆಯ ಜನತೆಯ ಪಾಲಿಗೆ ವರದಾನವಾಗಲಿದೆಯೇ ಎನ್ನುವ ಕುರಿತಂತೆ ವಿಶ್ಲೇಷಿಸಲಾಗುತ್ತಿದೆ.

ಮಾರ್ಚ್ ತಿಂಗಳ 3 ರಿಂದ ರಾಜ್ಯ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಮಾ.6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026–27 ನೇ ಸಾಲಿನ ಬಜೆಟ್ ಮಂಡನೆ ಮಾಡಲಿದ್ದಾರೆ. ರಾಜ್ಯದ ಆಯವ್ಯಯದ ಜೊತೆಗೆ ಮಹತ್ವಪೂರ್ಣ ಯೋಜನೆಗಳನ್ನು ರೂಪಿಸುವ ಕೆಲವೇ ದಿನಗಳ ಪೂರ್ವದಲ್ಲಿ ಮುಖ್ಯಮಂತ್ರಿಗಳು ಉತ್ತರ ಕನ್ನಡ ಜಿಲ್ಲೆಗೆ ಭೇಟಿ ನೀಡುತ್ತಿರುವುದು ಈ ಬಾರಿಯ ಬಜೆಟ್ ಜಿಲ್ಲೆಗೆ ಪೂರಕವಾಗಲಿದೆಯೇ ಎನ್ನುವ ಮಾತುಗಳು ಕೇಳಿ ಬರತೊಡಗಿದೆ.

ಕರಾವಳಿ,ಮಲೆನಾಡು, ಬಯಲುಸೀಮೆ ಪ್ರದೇಶಗಳನ್ನೊಳಗೊಂಡ ಪ್ರಾಕೃತಿಕ ವೈವಿಧ್ಯತೆಯ ಉತ್ತರ ಕನ್ನಡ ಜಿಲ್ಲೆ ಹಲವಾರು ವರ್ಷಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗುತ್ತಲೇ ಬಂದಿದ್ದು, ಜಿಲ್ಲೆಯಲ್ಲಿ ಮುಖ್ಯವಾಗಿ ವೈದ್ಯಕೀಯ ಕ್ಷೇತ್ರ ಮತ್ತು ಉನ್ನತ ಶಿಕ್ಷಣಕ್ಕೆ ಆದ್ಯತೆ ಸಿಗಬೇಕಿದೆ.ಕಾರವಾರದ ಕಿಮ್ಸ್ ಆಸ್ಪತ್ರೆಯಲ್ಲಿ ಮಲ್ಟಿ ಸ್ಪೆಶಾಲಿಟಿ ಸೌಲಭ್ಯ ಹೊಂದಿರುವ 450 ಹಾಸಿಗೆಗಳ ಆಸ್ಪತ್ರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡುತ್ತಿರುವುದು ಆಶಾದಾಯಕ ಬೆಳವಣಿಗೆಯಾದರೂ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ತಾಂತ್ರಿಕ ಸಿಬ್ಬಂದಿ ಕೊರತೆ ತೀವ್ರವಾಗಿ ಕಾಡುತ್ತಿದೆ.



ಡಿ.ಕೆ.ಶಿವಕುಮಾರ ಭಾಗಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಉಪ ಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ ಅವರು ಸಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಮೂಲಗಳಿಂದ ತಿಳಿದು ಬಂದಿದ್ದು ಲೋಕೋಪಯೋಗಿ ಸಚಿವರು, ಆರೋಗ್ಯ ಸಚಿವರು ಸೇರಿದಂತೆ ರಾಜ್ಯದ ಸಚಿವರುಗಳು,ವಿವಿಧ ನಿಗಮಗಳ ಅಧ್ಯಕ್ಷರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಜಿಲ್ಲೆಯ ಬಹಳಷ್ಟು ಆಸ್ಪತ್ರೆಗಳಲ್ಲಿ ಹೆರಿಗೆ ತಜ್ಞ ವೈದ್ಯರಿಲ್ಲದೇ ಬಡ ಜನರು ಪರದಾಟ ನಡೆಸುತ್ತಿದ್ದಾರೆ. ಅಪಘಾತ, ಹೃದಯ ಸಂಬಂಧಿ ತುರ್ತು ಸಂದರ್ಭದಲ್ಲಿ ಗಂಭೀರ ಸ್ಥಿತಿಯಲ್ಲಿರುವ ರೋಗಿಗಳು ಹೊರ ಜಿಲ್ಲೆಯ ಆಸ್ಪತ್ರೆಗಳಿಗೆ ಹೋಗುವುದು ಅನಿವಾರ್ಯವಾಗಿದ್ದು, ತುರ್ತು ಪರಿಸ್ಥಿತಿಯಲ್ಲಿ ಜನರ ಜೀವ ಉಳಿಸುವ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯ ಆಗತ್ಯತೆ ಜಿಲ್ಲೆಗಿದೆ.

ಈ ಬಾರಿಯ ಬಜೆಟಿನಲ್ಲಿ ಜಿಲ್ಲೆಯ ಜನರ ಬಹುಕಾಲದ ಬೇಡಿಕೆ ಈಡೇರಿಸುವ ದಿಶೆಯಲ್ಲಿ ವಿಶೇಷ ಘೋಷಣೆ ಆಗಬಹುದೇ ಎಂಬ ನಿರೀಕ್ಷೆ ಜಿಲ್ಲೆಯ ಜನರದ್ದಾಗಿದೆ.ಆದೇ ರೀತಿ ಜಿಲ್ಲೆಯಲ್ಲಿ ಉನ್ನತ ಶಿಕ್ಷಣ ಇಂಜನಿಯರಿಂಗ್, ಮೆಡಿಕಲ್ ಸೇರಿದಂತೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಕೊರತೆಯಿದ್ದು, ಜಿಲ್ಲೆಯ ವಿದ್ಯಾರ್ಥಿಗಳು ದೂರದ ಶಿಕ್ಷಣ ಸಂಸ್ಥೆಗಳನ್ನು ನೆಚ್ಚಿಕೊಳ್ಳುವಂತಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಆರ್ಥಿಕತೆ ಕೃಷಿ, ತೋಟಗಾರಿಕೆ ಮತ್ತು ಮೀನುಗಾರಿಕೆಯ ಮೇಲೆ ಅವಲಂಬಿತವಾಗಿದ್ದು, ಜಿಲ್ಲೆಯಲ್ಲಿ ಈ ಕ್ಷೇತ್ರಗಳನ್ನು ಬಲಗೊಳಿಸುವ ದಿಶೆಯಲ್ಲಿ ಯೋಜನೆಗಳು ಆಗಬೇಕಿದೆ. ಪ್ರವಾಸೋದ್ಯಮದ ದೃಷ್ಟಿಯಿಂದ ಸಾಕಷ್ಟು ಅವಕಾಶಗಳಿರುವ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಶೇಷ ಪ್ರಯತ್ನ ನಡೆಯಬೇಕಿದೆ.

ಜಿಲ್ಲೆಯ ಕಡಲ ತೀರಗಳಲ್ಲಿ ಮಳೆಗಾಲದ ಸಂದರ್ಭದಲ್ಲಿ ಕಡಲ ಕೊರೆತದ ಸಮಸ್ಯೆ ಸಾಕಷ್ಟಿದ್ದು, ಅಪಾಯಕಾರಿ ರೀತಿಯಲ್ಲಿ ಕೊರೆತ ಆಗುತ್ತಿರುವ ಕಡಲ ತೀರಗಳಲ್ಲಿ ಶಾಶ್ವತ ಪರಿಹಾರ ತಡೆಗೋಡೆ ನಿರ್ಮಾಣ, ಮೀನುಗಾರಿಕೆ ಬಂದರುಗಳ ಅಭಿವೃದ್ಧಿ ಬ್ರೇಕ್ ವಾಟರ್ ನಿರ್ಮಾಣ ಆಗಬೇಕಿದೆ.ಹೀಗೆ ಹತ್ತು ಹಲವು ಸಮಸ್ಯೆಗಳು ಜಿಲ್ಲೆಯಲ್ಲಿದ್ದು, ಮುಖ್ಯಮಂತ್ರಿಗಳ ಆಗಮನ ಜಿಲ್ಲೆಯ ಸಮಸ್ಯೆಗಳನ್ನು ಪರಿಹರಿಸುವ ದಾರಿಯಾಗಬಹುದು ಎಂಬ ನಿರೀಕ್ಷೆ ಜನಸಾಮಾನ್ಯರಲ್ಲಿ ಇದೆ.

ರುಂಡವಿಲ್ಲದ ಶವ ಪತ್ತೆ: ಪೊಲೀಸರಿಂದ ತನಿಖೆ ಚುರುಕು

•**ಮುಂಡಗೋಡ:** ತಾಲೂಕಿನ ಕೊಳಗಿ ಗ್ರಾಮದಲ್ಲಿ ಸಿಕ್ಕರುಂಡವಿಲ್ಲದ ಮಹಿಳೆಯ ಬೆತ್ತಲೆ ದೇಹ ಗುರುತು ಪತ್ತೆ ಹಚ್ಚಲು ಪೊಲೀಸರು ಹರಸಾಹಸ ಪಡುತ್ತಿದ್ದಾರೆ.

ತಾಲೂಕಿನ ಮಳಗಿ ಗ್ರಾಪಂ ವ್ಯಾಪ್ತಿಯ ಕೊಳಗಿ ಗ್ರಾಮವೊಂದರ ಅರಣ್ಯದಲ್ಲಿ ಶುಕ್ರವಾರ ಮಹಿಳೆಯ ಬೆತ್ತಲೆ ಮೃತದೇಹ ಪತ್ತೆಯಾಗಿದ್ದು, ತಾಲೂಕಿನಲ್ಲಿ ಬೆಚ್ಚಿಬೀಳಿಸಿತ್ತು.

ವಿಷಯ ತಿಳಿಯುತ್ತಿದ್ದಂತೆ ಪೊಲೀಸರು ಭೇಟಿ ನೀಡಿ ಮಾಹಿತಿ ಕಲೆ ಹಾಕಿದರು. ರಾತ್ರಿಯೇ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಆಗಮಿಸಿ ಮಾಹಿತಿ ಸಂಗ್ರಹಿಸಿದ್ದಾರೆ. ಆದರೆ ಕೊಲೆಯಾದ ಮಹಿಳೆಯ ರುಂಡ ಪತ್ತೆಗೆ ಅರಣ್ಯದಲ್ಲಿ ಪೊಲೀಸರು ಹುಡುಕಿದರು ಎಲ್ಲಿಯೂ ಪತ್ತೆಯಾಗಿಲ್ಲ. ಇದರಿಂದಾಗಿ ಪೊಲೀಸರಿಗೆ ಈ ಪ್ರಕರಣ ಸವಾಲಾಗಿ ಪರಿಗಣಿಸಿದೆ.

ಎಸ್ಪಿ ದೀಪನ್ ಎಂ ಭೇಟಿ: ವಿಷಯ ತಿಳಿದು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ದೀಪನ್ .ಎಂ ಅವರು ಶವ ಸಿಕ್ಕ ಸ್ಥಳಕ್ಕೆ ಭೇಟಿ ನೀಡಿ ಸಿಬ್ಬಂದಿಗಳಿಂದ ಮಾಹಿತಿ ಪಡೆದು ಆರೋಪಿಗಳ ಪತ್ತೆಗಾಗಿ ತನಿಖಾ ತಂಡ ರಚಿಸಿದ್ದಾರೆ ಎನ್ನಲಾಗಿದೆ.

ಮೃತದೇಹ ಕಾರವಾರಕ್ಕೆ ರವಾನೆ: ರುಂಡ ಇಲ್ಲದ ಬೆತ್ತಲೆ ಮಹಿಳೆಯ ಶವವನ್ನು ಕಾರವಾರದ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಆದರೆ ಈವರೆಗೂ ರುಂಡ ಪತ್ತೆಯಾಗಿಲ್ಲ, ಮಹಿಳೆಯ ಶವ ಪತ್ತೆಯಾದ ಸ್ಥಳದಿಂದ ಕೇವಲ 20–30 ಮೀಟರ ಅಂತದರಲ್ಲಿ ಹುಬ್ಬಳ್ಳಿ ಶಿರಶಿ ಮುಖ್ಯ ರಸ್ತೆ ಇದೆ. ಅಲ್ಲದೆ ಶ್ವಾನದಳವು ಸಹ ಮುಖ್ಯ ರಸ್ತೆಗೆ ಬಂದು ನಿಂತಿದೆ.

ಪೊಲೀಸರ ಶಂಕೆ: ಹಂತಕರು ಬೇರೆಕಡೆ ಕೊಲೆ ಮಾಡಿ ಶವ ಗುರುತು ಆಗಬಾರದೆಂದು ಸಾಕ್ಷಿ ನಾಶ ಮಾಡಿ, ಶವವನ್ನು ಮುಖ್ಯ ರಸ್ತೆ ಪಕ್ಕದ ಕೊಳಗಿ ಗ್ರಾಮದ ಅರಣ್ಯದಲ್ಲಿ ಎಸೆದು ರುಂಡುವನ್ನು ತಗೆದು ಕೊಂಡು ಹೋಗಿದ್ದಾರೆ ಎಂಬ ಶಂಕೆ ಪೊಲೀಸರದಾಗಿದೆ.

ರುಂಡ ಇಲ್ಲದ ಬೆತ್ತಲೆ ಮಹಿಳೆಯ ಶವ ಸಿಕ್ಕ ಸುದ್ದಿ ತಾಲೂಕಿನಾದ್ಯಂತ ಹರಡಿದ್ದು ಹತ್ಯೆಯ ಕ್ರೌರ್ಯತೆ ನೋಡಿ ಜನತೆ ಬೆಚ್ಚಿ ಬಿದ್ದಿದ್ದಾರೆ. ಪತ್ತೆಯಾಗಿರುವ ಮೃತದೇಹವು ಅಕ್ಕಪಕ್ಕ ತಾಲೂಕಿನದಾಗಿರಬಹುದು ಎಂದು ಪೊಲೀಸರು ಸಂಶಯವಾಗಿದೆ.

ಶವ ಹತ್ತಿರ ಗುಂಡಗಡಗಿ (ಲಿಂಗ)ಪತ್ತೆಯಾಗಿರುವು ನೋಡಿದರೆ ಹಿಂದೂ ಮಹಿಳೆಯೇ ಎಂದು ತಿಳಿದುಬಂದಿದೆ. ಪೊಲೀಸರು ಈಗಾಗಲೇ ಹಾವೇರಿ ಹಾನಗಲ್, ಸೇರಿದಂತೆ ಅಕ್ಕ ಪಕ್ಕದ ತಾಲೂಕಿನ ಪೊಲೀಸ್ ಠಾಣೆಗೆ ಭೇಟಿ ನೀಡಿ. ನಾಪತ್ತೆಯಾದ ಮಹಿಳೆಯರ ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾರೆ.

ಅನೈತಿಕ ಸಂಬಂದಿಂದಲೂ ಅಥವಾ ಬೇರೆ ಕಾರಣಕ್ಕಾಗಿಹತ್ಯೆಯೋ ಇಲ್ಲವೋ ಮರ್ಯಾದೆ ಹತ್ಯೆವೋ ಎಂಬುವುದು ಪೊಲೀಸರ ತನಿಖೆಯಿಂದ ಹೊರ ಬೀಳಬೇಕಾಗಿದೆ.



ಶಿರಸಿ ಮಾರಿಕಾಂಬಾ ಜಾತ್ರೆ: ಸುಗಮ ಸಂಚಾರಕ್ಕೆ ಕ್ರಮ

•**ಶಿರಸಿ:** ಫೆ.24ರಿಂದ ಆರಂಭವಾಗಲಿರುವ ಪ್ರಸಿದ್ಧ ಮಾರಿಕಾಂಬಾದೇವಿ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಹಾಗೂ ಸುಗಮ ಸಂಚಾರ ಕಾಪಾಡುವ ನಿಟ್ಟಿನಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯು ಸರ್ವಸನ್ನದ್ಧವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ತಿಳಿಸಿದರು.



ಶನಿವಾರ ಶಿರಸಿಯ ಡಿಎಸ್ಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತ್ರೆಯ ಭದ್ರತೆ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿದರು.

ಜಾತ್ರೆಯ ಬಂದೋಬಸ್ತ್ ಕರ್ತವ್ಯಕ್ಕಾಗಿ ಅತಿ ದೊಡ್ಡ ಪೊಲೀಸ್ ಪಡೆಯನ್ನು ನಿಯೋಜಿಸಲಾಗಿದೆ. 3 ಡಿವೈಎಸ್‌ಪಿ, 10 ಸಿಪಿಐ, 47 ಪಿಎಸ್‌ಐ ಹಾಗೂ 110 ಎಎಸ್‌ಐ ಮತ್ತು 754 ಪೊಲೀಸ್ ಪೇದೆಗಳು, 200 ಗೃಹರಕ್ಷಕ ದಳದ ಸಿಬ್ಬಂದಿ ನೇಮಿಸಲಾಗಿದೆ ಎಂದು ಮಾಹಿತಿ ನೀಡಿದ ಅವರು, ಜಾತ್ರೆಗೆ ಬರುವ ಭಕ್ತಾದಿಗಳ ವಾಹನಗಳ ದಟ್ಟಣೆ ನಿಯಂತ್ರಿಸಲು ನಗರದಾದ್ಯಂತ 25 ನಿಗದಿತ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ವಿಶೇಷವಾಗಿ ಮಂಗಳೂರು, ಭಟ್ಕಳ, ಕುಮಟಾ, ಸಾಗರ ಹಾಗೂ ಸಿದ್ದಾಪುರ ಕಡೆಯಿಂದ ಬರುವ ವಾಹನಗಳಿಗೆ 7 ಪ್ರಮುಖ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಾತ್ರೆಗೆ ಬರುವ ಸಾರ್ವಜನಿಕರಿಗೆ ರಸ್ತೆ ಸಂಚಾರ, ಪಾರ್ಕಿಂಗ್ ಪ್ರದೇಶಗಳು ಮತ್ತು ಜಾತ್ರೆಯ ಸಂಪೂರ್ಣ ಮಾಹಿತಿ ನೀಡಲು ಇಲಾಖೆಯು ಡಿಡಿಡಿ. sirsipolice.in ಎಂಬ ವಿಶೇಷ ವೆಬ್‌ಸೈಟ್ ಸಿದ್ಧಪಡಿಸಿ ಬಿಡುಗಡೆಗೊಳಿಸಿದೆ. ಭಕ್ತಾದಿಗಳು ಇದರಸದುಪಯೋಗಪಡೆದುಕೊಳ್ಳುವಂತೆ ಎಸ್‌ಪಿ ಮನವಿ ಮಾಡಿದರು.

ಜನಸಂದಣಿ ಪ್ರದೇಶಗಳಲ್ಲಿ ಸರಗಳ್ಳತನ, ಕಳ್ಳತನ ಹಾಗೂ ಇತರ ಅಪರಾಧ ಚಟುವಟಿಕೆಗಳನ್ನು ತಡೆಗಟ್ಟಲು ಪೊಲೀಸ್ ವಾಚ್ ಟವರ್ ಗಳನ್ನು ನಿರ್ಮಿಸಲಾಗಿದೆ. ಜಿಲ್ಲಾ ಮತ್ತು ಅಂತರ ಜಿಲ್ಲಾ ಅಪರಾಧ ಪತ್ತೆ ದಳದ ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಸಾರ್ವಜನಿಕರ ಚಲನವಲನಗಳ ಮೇಲೆ ನಿರಂತರ ನಿಗಾ ಇರಿಸಲಾಗುವುದು ಎಂದು ಅವರು ಎಚ್ಚರಿಸಿದರು.

ಡಿವೈಎಸ್‌ಪಿ ಗೀತಾ ಪಾಟೀಲ್, ಸಿಪಿಐ ಶಶಿಕಾಂತ ವರ್ಮಾ, ಶಿರಸಿ ನಗರ ಠಾಣೆ ಪಿಎಸ್‌ಐ ನಾಗಪ್ಪ ಬಿ., ಎನ್‌ಎಂಪಿಎಸ್ ಠಾಣೆ ಪಿಎಸ್‌ಐ ಬಸವರಾಜ ಕನಶೆಟ್ಟಿ ಸೇರಿದಂತೆ ಪ್ರಮುಖ ಅಧಿಕಾರಿಗಳು ಉಪಸ್ಥಿತರಿದ್ದರು.

ಅಡಿಕೆ ಬೆಳೆಗಾರರ ಸಮಸ್ಯೆ ನಿವಾರಣೆಗೆ ಒತ್ತಾಯ

•**ಶಿರಸಿ:** ತಾಲೂಕಿನಾದ್ಯಂತ ಅಡಿಕೆ ಬೆಳೆ ಹಾಗೂ ಮರಕ್ಕೆ ತಗುಲಿರುವ ಭೀಕರ ರೋಗಬಾಧೆ ಹಾಗೂ ಇಳುವರಿ ಕುಸಿತದಿಂದ ರೈತ ಸಮುದಾಯ ಕಂಗಾಲಾಗಿದ್ದು, ಅವರ ನೆರವಿಗೆ ಕೋರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಪರವಾಗಿ ಶಾಸಕ ಭೀಮಣ್ಣ ನಾಯ್ಕ ಅವರಿಗೆ ಮನವಿ ಸಲ್ಲಿಸಿದರು.

ನಗರದ ಸುಪ್ರಿಯಾ ಹೋಟೆಲ್‌ನಲ್ಲಿ ಶನಿವಾರ ಮನವಿ ಸಲ್ಲಿಸಿದಸಿದ್ದಾಪುರ ತಾಲೂಕಿನ ಸಹಕಾರಿ ಸಂಘಗಳ ಪ್ರತಿನಿಧಿಗಳು ಈ ಹಕ್ಕೊತ್ತಾಯ ಮಾಡಿದರು. ಸಿದ್ದಾಪುರದಲ್ಲಿ ಶೇ. 80ಕ್ಕೂ ಹೆಚ್ಚು ಕುಟುಂಬಗಳು ಜೀವನೋಪಾಯಕ್ಕಾಗಿ ಅಡಿಕೆ ಬೆಳೆಯನ್ನೇ ನಂಬಿಕೊಂಡಿವೆ. ಆದರೆ ಕಳೆದ ಎರಡು ವರ್ಷಗಳಿಂದ ಅಡಿಕೆ ಮರಗಳಿಗೆ ಮಾರಕವಾಗಿ ಪರಿಣಮಿಸಿರುವ ಎಲೆ ಚುಕ್ಕೆ ರೋಗ ಹಾಗೂ ಇತರ ರೋಗಗಳ ಹಾವಳಿಯಿಂದಾಗಿ ಸಾವಿರಾರು ಎಕರೆ ತೋಟಗಳು ನಾಶವಾಗುವ ಹಂತಕ್ಕೆ ತಲುಪಿವೆ. ಕಳೆದ ವರ್ಷ ಇಳುವರಿಯಲ್ಲಿ ಶೇ. 50 ರಷ್ಟು ಕುಸಿತ ಕಂಡಿದ್ದರೆ, ಈ ಬಾರಿ ಅದು ಕೇವಲ ಶೇ.30 ಕ್ಕೆ ಸೀಮಿತವಾಗುವ ಭೀತಿ ಎದುರಾಗಿದೆ ಎಂದರು.

ಅತಿಯಾದ ಮಳೆಯಿಂದ ಉಂಟಾದ ಕೊಳೆ ರೋಗ ಹಾಗೂ ಕಾಡು ಪ್ರಾಣಿಗಳ ಹಾವಳಿಯಿಂದಾಗಿ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರು ಕೃಷಿಗಾಗಿ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳಿಂದ ಕೋಟ್ಯಂತರ ರೂಪಾಯಿ ಸಾಲ ಪಡೆದಿದ್ದು, ಪ್ರಸಕ್ತ ಸಾಲಿನಲ್ಲಿ ಸುಮಾರು 114 ಕೋಟಿ ರೂ. ಬೆಳೆ ಸಾಲ ಹಾಗೂ 98 ಕೋಟಿ ರೂ. ಮಧ್ಯಮಾವಧಿ ಸಾಲದ ಹೊರೆಯಲ್ಲಿದ್ದಾರೆ. ಇಳುವರಿ ಇಲ್ಲದೆ ಸಾಲ ಮರುಪಾವತಿ ಮಾಡುವುದು ಅಸಾಧ್ಯವೆಂದು ವಿವರಿಸಿದರು.



ಮಧ್ಯಮಾವಧಿ ಸಾಲದ ಕಂತು ಪಾವತಿಗೆ ಕನಿಷ್ಠ ವರ್ಷಕ್ಕಿಂತ ಹೆಚ್ಚಿನ ಕಾಲಾವಕಾಶ ನೀಡಬೇಕು. ಜೊತೆಗೆ 2024–25ನೇ ಸಾಲಿನ ಬೆಳೆ ವಿಮೆ ಪರಿಹಾರ ಮೊತ್ತವನ್ನು ಶೀಘ್ರವಾಗಿ ವಿತರಿಸಲು ಸರ್ಕಾರಕ್ಕೆ ಒತ್ತಡ ಹೇರಬೇಕೆಂದು ಮನವಿ ಮಾಡಿದರು. ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ, ಸಿದ್ದಾಪುರ ಟಿಎಂಎಸ್ ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ, ಸಹಕಾರಿಗಳಾದ ಎಂ.ಎಲ್.ಭಟ್ಟ, ಸಿ.ಎನ್.ಹೆಗಡೆ, ರಾಜು ಹೆಗಡೆ, ಎಂ.ಎನ್.ಹೆಗಡೆ, ಎಂ.ಜಿ.ನಾಯ್ಕ, ಅಶೋಕ ಹೆಗಡೆ, ವಿವೇಕ ಭಟ್ಟ ಗಡಿಹಿತ್ಲು, ಜಿ.ಎಂ.ಭಟ್, ಸುಬ್ರಾಯ ಸಾಯಿಮನೆ, ಪಿ.ಕೆ.ನಾಯ್ಕ, ಸಿ.ಎನ್.ಹೆಗಡೆ, ಕೆ.ಆರ್. ವಿನಾಯಕ, ಕೇಶವ ದೊಡ್ಮನೆ, ಸುಧೀರ ಗೌಡ ಹಾಗೂ ಟಿಎಂಎಸ್ ಸಿಇಒಸತೀಶ ಹೆಗಡೆ ಉಪಸ್ಥಿತರಿದ್ದರು.

ಸರ್ವಜ್ಞನ ವಿಚಾರಧಾರೆ ಮೈಗೂಡಿಸಿಕೊಳ್ಳಿ

•**ಮುಂಡಗೋಡ:** ಸರ್ವಜ್ಞ ಎಂದರೆ ಎಲ್ಲ ಜ್ಞಾನ ಹೊಂದಿದವರು ಆದರೆ ಆ ಗರ್ವ ಅವರಿಗೆ ಇರಲಿಲ್ಲ, ಎಲ್ಲರೊಡನೆ ಕೂಡಿ ಕಲಿತು ಸರ್ವಜ್ಞ ಆದೆನೆಂದು ಅವರು ಹೇಳಿಕೊಂಡಿದ್ದಾರೆ ಎಂದು ತಾಪಂ ಇಒ ಟಿ.ವೈ.ದಾಸನಕೊಪ್ಪ ಹೇಳಿದರು.

ತಾಲೂಕು ಆಡಳಿತ, ತಾಪಂ ಮತ್ತು ಪಪಂ ಸಂಯುಕ್ತ ಆಶ್ರಯದಲ್ಲಿ ತಾಲೂಕು ಆಡಳಿತ ಸೌಧದ ಸಭಾಭವನದಲ್ಲಿ ಜರುಗಿದ ಸಂತ ಕವಿ ಸರ್ವಜ್ಞ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

ಕೇವಲ ಮೂರು(ತ್ರಿಪದಿ)ಸಾಲಿನಲ್ಲಿ ಅರ್ಥಗರ್ಭಿತ ವಚನಗಳನ್ನು ಬರೆದಿದ್ದಾರೆ. ಎಲ್ಲ ವಚನಕಾರರು ಅಥವಾ ಮಹಾಪುರುಷರ ಸಂದೇಶ ಒಂದೇ, ಎಲ್ಲರೂ ಸಾಮರಸ್ಯದಿಂದ ಬದುಕಬೇಕು ಎಂಬುದು. ನಮ್ಮ ದಿನನಿತ್ಯದ ಜೀವನದಲ್ಲಿ ಮಹಾತ್ಮರ ಅಥವಾ ವಚನಕಾರರ ಆದರ್ಶಗಳನ್ನು ಅಳವಡಿಸಿಕೊಂಡು ಹೋಗುವುದು ಎಂದರು.

ಕಸಾಪ ತಾಲೂಕು ಘಟಕದ ಅಧ್ಯಕ್ಷ ವಸಂತ ಕೊಣಸಾಲಿ ಸರ್ವಜ್ಞರ ವಚನಗಳನ್ನು ಹೇಳಿದರು. ಸಂತೋಷ ಪಾಟೀಲ ಉಪನ್ಯಾಸ ನೀಡಿದರು.



ಉಪನ್ಯಾಸ ನೀಡಿದ ಸಂತೋಷ ಪಾಟೀಲ ಅವರಿಗೆ ಸರ್ವಜ್ಞನ ವಚನಗಳ ಪುಸ್ತಕ ನೀಡಿ ಗೌರವಿಸಲಾಯಿತು. ತಹಶೀಲ್ದಾರ್ ಶಂಕರ ಗೌಡಿ, ತೋಟಗಾರಿಕೆ ಇಲಾಖೆ ಅಧಿಕಾರಿ ಕೃಷ್ಣಾ ಕುಳ್ಳೂರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ರಾಜೇಶ್ವರಿ ಕದಂ, ಸಣ್ಣ ನೀರಾವರಿ ಇಲಾಖೆ ಎಇಇ ಆರ್. ಎಮ್.ದಫೇದಾರ, ಬಿಸಿಎಮ್ ಇಲಾಖೆ ಕರಿಯಪ್ಪ, ಪಿಡಿಒಗಳು, ರಾಘವೇಂದ್ರ ಕರೂರ ಹಾಗೂ ಸಿಬ್ಬಂದಿ, ಸಮಾಜದ ಬಾಂಧವರು ಉಪಸ್ಥಿತರಿದ್ದರು. ಅಶೋಕ ಸಂಕ್ರಿಕೊಪ್ಪ ಸ್ವಾಗತಿಸಿ, ನಿರೂಪಿಸಿದರು. ಎಸ್.ಬಿ.ಹೂಗಾರ ವಂದಿಸಿದರು.

ಜಿಲ್ಲೆಗೆ ಕಾಂಗ್ರೆಸ್ ಸರ್ಕಾರದ ಕೊಡುಗೆ ಏನು?

ಬಿಜೆಪಿ ಅವಧಿಯ ಆಸ್ಪತ್ರೆ ಉದ್ಘಾಟನೆ: ರೂಪಾಲಿ ಪ್ರಶ್ನೆ



•**ಕಾರವಾರ:** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದು 3 ವರ್ಷಗಳು ಸಮೀಪಿಸಿದರೂ ಜಿಲ್ಲೆಗೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರಕ್ಕೆ ಯಾವುದೇ ಗಣನೀಯ ಕೊಡುಗೆ ನೀಡದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರಾದ ಕಾಮಗಾರಿ ಉದ್ಘಾಟನೆ ನೆರವೇರಿಸುವುದಷ್ಟೇ ಸೀಮಿತವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಇನ್ನಾದರೂ ಈ ಜಿಲ್ಲೆಗೆ ಅಭಿವೃದ್ಧಿಯ ಕೊಡುಗೆ ನೀಡಿ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಮ್ಮ ಜಿಲ್ಲೆಗೆ ಆಗಮಿಸುತ್ತಿರುವುದು ಸ್ವಾಗತಾರ್ಹ. ಹಾಗೆಯೇ ಜಿಲ್ಲೆ ಹಾಗೂ ಕಾರವಾರ ಅಂಕೋಲಾ ಕ್ಷೇತ್ರಕ್ಕೆ ಅಭಿವೃದ್ಧಿಯ ಕೊಡುಗೆ ನೀಡುವಂತಾಗಲಿ. ಕಳೆದ ಮೂರು ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಗೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಸರ್ಕಾರದ ಕೊಡುಗೆ ಏನು, ಯಾವ ವಿಶೇಷ ಯೋಜನೆಯನ್ನು ಜಾರಿಗೊಳಿಸಿದ್ದೀರಿ ಎಂದು ಬಹಿರಂಗವಾಗಿ ತಿಳಿಸಿ ಎಂದು ಅವರು ಹೇಳಿದ್ದಾರೆ.

ಹಿಂದೆ ಬಿಜೆಪಿ ಸರ್ಕಾರ ಇದ್ದಾಗ ಕುಮಟಾದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸಮ್ಮತಿಸಿತ್ತು. ಅದೇ ಸಂದರ್ಭದಲ್ಲಿ ಕಾರವಾರದ ಮೆಡಿಕಲ್ ಕಾಲೇಜಿನಲ್ಲಿ ಸೂಪರ್ ಸ್ಪೆಷಾಲಿಟಿ ಸೌಲಭ್ಯ ಕಲ್ಪಿಸಲು ನಿರ್ಧರಿಸಿತ್ತು. ಬಜೆಟ್ ನಲ್ಲೂ ಈ ಬಗ್ಗೆ ಘೋಷಣೆ ಮಾಡಲಾಗಿತ್ತು. ನಂತರ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಆದ್ಯತೆಯಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಮಾಡಬೇಕಿತ್ತು. ತಜ್ಞ ವೈದ್ಯರುಗಳನ್ನು ನೇಮಕ ಮಾಡಿ ಹೃದಯರೋಗ, ನರರೋಗ ಮತ್ತಿತರ ಗಂಭೀರ ಕಾಯಿಲೆಗಳಿಗೆ ಇಲ್ಲೇ ಚಿಕಿತ್ಸೆ ಲಭ್ಯವಾಗುವಂತೆ ಮಾಡಬೇಕಿತ್ತು. ಈ ಮೂರು ವರ್ಷಗಳ ಕಾಲ ಜಿಲ್ಲೆಯ ಜನತೆಯ ಆರೋಗ್ಯದೊಂದಿಗೆ ಚೆಲ್ಲಾಟ ಆಡುತ್ತ ಕಾಲಹರಣ ಮಾಡಿದ್ದಕ್ಕಾಗಿ ಬೇಷರತ್ತಾಗಿ ಜಿಲ್ಲೆಯ ಜನತೆಯ ಕ್ಷಮೆ ಕೇಳಬೇಕು ಹಾಗೂ ಕೂಡಲೇ ಸೂಪರ್ ಸ್ಪೆಷಾಲಿಟಿ ಸೌಲಭ್ಯ ಕಲ್ಪಿಸಲು ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ.

ಹಿಂದೆ ನಾನು ಶಾಸಕಳಾಗಿದ್ದಾಗ ಕಾರವಾರದ ಮೆಡಿಕಲ್ ಕಾಲೇಜಿನಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣಕ್ಕೆ 160 ಕೋಟಿ ರೂ. ಬಿಡುಗಡೆಯಾಗಿತ್ತು. ನಂತರ ಆಸ್ಪತ್ರೆಯ ಕಾಮಗಾರಿಯೂ ಆರಂಭವಾಗಿ ಈಗ ಪೂರ್ಣಗೊಂಡಿದೆ. ನ್ಯೂರೋ ಸರ್ಜನ್, ಕಾರ್ಡಿಯಾಲಾಜಿಸ್ಟ್ ಸೇರಿದಂತೆ 7 ತಜ್ಞ ವೈದ್ಯರ ಹುದ್ದೆಯನ್ನೂ ಬಿಜೆಪಿ ಸರ್ಕಾರ ಮಂಜೂರು ಮಾಡಿತ್ತು.ನೇಮಕಾತಿ ಪ್ರಕ್ರಿಯೆಗೂ ಚಾಲನೆ ನೀಡಲಾಗಿತ್ತು. ಎಂಆರ್ ಐ ಮಶೀನ್ ಕೂಡ ಅಂದಿನ ಸರ್ಕಾರ ಮಂಜೂರು ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಂದಿನ ಸಂಸದರಾದ ಅನಂತಕುಮಾರ ಹೆಗಡೆ ನೆರವಿನಿಂದ 16 ಕೋಟಿ ರೂಪಾಯಿ ವೆಚ್ಚದಲ್ಲಿ ಕ್ರಿಟಿಕಲ್ ಕೇರ್ ಸೆಂಟರ್ ಕೂಡ ಮಂಜೂರಾಗಿ ಕಟ್ಟಡ ನಿರ್ಮಾಣಕಾರ್ಯ ಮುಗಿದಿದೆ. ಹೀಗಿದ್ದರೂ ಈಗಿನ ಕಾಂಗ್ರೆಸ್ ಸರ್ಕಾರ ಏಕೆ ಕಾಲಹರಣ ಮಾಡುತ್ತಿದೆ ಎಂದು ಅರ್ಥವಾಗುತ್ತಿಲ್ಲ ಎಂದು ಅವರು ಹೇಳಿದ್ದಾರೆ.

ಇಲ್ಲಿಯ ಜನತೆಯ ಆರೋಗ್ಯ ತಪಾಸಣೆಗೆ ಅತ್ಯಗತ್ಯವಾದ ಎಂಆರ್ ಐ ಮಶೀನ್ ಇಲ್ಲ, ಎಂಆರ್ ಐ ಪರೀಕ್ಷೆಗೆ ಜನತೆ 200–250 ಕಿ.ಮೀ.ದೂರ ಹೋಗಬೇಕಾಗಿದೆ. ಎಂಆರ್ ಐ ಮಶೀನ್ ಅಳವಡಿಕೆಗೆ ಟೆಂಡರ್ ಆಗಿದೆ ಎಂದು ಹೇಳುತ್ತಿದ್ದರೂ ಇದುವರೆಗೆ ಏಕೆ ಅಳವಡಿಕೆಯಾಗಿಲ್ಲ, ಎಲ್ಲ ರೋಗಿಗಳಿಗೆ ಸಿಟಿ ಸ್ಕ್ಯಾನ್ ಸಹ ಮಾಡುತ್ತಿಲ್ಲ, ಹೃದ್ರೋಗ ತಜ್ಞರು, ನರ ರೋಗ ತಜ್ಞರು ಹೀಗೆ ತಜ್ಞ ವೈದ್ಯರು ಇಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಒಂದೇ ಒಂದು ಉಪಕರಣ, ತಜ್ಞ ವೈದ್ಯರನ್ನು ಕೊಡದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬರಿಗೈಯಲ್ಲಿ ಉದ್ಘಾಟನೆ ಮಾಡಲು ಬಂದಿರುವುದು ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗೆ ಸೂಕ್ತ ಉದಾಹರಣೆಯಾಗಿದೆ.

ಹಿಂದಿನ ಸರ್ಕಾರ ರೂಪಿಸಿದ ಯೋಜನೆಯನ್ನು ಈಗಿನ ಸರ್ಕಾರ ಉದ್ಘಾಟಿಸುವುದು ಸಹಜ. ಆದರೆ ಯಾವುದೇ ಸೌಲಭ್ಯ ಕಲ್ಪಿಸದೆ, ಯಾವುದೇ ಕೊಡುಗೆ ನೀಡದೆ ಕಟ್ಟಡ ಉದ್ಘಾಟಿಸುವುದು ಯಾವ ಪುರುಷಾರ್ಥಕ್ಕೆ ಎಂದು ಅವರು ಪ್ರಶ್ನಿಸಿದ್ದಾರೆ.

ಈ ದೇವರಿಗೆ ಸಾರಾಯಿಯೇ ನೈವೇದ್ಯ!

22 ರಂದು ಖಾಪ್ರಿ ದೇವರ ಜಾತ್ರಾ ಮಹೋತ್ಸವ



•**ಕಾರವಾರ:** ಇಲ್ಲೊಂದು ದೇವನಿಗೆ ಇವೆಲ್ಲವೂಗಳ ಜೊತೆಗೆ ಮುಖ್ಯವಾಗಿ ಸಾರಾಯಿಯ ಅಭಿಷೇಕ, ಸಿಗರೇಟಿನ ಹೊಗೆಯ ಧೂಪದಾರತಿ,ಮೇಣದ ಬತ್ತಿಗಳ ದೀಪಾರಾಧನೆ! ಈ ಸೇವೆ ತಪ್ಪದೆ ನಡೆಯಲೇಬೇಕು.

ಇದು ವಿಚಿತ್ರವಾದರೂ ಸತ್ಯ. ಈ ದೇವನಿಗೆ ಹಿಂದೂ–ಮುಸ್ಲಿಂ–ಕ್ರಿಶ್ಚಿಯನ್ ಸಮುದಾಯದವರು ಅವರವರ ಭಾವಭಕುತಿಗೆ ಅನುಗುಣವಾಗಿ ಶ್ರದ್ಧಾ– ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಈ ಮೇಲಿನ ಸೇವೆಗಳನ್ನು ಆ ದೇವನಿಗೆ ಅರ್ಪಿಸಿ ಕೃತಾರ್ಥರಾಗುತ್ತಾರೆ. ಈ ದೇವನಿಗೆ ಸಾರಾಯಿ ಮತ್ತು ಸಿಗರೇಟ ಅಂದರೆ ಪಂಚಪ್ರಾಣ ಆಗಿರುವದರಿಂದ ರೂಢಿಗತವಾಗಿ ಕರೆಯುವ "ಸಾರಾಯಿ ದೇವ" ನೆಂದು. ಕಾರವಾರ ತಾಲೂಕಿನಿಂದ ಐದಾರು ಕಿಮಿ ದೂರದಲ್ಲಿರುವ ಕೋಡಿಭಾಗ ಗ್ರಾಮದಲ್ಲಿ ಕಾಳಿ ನದಿಯ ತಟಕ್ಕೆ ರಾಷ್ಟ್ರೀಯ ಹೆದ್ದಾರಿ–17 ರ ಪಕ್ಕಕ್ಕೆ ಪವಡಿಸಿರುವ "ಖಾಪ್ರಿ ದೇವ"ನಿಗೆ ಪ್ರತಿವರ್ಷದ ಮಾರ್ಚ ತಿಂಗಳ ಅಂತ್ಯದಲ್ಲಿ ವಿಜೃಂಭಣೆಯ ಜಾತ್ರೋತ್ಸವ ನಡೆಯುತ್ತದೆ. ದೇವಸ್ಥಾನಕ್ಕೆ ಬರುವ ಭಕ್ತಾದಿಗಳ ಚೀಲದಲ್ಲಿ ಹಣ್ಣು–ಕಾಯಿಯ ಜೊತೆಗೆ ತರಾವರಿಯ ಮದ್ಯದ ಬಾಟಲಿಗಳು ಇರುತ್ತದೆ.

ದೇವನ ಇತಿಹಾಸ: ದೇವನ ಇತಿಹಾಸವನ್ನು ತಿಳಿದುಕೊಳ್ಳಬೇಕೆಂದರೆ ಸರಿಸುಮಾರು ಒಂದು ಶತಮಾನಗಳ ಹಿಂದಕ್ಕೆ ನಾವು ಹೋಗಬೇಕು. ಈತ ಒರ್ವ ಸಂತ. ಒಂದು ನೂರು ವರ್ಷಗಳ ಹಿಂದೆ ದಕ್ಷಿಣ ಆಫ್ರಿಕಾ ದೇಶದ "ಖಾಪ್ರಿ" ಹೆಸರಿನ ಪ್ರಜೆ ಇಲ್ಲಿ ಗುಡಿಸಲೊಂದರಲ್ಲಿ ವಾಸವಾಗಿದ್ದನಂತೆ, ಆತ ಪರೋಪಕಾರಿ ವ್ಯಕ್ತಿಯಾಗಿದ್ದು, ಜನರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುತ್ತಿದ್ದನಂತೆ ಹಾಗಾಗಿ ಅವನಿಗೆ ಬಡವರ ಬಂಧು ಎಂದು ಕರೆಯುತ್ತಿದ್ದರು. ಕೆಲವರ ಪಾಲಿಗೆ ಆತನೆ ದೇವಮಾನವನಾಗಿದ್ದ. ಹೀಗಿರುವಾಗ ಆತ ಇದ್ದಕ್ಕಿದ್ದಂತೆ ಕಣ್ಮರೆಯಾದ. ಎಲ್ಲಿ ಹುಡುಕಿದರೂ ಆತ ಕಾಣಸಿಗಲಿಲ್ಲ, ಆದರೂ ಜನಗಳಿಗೆ ಆತನ ಮೇಲೆ ಅಪಾರವಾದ ಭಯ–ಭಕ್ತಿ ಇತ್ತು. ಒಂದು ದಿನ ಗ್ರಾಮದ ಪರಸಪ್ಪ ಎಂಬಾತನಿಗೆ ಕಣ್ಮರೆಯಾದ 'ಖಾಪ್ರಿ' ಕನಸಿನಲ್ಲಿ ಬಂದು ತನಗೊಂದು ಗುಡಿಯನ್ನು ಕಟ್ಟುವಂತೆ ಹಾಗೂ ತನಗೆ ಇಷ್ಟವಾದ ಸಾರಾಯಿ, ಸಿಗರೇಟು ಮಾಂಸ ಭಕ್ಷಾದಿಗಳನ್ನು ನೀಡುವಂತೆ ಸೂಚಿಸಿದನಂತೆ. ಆತನ ಹೇಳಿಕೆಯಂತೆ ಪರಸಪ್ಪ ಖಾಪ್ರಿಯ ಒಂದು ಕಲ್ಲಿನ ಮೂರ್ತಿಯನ್ನು ತಂದು ಪ್ರತಿಷ್ಠಾಪಿಸಿ ಪೂಜಿಸಲು ಪ್ರಾರಂಭಿಸಿದ. ಖಾಪ್ರಿಯ ಮೇಲೆ ಭಯ–ಭಕ್ತಿಯಿದ್ದವರು ಆಗಾಗ ಬಂದು ಆತನ ಕಲ್ಲಿನ ಮೂರ್ತಿಗೆ ಸೇವೆಯನ್ನು ಸಲ್ಲಿಸಲು ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆಗೂ ಖಾಪ್ರಿ ಭಕ್ತರು ವರ್ಷಕ್ಕೊಮ್ಮೆ ನಡೆಯುವ ಜಾತ್ರೆಗೆ ಬರುವಾಗ ಇದನ್ನು ಕಡ್ಡಾಯವಾಗಿ ತಂದು ದೇವರಿಗೆ ಸಲ್ಲಿಸಿ ಕೃತಾರ್ಥರಾಗುತ್ತಾರೆ.

ರಸ್ತೆಯ ಪಕ್ಕದಲ್ಲಿರುವ ಖಾಪ್ರಿ ದೇವಸ್ಥಾನದ ಪೂಜಾ ಕೈಂಕರ್ಯ ವನ್ನು ಈಗ ನಡೆಸುತ್ತಿರುವ ಸ್ಥಳೀಕರಾದ ಬಾಲಕೃಷ್ಣ ನಾಯ್ಕ ಕುಟುಂಬದ ವರು ಹೇಳುವಂತೆ ಖಾಪ್ರಿ ಎನ್ನುವ ಸಂತ ಇಂದು ನಮಗೆ ನಮ್ಮ ಕಷ್ಟ–ಕಾರ್ಪಣ್ಯ ಗಳನ್ನು ನಿವಾರಿಸುವ, ಇಷ್ಟಾರ್ಥ ಬೇಡಿಕೆಗಳನ್ನು ಈಡೇರಿಸುವ ಸಾಕ್ಷಾತ್ ದೇವನಾಗಿ ಇಲ್ಲಿಯ ನೆಲೆನಿಂತಿದ್ದಾನೆ. ಭಕ್ತಾದಿಗಳು ಅವನ ಮೇಲೆ ಭಕ್ತಿ ಇರಿಸಿಕೊಂಡು ಬಂದು ತಮ್ಮ ಯತಾರ್ಥವಾದ ಸೇವೆಯನ್ನು ಸಲ್ಲಿಸಿ ಧನ್ಯರಾಗುತ್ತಾರೆ ಎನ್ನುತ್ತಾರೆ.

ಏನೆಲ್ಲಾ ಸೇವೆಗಳು?: ಖಾಪ್ರಿ ದೇವರಿಗೆ ದೀಪದೆಣ್ಣೆ–ಹೂ–ಹಣ್ಣುಕಾಯಿಯನ್ನು ಸಲ್ಲಿಸುವದು ಹಾಗೂ ಕೋಳಿಯನ್ನು ಬಲಿಕೊಡುವದು, ಖಾಯಿಪಲ್ಲೆ ತರಕಾರಿಯ ತುಲಭಾರ ನಡೆಸುವದು ಮಾಮೂಲು ಸಂಪ್ರದಾಯದ ಭಾಗವಾಗಿದೆ. ಜೊತೆಗೆ ಭಕ್ತಾದಿಗಳು ವೈವಿಧ್ಯಮಯವಾದ ಮದ್ಯಗಳನ್ನು ತಂದು ದೇವನಿಗೆ ಸಲ್ಲಿಸಿ ಅದನ್ನೆ ದೇವರ ಪ್ರಸಾದವಾಗಿ ಸ್ವೀಕರಿಸುವದು ಒಂದು ವಿಶೇಷ, ಅದೇ ರೀತಿ ಸಿಗರೇಟನ್ನು ತಂದು ಅದನ್ನು ಅಗರಬತ್ತಿಯ ರೂಪದಲ್ಲಿ ಅದನ್ನು ಹೊತ್ತಿಸಿ ಆರತಿಯನ್ನು ಮಾಡುತ್ತಾರೆ. ಈ ದೇವ ಕೇವಲ ಒಂದು ಸಮುದಾಯದ ದೇವನಾಗಿರದೆ ಹಿಂದೂ,ಕ್ರಿಶ್ಚಿಯನ್, ಮುಸ್ಲಿಂ ಸಮುದಾಯದ ಭಕ್ತರೂ ಖಾಪ್ರಿ ದೇವರಿಗೆ ನಡೆದುಕೊಳ್ಳುವದು ವಿಶೇಷವಾಗಿದ್ದು, ಹಾಗಾಗಿ ಈ ಜಾತ್ರೆಯು ಭಾವೈಕ್ಯತೆಯನ್ನು ಸಂಕೇತಿಸುತ್ತದೆ ಎಂದರೆ ತಪ್ಪಾಗಲಾರದು.

ಕಿರುಸುದ್ದಿ

ಕೋಡಿಯಲ್ಲಾಪುರ ಮಠಕ್ಕೆ ಇಂದು ಶ್ರೀಗಳು



ಹಾನಗಲ್ಲ: ಕೇದಾರ ಜಗದ್ಗುರು ಪೀಠದ ಉತ್ತರಾಧಿಕಾರಿಯಾಗಿ ನೇಮಕಗೊಂಡ ಕಣ್ವಕುಪ್ಪೆ ಗವಿಮಠ ಹಾಗೂ ಕೋಡಿಯಲ್ಲಾಪುರ ಮಠಗಳ ಪೀಠಾಧ್ಯಕ್ಷರಾದ ಡಾ.ನಾಲ್ವಡಿ ಶಾಂತಲಿಂಗ ಶಿವಾಚಾರ್ಯರು ಫೆ.22ರಂದು ಸಂಜೆ 7.30 ಗಂಟೆಗೆ ಕೋಡಿಯಲ್ಲಾಪುರ ಮಠಕ್ಕೆ ದಯಮಾಡಿಸಲಿದ್ದಾರೆ. ಅಂದು ಭಕ್ತರಿಗೆ ಆಶೀರ್ವಾದ ನೀಡುವರು ಎಂದು ಮಠದ ಭಕ್ತರಾದ ನಿಂಗಪ್ಪ ಪೂಜಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.24ರಿಂದ ಬಸವೇಶ್ವರ ಜಾತ್ರಾ ಮಹೋತ್ಸವ

ರಾಣೇಬೆನ್ನೂರ: ತಾಲೂಕಿನ ಉಕ್ಕುಂದ ಗ್ರಾಮದಲ್ಲಿ ಬಸವೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವವು ಫೆ.24 ರಿಂದ ಫೆ.27ರವರೆಗೆ ಜರುಗಲಿದೆ. ಫೆ.24ರಂದು ಬೆ.6 ಗಂಟೆಗೆ ನಂದಿಧ್ವಜ ಸ್ಥಾಪನೆ ಮತ್ತು ಕಂಕಣ ಕಟ್ಟುವ ಕಾರ್ಯಕ್ರಮ ಹಾಗೂ ನೂತನ ಪುಷ್ಪ ರಥೋತ್ಸವಕ್ಕೆ ಹೋಮ ಹವನ ರಥಶಾಂತಿ ನಡೆಯುವುದು. ಸಂಜೆ.7.30ಕ್ಕೆ ಆವರಗೋಳ ಪುರವರ್ಗ ಹಿರೇಮಠದ ಓಂಕಾರ ಶಿವಾಚಾರ್ಯ ಶ್ರೀಗಳಿಂದ ನೂತನ ಪುಷ್ಪ ರಥೋತ್ಸವಕ್ಕೆ ಕಳಸಾರೋಹಣ ನಡೆಯುವುದು. ಫೆ.26ರಂದು ಬೆ.11 ಗಂಟೆಗೆ ಪುಷ್ಪ ರಥೋತ್ಸವ ಜರುಗುವುದು.ಫೆ.27ರಂದು ಬೆಳಗ್ಗೆ ಗುಗ್ಗಳ ಕಾರ್ಯಕ್ರಮ ಸಂಜೆ. 4 ಗಂಟೆಗೆ ಮಹಾ ರಥೋತ್ಸವ ಜರುಗುವುದು. ಜಾತ್ರೆಯ ಪ್ರಯುಕ್ತವಾಗಿ ಫೆ.28ರಿಂದ ಮಾ.2 ರವರೆಗೆ ಬೈಲು ಜಂಗೀ ಕುಸ್ತಿ ನಡೆಯುವುದು ಎಂದು ಬಸವೇಶ್ವರ ದೇವಸ್ಥಾನ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನ ಕಳವು: ಆರೋಪಿ ಬಂಧನ



ರಾಣೇಬೆನ್ನೂರ: ಬೇರಡೆ ಗಮನ ಸೆಳೆದು ಬಂಗಾರದ ಅಂಗಡಿಯಲ್ಲಿ ಬಂಗಾರದ ಆಭರಣಗಳನ್ನು ಕಳ್ಳತನ ಮಾಡುತ್ತಿದ್ದ ಚಾಲಾಕಿ ಕಳ್ಳಿಯನ್ನು ನಗರದ ಶಹರ ಠಾಣೆಯ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕುರಿತು ಡಿವೈಎಸ್‌ಪಿ ಜೆ.ಲೋಕೇಶ ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಹುಬ್ಬಳ್ಳಿಯ ನವನಗರದ ನಿವಾಸಿ ಶ್ರೀದೇವಿ ಕಟ್ಟೇಕಾರ ಎಂಬ ಮಹಿಳೆ ನಗರದ ಬೆನಕ ಗೋಲ್ಡ್ ಕಂಪನಿಯ ಕಚೇರಿಯಲ್ಲಿ ಬಂಗಾರದ ತಾಳಿಯ ಸರವನ್ನು ಗಿರವಿ ಇಡಲು ಬಂದಾಗ ಅದರ ಬಗ್ಗೆ ಸೂಕ್ತ ದಾಖಲಾತಿಗಳು ಇಲ್ಲದೆ ಇದ್ದಾಗ ಕಂಪನಿಯವರು ನಮಗೆ ಮಾಹಿತಿ ನೀಡಿದ ಮೇಲೆ ಸಮಯಕ್ಕೆ ಸರಿಯಾಗಿ ನಮ್ಮ ಸಿಬ್ಬಂದಿ ಹಾಗೂ ಮಹಿಳಾ ಸಿಬ್ಬಂದಿಯವರು ಸ್ಥಳಕ್ಕೆ ಧಾವಿಸಿ ಮಾಂಗಲ್ಯ ಸರದ ಬಗ್ಗೆ ವಿಚಾರಿಸಿದಾಗ ಸತ್ಯವನ್ನು ಬಾಯಿಬಿಟ್ಟಿದ್ದಾಳೆ ಎಂದು ತಿಳಿಸಿದರು. ನಂತರ ಬಂಗಾರದ ತಾಳಿಯನ್ನು ವಶಪಡೆದುಕೊಂಡಿದ್ದೇವೆ ಮತ್ತು ಫೆ.18ರಂದು ಶಿವಮೊಗ್ಗ ಭೀಮಾ ಜ್ಯುವಿಲರ್ ಶೋ ರೂಮ್‌ಗೆ ಹೋಗಿ ನಾನು ಬಂಗಾರವನ್ನು ಖರೀದಿ ಮಾಡಲಿಕ್ಕೆ ಬಂದಿದ್ದೇನೆ ಎಂದು ಬಂಗಾರ ನೋಡುವ ನೆಪದಲ್ಲಿ 40 ಗ್ರಾಂ 600 ಮಿಲಿ ತೂಕದ ತಾಳಿ ಸರವನ್ನು ಕಳ್ಳತನ ಮಾಡಿದ್ದಾಳೆ. ಫೆ.17 ರಂದೂ ಸಹ ಬೆಳಗಾವಿಯ ತಿಲಕವಾಡಿ ನಗರದ ಭೀಮಾ ಜ್ಯುವಿಲರ್ಸ್ ಶೋ ರೂಂ ನಲ್ಲಿಯೂ ಸಹ 41 ಗ್ರಾಂ ತೂಕದ ಬಂಗಾರದ ಸರವನ್ನು ಕಳ್ಳತನ ಮಾಡಿ, ಬೆಳಗಾವಿ ಗೋವಾವೆಸ್ ಸರ್ಕಲ್ ಮಣಿಪುರಂ ಗೋಲ್ಡ್ ಕಂಪನಿಯಲ್ಲಿ ಅಡಾವೆ ಇಟ್ಟಿದ್ದಾಳೆ ಎಂದು ಲೋಕೇಶ ತಿಳಿಸಿದರು.

ಜೋಡೆತ್ತುಗಳ ಸಾವು

ಮುಂಡರಗಿ: 'ರಾಮೇನಹಳ್ಳಿ ಗ್ರಾಮದ ವೆಂಕಟೇಶ ಬಾಗಳಿ ಎಂಬ ರೈತನಿಗೆ ಸೇರಿದ ಎರಡು ಎತ್ತುಗಳು ಮೃತಪಟ್ಟಿದ್ದು, ಬಡರೈತನಿಗೆ ಬಹಳ ನಷ್ಟವಾಗಿದೆ. ಕೇವಲ 1 ಎಕ್ಕರೆ ಭೂಮಿಯನ್ನು ಹೊಂದಿರುವಂತಹ ವೆಂಕಪ್ಪ ಬಾಗಳಿ ಬೇರೆಯವರ ಹೊಲಗಳನ್ನು ಲಾವಣಿ ಪಡೆದುಕೊಂಡು ಕೃಷಿ ಮಾಡಿಕೊಂಡು ಸುಮಾರು 1 ಲಕ್ಷ 20 ಸಾವಿರ ಖರ್ಚು ಮಾಡಿ ಎತ್ತು ತಂದಿದ್ದ. ರೈತ ವೆಂಕಟೇಶ ಬಾಗಳಿ ಮನೆಯ ಪಕ್ಕದಲ್ಲಿ ಎತ್ತುಗಳನ್ನು ಕಟ್ಟಿದ್ದ ರೈತನ ಎರಡು ಎತ್ತುಗಳು ಏಕಾಏಕಿ ಸಾವಿಗಿಡಾಗಿವೆ. ಘಟನಾ ಸ್ಥಳಕ್ಕೆ ತಾಲೂಕು ಪಶು ವೈದ್ಯಾಧಿಕಾರಿ ಡಾ. ತಿಗರಿಮಠ ಆಗಮಿಸಿ ಈ ಘಟನೆಯು ಫುಡ್‌ಪಾಯಿಸನ್‌ನಿಂದ ಜರುಗಿದೆ. ಹೆಚ್ಚಿನ ಪರಿಶೀಲನೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು. ಕಳೆದ 15 ದಿನಗಳಲ್ಲಿ ರಾಮೇನಹಳ್ಳಿ ಗ್ರಾಮದಲ್ಲಿ 3 ಆಕಳುಗಳು 2 ಎತ್ತುಗಳು ಏಕಾಏಕಿ ಮೃತಪಟ್ಟಿರುವ ಘಟನೆ ಜರುಗಿದ್ದು, ಆದ್ದರಿಂದ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ಸೂಕ್ತ ಔಷಧಿ ಉಪಚಾರ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



ರಾಣೆಬೆನ್ನೂರ: ತಾಲೂಕಿನ ಕಾಕೋಳ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವವನ್ನು ವಿಕಾಸ್ ಬಳ್ಳಾರಿ ಉದ್ಘಾಟಿಸಿದರು. ಈ ವೇಳೆ ಗ್ರಾಮದ ಗಣ್ಯರು, ಎಸ್‌ಡಿ ಎಂಸಿ ಪದಾಕಾರಿಗಳು ಹಾಗೂ ಶಾಲಾ ಸಿಬ್ಬಂದಿ ಇದ್ದರು.

ಪ್ರತಿಭೆ ಪ್ರೋತ್ಸಾಹಿಸಿ: ಶಾಸಕ ಶ್ರೀನಿವಾಸ ಮಾನೆ

ಹಾನಗಲ್ಲ: ಮಹಿಳೆಯರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವಾದರೆ ನಾಡಿನ ಅಭಿವೃದ್ಧಿಗೆ ಹೆಚ್ಚು ಪೂರಕವಾಗಬಲ್ಲದುದಲ್ಲದೆ, ಆರ್ಥಿಕ ಸಬಲತೆಯೂ ಇದರಿಂದ ಸಾಧ್ಯ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು. ಶನಿವಾರ ಪಟ್ಟಣದ ಲೋಯಲಾ ವಿಕಾಸ ಕೇಂದ್ರದಲ್ಲಿ ಪರಿವರ್ತನ ಕಲಿಕಾ ಕೇಂದ್ರ ಆಯೋಜಿಸಿದ ಆರೀ ಕಲೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಕಲಿಕೆನಮ್ಮನ್ನು ಆರ್ಥಿಕಸಬಲತೆಗೆಪ್ರೋತ್ಸಾಹಿಸುತ್ತದೆ. ಹಾನಗಲ್ಲತಾಲೂಕಿನಲ್ಲಿ5 ಸಾವಿರ ಮಹಿಳೆಯರಿಗೆ ಉದ್ಯೋಗಾವಕಾಶ ಕೊಡುವ ಗಾರ್ಮೆಂಟ್ ಆರಂಭ ತಾಂತ್ರಿಕ ತೊಂದರೆಯಿಂದ ತಡೆಹಿಡಿದಿದೆ ಎಂದರು. ಅಧ್ಯಕ್ಷತೆವಹಿಸಿ ಮಾತನಾಡಿದ ಲೋಯಲಾ ವಿಕಾಸ ಕೇಂದ್ರದ ನಿರ್ದೇಶಕ ವಿನ್ಸೆಂಟ್ ಜೇಸಸ್, ಜ್ಞಾನಕ್ಕೆ ಧರ್ಮ ಜಾತಿಯ ಕಟ್ಟಳೆ ಇಲ್ಲ, ಮಹಿಳಾ ಸಬಲೀಕರಣಕ್ಕೆ ಎಲ್ಲರೂ ಒಟ್ಟಾಗಿ ಶ್ರಮಿಸುವ ಅಗತ್ಯವಿದೆ. ಸಮಾಜವೂ ಕೂಡ ಮಹಿಳಾ ಸಬಲೀಕರಣಕ್ಕೆ ಬೆಂಬಲಿಸಬೇಕು. ಎಲ್ಲ ಸಂದರ್ಭದಲ್ಲಿ ನಮ್ಮನ್ನು ಗುರುತಿಸಿ ಪ್ರೋತ್ಸಾಹಿಸಿದವರನ್ನು ಸ್ಮರಿಸುವ ಕೆಲಸವಾಗಬೇಕು ಎಂದರು. ಮುಖ್ಯ ಅತಿಥಿಯಾಗಿ ಮಾತನಾಡಿ, ಹ್ಯುಮ್ಯಾನಿಟಿ ಫೌಂಡೇಶನ್‌ನ ಅಧ್ಯಕ್ಷೆ ನ್ಯಾಯವಾದಿ ಸ್ವಾತಿ ಮಾಳಗಿ, ಮನುಷ್ಯ ಬದಲಾದ ಕಾಲಕ್ಕೆ ಉದ್ಯೋಗ ಕಲೆಯಲ್ಲಿಯೂ ಬದಲಾವಣೆಗಳನ್ನು ಗುರುತಿಸಿ ಅದಕ್ಕೆ ತಕ್ಕಂತೆ ಬದಲಾಗಬೇಕು. ನಾಳೆಗಳಿಗೆ ಹೊಸ ಹೊಸ ಆಲೋಚನೆಗಳೊಂದಿಗೆ ಕೆಲಸ ಕಾರ್ಯಗಳು ನಮ್ಮನ್ನು ಪ್ರೋತ್ಸಾಹಿಸಿದಾಗ, ಒಳ್ಳೆಯ ಕಲೆಯನ್ನು ಕಲಿಯುವ ಮೂಲಕ ಅದನ್ನು ಆರ್ಥಿಕ ಸಬಲತೆಗೆ ಬಳಸಿಕೊಳ್ಳಬೇಕು ಎಂದರು. ಆರೀ ಕಲೆ ತರಬೇತುದಾರರಾದ ಪರ್ವಿನ್ ಜಕ್ಕಿನಕಟ್ಟಿ ಶೃತಿ ಮರಿಯಣ್ಣನವರ, ಪ್ರಿಯಾಂಕ ಗೊಲ್ಲರ ಇದ್ದರು. ಲೋಹಿತ್ ಕಾಟಣ್ಣನವರ ಸ್ವಾಗತಿಸಿದರು. ಎಸ್.ಬಿ.ಜಯಮ್ಮ ನಿರೂಪಿಸಿದರು. ಸ್ವಪ್ನಾ ಕುರುಬರ ವಂದಿಸಿದರು.



ಹಾನಗಲ್ಲ: ಶನಿವಾರ ಪಟ್ಟಣದ ಲೋಯಲಾ ವಿಕಾಸ ಕೇಂದ್ರದಲ್ಲಿ ಪರಿವರ್ತನ ಕಲಿಕಾ ಕೇಂದ್ರ ಆಯೋಜಿಸಿದ ಆರೀ ಕಲೆ ತರಬೇತಿ ಕಾರ್ಯಾಗಾರವನ್ನು ಶಾಸಕ ಶ್ರೀನಿವಾಸ ಮಾನೆ ಉದ್ಘಾಟಿಸಿದರು.

ಪಿಯುಸಿ ವಾರ್ಷಿಕ ಪರೀಕ್ಷೆ ಪೂರ್ವಭಾವಿ ಸಭೆ| ಡಿಸಿ ಸೂಚನೆ

ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಿ

ಹಾವೇರಿ: ದ್ವಿತೀಯ ಪಿಯುಸಿ ಪರೀಕ್ಷೆ ಫೆ.28ರಿಂದ ಮಾರ್ಚ್ 17ವರೆಗೆ ಜಿಲ್ಲೆಯ 25 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪರೀಕ್ಷೆ ಬಹಳ ಸೂಕ್ಷ್ಮವಾದ ವಿಷಯವಾಗಿದೆ. ಹಾಗಾಗಿ ಯಾವುದೇ ಲೋಪವಾಗದಂತೆ ತಮ್ಮ ಕರ್ತವ್ಯಗಳನ್ನು ಜವಾಬ್ದಾರಿ ಹಾಗೂ ಪಾರದರ್ಶಕವಾಗಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಪೂರ್ವಭಾವಿ ಸಭೆ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಎಲ್ಲರೂ ಪರೀಕ್ಷಾ ಪಾವಿತ್ರತೆ ಕಾಪಾಡಿಕೊಳ್ಳಬೇಕು ಹಾಗೂ ಪರೀಕ್ಷಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದರು.

ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿ: ಆಕಸ್ಮಿಕವಾಗಿ ಬೇರೆ ಕೇಂದ್ರದ ವಿದ್ಯಾರ್ಥಿಗಳು ನಿಮ್ಮ ಕೇಂದ್ರಕ್ಕೆ ಬಂದರೆ, ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿ, ಅವರನ್ನು ಆಯಾ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲು ಸಹಕರಿಸಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಭಯದ ವಾತಾವರಣ ಉಂಟಾಗಬಾರದು ಎಂದು ಸಲಹೆ ನೀಡಿದರು.

ಇಲೆಕ್ಟ್ರಾನಿಕ್ ಉಪಕರಣಗಳ ನಿಷೇಧ: ಪರೀಕ್ಷಾರ್ಥಿಗಳು ಅಥವಾ ಕೊಠಡಿಯ ಮೇಲ್ವಿಚಾರಕರಾಗಲಿ ಪರೀಕ್ಷಾ ಕೇಂದ್ರದೊಳಗೆ ಅತ್ಯಾಧುನಿಕ ಇಲೆಕ್ಟ್ರಾನಿಕ್ ಉಪಕರಣಗಳಾದ ಮೊಬೈಲ್, ಬ್ಲೂಟೂತ್, ಪೇಜರ್, ವೈರಲೆಸ್ ಸೆಟ್ ಹಾಗೂ ರಿಸ್ಟ್ ವಾಚ್‌ಗಳನ್ನು ನಿಷೇಧಿಸಿದೆ. ಈ ಕುರಿತಂತೆ ಅಧಿಕಾರಿಗಳು ಎಚ್ಚರವಹಿಸಬೇಕು ಎಂದು ಸೂಚಿಸಿದರು.

200 ಮೀಟರ್ ಪ್ರದೇಶ ನಿಷೇಧ: ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್‌ವರೆಗೆ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ನಿಷೇಧಿತ ವಲಯದಲ್ಲಿ ಝುರಾಕ್ಸ್ ಹಾಗೂ ಸೈಬರ್ ಕೆಫೆಗಳನ್ನು ಮುಚ್ಚಲು ಆದೇಶಿಸಲಾಗಿದೆ ಎಂದು ತಿಳಿಸಿದರು.



ವಿಶೇಷ ಸಾರಿಗೆ ಸೌಲಭ್ಯ

ಪರೀಕ್ಷಾ ಕೇಂದ್ರಗಳಲ್ಲಿ ಹೆಚ್ಚಾಗಿ ನಗರ ಪ್ರದೇಶದಲ್ಲಿ ಇರುವುದರಿಂದ ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶೇಷ ಸಾರಿಗೆ ಸೌಲಭ್ಯ ಒದಗಿಸುವಂತೆ ಎನ್.ಡಬ್ಲ್ಯು.ಕೆಎಸ್‌ಆರ್‌ಟಿಸಿ ಹಾವೇರಿ ವಿಭಾಗೀಯ ನಿಯಂತ್ರಾಧಿಕಾರಿಗಳಿಗೆ ಸೂಚನೆ ನೀಡಿದರು.

ಪರೀಕ್ಷಾ ಕೇಂದ್ರಗಳು: ಬ್ಯಾಡಗಿ ಪಟ್ಟಣದ ಎಸ್.ಜೆ.ಜೆಎಂ.ಸರ್ಕಾರಿ ಪಪೂ. ಕಾಲೇಜ್, ಪೇಸ್ ಪ.ಪೂ ಹಾಗೂ ಶಿಡೇನೂರ ಡಾ.ಬಿ.ಆರ್.ಅಂಬೇಡ್ಕರ್ ಪಪೂ.ಕಾಲೇಜ್, ಹಾನಗಲ್‌ನ ಸರ್ಕಾರಿ ಸ್ವತಂತ್ರ ಪಪೂ.ಕಾಲೇಜ, ಕುಮಾರೇಶ್ವ ಪಪೂ.ಕಾಲೇಜ, ನ್ಯೂ ಸಂಯುಕ್ತ ಪಪೂ.ಕಾಲೇಜ ಹಾಗೂ ಅಕ್ಕಿಆಲೂರು ಎನ್.ಡಿ. ಪಪೂ.ಕಾಲೇಜ, ಹಾವೇರಿ ನಗರದ ಜಿ.ಎಚ್. ಪಪೂ.ಕಾಲೇಜ, ಎಸ್.ಜೆ.ಎಂ. ಪಪೂ.ಕಾಲೇಜ ಸರ್ಕಾರಿ ಪ.ಪೂ.ಕಾಲೇಜ ಹಾಗೂ ಬಾಲಕಿಯರ ಸರ್ಕಾರಿ ಪ.ಪೂ.ಕಾಲೇಜ, ಹಿರೇಕೆರೂರು ಪಟ್ಟಣದ ಕೆ.ಎಚ್. ಪಪೂ.ಕಾಲೇಜ, ಸಂಗಮೇಶ್ವರ ಪಪೂ. ಕಾಲೇಜ ಹಾಗೂ ಹಂಸಭಾವಿ ಎಂ.ಎ ಎಸ್ ಸಿ ಪಪೂ. ಕಾಲೇಜ, ರಾಣೇಬೆನ್ನೂರು ನಗರದ ಹೊಸಮನಿ ಸಿದ್ದಪ್ಪ ಪಪೂ.ಕಾಲೇಜ, ಆರ್.ಆರ್. ಪಪೂ.ಕಾಲೇಜ, ಸರ್ಕಾರಿ ಪಪೂ.ಕಾಲೇಜ, ದೇವಿಕಾ ಪಪೂ.ಕಾಲೇಜ, ರೋಟರಿ ಪಪೂ.ಕಾಲೇಜ, ಬಿಎಜೆಎಸ್ ಎಸ್ ಇಂಡಿ ವುಮೆನ್ಸ್ ಪಪೂ.ಕಾಲೇಜ, ರಟ್ಟೆಹಳ್ಳಿ ತಾಲೂಕು ಮಾಸೂರಿನ ಬಿ.ಟಿ.ಪಾಟೀ. ಪಪೂ.ಕಾಲೇಜ, ಸವಣೂರಿನ ಮಜೀದ್ ಸರ್ಕಾರಿ ಪಪೂ.ಕಾಲೇಜ ಹಾಗೂ ಶಿಗ್ಗಾಂವಿಯ ಎಸ್.ಬಿ.ಬಿ.ಎಂ.ಡಿ. ಪಪೂ. ಕಾಲೇಜ ಹಾಗೂ ಜೆ.ಎಂ.ಜೆ. ಪಪೂ.ಕಾಲೇಜನಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

ಸಭೆಯಲ್ಲಿ ಅಪರಜಿಲ್ಲಾಧಿಕಾರಿ ಡಾ.ನಾಗರಾಜ ಎಲ್, ಜಿ.ಪಂ.ಮುಖ್ಯ ಯೋಜನಾಧಿಕಾರಿ ಎಚ್.ವೈ.ಮೀಶೆ, ಜಂಟಿ ಕೃಷಿ ನಿರ್ದೇಶಕ ಮಲ್ಲಿಕಾರ್ಜುನ, ಹಾವೇರಿ ತಹಶೀಲ್ದಾರ್ ಶರಣಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ.ಎಚ್.ಪಾಟೀಲ, ಎಂ.ಬಿ.ಅಂಬಿಗೇರ, ಶ್ರೀಧರ, ಶ್ಯಾಮಸುಂದರ ಅಡಿಗ, ಆರ.ವಿ.ಚೆನ್ನಿಕಟ್ಟಿ, ಕೋಟಿ, ಹಾವೇರಿ ಶಹರ ಠಾಣೆ ಪೊಲೀಸ್ ಇನ್ಸಪೆಕ್ಟರ್ ಮೋತಿಲಾಲ್ ಪವಾರ್ ಮತ್ತಿತರರಿದ್ದರು.

ನಿರ್ಗತಿಕರ ಮಕ್ಕಳ ಸಂಸ್ಥೆಗೆ ಅಧಿಕಾರಿ ಭೇಟಿ

ಬ್ಯಾಡಗಿ: ಪಟ್ಟಣದ ಬಸವೇಶ್ವರ ದೇವಸ್ಥಾನದಹತ್ತಿರಕನಕದಾಸವಿದ್ಯಾವರ್ತಕ ಅನಾಥ ಮತ್ತು ನಿರ್ಗತಿಕರ ಮಕ್ಕಳ ಸಂಸ್ಥೆಗೆ ಶುಕ್ರವಾರ ತಾಲೂಕು ಶಿಕ್ಷಣ ಇಲಾಖೆ ಮತ್ತು ಆರಕ್ಷಕ ಸಿಬ್ಬಂದಿಯೊಂದಿಗೆ ಇಂದು ಜಿಲ್ಲಾ ಸಿಡಬ್ಲ್ಯುಸಿ ಮಕ್ಕಳ ಅಧಿಕಾರಿ ಗೀತಾ ಪಾಟೀಲ್ ಅವರು ಅನಾಥ ನಿರ್ಗತಿಕರ ಮಕ್ಕಳ ಸಂಸ್ಥೆಗೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಯಾವುದೇ ಪರವಾನಿಗೆ ಇಲ್ಲದೆ ನಡೆಸುತ್ತಿದ್ದು, ಇಲ್ಲಿರುವ ಮಕ್ಕಳ ಬಗ್ಗೆ ಸಂಪೂರ್ಣ ಮಾಹಿತಿಯೂ ಇರುವುದಿಲ್ಲ, ಈ ಹಿಂದೆ ಡಿಸಿ ಮತ್ತು ನಾವು ಭೇಟಿ ನೀಡಿ ಪರಿಶೀಲನೆ ನಡೆಸಿ ಪರವಾನಿಗೆಯನ್ನು ಪಡೆದುಕೊಳ್ಳಲು ಸೂಚಿಸಿದ್ದರು ಕೂಡ ಅವರು ಪರವಾನಿಗೆ ಪಡೆದಿಲ್ಲ.

ಕಳೆದ 2015 ರಿಂದ 2019 ರ ವರೆಗೆ ಜೆಜೆ ಆಕ್ಟ ಪ್ರಕಾರ ಪರವಾನಿಗೆ ತೆಗೆದುಕೊಂಡು ಈ ಸಂಸ್ಥೆ ನಡೆಸುತ್ತಿದ್ದರು 2019 ರಲ್ಲಿ ಮಕ್ಕಳು ಸಂಖ್ಯೆ ಕಡಿಮೆಯಾದದ್ದರಿಂದ ಪರವಾನಿಗೆ ರದ್ದಾಗಿದ್ದತ್ತು ಆ ಅನಾಥ ಮಕ್ಕಳ ಸಂಸ್ಥೆಯನ್ನು ಬಂದ್ ಮಾಡಲು ಅಧಿಕಾರಿಗಳು ಸೂಚಿಸಿದ್ದರು. ಆದರೂ ಯಾವ ಭಯವಿಲ್ಲದೆ ಸಹ ಸಂಸ್ಥೆಯು ಮರು ಚಾಲನೆ ಮಾಡಿ ಸಂಸ್ಥೆಯನ್ನು ನಡೆಸುತ್ತಿದ್ದರು ಆದಕಾರಣ ಸಿ ಡಬ್ಲ್ಯುಸಿ ಇಲಾಖೆಯವರು ಮಕ್ಕಳ ಆರೋಗ್ಯ ಹಾಗೂ ಕಾಳಜಿಯ ವಿಚಾರವನ್ನು ಇಟ್ಟುಕೊಂಡು ಮುಂದೆ ಯಾವುದೇ ಅನಾಹುತಗಳು ನಡೆಯಬಾರದೆಂದು ಮಕ್ಕಳನ್ನು ಅವರ ಪಾಲಕರಿಗೆ ಒಪ್ಪಿಸುವ ಕೆಲಸ ಮಾಡಿದ್ದಾರೆ.

ಒಟ್ಟು ಸಂಸ್ಥೆಯಲ್ಲಿ 21 ಮಕ್ಕಳಿದ್ದು, ಅದರಲ್ಲಿ 19 ಮಕ್ಕಳು ಸಿಕ್ಕಿದ್ದು, ಅದರಲ್ಲಿ ಹಾವೇರಿ ಜಿಲ್ಲೆಯ ಸುತ್ತಮುತ್ತಲಿನ ನಾಲ್ಕು ಮಕ್ಕಳಿದ್ದು, ಇನ್ನುಳಿದ ಮಕ್ಕಳೆಲ್ಲವರು ಬೆಳಗಾಂ ಹಾಗೂ ಗುಳೇದಗುಡ್ಡ ಆ ಭಾಗದಿಂದ ವಲಸೆ ಬಂದ ಹೆಳವರು ಮಕ್ಕಳು ಎಂದರು ಅವರನ್ನು ಅವರ ಪೋಷಕರಿಗೆ ಕರೆ ಮಾಡಿ ಅವರ ಜೊತೆಗೆ ಕಳುಹಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಜಿ.ಕೋಟಿ, ಆರಕ್ಷಕ ಇಲಾಖೆ ಸಿಬ್ಬಂದಿ, ಮಕ್ಕಳ ಸಹಾಯವಾಣಿ ಇಲಾಖೆ ಸಿಬ್ಬಂದಿ, ಕೆಜಿಎಸ್ ಶಾಲೆಯ ಸಿಬ್ಬಂದಿ ಉಪಸ್ಥಿತರಿದ್ದರು.



ಸರ್ವಜ್ಞ ಜಯಂತಿ ಆಚರಣೆ

ಬ್ಯಾಡಗಿ: ಆಶು ಕವಿ ಸರ್ವಜ್ಞ ತನ್ನ ತ್ರಿಪದಿ ಕವನಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ಎತ್ತಿ ಹಿಡಿದು ತಿದ್ದಿ ತಿಡಿದ ಸಮಾಜ ಸುಧಾರಕ ಎಂದು ತಹಶೀಲ್ದಾರ್ ಚಂದ್ರಶೇಖರ್ ನಾಯಕ್ ಅಭಿಪ್ರಾಯಪಟ್ಟರು.

ಪಟ್ಟಣದ ತಹಶೀಲ್ದಾರ ಕಚೇರಿ ಸಭಾಂಗಣದಲ್ಲಿ ಸರ್ವಜ್ಞನ ಜಯಂತಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಸರ್ವಜ್ಞರು ಕುಂಬಾರ ಕುಟುಂಬದಲ್ಲಿ ಹುಟ್ಟಿದ ಈ ಕವಿಗೆ ಮೇಲ್ವರ್ಗದವರ ತುಳಿತವೇ ಒಂದು ಶಕ್ತಿಯಾಗಿ ಮುಂದೆ ಅದೇ ತ್ರಿಪದಿಯಾಗಿ ಹೊರಹೊಮ್ಮಿ ಜಾತಿ ಮತ ಧರ್ಮ ಸಾಮಾಜಿಕ ನ್ಯಾಯ ಪ್ರತಿಪಾದನೆಗೆ ಸ್ಫೂರ್ತಿ ನೀಡಿತು. ಇವರ ತ್ರಿಪದಿಗಳು ಪ್ರತಿಪಾದಿಸಿದ ತತ್ವ ಸಿದ್ಧಾಂತಗಳು ತ್ರಿಕಾಲಾಭಾದಿತ ಸತ್ಯದ ತಳಹದಿಯ ಮೇಲೆ ನಿಂತಿವೆ ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎಂ. ಜಗಪುರ್.ಶಿಶು ಅಭಿವೃದ್ಧಿ ಇಲಾಖೆ ಸಿಬ್ಬಂದಿ, ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ದಾನಪ್ಪ ಗೌಡ್ರುಮತ್ತಿತರರಿದ್ದರು.



ಸಿಲಿಂಡರ್ ದರ ಏರಿಕೆ ಖಂಡಿಸಿ ಪ್ರತಿಭಟನೆ

ರಾಣೇಬೆನ್ನೂರ: ತಾಲೂಕಿನಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳನ್ನು ಸಂಗ್ರಹಿಸಿಹೆಚ್ಚಿನದರದಲ್ಲಿ ಮಾರಾಟಮಾಡುತ್ತಿರುವುದನ್ನು ಖಂಡಿಸಿ ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ನಗರದಲ್ಲಿ ಪ್ರತಿಭಟಿಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಿತ್ಯಾನಂದ ಕುಂದಾಪುರ ಮಾತನಾಡಿ, ತಾಲೂಕಿನಾದ್ಯಂತ ಹೆಚ್‌ಪಿ, ಇಂಡಿಯನ್, ಭಾರತ ಹಾಗೂ ವಿವಿಧ ಗ್ಯಾಸ್ ಏಜೆನ್ಸಿಗಳು ಎಲ್ಲೆಂದರಲ್ಲಿ ವಿತರಣೆ ಮಾಡಲು ಮುಂದಾಗಿ ಸಾರ್ವಜನಿಕರನ್ನು ಲೂಟಿ ಮಾಡುತ್ತಿವೆ ಎಂದು ಆರೋಪಿಸಿದರು.

ಸಾರ್ವಜನಿಕ ಪ್ರದೇಶಗಳಲ್ಲಿ ಹಾಗೂ ಗ್ರಾಮಗಳ ಮಧ್ಯದ ಸಾರ್ವಜನಿಕ ಸ್ಥಳಗಳಲ್ಲಿ ಗ್ಯಾಸ್ ಸಿಲಿಂಡರ್‌ಗಳನ್ನು ಸಂಗ್ರಹಿಸುತ್ತಿರುವುದು ಕಂಡು ಬಂದಿದೆ. ಇದರಿಂದ ಶಾಲಾ ಮಕ್ಕಳು ಮತ್ತು ಸಾರ್ವಜನಿಕರು ಸಂಚರಿಸುವ ಸ್ಥಳಗಳಾಗಿವೆ ಇದರಿಂದಾಗಿ ಒಂದು ವೇಳೆ ಅವಘಡಗಳು ಸಂಭವಿಸಿದರೆ ಇದಕ್ಕೆ ಹೊಣೆ ಯಾರು ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಅದರಲ್ಲೂ ತಾಲೂಕಿನ ಸುಕ್ಷೇತ್ರ ದೇವರಗುಡ್ಡ ಗ್ರಾಮದಲ್ಲಿ ಅನಧಿಕೃತ ಸಿಲಿಂಡರ್‌ಗಳ ಸಂಗ್ರಹಣೆ ಹಾಗೂ ಹೆಚ್ಚುವರಿ ಶುಲ್ಕಗಳನ್ನು ವಿಧಿಸುತ್ತಿರುವುದು ಕಂಡು ಬಂದಿದೆ.



ಎಲ್ಲಾ ಏಜನ್ಸಿಗಳು ಕೇಂದ್ರ ಸರ್ಕಾರದ ಯಾವುದೇ ನಿಯಮಾವಳಿಗಳನ್ನು ಪಾಲಿಸದೆ ಇಂತಹ ಕೃತ್ಯಕ್ಕೆ ಇಳಿದಿದ್ದಾರೆ ಕೂಡಲೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಎಚ್ಚೆತ್ತುಕೊಂಡು ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳ ಸಂಗ್ರಹಣೆ ಮತ್ತು ಹೆಚ್ಚುವರಿ ಹಣ ವಸೂಲಾತಿ ಮಾಡುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ನಿತ್ಯಾನಂದ ಎಚ್ಚರಿಸಿದರು. ತಾಲೂಕ ಅಧ್ಯಕ್ಷ ಚಂದ್ರಪ್ಪ ಬಣಕಾರ, ಮಲ್ಲಿಕಾರ್ಜುನ ಸಾವಕ್ಕಳವರ, ನಿಂಗಪ್ಪ ಬೀರಪ್ಪನವರ, ರವಿ ಪಾರಿ, ಕೃಷ್ಣ ವೇಷಗಾರ, ಮಲ್ಲಪ್ಪ ಮುದ್ದಿ, ಎಂ.ಎನ್.ಬೀರಣ್ಣನವರ, ಮಾಲತೇಶ ಏಳಕುರಿ, ಪ್ರವೀಣ ಏಳಕುರಿ, ಪಿ.ಎನ್ ಕುರವತ್ತಿ, ನಾಗರಾಜ ಏಳಕುರಿ ಸೇರಿದಂತೆ ಮತ್ತಿತರರು ಇದ್ದರು.

ಅಕ್ಕಿಆಲೂರು ಗ್ರಾಪಂ ಪಪಂಯಾಗಿ ಮೇಲ್ದರ್ಜೆಗೆ

ಹಾನಗಲ್ಲ: ಜಿಲ್ಲೆಯ ಪ್ರಮುಖ ವ್ಯಾಪಾರಿ ಮತ್ತು ಶೈಕ್ಷಣಿಕ ಕೇಂದ್ರವಾದ ಅಕ್ಕಿ ಆಲೂರಿಗೆ ಶೀಘ್ರ ಪಟ್ಟಣದ ಮುದ್ರೆ ಬೀಳಲಿದ್ದು, ಸ್ಥಳೀಯ ಗ್ರಾಪಂ, ಪಪಂಯಾಗಿ ಮೇಲ್ದರ್ಜೆಗೇರಲಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಅಕ್ಕಿಆಲೂರಿನ ಸರ್ಕಾರಿ ಮಾದರಿ ಉನ್ನತೀಕರಿಸಿದ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಶುಕ್ರವಾರ ವಾರ್ಷಿಕ ಸ್ನೇಹ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಹಲವು ರಂಗಗಳಲ್ಲಿ ಅಕ್ಕಿಆಲೂರು ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಛಾಪು ಮೂಡಿಸಿದೆ. ಪ್ರಗತಿಗೆ ಇನ್ನಷ್ಟು ವೇಗ ನೀಡುವ ನಿಟ್ಟಿನಲ್ಲಿ ಶೀಘ್ರದಲ್ಲಿ ಪಪಂ ರಚಿಸಲಾಗುವುದು. ಈಗಾಗಲೇ ಮಾದರಿ ಕೇಂದ್ರ ಶಾಲೆಯನ್ನು ಉನ್ನತೀಕರಿಸಿ ಪ್ರೌಢಶಾಲೆಯನ್ನಾಗಿಸಲಾಗಿದೆ. ಎಲ್‌ಕೆಜಿಯಿಂದ ಹಿಡಿದು ಎಸ್ಸೆಸ್ಸೆಲ್ಸಿ ವರೆಗೆ ಒಂದೇ ಸೂರಿನಡಿ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಸಿಗುವ ವ್ಯವಸ್ಥೆ ಮಾಡಲಾಗಿದ್ದು ಶೀಘ್ರ ಪದವಿ ಪೂರ್ವ ಶಿಕ್ಷಣ ಸಹ ದೊರಕಿಸುವ ಪ್ರಯತ್ನ ಮಾಡಲಾಗುವುದು ಎಂದರು. ಎಸ್‌ಡಿಎಂಸಿ ಅಧ್ಯಕ್ಷ ಅಬ್ದುಲ್‌ಖಾದರ ಅತ್ತಾರ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ರಾಜ್ಯ ಮಿನರಲ್ ಕಾರ್ಪೋರೇಷನ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ವಿಶ್ವನಾಥ ಹಿರೇಮಠ, ಜಿಪಂ ಮಾಜಿ ಸದಸ್ಯರಾದ ಟಾಕನಗೌಡ ಪಾಟೀಲ, ಕೃಷ್ಣ ಈಳಿಗೇರ, ತಾಪಂ ಮಾಜಿ ಸದಸ್ಯ ಮೆಹಬೂಬ ಬ್ಯಾಡಗಿ, ಸಿಆರ್‌ಪಿ ನಾಗಪ್ಪ ಚೂರಿ, ಪಿಡಿಒ ಕೆ.ಎಫ್.ಚಿಕ್ಕೇರಿ, ಪ್ರಭುಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಅಣ್ಣಿಗೇರಿ, ಇನಾಯತ್ ಪಠಾಣ, ಷಣ್ಮುಖಪ್ಪ ಮುಚ್ಚಂಡಿ, ಬಸವರಾಜ ಕೋರಿ, ಕರಬಸಪ್ಪ ಗೊಂದಿ, ಇಮ್ರಾನ್ ಬನವಾಸಿ, ಮಹ್ಮದ್‌ಜಾಫರ್ ಆಲದಕಟ್ಟಿ ಇತರರಿದ್ದರು.



ಚಂದ್ರಕಾಂತರಿಗೆ ಬಹುಮಾನ



ನರಗುಂದ: ಪಟ್ಟಣದ ರಾಷ್ಟ್ರ ಪ್ರಶಸ್ತಿ ವಿಜೇತ ಯುವ ಗಾಯಕ ಪಂ. ಚಂದ್ರಕಾಂತ ಇನಾಮದಾರ ಅವರಿಗೆ ಗಣಕರಂಗ, ಧಾರವಾಡದಿಂದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ಆಯೋಜಿಸಲಾದ ರಾಜ್ಯಮಟ್ಟದ ಕಥೆ ಹಾಗೂ ಕಾವ್ಯವಾಚನ ಸ್ಪರ್ಧೆಯಲ್ಲಿ ಮೆಚ್ಚುಗೆಯ ಬಹುಮಾನ ಪ್ರಧಾನ ಮಾಡಲಾಯಿತು.

ದತ್ತಿ ಉಪನ್ಯಾಸ ಇಂದು

ಗದಗ: ಇಲ್ಲಿನ ಶಿವಾನಂದ ನಗರದ ಬಸವ ಸಮುದಾಯ ಭವನದಲ್ಲಿ ಫೆ.22 ರಂದು ಬೆಳಗ್ಗೆ 10ಕ್ಕೆ ನಡೆಯಲಿರುವ ಬಸವದಳದ 1686ನೇ ಶರಣಸಂಗಮದಲ್ಲಿ ನಿರಂಜನಶರಣ ಹರ್ಡೇಕರ ಮಂಜಪ್ಪನವರ 140 ನೇ ಜಯಂತಿ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅಧ್ಯಕ್ಷತೆ ಎಸ್.ಎನ್. ಹಕಾರಿ ವಹಿಸುವರು. ಉಪನ್ಯಾಸಕ ತೋಟಪ್ಪ ಕರದಾನಿ ಮಾತನಾಡುವರು. ಕೆ.ಎ.ಬಳಿಗೇರ, ಎಂ.ಬಿ.ಲಿಂಗಧಾಳ ಆಗಮಿಸುವರು ಎಂದು ಸಂಘಟಕರ ಪರವಾಗಿ ಪ್ರಕಾಶ ಅಸುಂಡಿ ತಿಳಿಸಿದ್ದಾರೆ.

ಸಮಸ್ಯೆ ಪರಿಹರಿಸಿ ಸೌಲಭ್ಯ ಕಲ್ಪಿಸಿ: ಹಿರೇಮಠ

ಹಾವೇರಿ: ಸರ್ಕಾರ ಈಗಾಗಲೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ ಅದರಂತೆ ಜಿಲ್ಲೆಯ ಜನರು ಗ್ಯಾರಂಟಿ ಯೋಜನೆಗಳ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಗ್ಯಾರಂಟಿ ಯೋಜನೆಯ ಕುರಿತು ಏನಾದರು ಗೊಂದಲಕ್ಕೆ ಒಳಗಾದರೆ ಅದನ್ನು ಪರಿಹರಿಸಲು ಎಲ್ಲ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ.ಹಿರೇಮಠ ಹೇಳಿದರು.

ನಗರದ ಜಿಪಂ ಸಭಾಂಗಣದಲ್ಲಿ ಶನಿವಾರ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಕಾರದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮನೆ ಮನೆಗೆ ಗ್ಯಾರಂಟಿ ಮತ್ತು ಮನೆ ಮನೆಗೆ ರಂಗೋಲಿ ಅನ್ನುವ ಕಾರ್ಯಕ್ರಮವನ್ನು ಆಯಾ ತಾಲೂಕಿನಲ್ಲಿ ಹಮ್ಮಿಕೊಂಡು ಗ್ಯಾರಂಟಿ ಯೋಜನೆಗಳ ಅರಿವು ಹಾಗೂ ಗ್ಯಾರಂಟಿ ಯೋಜನೆಗಳಿಂದ ಪಡೆದ ಅನುಕೂಲತೆಯನ್ನು ಮನೆಮನೆ ಸಾರುವುದಾಗಿದೆ ಈ ನಿಟ್ಟಿನಲ್ಲಿ ಎಲ್ಲ ಅಧಿಕಾರಿಗಳಿಗೆ ಆಯಾ ಭಾಗಗಳಲ್ಲಿ ಈ ವಿನುತನ ಕಾರ್ಯಕ್ರಮ ಹಮ್ಮಿಕೊಳ್ಳಲು ಸೂಚಿಸಿದರು.



ಜಿಲ್ಲೆಗೆ ಸರ್ಕಾರದಿಂದ 10 ಹೊಸ ಬಸ್‌ಗಳು ಬಂದಿದ್ದು, ಆದ್ಯತೆಯ ಮೇರೆಗೆ ಯಾವ ಭಾಗದಲ್ಲಿ ಬಸ್‌ನ ಕೊರತೆ ಇದಿಯೋ ಆ ಭಾಗಕ್ಕೆ ಬಸ್ ಬಿಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅನ್ನಭಾಗ್ಯ ಯೋಜಯ ಕುರಿತು ಚರ್ಚಿಸಿ ರೇಷನಕಾರ್ಡ್ ವಿತರಣೆ ಕುರಿತ ಅಧ್ಯಕ್ಷರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಆಹಾರ ಇಲಾಖೆ ಅಧಿಕಾರಿಗಳು, ಜಿಲ್ಲೆಯಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿ ವಿತರಿಸದೆ ಇರುವ ರೇಷನ್ ಕಾರ್ಡ್ ಅರ್ಜಿಗಳನ್ನು ವಿಲೇವಾರಿ ಮಾಡುತ್ತಿದ್ದೇವೆ. ಜಿಲ್ಲೆಯಿಂದ 9982 ಅರ್ಜಿಗಳು ರೇಷನ್ ಕಾರ್ಡಗಾಗಿ ಅರ್ಜಿ ಬಂದಿದ್ದು, ಅದರಲ್ಲಿ 5 ಸಾವಿರಕ್ಕಿಂತ ಹೆಚ್ಚು ಅರ್ಜಿ ವಿಲೇವಾರಿ ಮಾಡಲಾಗಿದೆ. ಬಾಕಿ ಉಳಿದ ಅರ್ಜಿಗಳನ್ನು ಪರಿಶೀಲನೆ ಮಾಡಿ ಅರ್ಹರಿಗೆ ರೇಷನಕಾರ್ಡ್ ನೀಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಹಾಗೆಯೇ ಅನ್ನಭಾಗ್ಯ ಯೋಜನೆಯಡಿ ನೀಡುತ್ತಿರುವ ಅಕ್ಕಿಯು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿತ್ತು ಆಹಾರ ಧಾನ್ಯಗಳನ್ನು ಅಕ್ರಮವಾಗಿ ಕಾಳ ಸಂತೆಯಲ್ಲಿ ಮಾಡುವವರ ವಿರುದ್ಧ 16 ಪ್ರಕರಣ ದಾಖಲು ಮಾಡಲಾಗಿದೆ. ಇದರಿಂದ 1667 ಕ್ವಿಂಟಲ್ ಅಕ್ಕಿ ವಶಪಡಿಸಿಕೊಳ್ಳಲಾಗಿದೆ ಹಾಗೂ 13 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು 27 ಜನರ ಮೇಲೆ ಎಫ್ ಐ ಆರ್ ದಾಖಲು ಮಾಡಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಡಾ. ಪುನೀತ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು, ತಾಲೂಕ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು, ಉಪಾಧ್ಯಕ್ಷರು, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆಯಿಂದ ಸತ್ಯಸಾಯಿ ಪ್ರೇಮವಾಹಿನಿ ರಥಯಾತ್ರೆ

ಹಾವೇರಿ: ಭಗವಾನ್ ಸತ್ಯಸಾಯಿ ಬಾಬಾರವರ ಅವತರಣ ಶತಮಾನೋತ್ಸವ ಪ್ರಯುಕ್ತ ಹಮ್ಮಿಕೊಂಡಿರುವ ಸತ್ಯಸಾಯಿ ಪ್ರೇಮವಾಹಿನಿ ರಥಯಾತ್ರೆ ಫೆ.23ರಿಂದ ಫೆ.24ರವರೆಗೆ ಮೂರು ದಿನಗಳ ಕಾಲ ಜಿಲ್ಲೆಯಲ್ಲಿ ಸಂಚರಿಸಲಿದೆ. ಸಾರ್ವಜನಿಕರಿಗೆ ಬಾಬಾರವರ ದಿವ್ಯದರ್ಶನ, ಪಾದುಕಾ ನಮಸ್ಕಾರ ಮತ್ತು ವಿಭೂತಿ ಪ್ರಸಾದ ಪಡೆಯಲು ಅವಕಾಶ ಕಲ್ಪಿಸಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸತ್ಯಸಾಯಿ ಸೇವಾ ಸಂಸ್ಥೆಯ ಜಿಲ್ಲಾಧ್ಯಕ್ಷ ಬಸವರಾಜ ಹರಮುಗಟ್ಟಿ ತಿಳಿಸಿದರು.

ನಗರದಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸತ್ಯಸಾಯಿ ಬಾಬಾರವರ ಅವತರಣ ಶತಮಾನೋತ್ಸವ ಪ್ರಯುಕ್ತ ಬಾಬಾರ ದಿವ್ಯಾವತಾರದ ಸೌರಭವನ್ನು ಪಸರಿಸಲು ಮತ್ತು ದಿವ್ಯಪ್ರೇಮದ ಸಂದೇಶ ಸಾರಲು ರಥಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ಆಂಧ್ರಪ್ರದೇಶದ ಪುಟ್ಟಪರ್ತಿಯಿಂದ ದೇಶಾದ್ಯಂತ 5 ದಿವ್ಯರಥಗಳು ಬೇರೆ ಬೇರೆ ರಾಜ್ಯದ 5 ಸಾವಿರ ಗ್ರಾಮಗಳಲ್ಲಿ ಸುಮಾರು 3.50ಲಕ್ಷ ಕಿಮೀ ಯಾತ್ರೆ ನಡೆಸಿ 2026 ನ.23ರಂದು ಮರಳಿ ಪುಟ್ಟಪರ್ತಿಯನ್ನು ತಲುಪಲಿದೆ. ಅದರಂತೆ ಯಾತ್ರೆಯ ಒಂದು ರಥವು ಫೆ.23ರಂದು ಹಾವೇರಿ ಜಿಲ್ಲೆಗೆ ಆಗಮಿಸಲಿದ್ದು, ಜಿಲ್ಲೆಯ ವಿವಿಧೆಡೆ ಸಂಚರಿಸಲಿದೆ ಎಂದರು.



ಫೆ.23ರಂದು ಧಾರವಾಡ ಜಿಲ್ಲೆಯಿಂದ ಬರುವ ರಥವನ್ನು ಅತ್ತಿಗೇರಿ ಗ್ರಾಮದ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದಿಂದ ಮೆರವಣಿಗೆ ಮೂಲಕ ಸ್ವಾಗತಿಸಲಾಗುವುದು. ಬಾಲವಿಕಾಸ ಮಕ್ಕಳು, ಗುರುಗಳು, ಸಾರ್ವಜನಿಕರು, ಪೂರ್ಣಕುಂಭ, ಕಳಸ, ವೇದಘೋಷ, ಮಂಗಳ ದ್ರವ್ಯಧಾರಕರು, ಮಂಗಳವಾದ್ಯ, ಭಜನೆ ಕಲಾಮೇಳಗಳು ಪಾಲ್ಗೊಳ್ಳಲಿವೆ. ಫೆ.24ರಂದು ಹಾನಗಲ್‌ನಿಂದ ಹೊರಟು ಅಕ್ಕಿಆಲೂರ ಗ್ರಾಮಕ್ಕೆ ಬಂದು ಪೂಜಾ ಅರ್ಚನೆ ನಡೆಯಲಿದೆ. ಮಧ್ಯಾಹ್ನ 1ಕ್ಕೆ ಕುಳೇನೂರ ಗ್ರಾಮದ ಬೈಲ್‌ಬಸವೇಶ್ವರ ದೇವಸ್ಥಾನ ತಲುಪಿ ಅರ್ಚನೆ, ಮಹಾಮಂಗಳಾರತಿ ನಡೆಸಿ ವಿಶ್ರಾಂತಿಸುವುದು. ಸಂಜೆ 3.30ಕ್ಕೆ ಹೊರಟು ಹಾವೇರಿಯ ಶ್ರೀ ಹುಕ್ಕೇರಿಮಠಕ್ಕೆ ತಲುಪುವುದು. ಸಂಜೆ 4.30ರ ನಂತರ ಹುಕ್ಕೇರಿಮಠದಿಂದ ಪೂರ್ಣಕುಂಭ, ಕಳಸ, ವೇದಘೋಷ, ಕಲಾಮೇಳಗಳೊಂದಿಗೆ ಎಂ.ಜಿ ರಸ್ತೆ ಮೂಲಕ ಸಾಗಿ ವೀರಭದ್ರೇಶ್ವರ ದೇವಸ್ಥಾನ ತಲುಪುವುದು.

ಫೆ.25ರಂದು ಬೆಳಗ್ಗೆ ಹಾವೇರಿಯಿಂದ ಕರ್ಜಗಿ ಗ್ರಾಮಕ್ಕೆ ತೆರಳಿ ಗಾಂ ಕಟ್ಟೆಗೆ ಪೂಜೆ, ಅರ್ಚನೆ ನಡೆಸಲಾಗುವುದು. ನಂತರ ಆಗಡಿ ಗ್ರಾಮದಲ್ಲಿ ಕಳಸ, ವೇದಘೋಷ, ಮಂಗಳ ದ್ರವ್ಯಧಾರಕರು, ಕಲಾಮೇಳಗಳೊಂದಿಗೆ ಮೆರವಣಿಗೆ ನಡೆಸಿ ಗುರು ಚಿದಂಬರೇಶ್ವರ ಮಠದಲ್ಲಿ ಪೂಜೆ ಸಲ್ಲಿಸಲಾಗುವುದು. ನಮತರ ನೆಲೋಗಲ್ ಗ್ರಾಮದಲ್ಲಿ ಪೂಜೆ, ಅರ್ಚನೆ ಮಾಡಿ ಮುಖ್ಯ ರಸ್ತೆ ಮೂಲಕ ಬ್ಯಾಡಗಿ ಪಟ್ಟಣವನ್ನು ತಲುಪುವುದು. ಅಲ್ಲಿ ವರದಾನೇಶ್ವರಿ ದೇವಸ್ಥಾನದಿಂದ ಕೆಇಬಿ ಕಲ್ಯಾಣಮಂಟಪದ ವರೆಗೆ ಮೆರವಣಿಗೆ ನಡೆಸಲಾಗುವುದು. ಸಂಜೆ 3.30ಕ್ಕೆ ರಟ್ಟೀಹಳ್ಳಿ ಮಾರ್ಗವಾಗಿ ತಿಪ್ಪಾಯಿಕೊಪ್ಪದ ಮಠ ತಲುಪಿ ಅರ್ಚನೆ, ಮಂಗಳಾರತಿ ಸಲ್ಲಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಶಂಕ್ರಯ್ಯ ವಾಟನಾಳಮಠ, ರಘುವೀರ ಚೌಹಾಣ, ರಾಜಶೇಖರ ಹುಣಸಿಕಟ್ಟಿ, ರಾಜು ಜವಳಕರ, ಜಯಕುಮಾರ ಉಳ್ಳಾಗಡ್ಡಿ ಇದ್ದರು.

ಕಿರುಸುದ್ದಿ

ಸಂತ ಸೇವಾಲಾಲರ ಕೊಡುಗೆ ಅಪಾರ

ಮೂಡಲಗಿ: ಅರಭಾವಿಯಲ್ಲಿ ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯು ಸಂತ ಸೇವಾಲಾಲರ 287 ನೇ ಜಯಂತಿ ಆಚರಿಸಲಾಯಿತು.

ಈ ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದ ಪ್ರಭಾರಿ ಡೀನ್ ಡಾ. ವಿಲಾಸ ಡಿ. ಗಸ್ತಿ ವಹಿಸಿದ್ದರು. ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಅಧಿಕಾರಿ ಡಾ. ಎಸ್.ಜಿ. ಪ್ರವೀಣಕುಮಾರ ಹಾಗೂ ಭೋಧಕ, ಬೋಧಕೇರ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಸೇರಿ ಸಂತ ಸೇವಾಲಾಲ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಡಿಪ್ಲೋಮಾ ವಿದ್ಯಾರ್ಥಿನಿಯರು ಪ್ರಾರ್ಥನೆ ಮಾಡಿದರು. ವಿದ್ಯಾರ್ಥಿನಿ ಅಮೃತಾ ತಾಜಪೂರ ಈ ಕಾರ್ಯಕ್ರಮದ ಕುರಿತು ಮಾತನಾಡುತ್ತ ಮಹಾನ ಮಾನತಾವಾದಿ, ಸಮಾಜ ಸುಧಾರಕರಾದ ಸಂತ ಸೇವಾ ಲಾಲ ಬಂಜಾರ ಸಮಾಜದ ಏಳಿಗೆಗಾಗಿ ಅನೇಕ ಹೋರಾಟಗಳನ್ನು ಮಾಡಿದರು. ಸೇವಾಲಾಲ ಮಹಾರಾಜರು ದೇಶ ಕಂಡ ಶ್ರೇಷ್ಠ ಧಾರ್ಮಿಕ, ಆಧ್ಯಾತ್ಮಿಕ ಗುರುಗಳಲ್ಲಿ ಒಬ್ಬರು ಅವರ ಆದರ್ಶಗಳು ಪ್ರತಿಯೊಬ್ಬರಿಗೂ ಮಾದರಿಯಾಗಲಿ ಎಂದು ಅಭಿಪ್ರಾಯ ಪಟ್ಟರು.ಈ ಕಾರ್ಯಕ್ರಮವನ್ನು ತೇಜಶ್ವಿನಿ ಸಂಪಗಾಂವಿ ನಿರೂಪಿಸಿದರು.

ಫೆ.22ರಂದು ಸಂತ ಸೇವಾಲಾಲ್ ಜಯಂತಿ ಉತ್ಸವ

ಬೆಳಗಾವಿ: ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ, ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ, ಫೆ.22, ರಂದು ಬೆಳಿಗ್ಗೆ 11ಗಂಟೆಗೆ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಶ್ರೀ ಸಂತ ಸೇವಾಲಾಲ್ ಜಯಂತಿ ಉತ್ಸವ ಕಾರ್ಯಕ್ರಮ ಜರುಗಲಿದೆ. ಶ್ರೀ ಸಂತ ಸೇವಾಲಾಲ್ ಭಾವಚಿತ್ರದ ಮೆರವಣಿಗೆಯು ಬೆಳಿಗ್ಗೆ 09.30 ಗಂಟೆಗೆ ಕೋಟೆ ಕೆರೆ ಅಶೋಕ ವೃತ್ತದಿಂದ ಕುಮಾರ ಗಂಧರ್ವ ಕಲಾ ಮಂದಿರದವರೆಗೆ ಜರುಗಲಿದೆ. ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕರಾದ ಆಸಿಫ್ ಸೇಠ್ ಅವರುಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ನಿವೃತ್ತ ಮುಖ್ಯೋಪಾಧ್ಯಾಯರಾದ ಪಿ.ಬಿ. ಲಮಾಣಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸರಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರಕಾರದ ಮಾನ್ಯ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷರಾದ ಭರಮಗೌಡ ಕಾಗೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರುಗಳು ವಿಶೇಷ ಆಮಂತ್ರಿತರಾಗಿ ಆಗಮಿಸಲಿದ್ದಾರೆ. ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕ ಸಭಾ ಸಂಸದರಾದ ಪ್ರಿಯಾಂಕಾ ಜಾರಕಿಹೊಳಿ, ಲೋಕ ಸಭಾ ಸಂಸದರಾದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕ ಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಫೆ. 24ರಂದು ಜಿಲ್ಲಾ ಯೋಜನಾ ಸಮಿತಿ ಸಭೆ

ಬೆಳಗಾವಿ: ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಯೋಜನಾ ಸಮಿತಿ ಸಭೆಯನ್ನು ಫೆ. 24ರಂದು ಬೆಳಿಗ್ಗೆ 10.30 ಗಂಟೆಗೆ ಸುವರ್ಣ ವಿಧಾನ ಸೌಧದ ಕೊಠಡಿ ಸಂಖ್ಯೆ 354 ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಸವದತ್ತಿ: ತಾಲೂಕಿನ ಮುಂವಳ್ಳಿಯಲ್ಲಿ ತುರ್ತು ನಿರ್ವಹಣೆ ಕಾಮಗಾರಿಯನ್ನು ಕೈಗೊಳ್ಳುತ್ತಿರುವುದರಿಂದ 110/33/11 ಕೆ ವಿ ವಿದ್ಯುತ್ ವಿತರಣಾ ಕೇಂದ್ರ ಮನ್ವಳಿಯಿಂದ ಹೊರಡುವ ಎಫ್ 14 ಡ್ಯಾಮ್ ವಿದ್ಯುತ್ ಮಾರ್ಗದ ವಿದ್ಯುತ್ ಪೂರೈಕೆಯಲ್ಲಿ ಫೆ.23ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ಮಲಪ್ರಭಾ ಅಚ್ಚುಕಟ್ಟು ಡ್ಯಾಮ್ ಹತ್ತಿರ ಪೂರೈಕೆಯಾಗುತ್ತಿರುವ ತಾಲೂಕಿನ ಮುನವಳ್ಳಿ ಕೆಇಬಿ ಕ್ರಾಸ್, ಸಿಂದೋಗಿ ಕ್ರಾಸ್, ಮಾರುತಿ ಬಡಾವಣೆ, ಬಸವ ನಗರ, ವಿದ್ಯಾನಗರ ಡ್ಯಾಮ್, ರಾಮದುರ್ಗ ನೀರು ಸರಬರಾಜು ಮಾರ್ಗ, ಗದಗ ನೀರು ಸರಬರಾಜು ಮಾರ್ಗ, ಯರಗಟ್ಟಿ ನೀರು ಸರಬರಾಜು ಮಾರ್ಗ ಗಳಿಗೆ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಸಂಪೂರ್ಣವಾಗಿ ವಿದ್ಯುತ್ ನಿಲುಗಡೆಯಾಗುವುದು ಎಂದು ಸಹಾಯ ಕಾರ್ಯ ನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಹು ವಿ ಸ ಕಂ ನಿ ಸವದತ್ತಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೂಡಲಗಿ: ಅರಭಾವಿಯಲ್ಲಿ ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯು ಸಂತ ಸೇವಾಲಾಲರ 287 ನೇ ಜಯಂತಿ ಆಚರಿಸಲಾಯಿತು. ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯದ ಪ್ರಭಾರಿ ಡೀನ್ ಡಾ. ವಿಲಾಸ ಡಿ. ಗಸ್ತಿ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಅಧಿಕಾರಿ ಡಾ. ಎಸ್.ಜಿ. ಪ್ರವೀಣಕುಮಾರ ಹಾಗೂ ಭೋಧಕ, ಬೋಧಕೇರ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಸೇರಿ ಸಂತ ಸೇವಾಲಾಲ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ವಿವಿಧ ಜಯಂತಿಗಳ ಪೂರ್ವಭಾವಿ ಸಭೆ: ಅಗತ್ಯ ಕ್ರಮಕ್ಕೆ ಎಡಿಸಿ ಸೂಚನೆ

ಬೆಳಗಾವಿ: ಸರ್ಕಾರದ ನಿರ್ದೇಶನದಂತೆ ಶ್ರೀ ರೇಣುಕಾಚಾರ್ಯ ಜಯಂತಿ ಮಾ.1 ರಂದು ಹಾಗೂ ಶ್ರೀ ಯೋಗಿ ನಾರೇಯಣ ಯತಿಂದ್ರ ಜಯಂತಿ ಮಾ.15 ರಂದು ನಗರದ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬುಧವಾರ ನಡೆದ ಶ್ರೀ ರೇಣುಕಾಚಾರ್ಯ ಜಯಂತಿ, ಶ್ರೀ ಯೋಗಿ ನಾರೇಯಣ ಯತೀಂದ್ರ ಜಯಂತಿ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಯಂತಿಗಳ ಆಚರಣೆಗೆ ಅವಶ್ಯವಿರುವ ಸಿದ್ಧತೆ ಮಾಡಿಕೊಳ್ಳಬೇಕು. ವೇದಿಕೆ ಕಾರ್ಯಕ್ರಮದಲ್ಲಿ ಉಪನ್ಯಾಸ, ಸಂಗೀತ ಕಾರ್ಯಕ್ರಮ ಸೇರಿದಂತೆ ಇನ್ನಿತರ ಅಗತ್ಯ ಸಿದ್ಧತೆ ಮುಂಚಿತವಾಗಿಯೇ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ ಅವರು ಶ್ರೀ ರೇಣುಕಚಾರ್ಯ ಜಯಂತಿ ಹಾಗೂ ಶ್ರೀ ಯೋಗಿ ನಾರೇಯಣ ಯತೀಂದ್ರ ಜಯಂತಿ ಆಚರಣೆಗೆ ಅಗತ್ಯವಿರುವ ರೂಪರೇಷಗಳ ಕುರಿತು ವಿವರಿಸಿದರು.

ಸಭೆಯಲ್ಲಿ ಸಮಾಜದ ಮುಖಂಡರು, ಅಧಿಕಾರೇತರ ಗಣ್ಯರು ಉಪಸ್ಥಿತರಿದ್ದರು.



ಬೆಳಗಾವಿ: ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬುಧವಾರ ನಡೆದ ಶ್ರೀ ರೇಣುಕಾಚಾರ್ಯ ಜಯಂತಿ, ಶ್ರೀ ಯೋಗಿ ನಾರೇಯಣ ಯತೀಂದ್ರ ಜಯಂತಿ ಪೂರ್ವ ಸಿದ್ಧತಾ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಮಾತನಾಡಿದರು.ಸಭೆಯಲ್ಲಿ ಸಮಾಜದ ಮುಖಂಡರು, ಅಧಿಕಾರೇತರ ಗಣ್ಯರು ಉಪಸ್ಥಿತರಿದ್ದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭರವಸೆ
ಬಜೆಟ್‌ನಲ್ಲಿ ವಿಶೇಷ ಯೋಜನೆಗೆ ಪ್ರಸ್ತಾವನೆ

ಬೆಳಗಾವಿ: ಮುಂಬರುವ ಬಜೆಟ್‌ನಲ್ಲಿ ವಿಶೇಷ ಚೇತನರಿಗೆ ವಿಶೇಷ ಯೋಜನೆಗಳನ್ನು ನೀಡುವ ಕುರಿತಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಶನಿವಾರ ಬೆಳಗಾವಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವ ವಿಕಲಚೇತನರ ದಿನಾಚರಣೆ ಪ್ರಯುಕ್ತ ಜಿಲ್ಲಾ ಮಟ್ಟದ ವಿಕಲಚೇತನರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದಸಚಿವರು, ಸರ್ಕಾರಸಮಾಜದಭಾಗವಾಗಿ ವಿಕಲಚೇತನರನ್ನು ತೆಗೆದುಕೊಂಡು ಹೋಗಲಿದೆ. ಯಾರನ್ನೂ ಬಿಡುವ ಪ್ರಶ್ನೆ ಇಲ್ಲ, ಸ್ವಾವಲಂಬಿ ಹಾಗೂ ಸ್ವಚ್ಛವಾದ ಜೀವನ ಸಾಗಿಸುವಂತಾಗಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಿರಿಯ ನಾಗರಿಕರ, ವಿಶೇಷ ಚೇತನರ ಸಬಲೀಕರಣ ಇಲಾಖೆಯು ಜನರ ಸೇವೆ ಮಾಡುವ ಇಲಾಖೆ, ರಾಜ್ಯದಲ್ಲಿ 13 ಲಕ್ಷ ವಿಕಲಚೇತನರಿದ್ದಾರೆ. ಈ ಬಜೆಟ್ನಲ್ಲಿ ಎಲ್ಲ ವಿಶೇಷ ಚೇತನರಿಗೆ ವಿಶೇಷ ಯೋಜನೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅವು ಜಾರಿಯಾಗುವ ವಿಶ್ವಾಸವಿದೆ ಎಂದು ಸಚಿವರು ತಿಳಿಸಿದರು.

ಹಲವೆಡೆ ವಿಶೇಷ ಚೇತನ ಮಕ್ಕಳ ಶಾಲೆಗಳಿಗೆ ಭೇಟಿ ನೀಡಿದ್ದೇನೆ. ನಿಸ್ವಾರ್ಥ, ಪ್ರೀತಿಯಿಂದ ಶಿಕ್ಷಕರು ಸೇವೆ ಸಲ್ಲಿಸುತ್ತಿದ್ದಾರೆ. ತಂದೆ ತಾಯಿಗಿಂತ ಜಾಸ್ತಿ ಕಾಳಜಿ ತೆಗೆದುಕೊಳ್ಳುತ್ತಿದ್ದಾರೆ. ಅಂತವರಿಗೆ ಬಹಳ ಕಡಿಮೆ ಸಂಬಳವಿದೆ. ಅದನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ವಿಶೇಷ ಚೇತನ ಮಕ್ಕಳ ಶಾಲೆಯ ಶಿಕ್ಷಕರ ವೇತನವನ್ನು ಶೇಕಡ 40ರಷ್ಟು ಹೆಚ್ಚಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸೇವೆಗೆ ಗೌರವ ಕೊಡುವ ಕೆಲಸವನ್ನು ಸರ್ಕಾರ ಮಾಡುತ್ತದೆ ಎಂದರು.



ವಿಕಲಚೇತನರೊಂದಿಗೆ ಜನ್ಮದಿನ ಆಚರಣೆ

ಈ ವೇಳೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು, ತಮ್ಮ ಜನ್ಮದಿನದ ಪ್ರಯುಕ್ತ ಮಕ್ಕಳೊಂದಿಗೆ ಕೇಕ್ ಕಟ್ ಮಾಡುವ ಮೂಲಕ ಜನ್ಮದಿನ ಆಚರಿಸಿಕೊಂಡರು. ಬಳಿಕ ಮಕ್ಕಳ ಜೊತೆ ಕೆಲಕಾಲ ಕಳೆದರು.

ವಿಕಲಚೇತನರು ಸಾಕಷ್ಟು ಸಾಧನೆ ಮಾಡಿದ್ದಾರೆ, ಪ್ರಶಸ್ತಿಯನ್ನು ತೆಗೆದುಕೊಂಡಿದ್ದಾರೆ. ವಿಶೇಷ ಚೇತನರು ದೇವರು ಕೊಟ್ಟ ಜೀವನ ಕಷ್ಟ ಎನ್ನದೆ ಜೀವಿಸುತ್ತಿದ್ದಾರೆ. ಅವರಿಗೆ ಈಗಿರುವ ಯೋಜನೆಗಳು ಸಾಲುವುದಿಲ್ಲ, ಮುಂದಿನ ದಿನಗಳಲ್ಲಿ ಎಲ್ಲ ರೀತಿಯ ಸೌಲಭ್ಯ ಸಿಗಬೇಕು, ಶೇ.5 ಉದ್ಯೋಗ ಮೀಸಲಾತಿ ಕಡ್ಡಾಯವಾಗಿ ಜಾರಿ ಆಗಲೇಬೇಕು. ಪ್ರತಿ ಯೋಜನೆಯಲ್ಲಿ 5% ಮೀಸಲಾತಿ ಇದ್ದರೂ ಯಾರೂ ಇದರ ಬಗ್ಗೆ ಕಾಳಜಿ ವಹಿಸುತ್ತಿಲ್ಲ ಎಂದು ಹೇಳಿದರು.

ಅಂಧರ ಮಹಿಳಾ ವಿಶ್ವಕಪ್‌ನಲ್ಲಿ ಭಾರತತಂಡದವರು ವಿಶ್ವಕಪ್ ಗೆದ್ದಿದ್ದಾರೆ. ವೈಯಕ್ತಿಯವಾಗಿ ಅವರನ್ನು ಕರೆದು ಅಭಿನಂದನೆ ಸಲ್ಲಿಸಿದೆ. ವಿಕಲಚೇತನರಲ್ಲಿರುವ ಅದ್ಭುತ ಪ್ರತಿಭೆ ಮತ್ತು ಆತ್ಮವಿಶ್ವಾಸಕ್ಕೆ ವೇದಿಕೆ ಕಲ್ಪಿಸಿಕೊಡುವುದು ನಮ್ಮೆಲ್ಲರ ಕರ್ತವ್ಯ. ಅವರ ಉತ್ಸಾಹ ನಮಗೆಲ್ಲರಿಗೂ ಸ್ಫೂರ್ತಿದಾಯಕ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕ್ರೀಡಾ ಇಲಾಖೆಯ ಉಪ ನಿರ್ದೇಶಕರಾದ ಬಿ. ಶ್ರೀನಿವಾಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಾದ ಚೇತನಕುಮಾರ್, ಜಿಲ್ಲಾ ನಿರೂಪಣಾಧಿಕಾರಿ ಅಣ್ಣಪ್ಪ ಹೆಗಡೆ, ಎ.ಪಿ.ಎಚ್ ಸಂಸ್ಥೆಯ ಅಧ್ಯಕ್ಷರಾದ ವಾಮನ ಕಟ್ಟಿ, ಸಚಿವರ ಮಾಧ್ಯಮ ಸಲಹೆಗಾರರಾದ ಎಂ.ಕೆ.ಹೆಗಡೆ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ನಾಮದೇವ್ ಬಿಲ್ಕರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸುಮಿತ್ರಾ, ಜಯಶ್ರೀ ಮಾಳಗಿ, ಎಲ್ಲ ಸಂಘ ಸಂಸ್ಥೆಗಳ ಮುಖ್ಯಸ್ಥರು, ವಿಶೇಷ ಚೇತನ ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.

ಫೆ.28ರಿಂದ ಮಾ.1ರವರೆಗೆ ಉತ್ಸವ
ಮಲ್ಲಮ್ಮ ಉತ್ಸವ: ವ್ಯಾಪಕ ಪ್ರಚಾರಕ್ಕೆ ಕ್ರಮ

ಬೆಳಗಾವಿ: ವೀರರಾಣಿಬೆಳವಡಿಮಲ್ಲಮ್ಮ ಉತ್ಸವ ಫೆ.28ರಿಂದ ಮಾ.1ರವರೆಗೆ ನಡೆಯಲಿದ್ದು, ಉತ್ಸವದ ಕುರಿತು ವ್ಯಾಪಕ ಪ್ರಚಾರಕ್ಕೆ ಕ್ರಮವಹಿಸಲಾಗುವುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಗುರುನಾಥ ಕಡಬೂರ ಅವರು ತಿಳಿಸಿದರು.

ಶನಿವಾರ ಬೆಳವಡಿ ಗ್ರಾಪಂ ಸಭಾಂಗಣದಲ್ಲಿ ಜರುಗಿದ ಪ್ರಚಾರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವೀರರಾಣಿ ಬೆಳವಡಿ ಮಲ್ಲಮ್ಮ ಉತ್ಸವದ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳುವುದರ ಮೂಲಕ ಬೆಳವಡಿ ಮಲ್ಲಮ್ಮ ಉತ್ಸವ ಯಶಸ್ವಿಗೊಳಿಸಲು ಪ್ರಚಾರ ಸಮಿತಿಯ ಪಾತ್ರ ಬಹು ಮುಖ್ಯವಾಗಿದೆ ಎಂದರು.

ಉತ್ಸವ ಪ್ರಚಾರಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಪ್ರಮುಖ ಸ್ಥಳಗಳಲ್ಲಿ ಬ್ಯಾನರಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು, ಕಾರ್ಯಕ್ರಮದ ಕುರಿತು ಕಾಲ ಕಾಲಕ್ಕೆ ಪತ್ರಿಕಾ ಪ್ರಕಟಣೆ ಬಿಡುಗಡೆಗೆ ಕ್ರಮವಹಿಸಲಾಗುವುದು ಎಂದು ವಾರ್ತಾ ಇಲಾಖೆ ಉಪನಿರ್ದೇಶಕರಾದ ಗುರುನಾಥ ಕಡಬೂರ ಅವರು ತಿಳಿಸಿದರು.

ಸಮಿತಿ ಸದಸ್ಯರುಗಳು ಮಾತನಾಡಿ ಉತ್ಸವದ ಕುರಿತು ಪ್ರಚಾರ ಬ್ಯಾನರನ್ನು ಬೆಳಗಾವಿಯ ಚನ್ನಮ್ಮ ವೃತ್ತ ಸೇರಿದಂತೆ ಜಿಲ್ಲೆಯ ಪ್ರಮುಖ ನಗರಗಳಲ್ಲಿ, ಬೆಳವಡಿ ಮಲ್ಲಮ್ಮ ಅವರ ಇತಿಹಾಸವುಳ್ಳ ಕರಪತ್ರಗಳನ್ನು ಸಾಕಷ್ಟು ಮುಂಚಿತವಾಗಿ ಮುದ್ರಿಸಿ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತ, ತಾಲೂಕು ಕೇಂದ್ರಗಳಲ್ಲಿ ವಿತರಿಸಲು, ಬೆಳವಡಿ ಮಲ್ಲಮ್ಮಳ ವೀರಜ್ಯೋತಿ ಸಾಗುವ ಮಾರ್ಗಗಳಲ್ಲಿ ಆಯಾ ತಾಲೂಕು ಕೇಂದ್ರಗಳಲ್ಲಿ ಬ್ಯಾನರ ಅಳವಡಿಕೆ ಹಾಗೂ ಕರಪತ್ರ ವಿತರಣೆ ಸೇರಿದಂತೆ ಅನೇಕ ಸಲಹೆಗಳನ್ನು ನೀಡಿದರು.

ಸಭೆಯಲ್ಲಿ ಸಮಿತಿ ಸದಸ್ಯರುಗಳಾದ ಯಾಸೀನ್ ಕಿತ್ತೂರ,ಮಹೇಶ ರೇವಯ್ಯನವರ, ಮಡಿವಾಳೆಪ್ಪ ಕಿತ್ತೂರ, ಅಶೋಕ ಶೀಲವಂತರ, ಮಹಾಂತೇಶ ಬಳಿಗಾರ, ವಿಶ್ವನಾಥ ಪೂಜೇರ, ವಾರ್ತಾ ಸಹಾಯಕರಾದ ವಿಜಯಕುಮಾರ ಬೆಟಗೇರಿ ಹಾಜರಿದ್ದರು.



ಪ್ರಬಲ ಶಕ್ತಿಯಾದ ಸಮೂಹ ಮಾಧ್ಯಮಗಳು

ಅಥಣಿ: ಇಂದಿನ ಕಾಲಘಟ್ಟದಲ್ಲಿ ಸಮೂಹ ಮಾಧ್ಯಮಗಳು ಕೇವಲ ಮಾಹಿತಿಯ ಮೂಲಗಳಾಗಿ ಉಳಿಯದೆ, ಸಮಾಜದ ಚಿಂತನೆಗಳನ್ನು ರೂಪಿಸುವ ಪ್ರಬಲ ಶಕ್ತಿಗಳಾಗಿ ಹೊರಹೊಮ್ಮಿವೆ ಎಂದು ಅಥಣಿಯ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಉಪನ್ಯಾಸಕ ಡಾ. ರಾಮಣ್ಣ ಎಸ್. ದೊಡ್ಡನಿಂಗಪ್ಪಗೋಳ ಹೇಳಿದರು.

ಅವರು ಸ್ಥಳೀಯ ಕೆಎಲ್ಇ ಸಂಸ್ಥೆಯ ಯಶೋದಾದೇವಿ ಗಂಗಾಧರ ಕುಲಗುಡೆ ಶಿಕ್ಷಣ ಮಹಾವಿದ್ಯಾಲಯದ ಸಾಹಿತ್ಯ ಸಂಘದ ವತಿಯಿಂದ 'ಪ್ರಸ್ತುತ ದಿನಮಾನದಲ್ಲಿ ಸಮೂಹ ಮಾಧ್ಯಮಗಳ ಪಾತ್ರ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ಹಾಗೂ ಚರ್ಚಾ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಮುದ್ರಣ ಮಾಧ್ಯಮದಿಂದ ಹಿಡಿದು ಇಂದಿನ ಸೋಶಿಯಲ್ ಮೀಡಿಯಾದವರೆಗೆ ಮಾಧ್ಯಮಗಳ ವ್ಯಾಪ್ತಿ ವಿಸ್ತರಿಸಿದೆ. ಮಾಧ್ಯಮಗಳು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಬೇಕು. ಆದರೆ, ಕೆಲವೊಮ್ಮೆ ಮಾಹಿತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಹರಡುವ ಸುದ್ದಿಗಳು ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ವಿಶೇಷವಾಗಿ ಶಿಕ್ಷಕರಾಗಲಿರುವ ಪ್ರಶಿಕ್ಷಣಾರ್ಥಿಗಳು ಮಾಧ್ಯಮಗಳನ್ನು ಜವಾಬ್ದಾರಿಯುತವಾಗಿ ಬಳಸುವುದನ್ನು ಕಲಿಯಬೇಕು ಮತ್ತು ಅದನ್ನು ಮುಂದಿನ ಪೀಳಿಗೆಗೆ ಕಲಿಸಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ. ಆರ್.ಜಿ.ವಂಟಗುಡಿ ಅವರು ಮಾತನಾಡಿ, ಸಾಹಿತ್ಯ ಸಂಘದ ಮೂಲಕ ಇಂತಹ ಪ್ರಸ್ತುತ ವಿಷಯಗಳ ಮೇಲೆ ಸಂವಾದಗಳು ನಡೆಯುವುದು ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ ಪೂರಕ ಎಂದು ಅಭಿಪ್ರಾಯಪಟ್ಟರು.

ವೇದಿಕೆಯ ಮೇಲೆ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ ಡಿ.ಎಸ್. ಪಾಟೀಲ, ಪ್ರಾಧ್ಯಾಪಕ ಡಾ.ಆರ್.ಪಿ. ಸಾಳ್ವೆ, ಎಂ.ಎ. ಮಠಪತಿ, ಎಂ.ಎ. ನದಾಫ್, ಎಂ.ಎಂ. ಚೌಗಲಾ, ಡಿ.ಎಸ್. ಕತ್ತೆವಾಡಿ, ವ್ಹಿ.ಎ. ಕಾಮಗೌಡ ಹಾಗೂ ಕಾಲೇಜಿನ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಬಿ.ಇಡಿ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



ಮರಾಠಾ ಅಭಿವೃದ್ಧಿ ನಿಗಮಕ್ಕೆ 1000 ಕೋಟಿ ರೂ. ಅನುದಾನಕ್ಕೆ ಆಗ್ರಹ

ಬೆಳಗಾವಿ: ರಾಜ್ಯ ಬಜೆಟ್ ಹತ್ತಿರವಾಗುತ್ತಿದ್ದಂತೆ ವಿವಿಧ ಸಮುದಾಯಗಳಿಂದ ಬೇಡಿಕೆಗಳು ಹೆಚ್ಚಿವೆ. ಬೆಳಗಾವಿಯ ಮರಾಠಾ ನಾಯಕ ಕಿರಣ್ ಜಾಧವ್ ಅವರು ಮರಾಠಾ ಸಮಾಜದ ಸರ್ವಾಂಗೀಣ ಬಳಿಗೆಗಾಗಿ ಸಿಎಂ ಸಿದ್ದರಾಮಯ್ಯ ಅವರಿಗೆ ಮಹತ್ವದ ಬೇಡಿಕೆಯೊಂದನ್ನು ಇಟ್ಟಿದ್ದಾರೆ.



ಮರಾಠಾ ಸಮುದಾಯದ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಕರ್ನಾಟಕ ಮರಾಠಾ ಅಭಿವೃದ್ಧಿ ನಿಗಮಕ್ಕೆ ಕನಿಷ್ಠ 1,000 ಕೋಟಿ ರೂಪಾಯಿಗಳ ಅನುದಾನ ನೀಡಬೇಕು ಎಂದು ಮರಾಠಾ ನಾಯಕ ಕಿರಣ್ ಜಾಧವ್ ಆಗ್ರಹಿಸಿದ್ದಾರೆ.

ಪ್ರಸ್ತುತ ನಿಗಮಕ್ಕೆ ಸಿಗುತ್ತಿರುವ ಅನುದಾನವು ಸಮಾಜದ ಹೆಚ್ಚುತ್ತಿರುವ ಅಗತ್ಯತೆಗಳಿಗೆ ಹೋಲಿಸಿದರೆ ಅತ್ಯಲ್ಪವಾಗಿದೆ. ಆದ್ದರಿಂದ, ಸಾಮಾಜಿಕ ನ್ಯಾಯಕ್ಕೆ ಆದ್ಯತೆ ನೀಡುವ ಮುಖ್ಯಮಂತ್ರಿಗಳು ಮುಂಬರುವ ಬಜೆಟ್ ನಲ್ಲಿ ಮರಾಠಾ ಸಮುದಾಯಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ವಿಶೇಷ ನಿಧಿಯ ಮೂಲಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಉನ್ನತ ಮತ್ತು ವಿದೇಶಿ ಶಿಕ್ಷಣಕ್ಕೆ ಧನಸಹಾಯ, ಕೃಷಿ ಹಾಗೂ ಪಶುಸಂಗೋಪನೆಗೆ ಉತ್ತೇಜಕ ಯೋಜನೆಗಳನ್ನು ರೂಪಿಸಬೇಕು. ಅಷ್ಟೇ ಅಲ್ಲದೆ, ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಆರಂಭಿಸಲು ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಮರಾಠಾ ಸಮಾಜವು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹತ್ತು ಹಲವು ಸವಾಲುಗಳನ್ನು ಎದುರಿಸುತ್ತಿದ್ದು, ಸರ್ಕಾರ ಈ ಬಗ್ಗೆ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಕಿರಣ್ ಜಾಧವ್ ಆಶಿಸಿದ್ದಾರೆ.

ಬಿಮ್ಸ್ ನರ್ಸಿಂಗ್ ಕಾಲೇಜು 100%ರಷ್ಟು ಫಲಿತಾಂಶ: ಸನ್ಮಾನ

ಬೆಳಗಾವಿ: ನಾವುಗಳು ಬರೀ ದೀಪಗಳನ್ನು ಬೆಳಗಬಾರದು, ಬೆಳಗಿದ ಈ ದೀಪವು ಕೇವಲ ಬೆಳಕಲ್ಲ, ಇದು ರೋಗಿಗಳ ಪಾಲಿನ ಭರವಸೆಯ ಜ್ಯೋತಿಯಾಗಿದ್ದು, ನಿಮ್ಮ ಪವಿತ್ರ ವೃತ್ತಿ ಜೀವನದ ನಿಸ್ವಾರ್ಥ ಸೇವೆಯ ಸಂಕೇತವಾಗಿದೆ. ಬಿಮ್ಸ್ ಕಾಲೇಜಿನ ನೂರಕ್ಕೆ ನೂರರಷ್ಟು ಫಲಿತಾಂಶದ ಸಾಧನೆಯು ಹೆಮ್ಮೆಯ ವಿಷಯವಾಗಿದ್ದು, ಶೈಕ್ಷಣಿಕ ಯಶಸ್ಸಿನ ಜೊತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಜಾಗತಿಕ ಮಟ್ಟದಲ್ಲಿ ಬೆಳಗಿ ಎಂದು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವ ಡಾ. ತನ್ವೀರ್ ಅಹ್ಮದ್ ತಿಳಿಸಿದರು.

ಶನಿವಾರ ಇಲ್ಲಿನ ಬಿಮ್ಸ್ ಸರ್ಕಾರಿ ನರ್ಸಿಂಗ್ ಕಾಲೇಜಿನಲ್ಲಿ ಕಾರ್ಯಕ್ರಮಕ್ಕೆ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಾಯಕ ಕುಲಸಚಿವ ಡಾ. ತನ್ವೀರ್ ಅಹ್ಮದ್ ನಾಯ್ಕೋಡಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಬಳಿಕ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ನರ್ಸಿಂಗ್ ವೃತ್ತಿಯು ಅತ್ಯಂತ ಪವಿತ್ರವಾದುದು, ವಿದ್ಯಾರ್ಥಿಗಳು ಶಿಸ್ತು ಮತ್ತು ಸೇವಾವ್ಯಖರಿಯನ್ನು ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಇದಕ್ಕೂ ಮುನ್ನ ಕಾಲೇಜಿನ ಪ್ರಾಚಾರ್ಯ ಡಾ. ನಾಮದೇವ ಮಾಳಗಿ



ಮಾತನಾಡಿದರು.

ಬಿಮ್ಸ್ ನಿರ್ದೇಶಕ ಡಾ. ಅಶೋಕ್ ಕುಮಾರ್ ಶೆಟ್ಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಂಸ್ಥೆಯ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ ಎಂದು ತಿಳಿಸಿದರು.

ಈ ವೇಳೆ ಬಿಮ್ಸ್‌ನಪ್ರಮುಖ ಅಧಿಕಾರಿಗಳಾದ ರೇಷ್ಮಾ ತಾಳಿಕೋಟಿ, ಶಿಲ್ಪಾ ವಾಲಿ, ಹಾಗೂ ಪ್ರಾಚಾರ್ಯರಾದ ಡಾ. ಉಮೇಶ್ ಕುಲಕರ್ಣಿ, ಡಾ. ಈರಣ್ಣ ಪಲ್ಲೇದ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಜಗದೀಶ್ ಎಸ್. ಗಾಣಿಗಿ, ಆರ್.ಎಂ.ಓ ಡಾ. ಸರೋಜಾ ತಿಗಡಿ, ನರ್ಸಿಂಗ್ ಅಧೀಕ್ಷಕಿ ಕಾಂಚನಮಾಲಾ ಸೂರ್ಯವಂಶಿ ಹಾಗೂ ನರ್ಸಿಂಗ್ ಶಾಲೆಯ ಪ್ರಾಚಾರ್ಯ ಡಾ. ಪ್ರಕಾಶ್ ಡಿ. ಕೊಡಲಿ, ಸೇರಿದಂತೆ ವಿದ್ಯಾರ್ಥಿಗಳು ಕಾಲೇಜಿನ ಸಿಬ್ಬಂದಿಗಳು ಇದ್ದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಂದ ಜನತಾ ದರ್ಶನ

ಬೆಳಗಾವಿ: ನಗರದಲ್ಲಿರುವ ಗೃಹ ಕಚೇರಿಯಲ್ಲಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಜನತಾದರ್ಶನ ನಡೆಸಿ ಸಾರ್ವಜನಿಕರ ಅಹವಾಲು ಆಲಿಸಿದರು.

ಬೆಳಗಾವಿ ಸೇರಿದಂತೆ ವಿವಿಧ ತಾಲೂಕುಗಳು ಹಾಗೂ ಗ್ರಾಮೀಣ ಪ್ರದೇಶಗಳಿಂದ ಆಗಮಿಸಿದ್ದ ನೂರಾರು ಜನರು ತಮ್ಮ ವೈಯಕ್ತಿಕ, ಸಾಮಾಜಿಕ ಹಾಗೂ ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಸಚಿವರಿಗೆ ಮನವಿ ಸಲ್ಲಿಸಿದರು.

ಕುಡಿಯುವ ನೀರು, ರಸ್ತೆ ಅಭಿವೃದ್ಧಿ, ಪಿಂಚಣಿ ಸೌಲಭ್ಯ, ಗೃಹ ಯೋಜನೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳು, ಅಂಗನವಾಡಿ ಸಮಸ್ಯೆಗಳು, ಭೂ ದಾಖಲೆ ಸಂಬಂಧಿತ ಅಡಚಣೆಗಳು ಸೇರಿದಂತೆ ಅನೇಕ ವಿಚಾರಗಳನ್ನು ಸಾರ್ವಜನಿಕರು ಪ್ರಸ್ತಾಪಿಸಿದರು.

ಸಚಿವೆ ಪ್ರತಿಯೊಂದು ಅರ್ಜಿದಾರರ ಮನವಿಯನ್ನು



ಗಮನದಿಂದ ಆಲಿಸಿ, ತಕ್ಷಣ ಪರಿಹಾರ ಸಾಧ್ಯವಾದ ಸಮಸ್ಯೆಗಳಿಗೆ ಸ್ಥಳದಲ್ಲೇ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಮಾರ್ಗದರ್ಶನ ನೀಡಿದರು. ಕೆಲವೊಂದು ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ತಕ್ಷಣ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು. ತುರ್ತು ಸ್ವರೂಪದ ಕೆಲವು ಸಮಸ್ಯೆಗಳಿಗೆ ಆದ್ಯತೆ ನೀಡಿ ತಕ್ಷಣ ಕಾರ್ಯಾಚರಣೆ ಆರಂಭಿಸುವಂತೆ ಸೂಚಿಸಿದ ಘಟನೆಗಳು ಗಮನ ಸೆಳೆದವು.

ಬೆಳಗ್ಗೆ ಸುಮಾರು 10 ಗಂಟೆಗೆ ಆರಂಭವಾದ ಜನತಾದರ್ಶನ ಕಾರ್ಯಕ್ರಮ ಮಧ್ಯಾಹ್ನದ ಬಳಿಕವೂ ನಿರಂತರವಾಗಿ ಮುಂದುವರಿಯಿತು. ಸಾರ್ವಜನಿಕರ ಹೆಚ್ಚಿನ ಸಂಖ್ಯೆಯನ್ನು ಗಮನಿಸಿ, ಸಚಿವರು ವಿಶ್ರಾಂತಿ ತೆಗೆದುಕೊಳ್ಳದೆ ಸಹನೆಯಿಂದ ಪ್ರತಿಯೊಬ್ಬರನ್ನೂ ಭೇಟಿ ಮಾಡಿ ಮನವಿ ಸ್ವೀಕರಿಸಿದರು. ಮಧ್ಯಂತರವಾಗಿ ಸ್ವಲ್ಪ ಸಮಯ ವಿರಾಮ ಪಡೆದು, ನಗರದ ಕಾರ್ಯಕ್ರಮವಾದ ವಿಕಲಚೇತನರ ಕ್ರೀಡಾಕೂಟದಲ್ಲಿ ಭಾಗವಹಿಸಿ ಸ್ಪರ್ಧಿಗಳನ್ನು ಉತ್ತೇಜಿಸಿದರು. ಬಳಿಕ ಮತ್ತೆ ಗೃಹ ಕಚೇರಿಗೆ ವಾಪಸ್ಸಾಗಿ ಉಳಿದಿದ್ದ ಜನರ ಅಹವಾಲುಗಳನ್ನು ಸ್ವೀಕರಿಸಿದರು.

ಮಾತನಾಡಿದ ಸಚಿವರು, ಜನಸೇವೆಯೇ ನಮ್ಮ ಸರಕಾರದ ಮೊದಲ ಆದ್ಯತೆ. ಜನರು ನೇರವಾಗಿ ಭೇಟಿ ನೀಡಿ ತಮ್ಮ ಸಮಸ್ಯೆ ಹೇಳಿಕೊಳ್ಳಲು ಜನತಾದರ್ಶನ ಉತ್ತಮವೇದಿಕೆ. ಯಾರಸಮಸ್ಯೆಯೂ ನಿರ್ಲಕ್ಷ್ಯವಾಗಬಾರದು ಎಂಬುದು ನಮ್ಮ ಬದ್ಧತೆ, ಎಂದು ಹೇಳಿದರು.

ಜನತಾದರ್ಶನಕ್ಕೆ ಆಗಮಿಸಿದ್ದ ಹಲವರು, ತಮ್ಮ ಸಮಸ್ಯೆಗಳನ್ನು ಸ್ವತಃ ಸಚಿವರ ಮುಂದೆ ಮಂಡಿಸಲು ಅವಕಾಶ ಸಿಕ್ಕಿರುವುದು ಸಂತೋಷ ತಂದಿದೆ ಎಂದು ಪ್ರತಿಕ್ರಿಯಿಸಿ, ತ್ವರಿತ ಸ್ಪಂದನೆಗೆ ಕೃತಜ್ಞತೆ ವ್ಯಕ್ತಪಡಿಸಿದರು.

ದೇಶಿ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡಿ: ಶಾಸಕ ಸವದಿ

ಕೊಕಟನೂರ: ಫಿಜ್ಜಾ, ಬರ್ಗರ್ ತಿನ್ನುವ ಯುವಕರು ಕುಸ್ತಿ, ಕಬಡ್ಡಿ ಆಟಗಳನ್ನು ಆಡುವುದಿಲ್ಲಾ, ಜೋಳದ, ಗೋದಿ, ಸಜ್ಜಕ್ಕಿ ಹಿಟ್ಟಿನ ರೊಟ್ಟಿ ಹಾಗೂ ಎಮ್ಮೆ, ಆಕಳ ತುಪ್ಪ ತಿನ್ನುವವರು ಕುಸ್ತಿ, ಕಬಡ್ಡಿ ಆಟಗಳಲ್ಲಿ ಭಾಗವಹಿಸುತ್ತಾರೆ ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು,

ಅಥಣಿ ತಾಲೂಕಿನ ಕೊಕಟನೂರ ಗ್ರಾಮದಲ್ಲಿ ಶಾಸಕ ಲಕ್ಷ್ಮಣ ಸವದಿ ಅವರ 66ನೇ ಜನ್ಮದಿನದ ನಿಮಿತ್ತ ಎಲ್.ಎಸ್. ಗ್ರುಪ್ ವತಿಯಿಂದ ಶುಕ್ರವಾರ ರಾತ್ರಿ ಹಮ್ಮಿಕೊಂಡ ಅಂತರ ರಾಜ್ಯ ಮಟ್ಟದ ಹೊನಲು ಬೆಳಕಿನಕಬಡ್ಡಿಪಂದ್ಯಾವಳಿಗೆಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡಾ ಪಟುಗಳಿಗೆ ಶಿಕ್ಷಣ ಮತ್ತು ಕ್ರೀಡೆ ಒಂದೇ ನಾಣ್ಯದ ಎರಡು ಮುಖಗಳು, ಯುವಕರು ಇಂತಹ ಕ್ರೀಡೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕು.



ಇಂದು ಮರಿಚೀಕೆಯಾದ ಕಬಡ್ಡಿ ಪಂದ್ಯಾವಳಿಯು ಪ್ರೋ ಕಬಡ್ಡಿ ಲೀಗ್‌ನಿಂದ ಹೆಸರುವಾಸಿಯಾಗಿದೆ. ಪ್ರತಿಯೊಬ್ಬ ಯುವಕರು ಗ್ರಾಮೀಣ ಪ್ರದೇಶದ ದೇಶಿ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದರ ಜತೆಗೆ ಭಾಗವಹಿಸಿ ಸದೃಢ ಶರೀರ ನಿರ್ಮಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೆಪಿಸಿಸಿ ಸದಸ್ಯ ಶ್ಯಾಮರಾವ್ ಪೂಜಾರಿ ಮಾತನಾಡಿ, ಶಾಸಕ ಲಕ್ಷ್ಮಣ ಸವದಿಯವರು ಅಥಣಿ ಕ್ಷೇತ್ರದ ಜನರ ಆಶಾಕಿರಣರಾಗಿದ್ದು, ತಮ್ಮ ಜನ್ಮದಿನವನ್ನು ಎಂದು ಆಚರಿಸಿಕೊಂಡಿಲ್ಲಾ, ಆದರೆ, ಇಂದು ಕೊಕಟನೂರ ಗ್ರಾಮಸ್ಥರ ಕರೆಗೆ ಸ್ಪಂದಿಸಿ ಇಲ್ಲಿಂದು ತಮ್ಮ ಜನ್ಮದಿನ ಆಚರಿಸಿಕೊಳ್ಳುತ್ತಿರುವುದು ನಾವೆಲ್ಲ ಪುಣ್ಯವಂತರು ಎಂದರು.

ಪಂದ್ಯಾವಳಿಯಲ್ಲಿ ಒಟ್ಟು ಕರ್ನಾಟಕ, ಮಹಾರಾಷ್ಟ್ರದ 21 ತಂಡಗಳು ಭಾಗವಹಿಸಿದ್ದವು ಅದರಲ್ಲಿ ಕೊಕಟನೂರ ಕರಿಸಿದ್ಧೇಶ್ವರ ತಂಡ ಪ್ರಥಮ, ಮಹಾರಾಷ್ಟ್ರದ ಸಂಗೋಲಾ ಕಂಡ ದ್ವಿತಿಯ ಕಾಗವಾಡ ತಾಲೂಕಿನ ಐನಾಪುರ ತಂಡ ತೃತೀಯ ಸ್ಥಾನ ಪಡೆದವು,

ಈ ವೇಳೆ, ಸತೀಶ ದೊಡಮನಿ, ಪ್ರಶಾಂತ ಕಾಂಬಳೆ, ಸುಭಾಷ ಸೋನಕರ, ಮಾನಸಿಂಗ ಮಗರ, , ಜಿಪಂ ಮಾಜಿ ಸದಸ್ಯ ಪ್ರಲ್ಹಾದ ಪೂಜಾರಿ, ಜಿಪಂ ಮಾಜಿ ಸದಸ್ಯ ಸಿದರಾಯ ಯಲಡಗಿ, ರಾಹುಲ ಪೂಜಾರಿ, ಸುರೇಶ ಪೂಜಾರಿ, ಶಂಕರ ಹಿರೇಕುರಬರ, ಅನಿಲ ಮುಳಿಕ. ಮುರೇಪ್ಪಾ ಬಣಜ, ಮಹಾವೀರ ಹಳಕಿ, ಮಹಾವೀರ ವೀರಗೌಡ, ಪ್ರವೀಣ ತುಬಚಿ, ಅಪಾಸಾಬ ನಾಯಿಕ, ಬೀರಪ್ಪ ಸನದಿ, ಸಂಪತ ಸಿಂಗೆ, ವಿಠಲ ಜಂಬಗಿ, ಸೇರಿದಂತೆ ಹಲವರು ಇದ್ದರು.

ಕಿರುಸುದ್ದಿ

ಫೆ.26ರವರೆಗೆ ಅರಣ್ಯಸಿದ್ದೇಶ್ವರ-ಮಲಕಾರಿ ಸಿದ್ದೇಶ್ವರ ಜಾತ್ರೆ

ಚಿಕ್ಕೋಡಿ: ತಾಲೂಕಿನ ಕೇರೂರ ಗ್ರಾಮದ ಅರಣ್ಯಸಿದ್ಧೇಶ್ವರ-ಮಲಕಾರಿ ಸಿದ್ಧೇಶ್ವರ ಜಾತ್ರೆಯು ಫೆ.21ರಿಂದ ಫೆ.26ರವರೆಗೆ 6 ದಿನಗಳ ಕಾಲ ವೈಭವದಿಂದ ಜಾತ್ರೆಯು ನಡೆಯಲಿದೆ.

ಫೆ.22ರಂದು ದೇವರ ಪಲ್ಲಕ್ಕಿಯು ಗದ್ದುಗೆ ಮನೆಯಿಂದ ವಾದ್ಯ ಮೇಳದೊಂದಿಗೆ ಬನಕ್ಕೆ ಆಗಮಿಸುವದು.

ಫೆ.23ರಂದು ಬೆಳಗಿನ ಜಾವ ಅರಣ್ಯ ಸಿದ್ಧೇಶ್ವರ ಹಾಗೂ ಮಲಕಾರಿ ಸಿದ್ಧೇಶ್ವರ ದೇವರುಗಳ ಭೇಟಾಭೇಟಿ, ಕರಿಕಟ್ಟುವ ಕಾರ್ಯಕ್ರಮ ನೆರವೇರಲಿದೆ.

ಫೆ.23ರಂದು ಬೆಳಿಗ್ಗೆ 8.30ಕ್ಕೆ ಓಡುವ ಶರ್ಯತ್ತು, 9ಕ್ಕೆ ಕುಳಿತು ಓಡಿಸುವ ಕುದುರೆ ಶರ್ಯತ್ತು, 9.30ಕ್ಕೆ ಜನರಲ್ ಸೈಕಲ್ ಶರ್ಯತ್ತು ಹಮ್ಮಿಕೊಳ್ಳಲಾಗಿದೆ.

ಫೆ.24ರಂದು ಬೆಳಿಗ್ಗೆ 9ಕ್ಕೆ ಬಡಿಗೆ ಬಾರಕೋಲು ರಹಿತವಾದ ಒಂದು ಕುದುರೆ ಒಂದು ಎತ್ತಿನ ಗಾಡಿ ಶರ್ಯತ್ತು, 9.30ಕ್ಕೆ ಜೋಡು ಕುದುರೆ ಗಾಡಿ ಶರ್ಯತ್ತು, ಬೆಳಿಗ್ಗೆ 10ಕ್ಕೆ ಜೋಡೆತ್ತಿನ ಗಾಡಿ ಶರ್ಯತ್ತು ಆಯೋಜಿಸಲಾಗಿದೆ.

ಫೆ.24ರಂದು ಬೆಳಿಗ್ಗೆ 10.30ಕ್ಕೆ ಪುರುಷರ ಭವ್ಯ ಕಬಡ್ಡಿ ಪಂದ್ಯಾವಳಿ ಆಯೋಜನೆ, ಮಧ್ಯಾಹ್ನ 12ಕ್ಕೆ ಮುಂಬಯಿಯ ಅರಣ್ಯ ಸಿದ್ಧೇಶ್ವರ ಕಾಮಗಾರ ಕಮಿಟಿಯಿಂದ ಅನ್ನಪ್ರಸಾದ ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಲಮಾನಟ್ಟಿಯ ಅಮೋಘ ಸಿದ್ಧೇಶ್ವರ ಡೊಳ್ಳಿನ ಗಾಯನ ಸಂಘ ಹಾಗೂ ಅರಟಾಳದ ಮಹಾಲಿಂಗೇ ಡೊಳ್ಳಿನ ಗಾಯನ ಸಂಘದಿಂದ ಡೊಳ್ಳಿನ ಪದಗಳ ಗಾಯನ ಹಮ್ಮಿಕೊಳ್ಳಲಾಗಿದೆ. ಫೆ.25ರಂದು ಬೆಳಿಗ್ಗೆ 8 ಗಂಟೆಯಿಂದ ನಿವ್ವಾಳಕಿ, ದೇವವಾಣಿ, ಅಭಿಷೇಕ, ಮಹಾನೈವೇದ್ಯ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ. ಭಂಡಾರ ಜಾತ್ರೆಯಲ್ಲಿ ಸಹಸ್ರಾರು ಭಕ್ತರು 30 ಟನ್ ಗಿಂತಲೂ ಹೆಚ್ಚಿನ ಭಂಡಾರವನ್ನು ದೇವರ ಮೇಲೆ ಹಾರಿಸುವ ಮೂಲಕ ಭಕ್ತಿಯನ್ನು ಮೆರೆಯುತ್ತಾರೆ. ರಾತ್ರಿ 8ಕ್ಕೆ ಪಲ್ಲಕ್ಕಿ ಬನದಿಂದ ಗದ್ದುಗೆಯ ಮನೆಗೆ ಬರುವ ಮೂಲಕ ಜಾತ್ರೆಯು ಸಂಪನ್ನಗೊಳ್ಳುತ್ತದೆ ಎಂದು ದೇವಸ್ಥಾನ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಕ್ಕಳಿಂದ ರಂಜಾನ್ ಉಪವಾಸ ವ್ರತ

ಸಾವಳಗಿ: ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ದೇಶದಾದ್ಯಂತ ಮುಸ್ಲಿಂ ಸಮುದಾಯದವರು ಕಟ್ಟುನಿಟ್ಟಾದ ಉಪವಾಸ ವ್ರತಗಳನ್ನು ಆಚರಿಸುತ್ತಿದ್ದಾರೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಸಾವಳಗಿ ಗ್ರಾಮದ ಪುಟ್ಟ ಮಕ್ಕಳು ಈ ಬಾರಿ ವಿಶೇಷ ಕಂಡುಬಂದಿದೆ. ಎಂಟು ವರ್ಷಕ್ಕಿಂತ ಕಡಿಮೆ



ವಯಸ್ಸಿನ ಮೂರು ಪುಟ್ಟ ಮಕ್ಕಳು ರೋಜಾ ಪಾಲಿಸಿ ಎಲ್ಲರ ಗಮನ ಸೆಳೆದಿದ್ದಾಳೆ.

ಸಾವಳಗಿ ಗ್ರಾಮದ ನಿವಾಸಿಗಳಾದ ಆಯಿಲ್ ಮಲ್ಲಿಕ್ ಪಟೇಲ. ಅಕ್ಷಾ ಗೌಸಬಾಕ ಹಾತ್ತಿ ಮತ್ತು ಅನಾಮ್ ಕಾಜಾ ಹಾತ್ತಿ ಎಂಬ ಮೂರು ಮಕ್ಕಳು, ತಮ್ಮ ವಯಸ್ಸು ಕೇವಲ ಎಂಟು ವರ್ಷಕ್ಕಿಂತ ಕಡಿಮೆ ಇದ್ದರೂ, ಹಿರಿಯರ ಜೊತೆ ಸಮಾನವಾಗಿ ರಂಜಾನ್ ತಿಂಗಳ ಪವಿತ್ರ ಉಪವಾಸವನ್ನು ಆಚರಿಸಿದ್ದಾರೆ. ಈ ಪುಟ್ಟ ಮಕ್ಕಳ ಧೈರ್ಯ, ಭಕ್ತಿ ಹಾಗೂ ನಿಯಮ ಪಾಲನೆಗೆ ಸ್ಥಳೀಯರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಸ್ಥಳೀಯ ಮಸೀದಿ ಸಮಿತಿಯವರೂ ಮಕ್ಕಳನ್ನು ಅಭಿನಂದಿಸಿ, ಅವರ ಭಕ್ತಿ ಹಾಗೂ ಶಿಸ್ತು ಎಲ್ಲರಿಗೂ ಮಾದರಿ ಎಂದು ಶ್ಲಾಘಿಸಿದ್ದಾರೆ. ಇಂತಹ ಪುಟ್ಟ ವಯಸ್ಸಿನಲ್ಲಿಯೇ ಧಾರ್ಮಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುತ್ತಿರುವುದು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.ರಂಜಾನ್ ತಿಂಗಳು ಅಂತ್ಯದಲ್ಲಿ ಆಚರಿಸಲಾಗುವ ಈದ್-ಉಲ್-ಫಿತ್ರ್ ಹಬ್ಬದ ನಿರೀಕ್ಷೆಯಲ್ಲಿರುವ ಈ ಮಕ್ಕಳು, ರೋಜಾ ಮಾಡಿದಕ್ಕೆ ನಮಗೆ ಸಂತೋಷವಾಗಿದೆ. ಅಲ್ಲಾಹನ ಆಶೀರ್ವಾದ ಸಿಗಲಿ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆ, ಸಾವಳಗಿ ಗ್ರಾಮದ ಮೂರು ಪುಟ್ಟ ಮಕ್ಕಳು ರೋಜಾ ಆಚರಿಸಿರುವುದು ಸಮಾಜದಲ್ಲಿ ಭಕ್ತಿ, ಶಿಸ್ತು ಹಾಗೂ ನಂಬಿಕೆಯ ಪ್ರತೀಕವಾಗಿ ಪರಿಣಮಿಸಿದೆ.

ಶವದ ಗುರುತು ಪತ್ತೆ

ಚನ್ನಮ್ಮನ ಕಿತ್ತೂರು: ಹಿರೇನಂದಿಹಳ್ಳಿ ಗ್ರಾಮದ ಜಮೀನಿನಲ್ಲಿ ಕೊಲೆ ಶಂಕೆ ವ್ಯಕ್ತಪಡಿಸಲಾಗಿದ್ದ ಕೊಳೆತ ಸ್ಥಿತಿಯಲ್ಲಿ ಕಿತ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪತ್ತೆಯಾಗಿದ್ದ ಶವದ ಗುರುತು ತಿಳಿದು ಬಂದಿದ್ದು ಗ್ರಾಮದ ಕಲ್ಮೇಶ ಕೋಟಿ (45) ಎಂದು ತಿಳಿದು



ಬಂದಿದೆ. ಕೊಲೆ ಶಂಕೆ ಹಿನ್ನೆಲೆ ಕಿತ್ತೂರು ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಕಲ್ಮೇಶನ ಹೆಂಡತಿ ಮತ್ತು ಮಗ ಶವದ ಗುರುತು ಕಂಡು ಹಿಡಿದಿದ್ದಾರೆ.



ಬೆಳಗಾವಿ: ನಗರದ ಕಾರಂಜಿಮಠದಲ್ಲಿ ಜರುಗಿದ 296ನೇ ಮಾಸಿಕ ಶಿವಾನುಭವ ಹಾಗೂ ಮಹಾಶಿವರಾತ್ರಿ, ವಿಶೇಷ ಕಾರ್ಯಕ್ರಮದಲ್ಲಿ ಭರತೇಶ ಶಿಕ್ಷಣ ಸಂಸ್ಥೆ, ಬೆಳಗಾವಿಯ ಕಾರ್ಯದರ್ಶಿ ಡಾ. ವಿನೋದ ದೊಡ್ಡಣ್ಣವರ ಹಾಗೂ ಅನುದಾನಿತ ಶಾಲಾ-ಕಾಲೇಜುಗಳ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಹಳಂಗಳಿ ಅವರನ್ನು ಶ್ರೀಮಠದಿಂದ ಸನ್ಮಾನಿಸಲಾಯಿತು. ಡಾ. ಅಲ್ಲಮಪ್ರಭು ಸ್ವಾಮೀಜಿ, ಡಾ. ಅಶ್ವಿನಿ ಕುದರಿಮಠ (ಭಾಗೋಜಿ), ಕಾರಂಜಿಮಠದ ಶ್ರೀ ಮ.ನಿ.ಪ್ರ ಗುರುಸಿದ್ಧ ಮಹಾಸ್ವಾಮಿಗಳು, ಉತ್ತರಾಧಿಕಾರಿಗಳಾದ ಡಾ. ಶಿವಯೋಗಿ ದೇವರು ಮತ್ತಿತರರು ಇದ್ದರು.

ಫಲಾನುಭವಿಗೆ ವಾತ್ಸಲ್ಯ ಮನೆ ಹಸ್ತಾಂತರ

ರಾಯಬಾಗ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕಿನ ಬೆಕ್ಕೇರಿ ವಲಯದ ಬೊಮ್ಮನಾಳ ಗ್ರಾಮದ ವಾತ್ಸಲ್ಯ ಫಲಾನುಭವಿಯಾದ ದೇವಕಿ ರಾಮಾ ಮಾನೆ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು.

ಅಥಣಿ ಜಿಲ್ಲೆಯ ಜಿಲ್ಲಾ ನಿರ್ದೇಶಕಿ ನಾಗರತ್ನ ಹೆಗಡೆ ಅವರು ಉಪಸ್ಥಿತರಿದ್ದು, ನಿರ್ಗತಿಕ ಕುಟುಂಬದವರಿಗಾಗಿ ಧರ್ಮಾಧಿಕಾರಿಗಳು ಮತ್ತು ಹೇಮಾವತಿ ಅಮ್ಮನವರು ಮಾಡುತ್ತಿರುವ ಜನಪರ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಧಾರವಾಡ ಪ್ರಾದೇಶಿಕ ಕಚೇರಿಯ ಜ್ಞಾನವಿಕಾಸ ವಿಭಾಗದ ಯೋಜನಾಧಿಕಾರಿ ಸುಧಾ ನಾಯಕ್ ಮಾತನಾಡಿ, ಜ್ಞಾನವಿಕಾಸ ವಿಭಾಗದಿಂದ ರಾಜ್ಯದಲ್ಲಿ ಸುಮಾರು 1000 ಮನೆಗಳನ್ನು ನಿರ್ಗತಿಕರಿಗಾಗಿ ಕಟ್ಟುವ ಗುರಿಯನ್ನು ಹಮ್ಮಿಕೊಂಡಿದ್ದು ಈಗಾಗಲೇ 800 ಮನೆಗಳ ಕಾಮಗಾರಿ ಪೂರ್ಣಗೊಂಡಿದ್ದು ಇನ್ನು ಕೆಲವೇ ದಿನಗಳಲ್ಲಿ ಒಂದು ಸಾವಿರ ಮನೆಗಳನ್ನು ನಿರ್ಗತಿಕ ಕುಟುಂಬಗಳಿಗೆ ಹಸ್ತಾಂತರಿಸುವ ಕಾರ್ಯಕ್ರಮ ಮಾಡಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆಯ ಉಪಾಧ್ಯಕ್ಷ ಜಿನೇಂದ್ರ, ಪೇಮಲಾಪುರೆ, ಗ್ರಾಪಂನ ಸದಸ್ಯರಾದ ಕಲ್ಮೇಶ ಪಾಟೀಲ, ಶ್ರುತಿ ಅಮ್ಮಣ್ಣ ಹೆಗಡೆ ಹಾಗೂ ಒಕ್ಕೂಟದ ಪದಾಧಿಕಾರಿಯಾದ ರೇಖಾ ಕಾಂಬಳೆ ತಾಲೂಕಿನ ಯೋಜನಾಧಿಕಾರಿಗಳಾದ ಮಹೇಶ್ವರಪ್ಪ.ಜಿ. ಕೆ, ವಲಯ ಮೇಲ್ವಿಚಾರಕರಾದ ಸಾವಿತ್ರಿ ನಾಗರಾಜ ಜಾಡರ, ಜ್ಞಾನವಿಕಾಸ ಸಮನ್ವಯಾಧಿಕಾರಿಯಾದ ಸುರೇಖಾ ಹೆಬ್ಬಳ್ಳಿ, ಸೇವಾಪ್ರತಿನಿಧಿ ಅನಿತಾ, ಸಂಘದ ಸದಸ್ಯರು, ಊರಿನ ಗಣ್ಯರು ಉಪಸ್ಥಿತರಿದ್ದರು.



ರಾಯಬಾಗ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕಿನ ಬೆಕ್ಕೇರಿ ವಲಯದ ಬೊಮ್ಮನಾಳ ಗ್ರಾಮದ ವಾತ್ಸಲ್ಯ ಫಲಾನುಭವಿಯಾದ ದೇವಕಿ ರಾಮಾ ಮಾನೆ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರ ಮಾಡಲಾಯಿತು.

ಶೃಂಗ ಸಭೆ ವೇಳೆ ಅಸಭ್ಯ ವರ್ತನೆ | ಬಿಜೆಪಿ ಕಾರ್ಯಕರ್ತರ ಆಕ್ರೋಶ

ಕಾಂಗ್ರೆಸ್ ವಿರುದ್ಧ ಬಿಜೆಪಿ ಪ್ರತಿಭಟನೆ

ಬೆಳಗಾವಿ: ವಿವಿಧ ದೇಶಗಳ ಮುಖ್ಯಸ್ಥರು, ಜಗತ್ತಿನ ಖ್ಯಾತ ಐಟಿ, ಎಐ ಕಂಪನಿಗಳು ಭಾಗಿಯಾಗಿರುವ ಜಾಗತಿಕ ಶೃಂಗ ಸಭೆ ವೇಳೆ, ಕಾಂಗ್ರೆಸ್ ಕಾರ್ಯಕರ್ತರು ಶರ್ಟ್ ಬನಿಯನ್ ಬಿಚ್ಚಿ ಅರೆಬೆತ್ತಲಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ವಿರುದ್ಧ ಘೋಷಣೆ ಕೂಗಿರುವುದನ್ನು ಖಂಡಿಸಿ ಕಾಂಗ್ರೆಸ್‌ನ ವಿರುದ್ಧ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.



ಶನಿವಾರ ಬೆಳಗಾವಿ ನಗರದ ಕನ್ನಡ ಸಾಹಿತ್ಯ ಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ರಾಹುಲ್ ಗಾಂಧಿ ಭಾವಚಿತ್ರಕ್ಕೆ ಚಪ್ಪಲಿ ಹಾಕಿ ಹಾಗೂ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಸಿ ರ್‍ಯಾಲಿ ಮೂಲಕ ತೆರಳುತ್ತಿದ್ದ ವೇಳೆ, ಪ್ರತಿಭಟನಾಕಾರರನ್ನು ಅರ್ಧಕ್ಕೆ ಪೊಲೀಸರು ತಡೆದು ಬಂಧಿಸಲಾಯಿತು.

ಈ ವೇಳೆ ಬಿಜೆಪಿ ಕಾರ್ಯಕರ್ತರು, ಪೊಲೀಸರನ್ನು ಪ್ರಶ್ನಿಸಿದರು. ಪ್ರಧಾನಿಗಳ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ. ದೇಶ ದ್ರೋಹಿ ಕೆಲಸ ಮಾಡುತ್ತಿದ್ದಾರೆ. ಹಂತವರ ವಿರುದ್ಧ ಕ್ರಮ ಕೈಗೊಳ್ಳುವುದನ್ನು ಬಿಟ್ಟು ನ್ಯಾಯಕ್ಕಾಗಿ ಪ್ರತಿಭಟಿಸುತ್ತಿರುವುವರನ್ನು ಬಂಧಿಸುವುದುಎಷ್ಟರಮಟ್ಟಿಗೆ ಸರಿ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮಹಾಂತೇಶ ಒಕ್ಕೂಡ ಆಕ್ರೋಶ ವ್ಯಕ್ತಪಡಿಸಿದರು.

ಜಾಗತಿಕ ಸಮುದಾಯ ಹಾಜರಿದ್ದ ಸಮಾರಂಭವನ್ನು ರಾಜಕೀಯ ದುರುದ್ದೇಶಕ್ಕೆ ಬಳಸಿಕೊಂಡಿರುವ ಮತ್ತು ದೇಶದ ಘನತೆಗೆ ಧಕ್ಕೆ ತರುವಂತ ಕೆಲಸ ಮಾಡಿರುವ ನೀಚ ಕಾಂಗ್ರೆಸ್ ಸಂಸ್ಕೃತಿ ವಿರುದ್ಧ ಬಿಜೆಪಿ ಕಾರ್ಯಕರ್ತರು ಆಕ್ರೋಶ ಹೊರ ಹಾಕಿದರು.

ಬಿಜೆಪಿಯ ನೂರಾರು ಪುರುಷ ಹಾಗೂ ಮಹಿಳಾ ಪ್ರತಿಭಟನಾಕಾರರನ್ನು ಪೊಲೀಸರು ತಡೆದು ಬಂಧಿಸಿರುವ ವೇಳೆ ನೀಚ ಕಾಂಗ್ರೆಸ್ ಸರ್ಕಾರದ ಕೈಗೊಂಬೆಗಳಾಗಿದ್ದಾರೆ ಪೊಲೀಸರು ಎಂದು ಅಸಮಾಧಾನ ಹೊರ ಹಾಕಿದರು.

ನೂರಾರು ಕಾರ್ಯಕರ್ತರನ್ನು ಬಂಧಿಸಿದ ನಗರದ ಹೊರ ವಲಯದಲ್ಲಿ ಬಿಡುಗಡೆ ಗೊಳಿಸಿದರು. ಈ ವೇಳೆ ಬಿಜೆಪಿ ಜಿಲ್ಲಾಉಪಾಧ್ಯಕ್ಷ ರುದ್ರಣ್ಣ ಜಂದರಗಿ, ಸಂತೋಷ ಕಾಗವಾಡೆ, ಶಿಲ್ಪಾ ಕೆಕರೆ, ಈರಣ್ಣ ಅಂಗಡಿ, ಗುರು ಹಿರೇಮಠಮ, ಸ್ನೇಹಿಲ್ ಶೆಟ್ಟಿ, ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

ಏತ ನೀರಾವರಿ ಯೋಜನೆಗೆ ಅನುದಾನ ಮೀಸಲಿಡುವಂತೆ ಸರ್ಕಾರಕ್ಕೆ ಒತ್ತಾಯ

ಶಾಸಕ ದುರ್ಯೋಧನ ಐಹೊಳೆ ಹೇಳಿಕೆ

ಚಿಕ್ಕೋಡಿ: ರಾಯಬಾಗ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಭೆಂಡವಾಡ ಹಾಗೂ ಹನುಮಾನ ಏತ ನೀರಾವರಿ ಯೋಜನೆಗೆ ಮುಂಬರುವ ಆಯವ್ಯಯದಲ್ಲಿ ಅನುದಾನ ಮೀಸಲಿಡುವಂತೆ ಸರ್ಕಾರಕ್ಕೆ ಒತ್ತಾಯ ಮಾಡಲಾಗಿದೆ ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ತಾಲೂಕಿನ ನಾಗರಮುನ್ನೋಳಿ ಹಾಗೂ ಹಂಚಿನಾಳ ಕೆಕೆ ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಶನಿವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಯಬಾಗ ಮತಕ್ಷೇತ್ರದ ಜನರು ನೀರಾವರಿಯಿಂದ ವಂಚಿತರಾಗಿದ್ದಾರೆ. ನೀರಾವರಿ ಯೋಜನೆಗಳ ಮೂಲಕ ರೈತರ ಬಾಳು ಬಂಗಾರವಾಗಲಿದೆ. ಈಗಾಗಲೇ ಕರಗಾಂವ ಏತ ನೀರಾವರಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದ್ದು, ಭೆಂಡವಾಡ ಹಾಗೂ ಹನುಮಾನ ಏತ ನೀರಾವರಿ ಯೋಜನೆಗಳಿಗೂ ಸರ್ಕಾರ ಅನುದಾನ ಘೋಷಣೆ ಮಾಡಬೇಕು ಎಂದರು.

ಮುಖಂಡ ಸಿದ್ದಪ್ಪ ಮರ್ಯಾಯಿ ಮಾತನಾಡಿ, ಗ್ರಾಮದ ಸಿದ್ಧೇಶ್ವರ ದೇವಸ್ಥಾನದ ಆವರಣದ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದ್ದು, ಇದೀಗ ಶಾಸಕ ಐಹೊಳೆ ಅವರು ಅನುದಾನದ ಮೂಲಕ ಇನ್ನಷ್ಟು ಅಭಿವೃದ್ಧಿಯಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

ನಾಗರಮುನ್ನೋಳಿ ಗ್ರಾಮದ ಅ ರ ' ಣ್ಯ ಸಿ ದ್ ' ಧೇ ಶ್ ' ವ ರ ' ಆವರಣದಲ್ಲಿ 24.56 ಲಕ್ಷ ರೂ. ಮೊತ್ತದಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಪೇವರ್ಸ್ ಅಳವಡಿಕೆ, ಥಳೋಬಾ ಗುಡಿ ಹತ್ತಿರ 8.18 ಲಕ್ಷ ರೂ. ಮೊತ್ತದಲ್ಲಿ ಸಭಾಭವನ ನಿರ್ಮಾಣ, ಹಂಚಿನಾಳ ಕೆಕೆ ಗ್ರಾಮದಲ್ಲಿ ಎಸ್‌ಸಿಪಿ, ಟಿಎಸ್‌ಪಿ ಅನುದಾನದಲ್ಲಿ 50 ಲಕ್ಷ ರೂ.ಮೊತ್ತದ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ದುರ್ಯೋಧನ ಐಹೊಳೆ ಭೂಮಿಪೂಜೆ ನೆರವೇರಿಸಿದರು.

ಮುಖಂಡರಾದ ಸುರೇಶ ಬೆಲ್ಲದ, ರಾಜು ಕುಂಬಾರ, ನಾಗರಮುನ್ನೋಳಿ ಗ್ರಾಪಂ ಅಧ್ಯಕ್ಷೆ ರಾಜಮಾ ಮುಲ್ತಾನಿ, ಉಪಾಧ್ಯಕ್ಷೆ ಶಾಂತಾ ಬಾನೆ, ಎಂ.ಬಿ. ಆಲೂರೆ, ಅರುಣ ಮರ್ಯಾಯಿ, ರಮೇಶ ಕಾಳನ್ನವರ, ನಿಜಾಮ ಪೆಂಡಾರಿ, ತಿಮ್ಮಣ್ಣ ಗಾಡಿವಡ್ಡರ, ಕಲ್ಲಪ್ಪ ಕಮತೆ, ರಾಜು ತಳವಾರ, ಎಸ್.ಎಸ್. ಹೊಸಮನಿ, ಅಡಿವೆಪ್ಪ ಶಿರಹಟ್ಟಿ, ಹಾಲಪ್ಪ ದಳವಾಯಿ ಇತರರು ಇದ್ದರು.



ಇಂದು ವಿದ್ಯುತ್ ವ್ಯತ್ಯಯ

ಬೆಳಗಾವಿ: ಫೆ.22ರಂದು ಬೆಳಿಗ್ಗೆ 09.00 ಘಂಟೆಯಿಂದ ಸಾಯಂಕಾಲ 05.00 ಘಂಟೆಯವರೆಗೆ ಕ.ವಿ.ಪ್ರ.ನಿ.ನಿ. ವತಿಯಿಂದ 110 ಕೆ.ವ್ಹಿ. ಕಣಬರ್ಗಿ ಉಪಕೇಂದ್ರದಲ್ಲಿ ನಾಲ್ಕನೇಯ ತ್ರೈಮಾಸಿಕ ಹಾಗೂ ಇತರೆ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಸದರಿ ಉಪಕೇಂದ್ರದಿಂದ ಸರಬರಾಜು ಆಗುವ ಮುಚ್ಚಂಡಿ, ಅಷ್ಟೆ, ಕ್ಯಾಂಪ್ಬೆಲ್, ಮಾರಿಹಾಳ, ಕರಡಿಗುದ್ದಿ, ಪಂತಬಾಳೇಕುಂದ್ರಿ, ಬಾಳೇಕುಂದ್ರಿ, ಹೊನ್ನಿಹಾಳ, ಮಾವಿನಕಟ್ಟಿ, ತಾರಿಹಾಳ, ಚಂದನ ಹೊಸೂರ, ಎಮ್.ಇ.ಎಸ್, ಸಾಂಬ್ರಾ, ಮುತಗಾ, ಸುಳೇಭಾವಿ, ಪಂತ ನಗರ, ಮೋದಗಾ, ಯದ್ದಲಭಾವಿಹಟ್ಟಿ, ಖನಗಾಂವ, ಚಂದೂರ, ಚಂದಗಡ, ಗಣಿಕೊಪ್ಪ, ಗುಂಜ್ಯಾನಟ್ಟಿ, ಕೇದನೂರ, ಮನ್ನಿಕೇರಿ, ಹಂದಿಗನೂರ, ಚೆಲುವ್ಯಾನಟ್ಟಿ, ಮಾಳೇನಟ್ಟಿ, ಅತಿವಾಡ, ಬೋಡಕ್ಯಾನಟ್ಟಿ, ಕುರಿಹಾಳ, ಕಟ್ಟಣಭಾವಿ, ನಿಂಗ್ಯಾನಟ್ಟಿ, ಗುರಾಮಟ್ಟಿ, ಹಳಿಇದ್ದಲಹೊಂಡ, ಶಿವಾಪೂರ, ಪರಶ್ಯಾನಟ್ಟಿ, ದಾಸರವಾಡಿ, ಕೆಂಚ್ಯಾನಟ್ಟಿ, ಸೋನಟ್ಟಿ, ಕಾಕತಿ, ಕಂಗ್ರಾಳಿ ಬಿ.ಕೆ, ಬೈಲೂರ, ಹೆಗ್ಗೇರಿ, ಹುಲ್ಯಾನೂರ, ಬುಡ್ರ್ಯಾನೂರ, ಧರನಟ್ಟಿ, ಭರನಟ್ಟಿ, ಗೌಂಡವಾಡ, ಕಡೋಲಿ, ಅಗಸಗಾ ಹಾಗೂ ಜಾಫರವಾಡಿ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು (ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ, ಇವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.


ಮಕ್ಕಳಿಗೆ ವಿಶೇಷ ಕಾಳಜಿ ವಹಿಸಿ: ಆಲದಕಟ್ಟಿ

ಯರಗಟ್ಟಿ: ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಜವಾಬ್ದಾರಿ ಬಹಳಷ್ಟಿದೆ. ಶಾಲೆಗೆ ಕಳಿಸಿದರೆ ಪಾಲಕರ ಜವಾಬ್ದಾರಿ ಮುಗಿದಂತಲ್ಲ, ಪಾಲಕರು ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕೆಂದು ಮುಖ್ಯ ಶಿಕ್ಷಕ ಬಿ.ಎಸ್.ಆಲದಕಟ್ಟಿ ಹೇಳಿದರು.

ಸ್ಥಳೀಯ ಬಸವೇಶ್ವರ ಪ್ರೌಢಶಾಲೆಯಲ್ಲಿ ನಡೆದ ಒಂಬತ್ತನೇ ತರಗತಿ ವಿದ್ಯಾರ್ಥಿಗಳ ಪಾಲಕರ ಸಭೆ, ಶಾಲಾ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪರೀಕ್ಷಾ ದಿನಗಳು ಸಮೀಪಿಸುತ್ತಿರುವಂತೆ ಎಲ್ಲರ ಚಿತ್ತ ಫಲಿತಾಂಶದ ಪ್ರಗತಿಯತ್ತ ನೆಟ್ಟಿದೆ. ಆದ್ದರಿಂದ ಮಕ್ಕಳು ಮನೆಯಲ್ಲಿ ಇತರೆ ಕಾರ್ಯಗಳ ಕಡೆಗೆ ಹೆಚ್ಚು ಗಮನ ನೀಡದೆ, ಅಧ್ಯಯನದಲ್ಲಿ ತೊಡಗುವಂತೆ ಮಾಡಿರಿ ಎಂದ ಅವರು, ಈ ಬಾರಿ ಪ್ರಶ್ನೆ ಪತ್ರಿಕೆಗಳಲ್ಲಿಆದ ಬದಲಾವಣೆಯನ್ನು ಸಭೆಯ ಗಮನಕ್ಕೆ ತಂದರು.

ಸಭೆ ಉದ್ದೇಶಿಸಿ ಉಪನ್ಯಾಸ ನೀಡಿದ ಡಾ.ಎಸ್.ಎ. ಜ್ಯೋಶಿ ಅವರು, ಮಕ್ಕಳ ಸರ್ವತೋಮುಖ ವಿಕಾಸದಲ್ಲಿ ಶಾಲೆ ಮತ್ತು ಶಿಕ್ಷಕರಷ್ಟೇ ಪಾತ್ರ, ಕುಟುಂಬ ಹಾಗೂ ಪಾಲಕರದ್ದು ಎಂಬುದನ್ನು ಮರೆಯಬಾರದು. ಮಗು ಅತಿಹೆಚ್ಚಿನ ಸಮಯವನ್ನು ಪಾಲಕರೊಂದಿಗೆ ಕಳೆಯುವುದರಿಂದ ಮಗುವಿನ ಬಗ್ಗೆ ಹೆಚ್ಚಿನ ವಿಷಯಗಳನ್ನು ಅವರಿಂದ ಶಿಕ್ಷಕರು ತಿಳಿಯಲು ಅಂತೆಯೇ, ಶೈಕ್ಷಣಿಕ ವಿಷಯಗಳು ಮತ್ತು ತಮ್ಮ ಮಗುವಿನ ತರಗತಿಯಲ್ಲಿನ ವರ್ತನೆಯನ್ನು ತಿಳಿಯಲು ಪೋಷಕರಿಗೆ ಇದೊಂದು ಸದಾವಕಾಶ. ಇದು ಶಿಕ್ಷಿಸಲು ವಿಷಯ ತಿಳಿದುಕೊಳ್ಳುವ ಸಂದರ್ಭವಲ್ಲ ಎಂಬುದನ್ನು ಶಿಕ್ಷಕರು ಹಾಗೂ ಪೋಷಕರು ಮನಗಾಣಬೇಕು ಎಂದರು.

ಈ ವೇಳೆ ಮುಖ್ಯ ಅತಿಥಿಗಳಾಗಿ ಎಪಿಎಂಸಿ ಅಧ್ಯಕ್ಷ ನೀಲಕಂಠ ಶೀದಬಸನ್ನವರ, ಡಾ. ನರಹರಿ ದೇಶಪಾಂಡೆ, ಡಾ. ಎಂ.ಬಿ. ಕಲಶೆಟ್ಟಿ, ಎಂ.ಎಸ್. ಮುನವಳ್ಳಿ, ಶಿಕ್ಷಕರಾದ ಎನ್.ಎಸ್. ಕಾಂಬಳೆ, ಎಸ್.ಜಿ. ಸತ್ತಿಗೇರಿ, ಬಿ.ಎಂ. ಪಾಟೀಲ, ಜಿ.ಐ. ಡಮ್ಮಣಗಿ, ಡಾ.ಕುಮಾರ ದಾಸರ, ಎಂ.ಎಸ್. ಗುಗ್ಗರನಟ್ಟಿ, ಎಂ.ಎನ್. ಚವಡಪ್ಪನವರ, ಎಂ.ಎಸ್. ಜಾಳಿಹಾಳ, ಪಾಲಕ ಪ್ರತಿನಿಧಿಗಳಾದ ಮಲ್ಲಪ್ಪ ನರಗಟ್ಟಿ, ರಫೀಕ್ ಡಿ.ಕೆ., ಸಲೀಂಬೇಗ ಜಮಾದಾರ, ಸದಾಶಿವ ಶಟ್ಟಣಶೆಟ್ಟಿ, ರಾಜೇಶ್ವರಿ ಚವಡಪ್ಪನವರ, ದಿಲಾವರಸಾಬ್ ಮುಗಟಖಾನ್, ಅಮೀನ್ ದಿಲಾವನಾಯ್ಕ, ಲಕ್ಷ್ಮೀ ಸಣ್ಣಮ್ಮನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಜೆಇಇ ಪರೀಕ್ಷೆ: ವಿದ್ಯಾರ್ಥಿಗಳ ಸಾಧನೆ



ಚಿಕ್ಕೋಡಿ: ಪಟ್ಟಣದ ಕೆಎಲ್‌ಇ ಸಂಸ್ಥೆಯ ಸ್ವತಂತ್ರ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಮಹಮ್ಮದ್ ಮಕಾಂದಾರ ಶೇ. 96.98, ಸುಮೀತ ಯಶವಂತ ಶೇ. 96.22, ಋತು ಕರಾಡೆ ಶೇ. 94.39, ಸುಜೀತ ಚಂದರಗಿ ಶೇ.87.68, ಸಾಕ್ಷಿ ಗುರವ ಶೇ. 87.68, ಸಾಯಿರಾಜ ಬಾಪಕರ ಶೇ. 87.68 ಜೆಇಇ (ಮುಖ್ಯ) ಪರೀಕ್ಷೆಯಲ್ಲಿ ಅಂಕಗಳನ್ನು ಪಡೆದುಕೊಂಡು ಸಾಧನೆ ಮಾಡಿದ್ದಾರೆ. 13ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇ.80ಕ್ಕೂ ಹೆಚ್ಚು ಅಂಕಗಳನ್ನು ಪಡೆದುಕೊಂಡಿದ್ದು, 11 ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ ಪರೀಕ್ಷೆಗೆ ಅರ್ಹತೆ ಪಡೆದುಕೊಂಡಿದ್ದಾರೆ.

ಬೆಳವಡಿ ಮಲ್ಲಮ್ಮ ಉತವ ನಿಮಿತ್ತ ಮದ್ಯ ಮಾರಾಟ ನಿಷೇಧ: ಡಿಸಿ

ಬೆಳಗಾವಿ: ಬೆಳವಡಿ ಮಲ್ಲಮ್ಮ ಉತ್ಸವ ನಿಮಿತ್ಯ ಬೈಲಹೊಂಗಲ ತಾಲೂಕಿನ ಬೆಳವಡಿ ಗ್ರಾಮದ ವ್ಯಾಪ್ತಿಯಲ್ಲಿರುವ ಎಲ್ಲ ಮದ್ಯ, ಬಾರ್ ಅಂಗಡಿಗಳನ್ನು ಬಂದ್ ಮಾಡಿ ಮಧ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್ ಅವರು ಆದೇಶ ಹೊರಡಿಸಿದ್ದಾರೆ.

ಫೆ. 28 ರಿಂದ ಎರಡು ದಿನಗಳಕಾಲ ಬೆಳವಡಿಯಲ್ಲಿ ನಡೆಯಲ್ಲಿರುವ ಬೆಳವಡಿ ಮಲ್ಲಮ್ಮ ಉತ್ಸವ ಅಂಗವಾಗಿ ಸಾವಿರಾರು ಜನ ಭಾಗವಹಿಸುತ್ತಿದ್ದು, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಫೆ. 27ರ ಸಂಜೆ 6 ಗಂಟೆಯಿಂದ ಮಾರ್ಚ್ 2ರ ಬೆಳಿಗ್ಗೆ 6 ಗಂಟೆಯುವರೆಗೆ ಬೆಳವಡಿಯಲ್ಲಿರುವ ಎಲ್ಲ ಮದ್ಯ, ಬಾರ್ ಅಂಗಡಿಗಳನ್ನು ಬಂದ್ ಮಾಡಿ ಮದ್ಯ ಮಾರಾಟ ನಿಷೇಧಿಸಲಾಗಿದೆ.ಒಂದು ವೇಳೆ ನಿಯಮ ಉಲ್ಲಂಘಿಸಿದಲ್ಲಿ ಸೂಕ್ತ ಕಾನೂನು ಕ್ರಮ ಜರಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ನಕಲಿ ಪ್ರಮಾಣ ಪತ್ರ ನೀಡುತ್ತಿರುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ

ಬೆಳಗಾವಿ: ನಗರ ವ್ಯಾಪ್ತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲ ಬೇರೆ ರಾಜ್ಯಗಳಿಂದ ಆಗಮಿಸುತ್ತಿರುವ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವೇಶ, ವಸತಿ ಸೌಲಭ್ಯಗಳು, ಸರಕಾರಿ ಹಾಗೂ ಅರೆ ಸರಕಾರಿ ಉದ್ಯೋಗಗಳು ಮತ್ತು ಇತರೆ ಸೌಲಭ್ಯಗಳನ್ನು ಪಡೆಯುವ ಉದ್ದೇಶದಿಂದ ಮಧ್ಯವರ್ತಿಗಳಿಗೆ ದುಡ್ಡು ತೆಗೆದುಕೊಂಡು ನಕಲಿ ರಹವಾಸಿ ಪ್ರಮಾಣ ಪತ್ರಗಳು, ಜಾತಿ ಪ್ರಮಾಣ ಪತ್ರಗಳು ಹಾಗೂ ಇತರೆ ನಕಲಿ ಅಗ್ರಿಮೆಂಟ್ಗಳನ್ನು ನೀಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿ ಪೊಲೀಸ್ ಆಯುಕ್ತರಿಗೆ ಭೂಷನ್ ಗುಲಾಭರಾವ್ ಬೊರಸೆ ಅವರಿಗೆ, ಕರವೇ ಜಿಲ್ಲಾ ಅಧ್ಯಕ್ಷ ದೀಪಕ್ ಗುಡಗನಟ್ಟಿ ಮನವಿ ಮಾಡಿಕೊಂಡರು.

ಈ ಅಕ್ರಮ ಚಟುವಟಿಕೆಗಳಿಂದ ಸ್ಥಳೀಯ ಯುವಕರಿಗೆ ತೀವ್ರ ಅನ್ಯಾಯವಾಗುತ್ತಿದ್ದು, ವಿಶೇಷವಾಗಿ ಸರಕಾರಿ ಉದ್ಯೋಗಗಳು ಮತ್ತು ಶೈಕ್ಷಣಿಕ ಅವಕಾಶಗಳು ಕೈ ತಪ್ಪಿ ಹೋಗುತ್ತಿದೆ ಎಂದು ಪೊಲೀಸ್ ಆಯುಕ್ತರಿಗೆ ತಿಳಿಸಿದರು.

ಬೇರೆ ರಾಜ್ಯದಿಂದ ಆಗಮಿಸಿದ



ವಿದ್ಯಾರ್ಥಿಗಳಿಗೆ ಹಾಗೂ ಕೆಲ ಕಾರ್ಮಿಕರಿಗೆ ಪೊಲೀಸ್ ದೃಢೀಕರಣ, ವೆರಿಫಿಕೇಷನ್ ಪ್ರಮಾಣ ಪತ್ರ ನೀಡುವ ಸಮಯದಲ್ಲಿ ಸಮರ್ಪಕ ಹಾಗೂ ಕುಲಂಕುಶವಾಗಿ ಅರ್ಜಿದಾರರ ನಿವಾಸ, ದಾಖಲೆಗಳ ಪ್ರಾಮಾಣಿಕತೆ ಹಾಗೂ ಹಿನ್ನೆಲೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಪ್ರಮಾಣ ಪತ್ರ ನೀಡುವಂತೆ ಆಗ್ರಹಿಸಬೇಕೆಂದು ಪೊಲೀಸರ್ ಆಯುಕ್ತರಿಗೆ ದೀಪಕ್ ಗುಡಗನಟ್ಟಿ ಮನವಿ ಮಾಡಿಕೊಂಡರು.

ಜಿಲ್ಲೆಯಲ್ಲಿ ಬೇರೆ ರಾಜ್ಯದಲ್ಲಿನ ವಿದ್ಯಾರ್ಥಿಗಳಿಗೆ ಹಾಗೂ ಕಾರ್ಮಿಕರಿಗೆ ನಕಲಿ ಪ್ರಮಾಣಪತ್ರಕ್ಕೆ ಕಡಿವಾಣ ಹಾಕಬೇಕು ಮತ್ತು ನಕಲಿ ಪ್ರಮಾಣ ಪತ್ರ ನಿಡುವವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಎಸ್.ಜೆ. ಇಂಟರ್ ನ್ಯಾಷನಲ್ ಹೋಟೆಲ್ ಇಂದು ಉದ್ಘಾಟನೆ

ಚನ್ನಮ್ಮನ ಕಿತ್ತೂರು: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿಯವರು ಫೆ.22ರಂದು ಬೆಳಗ್ಗೆ 11 ಘಂಟೆಗೆ ಎಸ್.ಜೆ. ಇಂಟರ್ ನ್ಯಾಷನಲ್ ಹೋಟೆಲ್ ಉದ್ಘಾಟಿಸುವರು ಎಂದು ಸಮಾಜ ಸೇವಕ ಕಾಂಗ್ರೆಸ್ ಮುಖಂಡ ಹಬೀಬ ಶಿಲೇದಾರ ಹೇಳಿದರು.



ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರಿಂದ ಉದ್ಘಾಟನೆ

ಸಮೀಪದ ಅಂಬಡಗಟ್ಟಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂಬಡಗಟ್ಟಿ ಕ್ರಾಸ್ ಹತ್ತಿರ ಸತೀಶಣ್ಣಾ ಕಲ್ಯಾಣ ಮಂಟಪದ ಹತ್ತಿರ ನಿರ್ಮಾಣವಾಗಿರುವ ಎಸ್.ಜೆ. ಇಂಟರ್ ನ್ಯಾಷನಲ್ ಹೋಟೆಲ್ ಉದ್ಘಾಟನೆಯ ಸಾನ್ನಿಧ್ಯವನ್ನು ಕಿತ್ತೂರಿನ ರಾಜ ಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗಿಂದ್ರ ಸ್ವಾಮೀಜಿ, ಬೈಲೂರಿನ ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ, ನಯಾನಗರದ ಸುಖದೇವನಾಂದ ಪುಣ್ಯಾಶ್ರಮದ ಅಭಿನವ ಚಕ್ರವರ್ತಿ ಸಿದ್ಧಲಿಂಗ ಸ್ವಾಮೀಜಿ, ಮುಜರಾಯಿ ಇಲಾಖೆಯ ನಿರ್ದೇಶಕ ಮಹಾಂತಯ್ಯ ಶಾಸ್ತ್ರೀ, ಅಂಬಡಗಟ್ಟಿಯ ಮಡಿವಾಳೇಶ್ವರ ಮಠದ ವೀರೇಶ್ವರ ಸ್ವಾಮೀಜಿ, ಹೊನ್ನಾಪೂರದ ಮುಸ್ಲಿಂ ಧರ್ಮಗುರು ಹಜರತ್ ಸೈಯದ್ ಮೈನುದ್ದೀನ್ ಷಾ ಅಲಖಾದ್ರಿ, ಕಿತ್ತೂರಿನ ಮೌಲಾನಾ ಸೈಯದ ಅಲ್ಲಾವುದ್ದೀನ್, ಕಿತ್ತೂರಿನ ಗಾಡ್ ಕ್ರಿಯೇಶನ್ ಸಂಸ್ಥಾಪಕ ರೆವೆಂಡರ್ ಮಹೇಶ ಫಾಸ್ಟರ್ ಮುಂತಾದವರ ಸಾನ್ನಿಧ್ಯದಲ್ಲಿ ನಡೆಯಲಿದೆ ಎಂದರು.



ಅಧ್ಯಕ್ಷತೆಯನ್ನು ಪಪಂ ಸ್ಥಾಯಿ ಸಮಿತಿ ಅಧ್ಯಕ್ಷ ಎಮ್.ಎಫ್. ಜಕಾತಿ ವಹಿಸುವರು. ಮುಖ್ಯ ಅತಿಥಿಗಳಾಗಿ ಚಿಕ್ಕೋಡಿ ಲೋಕಸಭಾ ಸದಸ್ಯೆ ಪ್ರಿಯಾಂಕಾ ಜಾರಕಿಹೊಳಿ, ವಿಪ ಸದಸ್ಯ ಲಖನ್ ಜಾರಕಿಹೊಳಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ರಾಹುಲ್ ಜಾರಕಿಹೊಳಿ, ಹಾವೇರಿಯ ಸಮಾಜ ಹೋರಾಟಗಾರ್ತಿ ಕೆ.ಸಿ.ಅಕ್ಷತಾ, ಚಂದ್ರಕಾಂತ ಕಾದ್ರೋಳ್ಳಿ, ಬೆಳಗಾವಿಯ ಡಿಸಿಪಿ ನಾರಾಯಣ ಭರಮಣಿ, ಬೆಳಗಾವಿ ಡಿವೈಎಸ್‌ಪಿ ವೀರೇಶ ದೊಡಮನಿ, ಬೆಳಗಾವಿ ಜಿಪಂ ಮುಖ್ಯ ಲೆಕ್ಕಾಧಿಕಾರಿ ಪರುಶುರಾಮ ದುಡಗುಂಟಿ, ಅಂತರ್ ರಾಷ್ಟ್ರೀಯ ಕುಸ್ತಿಪಟುಗಳಾದ ರತನಕುಮಾರ ಮಠಪತಿ ಹಾಗೂ ರಫೀಕ್ ಹೊಳಿ ಮುಂತಾವರು ಆಗಮಿಸುವರು ಎಂದರು.

ಈ ಸಂದರ್ಭದಲ್ಲಿ ಉಡುಪಿ ಜಿಪಂ ಉಪ ಕಾರ್ಯದರ್ಶಿ ಶ್ಯಾಮ ಕಾದ್ರೋಳ್ಳಿ, ಸಿಂಡಿಕೇಟ್ ಸದಸ್ಯ ಮಹಾಂತೇಶ ಕಂಬಾರ, ನಿವೃತ್ತ ಶಿಕ್ಷಕರಾದ ಎಮ್.ಎಸ್.ಕಲ್ಮಠ, ಜಿ.ಪಿ.ಪತ್ತಾರ, ಜಿ.ಜಿ. ಹನುಮಸಾಗರ ಇವರನ್ನು ಸನ್ಮಾನಿಸಲಾಗುವುದು. ಈ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಕೊಂಡಿದ್ದು ಸುಮಾರು ಎಂಟರಿಂದ ಹತ್ತು ಸಾವಿರ ಜನರು ಸೇರುವ ನೀರಿಕ್ಷೆಯಿದೆ ಎಂದು ತಿಳಿಸಿದ ಅವರು, ಜ್ಯೂನಿಯರ್ ಶಿವರಾಜಕುಮಾರ ತಂಡದಿಂದ ರಸಮಂಜರಿ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಇಂದಿನಿಂದ ಮಣಗುತ್ತಿ ಬಸವಣ್ಣ ದೇವರ ಜಾತ್ರೆ

ಯಮಕನಮರಡಿ: ಸಮೀಪದ ಮಣಗುತ್ತಿ ಗ್ರಾಮದ ಹೊರವಲಯದಲ್ಲಿರುವ ಬಸವಣ್ಣ ದೇವರ ಮಂದಿರದ ಜಾತ್ರೆ ಫೆ.22 ರಿಂದ ಫೆ.24ರವರೆಗೆ ವಿಜೃಂಭಣೆಯಿಂದ ನಡೆಯಲಿದೆ.

ಗ್ರಾಮದಲ್ಲಿ ಮುತ್ಯಪಜ್ಜನರೆಂಬ ಮಹಾತ್ಮರು ಆಗಿಹೋಗಿದ್ದು ತದನಂತರ ಗ್ರಾಮದ ಶಿರಗುಪ್ಪಿ ಕುಟುಂಬದವರು ಮುಂದುವರೆಸಿಕೊಂಡು ಹೋಗುತ್ತಿದ್ದು ಅತೀ ಪೂರ್ವದಲ್ಲಿ ಮಣಗುತ್ತಿ ಗ್ರಾಮದ ಮಧ್ಯದಲ್ಲಿ ಭಯಂಕರವಾದ ತನ್ನಿಂದ ತಾನೇ ತಯ್ಯಾರಾದ ಮಣ್ಣಿನ ಗುತ್ತಿ ಇತ್ತು ಆದಕ್ಕೆ ಮಣ್ಣಿನ ಗುತ್ತಿ ಮಣ್ಣಿನ ಗುತ್ತಿ ಎಂದು ಕರೆಯುತ್ತಿದ್ದರು. ಕ್ರಮೇಣವಾಗಿ ಈ ಗ್ರಾಮವು ಮಣಗುತ್ತಿ ಎಂದು ರೂಡಿಯಲ್ಲಿ ಬಂದಿತು. ಸದರಿ ಗ್ರಾಮವು ಸುತ್ತಮುತ್ತಲೂ ಭವ್ಯವಾದ ಅರಣ್ಯದಿಂದ ಕೂಡಿತ್ತು ಸದರಿ ಮಣ್ಣಿನ ಗುತ್ತಿಗೆ ಒಂದು ಆಕಳು ಬಂದು ಹೊಗುತ್ತಿತ್ತು ಎಂದು ಹಿರಿಯರು ಹೇಳುತ್ತಾರೆ.

ಆಂಧ್ರ ಪ್ರದೇಶ, ತಮಿಳುನಾಡು ಗೋವಾ ಇತ್ಯಾದಿ ರಾಜ್ಯಗಳಿಂದ ಅಪಾರ ಭಕ್ತಾದಿಗಳು ಬಂದು ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಳ್ಳುತ್ತಾರೆ. ಇಂತಹ ಪವಾಡ ಪುರುಷರ ನಾಡು ನಿಜಕ್ಕೂ ಸನಾತನ ಧರ್ಮಕ್ಕೆ ಬುನಾದಿ.

ಯಾತ್ರಾ ಮಹೋತ್ಸವ ಅಂಗವಾಗಿ ಬಯಲಾಟ ಪ್ರದರ್ಶನ, ಎತ್ತಿನಗಾಡಿ, ಕುದುರೆ ಗಾಡಿ ಶರ್ಯತ್ತು, ಮಹಾಪ್ರಸಾದ, ಪಲ್ಲಕ್ಕಿ ಉತ್ಸವ ನಡೆಯಲಿದೆ. ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖರು ಸಕಲ ಭಕ್ತಾದಿಗಳು ಭಾಗವಹಿಸಿ ಮುತ್ಯಪಜ್ಜನವರ ಕೃಪೆಗೆ ಪಾತ್ರರಾಗಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉತ್ತಮ ಅಂಕಗಳಿಸಲು 'ಟ್ಯೂಷನ್ ಕ್ಲಾಸ್' ಸಹಕಾರಿ

ಯರಗಟ್ಟಿ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ವಿವಿಧ ಯೋಜನೆಗಳನ್ನು ಕೈಗೊಂಡಿದ್ದು ಸತ್ತಿಗೇರಿ ವಲಯದ ಎಂ.ಟಿ. ನರಗುಂದ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಟ್ಯೂಷನ್ ಸಹ ನೀಡುತ್ತಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಜಿಲ್ಲಾ ನಿರ್ದೇಶಕ ಎಚ್.ಆರ್. ಲವಕುಮಾರ ಹೇಳಿದರು.



ಸಮೀಪದ ತೋರಣಗಟ್ಟಿ ಗ್ರಾಮದ ಎಂ.ಟಿ. ನರಗುಂದ ಪ್ರೌಢಶಾಲೆಯಲ್ಲಿ ಟ್ಯೂಷನ್ ಕ್ಲಾಸ್ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿ, ಸಮಾಜದ ಹಿತದೃಷ್ಟಿಯಲ್ಲಿ ಮಹಿಳೆಯರಿಗೆ ತರಬೇತಿ ಆರೋಗ್ಯ ತಪಾಸಣೆ ಶಿಬಿರ, ಪ್ರಾಣಿಗಳು ಹಾಗೂ ಪಕ್ಷಿಗಳಿಗೆ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಕೆರೆ ನಿರ್ಮಾಣ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸುಜ್ಞಾನ ನಿಧಿ, ಮಾಸಾಶನ, ವಾತ್ಸಲ್ಯ ಕಾರ್ಯಕ್ರಮದಲ್ಲಿ ನಿರ್ಗತಿಕರಿಗೆ ಮನೆ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ವಿದ್ಯಾರ್ಥಿಗಳು ಉತ್ತಮ ಅಂಕಗಳಿಸಲು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಟ್ಯೂಷನ್ ಕ್ಲಾಸ್ ನಡೆಸಲಾಗುತ್ತಿದೆ ಎಂದು ಹೇಳಿದರು.

ಶಾಲೆಯ ಪ್ರಧಾನ ಗುರುಗಳಾದ ಕೆ. ಡಿ. ಅಚನೂರ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಕ್ಕಳಿಗೆ ಟ್ಯೂಷನ್ ಕೊಡುತ್ತಿರುವುದರಿಂದ ಮಕ್ಕಳಿಗೆ ಕಲಿಕೆ ಮಟ್ಟ ಸುಧಾರಿಸಿ ಹೆಚ್ಚಿನ ಫಲಿತಾಂಶ ಬರಲು ಸಾಧ್ಯವಾಗಿದೆ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ನಂತರ ಮಕ್ಕಳಿಗೆ ಪುಸ್ತಕ ಮತ್ತು ಪೆನ್ ನೀಡಲಾಯಿತು. ಶಾಲೆಯ ಸಹಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

ಈ ವೇಳೆ ತಾಲೂಕು ಯೋಜನಾಧಿಕಾರಿ ಶ್ರೀಕಾಂತ ಎಂ, ಡಿ.ಕೆ. ದಂಡಿನ, ಟಿ.ಎಂ. ಸತ್ತಿಗೇರಿ, ಆರ್.ಎಂ. ಮುಂಗುಜೆ, ಮಂಜುನಾಥ ಕೋರಿಶೆಟ್ಟಿ, ಎಸ್.ಎಸ್. ಸಿಂಗಾರಗೋಪ್ಪ, ಎಂ.ಎಂ. ಕಾಂತಿಮಠ, ರಮೇಶ ಉಪ್ಪಾರ, ಜ್ಞಾನವಿಕಾಸ ಸಮನ್ವಯಾಧಿಕಾರಿ ನಿಶಾ ನಾಯ್ಕ, ಸೇವಾ ಪ್ರತಿನಿಧಿ ಹನುಮವ್ವ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಕಿರುಸುದ್ದಿ

ಇಂದು ಸತ್ಸಂಗ ಕಾರ್ಯಕ್ರಮ

ಜಮಖಂಡಿ: ತಾಲೂಕಿನ ಹುಲ್ಯಾಳ ಗ್ರಾಮದ ಗುರುದೇವಾಶ್ರಮದ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಫೆ.22ರಂದು ಸಂಜೆ 6ಗಂಟೆಗೆ ತಿಂಗಳ ನಾಲ್ಕನೇ ಭಾನುವಾರದ ಮಾಸಿಕ ಕಾರ್ಯಕ್ರಮ ಗುರುದೇವ ಸತ್ಸಂಗ ಹಮ್ಮಿಕೊಳ್ಳಲಾಗಿದೆ ಎಂದು ಗುರುದೇವಾಶ್ರಮದ ಹರ್ಷಾನಂದ ಶ್ರೀಗಳು ತಿಳಿಸಿದ್ದಾರೆ. ಮುಧೋಳ ತಾಲೂಕಿನ ಶಿರೋಳ ಗ್ರಾಮದ ರಾಮಾರೂಢ ಮಠದ ಶಂಕರಾರೂಢ ಶ್ರೀಗಳು, ವಿಮಲಾ ಸಂಗಮೇಶ ಕುಬಕಡ್ಡಿ ಪ್ರಸಾದ ಸೇವೆ ನೆರವೇರಿಸುವರು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದ್ದಾರೆ.

ಟಿಪ್ಪು ಬೋರ್ಡ್ ತೆಗೆಯದಿದ್ದರೆ ಬೀಳಗಿ ಚಲೋ

ಬೀಳಗಿ: ಪಟ್ಟಣದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಅನುಮತಿ ಇಲ್ಲದೆ ಮತ್ತು ಹಿಂದೂ ವ್ಯಾಪಾರಿಗಳಿಗೆ ತೊಂದರೆ ಮಾಡಲೆಂದೇ ಮತಾಂಧ, ದೇಶ ದ್ರೋಹಿ ವಿವಾದಿತ ವ್ಯಕ್ತಿ ಟಿಪ್ಪುವಿನ ಬೋರ್ಡ್‌ನ್ನು ಬೀಳಗಿ ಪಟ್ಟಣದ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಪಾದಚಾರಿಗಳ ರಸ್ತೆ (ಪುಟ್ ಪಾತ್) ಯಲ್ಲಿ ಹಾಕಿದ್ದನ್ನು ಒಂದು ವಾರದಲ್ಲಿ ತೆಗೆಯದಿದ್ದರೆ ಬೀಳಗಿ ಚಲೋ ಎಂಬ ಬೃಹತ್ ಪ್ರತಿಭಟನೆಗೆ ಕರೆ ನೀಡಲಾಗುವುದು ಎಂದು ವಿಶ್ವ ಹಿಂದು ಪರಿಷದ್ ಬಜರಂಗದಳದ ರಾಜ್ಯ ಸಹ ಕಾರ್ಯದರ್ಶಿ ಪುಂಡಲೀಕ ದಳವಾಯಿ ಎಚ್ಚರಿಕೆ ನೀಡಿದರು.



ಪಟ್ಟಣದ ಜಿಎಲ್‌ಬಿಸಿ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಟಿಪ್ಪು ಒಬ್ಬ ವಿವಾದಿತ ವ್ಯಕ್ತಿ ಅವನ ವೃತ ಮಾಡುವುದು ಮತ್ತು ಅವನ ಹೆಸರಲ್ಲಿ ಬೋರ್ಡ್ ಹಾಕುವ ನೆಪದಲ್ಲಿ ನಮ್ಮ ಹಿಂದು ಸಮಾಜದ ವ್ಯಾಪಾರಸ್ಥರನ್ನು ಗುರಿ ಮಾಡುತ್ತಿದ್ದಾರೆ. ಪಟ್ಟಣದಲ್ಲಿ ಸ್ಥಳೀಯ ಶಾಸಕರ, ಅಧಿಕಾರಿಗಳ ಬೆಂಬಲವಿದೆ ಎಂದು ಆ ಬೋರ್ಡ್‌ನ ಸುತ್ತ ಮತ್ತು ಮೊನ್ನೆ ಅಂಗಡಿ ಮುಂದೆ ಗುಂಡಿ ತೆಗೆದಿದ್ದು, ಹಿಂದೂ ಸಮಾಜದ ವ್ಯಾಪಾರಸ್ಥರಿಗೆ ತೊಂದರೆ ಕೊಡುವದಾಗಲಿ, ಅವರನ್ನು ಅಲ್ಲಿಂದ ಕಿತ್ತಿಸುವದಾಗಲಿ ಮಾಡಲು ಪ್ರಯತ್ನಿಸಿದರೆ ಹುಶಾರ್ ಎಂದು ಎಚ್ಚರಿಸಿದ ಅವರು, ಹಿಂದು ವ್ಯಾಪಾರಸ್ಥರ ಜೊತೆಗೆ ವಿಎಚ್‌ಪಿ ಬಜರಂಗದಳ ಇದೇ ಎಂದು ಹೇಳಿದರು. ಹಿಂದೂ ಸಮಾಜದ ಮುಖಂಡ ವೀರಣ್ಣ ತೋಟದ, ಸಂಗಪ್ಪ ಹರಿಪಲ್ಲೆ, ರಾಮಚಂದ್ರ ನಾಲ್ವಡೆ, ರಾಘು ಭಜಂತ್ರಿ ಮತ್ತಿತರಿದ್ದರು.

ಕಲ್ಲು ತೂರಾಟ: ಕ್ರಮಕ್ಕೆ ಹೊಳಬಸು ಆಗ್ರಹ

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಡೆದ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಘಟನೆ ಅತ್ಯಂತ ಖಂಡನೀಯ. ಈ ಘಟನೆಯಲ್ಲಿ ಯಾರೇ ಭಾಗಿಯಾಗಿದ್ದರೂ, ಅವರ ವಿರುದ್ಧ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಇಂತಹ ಘಟನೆಯಲ್ಲಿ ಯಾರೇ ಭಾಗಿಯಾಗಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲೇಬೇಕು. ಬಾಗಲಕೋಟೆಯಲ್ಲಿ ಇಂತಹ ಘಟನೆ ಪುನರಾವರ್ತನೆಯಾಗದಂತೆ ಜಿಲ್ಲಾಡಳಿತ ಸೂಕ್ತ ಮುಂಜಾಗ್ರತೆ ವಹಿಸಬೇಕು. ಎಲ್ಲ ಜಾತಿ-ಧರ್ಮದವರು ಸಹಬಾಳ್ವೆಯಿಂದ ಬಾಳುವ ಬಾಗಲಕೋಟೆಯಲ್ಲಿ ಇಂತಹ ಘಟನೆ ನಡೆದಿರುವುದು ಖೇದಕರ. ಇಂತಹ ಘಟನೆಗಳನ್ನೂ ಯಾರೂ ರಾಜಕೀಯಕ್ಕೆ ಬಳಸಿಕೊಳ್ಳದೇ, ಶಾಂತಿ ಕಾಪಾಡಲು ಸಹಕಾರ ನೀಡಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ಬಿ. ತಿಮ್ಮಾಪುರ ಅವರು, ಜಿಲ್ಲಾಡಳಿತಕ್ಕೆ ಕಟ್ಟುನಿಟ್ಟಿನ ಸೂಚನೆ ಕೂಡ ನೀಡಿದ್ದಾರೆ. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದು ಎಂದು ಕಾಂಗ್ರೆಸ್ ಮುಖಂಡ ಹೊಳಬಸು ಷ. ಶೆಟ್ಟರ ಮನವಿ ಮಾಡಿದರು.



ಮಾ.1ರಂದು ಪುರುಷ ಕಬಡ್ಡಿ ಆಟಗಾರರ ಆಯ್ಕೆ

ಬೀಳಗಿ: ತಾಲೂಕಿನ ಅನಗವಾಡಿ ಗ್ರಾಮದ ಬನಶಂಕರಿದೇವಿ ವಿದ್ಯಾ ಸಂಸ್ಥೆಯ ಬಿ.ಎನ್.ಖೋತ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಆಶ್ರಯದಲ್ಲಿ ಪುರುಷ ಕಬಡ್ಡಿ ಆಟಗಾರರ ಆಯ್ಕೆ-2025-26 ಮಾ.1ರಂದು ಬೆಳಗ್ಗೆ 11 ಗಂಟೆಗೆ ಬಿ.ಎನ್.ಖೋತ ಪಿಯು ಕಾಲೇಜು ಮೈದಾನದಲ್ಲಿ ನಡೆಯಲಿದೆ. ಪ್ರೌಢ ಶಾಲೆಯ 14ರಿಂದ 17 ವಯೋಮಾನದ, ಪಿಯುಸಿ 16ರಿಂದ 18 ವಯಸ್ಸಿನ ವಿದ್ಯಾರ್ಥಿಗಳ ಆಯ್ಕೆ ನಡೆಯಲಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವವರು. ಕಡ್ಡಾಯವಾಗಿ ಜನನ ಪ್ರಮಾಣ ಪತ್ರ, ಆಧಾರ ಕಾರ್ಡ (ಮೂಲ ಪ್ರತಿ), ವೈದ್ಯಕೀಯ ಪ್ರಮಾಣ ಪತ್ರ, ಶಾಲಾ ದಾಖಲಾತಿ ದೃಢೀಕರಣ ಹಾಗೂ ಮೂಲ ಪ್ರಮಾಣ ಪತ್ರ(ಕಡ್ಡಾಯ), 5 ಪಾಸ್ ಪೋರ್ಟ ಹಾಗೂ ಭಾವಚಿತ್ರ ತರಬೇಕು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಊಟ ಹಾಗೂ ವಸತಿ ಸಹಿತ ಉಚಿತ ಶಿಕ್ಷಣ ಮತ್ತು ತರಬೇತಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೋ: 7259960959, 9743349329, 7996352337, 7795550074 ಈ ನಂಬರಗಳಿಗೆ ಸಂಪರ್ಕಿಬೇಕೆಂದು ವಿದ್ಯಾಸಂಸ್ಥೆಯ ಪ್ರಕಟಣೆ ತಿಳಿಸಿದೆ.



ಬಾಗಲಕೋಟೆ: ಪೊಲೀಸರಿಂದ ಹಿಂದೂ ಸಂಘಟನೆ ಕಾರ್ಯಕರ್ತರ ಬಂಧನದ ವೇಳೆ ಅವಘಡ ನಡೆದು ಕೈ ಮುರಿದುಕೊಂಡು ಆಸ್ಪತ್ರೆಗೆ ದಾಖಲಾದ ಅಶೋಕ ಬಾರಕೇರ ಅವರನ್ನು ಭೇಟಿ ಮಾಡಿದ ಸಂಸದರಾದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯರಾದ ನಾರಾಯಣಸಾ ಭಾಂಡಗೆ, ಮಾಜಿ ಶಾಸಕ ವೀರಣ್ಣ ಸಿ ಚರಂತಿಮಠ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಆರೋಗ್ಯ ವಿಚಾರಿಸಿದರು.

ಲೋಕೇಶ್ವರ ದೇವಸ್ಥಾನಕ್ಕೆ ಸಚಿವರ ಭೇಟಿ

ಲೋಕಾಪುರ: ಪಟ್ಟಣದ ಆರಾಧ್ಯದೈವ ಲೋಕೇಶ್ವರ ಜಾತ್ರಾ ಕಮಿಟಿ ವತಿಯಿಂದ ಜಿಲ್ಲಾ ಉಸ್ತುವಾರಿ ಹಾಗೂ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರನ್ನು ದೇವಸ್ಥಾನಕ್ಕೆ ಭೇಟಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ದೇವಸ್ಥಾನ ವತಿಯಿಂದ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಸಚಿವರು, ಲೋಕೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಎಲ್ಲರೂ ಸೇರಿ ನೀವು ಏನು ಹೇಳಿತ್ತಿರೋ ಅದಕ್ಕೆ ನಾನು ಬದ್ಧನಾಗಿದ್ದೇನೆ, ಎಲ್ಲರ ಸಹಾಯ ಸಹಕಾರ ನೀಡಿ ದೇವಸ್ಥಾನವನ್ನು ಜೀರ್ಣೋದ್ಧಾರಕ್ಕೆ ಪಣ ತೊಡೋಣಾ ಎಂದ ಅವರು, ನಾಡಿನ ಜನರ ಸುಖ-ಶಾಂತಿ ಮತ್ತು ಸಮೃದ್ಧಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಲೋಕೇಶ್ವರ ಎಲ್ಲ ಭಕ್ತರ ಹೃದಯದಲ್ಲಿ ನೆಲೆಗೊಂಡಿದ್ದಾನೆ, ಈ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ದೇವರ ದರ್ಶನ ಪಡೆದು ನಾಡಿನ ಪ್ರಗತಿ, ಜನರ ಆರೋಗ್ಯ, ಸಮಾಜದ ಸಾಮರಸ್ಯ ಮತ್ತು ಶಾಂತಿಗಾಗಿ ಪ್ರಾರ್ಥಿಸುವುದು ನಮ್ಮ ಧಾರ್ಮಿಕ ಜವಾಬ್ದಾರಿಯಾಗಿದೆ. ಲೋಕಾಪುರ ಹಾಗೂ ಸುತ್ತಮುತ್ತಲಿನ ಭಕ್ತರು ಈ ಜಾತ್ರೆಯನ್ನು ಭಕ್ತಿ ಶ್ರದ್ಧೆಯಿಂದ ಆಚರಿಸುತ್ತಿರುವುದು ಸಂತಸದ ಸಂಗತಿ, ದೇವರ ಕೃಪೆಯಿಂದ ಎಲ್ಲರ ಜೀವನದಲ್ಲಿ ಸುಖ ಮತ್ತು ಶಾಂತಿ, ಸಮೃದ್ಧಿ ನೆಲೆಗೊಳ್ಳಿ ಎಂದು ಹಾರೈಸಿದರು. ಶಿವಾನಂದ ಉದಪುಡಿ, ಲೋಕಣ್ಣ ಕೊಪ್ಪದ, ಪರಮಾನಂದ ಕುಟ್ರಟ್ಟಿ, ಆನಂದ ಹಿರೇಮಠ, ಭೀಮನಗೌಡ ಪಾಟೀಲ, ಪವನ ಉದಪುಡಿ, ಗೋಪಾಲ ಲಮಾಣಿ, ಜಾತ್ರಾ ಕಮೀಟಿ ಅಧ್ಯಕ್ಷ ಕಿರಣಕುಮಾರ ದೇಸಾಯಿ, ಪಿಕೆಪಿಎಸ್ ನಿರ್ದೇಶಕ ಚನ್ನಯ್ಯ ಗಣಾಚಾರಿ, ಲೋಕಣ್ಣಾ ಗಣಚಾರಿ ಹಾಗೂ ಲೋಕೇಶ್ವರ ದೇವಸ್ಥಾನದ ಅರ್ಚಕರು ಹಾಗೂ ಪಟ್ಟಣದ ಜಾತ್ರಾ ಸಮಿತಿ ಸದಸ್ಯರು ಭಕ್ತರು ಉಪಸ್ಥಿತರಿದ್ದರು.



ಲೋಕಾಪುರ: ಪಟ್ಟಣದ ಆರಾಧ್ಯ ದೈವ ಲೋಕೇಶ್ವರ ಜಾತ್ರಾ ಕಮೀಟಿ ವತಿಯಿಂದ ಜಿಲ್ಲಾ ಉಸ್ತುವಾರಿ ಹಾಗೂ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಅವರನ್ನು ದೇವಸ್ಥಾನಕ್ಕೆ ಭೇಟಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ದೇವಸ್ಥಾನ ವತಿಯಿಂದ ಸನ್ಮಾನಿಸಲಾಯಿತು.

ನವನಗರದಲ್ಲಿ ವಿರಾಟ್ ಹಿಂದೂ ಸಮ್ಮೇಳನ | ಹಣಮಂತ ಮಳಲಿ ಹೇಳಿಕೆ

ಹಿಂದೂ ಸಮ್ಮೇಳನಕ್ಕೆ ವಿರೋಧ ಸಲ್ಲ

ಬಾಗಲಕೋಟೆ: ರಾಷ್ಟ್ರೀಯ ಸ್ವಯಂ ಸಂಘಕ್ಕೆ ನೂರು ವರ್ಷ ತುಂಬಿದ ಸಂದರ್ಭದಲ್ಲಿ ದೇಶದಲ್ಲಿ ಅಷ್ಟೇ ಅಲ್ಲದೇ 49 ದೇಶಗಳಲ್ಲಿ ಸಂಭ್ರಮ, ಸಮ್ಮೇಳನ ನಡೆಯುತ್ತಿದೆ. ಆದರೆ ಬಾಗಲಕೋಟೆಯಲ್ಲಿ ಮಾತ್ರ ಇದಕ್ಕೆ ವಿರೋಧವಿದೆ. ಭಾರತದಲ್ಲಿ ಹಿಂದೂ ಸಮ್ಮೇಳನಕ್ಕೆ ಭಾರತೀಯರೇ ವಿರೋಧ ಮಾಡುತ್ತಿರುವ ಏಕೈಕ ದೇಶ ಯಾವುದಾದರೂ ಇದ್ದರೆ ಅದು ಭಾರತ ಎಂದು ಕರ್ನಾಟಕ ಉತ್ತರ ಪ್ರಾಂತ ಧರ್ಮ ಜಾಗರಣ ಸಮನ್ವಯ ಕಾರ್ಯಕಾರಿಣಿ ಸದಸ್ಯ ಹಣಮಂತ ಮಳಲಿ ಹೇಳಿದರು.

ನವನಗರದ ವೀರಭದ್ರೇಶ್ವರ ದೇವಸ್ಥಾನದ ಸಮೀಪ ಆಯೋಜಿಸಿದ್ದ ಹಿಂದೂ ವಿರಾಟ್ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ದೇಶ ವಿರೋಧಿಗಳನ್ನು ವೈರಿಗಳು ಎಂದು ತಿಳಿದು ಬಾಳಿದರೆ ಭಾರತ ಉಳಿಯಲಿದೆ ಎಂದರು.

ಪಾಕಿಸ್ತಾನ, ಬಾಂಗ್ಲಾದೇಶದಲ್ಲಿ ಹಿಂದೂ ಸಮೇಳನ ಮಾಡುತ್ತಿಲ್ಲ, ಛತ್ರಪತಿ ಶಿವಾಜಿ ಮಹಾರಾಜರು ಓಡಾಡಿದ ಜಾಗದಲ್ಲಿಯೇ ಸಮ್ಮೇಳನ ನಡೆಯುತ್ತಿದೆ. ಇಂತಹ ಸಮ್ಮೇಳನದಲ್ಲಿ ಕಲ್ಲೆಸೆಯುವುದು, ಚಪ್ಪಲಿ ಎಸೆಯುವವರನ್ನು ಸ್ವತಂತ್ರವಾಗಿ ಯಾರನ್ನೂ ಕೇಳದೇ ಅಂತಹ ದೇಶದ್ರೋಹಿಗಳ ಮೇಲೆ ಕ್ರಮ ಕೈಗೊಳ್ಳುವ ಗಂಡುಗಲಿ ಪೊಲೀಸರು, ಅಧಿಕಾರಿಗಳು ನಮ್ಮಲ್ಲಿ ಆಗಬೇಕು ಎಂದು ಹೇಳಿದರು.

ದೇಶದ ಎಲ್ಲ ರಾಜ್ಯಗಳಲ್ಲಿ ರಾಷ್ಟ್ರಕೂಟರು, ಮಹಾರಾಣಾ ಪ್ರತಾಪ ಸಿಂಹ ಸೇರಿದಂತೆ ಎಲ್ಲ ವರ್ಗದವರನ್ನು ಸೇರಿಕೊಂಡು ಸಾಮ್ರಾಜ್ಯವನ್ನು ಛತ್ರಪತಿ ಶಿವಾಜಿ ಸ್ಥಾಪಿಸಿದ್ದರು. ಅಂತಹ ಮಹಾರಾಜರ ಮೆರವಣಿಗೆಯಲ್ಲಿ ಚಪ್ಪಲಿ, ಕಲ್ಲು ಹಾಕುವುದು ಯಾರಿಗೂ ಶೋಭೆ ತರುವುದಿಲ್ಲ,



> ದೇಶ ನಮ್ಮದು ಎಂದು ಹೆಮ್ಮೆಯಿಂದ ಹೇಳಬೇಕು. ದೇಶದಲ್ಲಿ ಸೈನಿಕ, ರೈತನನ್ನು ಆದರ್ಶ ಇಟ್ಟುಕೊಂಡು ಬದುಕಬೇಕು. ದೇಶದಲ್ಲಿ ಆರೋಗ್ಯವಂತಹ ಸಮಾಜ ನಿರ್ಮಾಣವಾಗಬೇಕಾಗಿದೆ. ದೇಶದಲ್ಲಿ ಜನಸಂಖ್ಯೆ ನಿಯಂತ್ರಣಕ್ಕೆ ಏಕರೂಪ ಕಾನೂನು ಬರುವವರೆಗೂ ಹಿಂದೂಗಳು ಕೂಡ ಜನಸಂಖ್ಯೆ ನಿಯಂತ್ರಣ ಮಾಡಬಾರದು
>
> **■ ಹಣಮಂತ ಮಳಲಿ,** ಕರ್ನಾಟಕ ಉತ್ತರ ಪ್ರಾಂತ ಧರ್ಮ ಜಾಗರಣ ಸಮನ್ವಯ ಕಾರ್ಯಕಾರಿಣಿ ಸದಸ್ಯ

ಮುಂದಿನ ದಿನಗಳಲ್ಲಿ ಇದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಅಂತಹ ಕಾಲಘಟ್ಟದಲ್ಲಿ ನಾವೇದ್ದೇವೆ.ಬಾಗಲಕೋಟೆಯಲ್ಲಿ ಹಿಂದೂ ಸಮಾಜದವರು ಯಾವುದೇ ಯಾತ್ರೆ ಮಾಡಿದರೂ ಕಲ್ಲು ಬಿಸಾಕುವವರು ಹಿಂದೂಗಳಲ್ಲ ಎಂಬುದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಯಾರು ತಪ್ಪು ಮಾಡಿದ್ದಾರೆ ಅವರನ್ನೆಲ್ಲ ಒದ್ದು ಒಳಗೆ ಹಾಕುವು ಕೆಲಸ ಪೊಲೀಸರಿಂದ ಆಗಬೇಕಾಗಿದೆ ಎಂದು ಹೇಳಿದರು.

ಹಿಂದೂಗಳು ಯಾವತ್ತೂ ದೇಶವನ್ನು ಹಾಳು ಮಾಡುವುದಿಲ್ಲ, ನಮ್ಮವರು ಯಾವುದೇ ಧರ್ಮದವರನ್ನು ಮತಾಂತರ ಮಾಡಲು ಹೋಗಲ್ಲ, ಒಂದು ವೇಳೆ ಹಿಂದೂಗಳು ಅಂತಹ ಕೆಲಸಕ್ಕೆ ಕೈ ಹಾಕಿದರೆ ನಮ್ಮವರಿಗೆ ಒಂದು ವಾರ ಸಾಕು ಅಷ್ಟು ವೇಗವಾಗಿ ಮಾಡುವ ಶಕ್ತಿ ನಮ್ಮ ಹುಡಗರು ಹೊಂದಿದ್ದಾರೆ. ಲವ್ ಜಿಹಾದ್, ಮತಾಂತರ ಮಾಡುವವರಿಗೆ ಎಚ್ಚರಿಕೆಯನ್ನು ನೀಡಿದರು. ಹಿಂದೂ ಹುಡುಗ ಮುಸ್ಲಿ ಹುಡಗಿಯ ಜತೆ ಮಾತನಾಡಿದರೆ ಹಲ್ಲೆ ಮಾಡಿದಾಗ ಸುಮ್ಮನಿರು ರಾಜಕಾರಣಿಗಳು ಅದೇ ಹಿಂದೂ ಹುಡುಗಿ ಮುಸಲ್ಮಾನ ಹುಡುಗನ ಜತೆ ಹೋದರೆ ಅದು ಸಾಮರಸ್ಯ ಎನ್ನುತ್ತಾರೆ ಇಂತಹ ಜನಪ್ರತಿನಿಧಿಗಳು ನಮ್ಮಲ್ಲಿದ್ದಾರೆ ಎಂದರು.

ಯಾವುದೇ ಗ್ರಂಥ, ಕುಲದಲ್ಲಿ ಜಾತೀಯತೆ ಮಾಡಬೇಕು ಎಂಬುದನ್ನು ಹೇಳಿಲ್ಲ. ಭಾರತ ದೇಶ ಸಶಕ್ತವಾಗಬೇಕಾದರೆ ನಮ್ಮ ದೇಶೀಯ ವಸ್ತುಗಳನ್ನು ಬಳಸಬೇಕು. ತಂದೆ ,ತಾಯಿಗಳನ್ನು ವೃದ್ಧಾಶ್ರಮಕ್ಕೆ ಕಳುಹಿಸಬಾರದು. ಆಯುರ್ವೇದವನ್ನು ಬಳಸಿಕೊಳ್ಳಬೇಕು. ಗೋ ಮಾತೆಯನ್ನು ಪೂಜಿಸಬೇಕು. ಮುಸ್ಲಿಂ ಸಮುದಾಯದವರು ಡಾ.ಎಪಿಜೆ ಅಬ್ದುಲ್ ಕಲಾಂ ಅವರ ದೃಷ್ಟಿಕೋನ ಇಟ್ಟುಕೊಂಡು ಬದುಕಬೇಕು. ಕಬೀರದಾಸರು, ಶಿಶುನಾಳ ಷರೀಫ್, ಇಬ್ರಾಹಿಂ ಸುತಾರ ಅವರನ್ನು ಆದರ್ಶವಾಗಿಟ್ಟುಕೊಂಡು ಜೀವನ ನಡೆಸಬೇಕು ಎಂದರು.

ನವನಗರ ಪಶ್ಚಿಮ ಬಾಗಲಕೋಟೆಯ ಹಿಂದೂ ವಿರಾಟ್ ಸಮ್ಮೇಳನದ ಸಂಚಲನಾ ಸಮಿತಿಯ ಜಿ.ಎನ್ .ಪಾಟೀಲ ಪ್ರಾಸ್ತಾವಿಕವಾಗಿ ಮಾತನಾಡಿದರು. ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳು ಆಶೀರ್ವಚನ ನೀಡಿದರು. ಉಪನ್ಯಾಸಕಿ ರೇಖಾ ಭೋಗಿ ವೇದಿಕೆಯಲ್ಲಿದ್ದರು.

ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನಕ್ಕೆ ಭೂಮಿಪೂಜೆ ಇಂದು

ಹುನಗುಂದ: ಪಟ್ಟಣದ ರೆಡ್ಡಿ ಸಮಗ್ರ ಅಭಿವೃದ್ಧಿ ಸಂಸ್ಥೆಯಿಂದ ಫೆ.22ರಂದು ಭಾನುವಾರ ಬೆಳಗ್ಗೆ 11 ಗಂಟೆಗೆ ರಾಷ್ಟ್ರೀಯ ಹೆದ್ದಾರಿ 50ರ ಹೊಂದಿಕೊಂಡಿರುವ ದಾದ್ಮಿ ಎಚ್‌ಪಿ ಪೆಟ್ರೋಲ್ ಬಂಕ್ ಹತ್ತಿರದಲ್ಲಿರುವ ಸಮಾಜದ ಸ್ವಂತ ಜಾಗದಲ್ಲಿ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ ನೂತನ ದೇವಸ್ಥಾನ ಕಟ್ಟಡದ ಭೂಮಿಪೂಜೆ ನಡೆಯಲಿದೆ ಎಂದು ರೆಡ್ಡಿ ಸಮಗ್ರ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ ಎಂ.ಕಾಮಾ ಹೇಳಿದರು.

ಪಟ್ಟಣದ ಸಮಾಜದ ಜಾಗದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೆಡ್ಡಿ ಸಮಗ್ರ ಅಭಿವೃದ್ಧಿ ಸಂಸ್ಥೆ 2018ರಲ್ಲಿ ಉದಯವಾಗಿದ್ದು, ಸಂಸ್ಥೆಯಿಂದ ಸ್ವಂತ ಜಾಗ ಮಾಡಿ ಇಲ್ಲೊಂದು ಹೇಮರೆಡ್ಡಿ ಮಲ್ಲಮ್ಮನವರ ದೇವಸ್ಥಾನ ಕಟ್ಟಬೇಕು ಅನ್ನುವ ಅನೇಕ ವರ್ಷದ ಕನಸಾಗಿತ್ತು. ಸಮಾಜದ ಶಂಕರಪ್ಪ ಸಂಗಪ್ಪ ಬೆಳ್ಳಿಹಾಳ ಮತ್ತು ಗಿರಿಜಾ ಶಂಕರಪ್ಪ ಬೆಳ್ಳಿಹಾಳ ಅವರು ಜಮೀನ ಖರೀದಿ ಮತ್ತು ದೇವಸ್ಥಾನ ನಿರ್ಮಾಣಕ್ಕೆ ಧನಸಹಾಯ ಮಾಡಿದ್ದಾರೆ ಎಂದರು.

ಉಪಾಧ್ಯಕ್ಷ ಮರಿಯಪ್ಪ ದೇವರೆಡ್ಡಿ ಮಾತನಾಡಿ, ಎರೆಹೊಸಳ್ಳಿ ರೆಡ್ಡಿ ಪೀಠದ ವೇಮನಾನಂದ ಸ್ವಾಮಿಗಳು ನೇತೃತ್ವ ವಹಿಸಿಕೊಳ್ಳುವರು. ನಂದವಾಡಗಿಯ ಮಹಾಂತಲಿಂಗ ಶಿವಾಚಾರ್ಯರು, ಚಿತ್ತರಗಿ ಸಂಸ್ಥಾನ ಮಠ ಹುನಗುಂದದ ಗುರು ಮಹಾಂತ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಅಧ್ಯಕ್ಷತೆ ವಹಿಸಿವರು. ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಭೂಮಿಪೂಜೆ ಅಡಿಗಲ್ಲನ್ನು ನೆರವೇರಿಸಲಿದ್ದಾರೆ. ಕಾನೂನು ಮತ್ತು ಸಂಸದೀಯ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ ಪಾಟೀಲ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ ಕಾಮಾ ಉಪಸ್ಥಿತಿ ವಹಿಸುವರು. ಮಾಜಿ ಸಂಸದ ಆರ್.ಎಸ್.ಪಾಟೀಲ, ಮಾಜಿ ಸಚಿವ ಎಸ್.ಆರ್.ಪಾಟೀಲ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕ ಜೆ.ಟಿ.ಪಾಟೀಲ, ಮಾಜಿ ಶಾಸಕ ವೀರಣ್ಣ ಚರಂತಿಮಠ, ವಿಪ ಸದಸ್ಯರಾದ ಪಿ.ಎಚ್ ಪೂಜಾರಿ, ಹನುಮಂತ ನಿರಾಣಿ, ಸುನೀಲಗೌಡ ಪಾಟೀಲ, ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪುರ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ ಸರನಾಯಕ, ನಾರಾಯಣ ಹಾದಿಮನಿ, ರಾಯನಗೌಡ ತಾಕರೆಡ್ಡಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಕಾರ್ಯದರ್ಶಿ ಪರಶುರಾಮನಗೌಡ ಹನುಮಗೌಡ್ರ, ನಿರ್ದೇಶಕರಾದ ಪ್ರಸನ್ನ ನಾಗರಾಳ, ದ್ಯಾವಪ್ಪ ಪೈಲ, ತಿಮ್ಮನಗೌಡ ಬಾವಿಕಟ್ಟಿ, ಹನುಮಂತಗೌಡ ಬೆನಕನಡೋಣಿ, ರಾಮನಗೌಡ ಬೆಳ್ಳಿಹಾಳ, ಸಂಗಣ್ಣ ನಾಲತವಾಡ, ಸಂಗಮೇಶ ಮನ್ನಾಪೂರ, ಬಸನಗೌಡ ಪೈಲ, ತಿಮ್ಮನಗೌಡ ದಾದ್ಮಿ, ಮಹೇಶ ಬೆಳ್ಳಿಹಾಳ, ಮಲ್ಲಣ್ಣ ಪೈಲ್ ಸೇರಿದಂತೆ ಅನೇಕರು ಇದ್ದರು.



ರೆಡ್ಡಿ ತಂಡಕ್ಕೆ ವೇಮನ್ ಟ್ರೋಫಿ

ಮಹಾಲಿಂಗಪುರ: ಸ್ಥಳೀಯ ಕೋಳಿಗುಡ್ಡ ಕ್ರಿಕೆಟ್ ಮೈದಾನದಲ್ಲಿ ರೆಡ್ಡಿ ಕ್ರಿಕೆಟ್ ಅಕಾಡೆಮಿ ವತಿಯಿಂದ ಹಮ್ಮಿಕೊಂಡ ಅಂತರ್ ಶಿಬಿರ ಬಾಲಕರ 14 ವರ್ಷದೊಳಗಿನ ವಯೋಮಿತಿಯ ವೇಮನ್ ಟ್ರೋಫಿ ಲೆದರ್ ಬಾಲ್ ಕ್ರಿಕೆಟ್ ಟೂರ್ನಮೆಂಟ್‌ನ್ನಲ್ಲಿ ಸ್ಥಳೀಯ ರೆಡ್ಡಿ ಕ್ರಿಕೆಟ್ ಅಕಾಡೆಮಿ ತಂಡ ಅಮೋಘ ಪ್ರದರ್ಶನ ನೀಡುವ ಮೂಲಕ ವಿಜೇತ ತಂಡವಾಗಿ ನಗದು ಮತ್ತು ವೇಮನ್ ಟ್ರೋಫಿ ತನ್ನದಾಗಿಸಿಕೊಂಡಿತು.

ಅಂತಿಮ ಹಂತದ ಪಂದ್ಯದಲ್ಲಿ ಮಹಾಲಿಂಗಪುರ ನಗರದ ರೆಡ್ಡಿ ಕ್ರಿಕೆಟ್ ಅಕಾಡೆಮಿ ತಂಡ ಮೊದಲು ಬ್ಯಾಟಿಂಗ್ ಮಾಡಿ20 ಓವರ್ ಗಳಲ್ಲಿ 5 ಹುದ್ದರಿಗೆ 157 ಓಟ್ ಗಳನ್ನು ಗಳಿಸಿತು.ತಂಡದ ಆಟಗಾರ ಮಹ್ಮದ್ ಜಿಯಾನ್ ಸಾಲೇವಾಲೆ 56 ಎಸೆತಗಳಲ್ಲಿ 6 ಬೌಂಡರಿ ಸೇರಿದಂತೆ 56 ರನ್ ಮತ್ತು ಬಾಲಿಂಗ್ ವಿಭಾಗದಲ್ಲಿ 8 ಓಟ್ ಗಳನ್ನು ನೀಡಿ 3 ವಿಕೆಟ್ ಕಿತ್ತು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿ ಪಂದ್ಯ ಪುರುಷ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ನಂತರ ಬ್ಯಾಟ್ ಮಾಡಿದ ಬೆಳಗಾವಿ ಇಎಸ್ ಕೆ ಕ್ರಿಕೆಟ್ ಅಕಾಡೆಮಿ 17.4 ಓವರ್ ಗಳಲ್ಲಿ ಕೇವಲ 97 ಓಟಗಳಿಗೆ ಆಲೌಟ್ ಆಗಿ 50 ಓಟ್ ಗಳ ಅಂತರದಿಂದ ಸೋಲು ಕಂಡು ದ್ವಿತೀಯ ಸ್ಥಾನದ ನಗದು ಮೊತ್ತ ಮತ್ತು ಟ್ರೋಫಿ ಪಡೆಯಿತು.

ಈ ಪಂದ್ಯಾವಳಿಯಲ್ಲಿ ಅಕಾಡೆಮಿ ತಂಡಗಳಾದ ರೆಡ್ಡಿ ಕ್ರಿಕೆಟ್ ಮಹಾಲಿಂಗಪುರ, ರಾಯಲ್ ಹಾರೂಗೇರಿ,ಕೆ.ಜೆ.ಸೋಮಯ್ಯ ಸಮೀರವಾಡಿ,ಸಿಬಿಎಸ್ಸಿ ಅಂಕಲಿ,ದ ವಾಲ್ ಕ್ರಿಕೆಟ್ ರಾಯಭಾಗ, ರಾಯಲ್ ಕ್ರಿಕೆಟ್ ಕುಡಚಿ,ಎಸ್.ಕೆ. ಕ್ರಿಕೆಟ್ ಬೆಳಗಾವಿ ಮತ್ತು ಡಾ.ಸಿಧ್ಧಾಂತ ದಾನಿಗೊಂಡ ತೇರದಾಳ ತಂಡಗಳು ಭಾಗವಹಿಸಿದ್ದವು.ಬೆಳಗಾವಿಯ ಸಚಿನ್ ಟಿ. ಬೆಸ್ಟ್ ಬ್ಯಾಟರ್, ಶ್ರೇಯಸ್ .ಪಿ. ಬೆಸ್ಟ್ ಬೌಲರ್, ಮಹಾಲಿಂಗಪುರದ ಆರ್ಯನ್ ತುಬಾಕಿ ಬೆಸ್ಟ್ ವಿಕೆಟ್ ಕೀಪರ್ ಪ್ರಶಸ್ತಿಗಳನ್ನು ಪಡೆದರು.

ಡಾ.ಅನುಪ ಹಂಚಿನಾಳ, ರಾಜು ನಂದೆಪ್ಪನವರ, ಗುರು ಜಂಬಗಿ, ರವಿ ಕಟಗಿ, ಇಲಿಯಾಸ ಯಾದವಾಡ, ಆನಂದ ಪಟ್ಟಣಶೆಟ್ಟಿ, ಸಂತೋಷ ಜಮಖಂಡಿ, ವಿಜಯ ಲಕ್ಕಿಲಿ, ಸುಮಿತ ನಾಗನೂರ, ಉಲ್ಲಾಸ ಪಟ್ಟಣಶೆಟ್ಟಿ, ಪ್ರವೀಣ ಗಣಾಚಾರಿ, ಹನಮಂತ ಕಣಬೂರ, ಸಾಗರ ಮಠದ, ರಾಜು ಜವಳಗಿ, ಆನಂದ ಮಕ್ಕಳಗೇರಿಮಠ ಇದ್ದರು.



ಆಸ್ಕಿ ಆಸ್ಪತ್ರೆಯಲ್ಲಿ ಸುಸಜ್ಜಿತ ಕ್ಯಾತ್ ಲ್ಯಾಬ್ ಉದ್ಘಾಟನೆ ಇಂದು: ಪ್ರೀತಿ

ಬಾಗಲಕೋಟೆ: ನವನಗರದ ಆಸ್ಕಿ ಸೂಪರ್ ಸ್ಪೇಷಾಲಿಟಿ ಆಸ್ಪತ್ರೆಯಲ್ಲಿ ಫೆ.22ರಂದು ಸುಸಜ್ಜಿತ ಕ್ಯಾತ್ ಲ್ಯಾಬ್ ಉದ್ಘಾಟನೆ ನಡೆಯಲಿದೆ ಎಂದು ಆಸ್ಪತ್ರೆಯ ಮುಖ್ಯಸ್ಥೆ, ವೈದ್ಯೆ ಪ್ರೀತಿ ಆಸ್ಕಿ ತಿಳಿಸಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ಕಿ ಆಸ್ಪತ್ರೆ ಆರಂಭಾಗಿ ಒಂದು ವರ್ಷ ಪೂರ್ಣಗೊಂಡಿದೆ. ಜಿಲ್ಲೆಗಳ ಜನರಿಗೆ ಉತ್ತಮ ಸೇವೆ ನೀಡುತ್ತಿದೆ. ಅಲ್ಪಾವಧಿಯಲ್ಲಿ ಗುಣಮಟ್ಟದ, ನೈತಿಕ ಮತ್ತು ರೋಗಿ-ಸ್ನೇಹಿ ಸೇವೆ ನೀಡುವ ಮೂಲಕ ಆಸ್ಕಿ ಆಸ್ಪತ್ರೆ ಸಾರ್ವಜನಿಕರ ವಿಶ್ವಾಸ ಮತ್ತು ಮನ್ನಣೆ ಗಳಿಸಿದೆ ಎಂದರು.

ಆಸ್ಕಿ ಆಸ್ಪತ್ರೆಯಲ್ಲಿ ನಗರದಲ್ಲಿ ಇರುವ ಆಸ್ಪತ್ರೆಗಳಿಗಿಂತ ಕಡಿಮೆ ದರದಲ್ಲಿ ರೋಗಿಗಳಿಗೆ ಸೇವೆಯನ್ನು ನೀಡುತ್ತಿದೆ. ಆಸ್ಪತ್ರೆಯ ಕಟ್ಟಡ ದೊಡ್ಡದಾಗಿದ್ದರೂ ನಮ್ಮಲ್ಲಿ ಒಳ್ಳೆಯ ಸೇವೆಯನ್ನು ನೀಡುತ್ತಾ ಕಡಿಮೆ ದರದಲ್ಲಿ ರೋಗಿಗಳಿಗೆ ಅನುಕೂಲವಾಗುಂತೆ ಮಾಡಿದ್ದೇವೆ. ಕಳೆದ ಒಂದು ವರ್ಷದಲ್ಲಿ 10 ಸಾವಿರ ಜನರು ಓಪಿಡಿ ಚಿಕಿತ್ಸೆ ಪಡೆದಿದ್ದಾರೆ. 100 ಐಪಿಡಿ, 500 ಜನ ರೋಗಿಗಳಿಗೆ ಶಸ್ತ್ರಚಿಕಿತ್ಸೆಯನ್ನು ಆಸ್ಪತ್ರೆಯಲ್ಲಿ ಮಾಡಲಾಗಿದೆ. ಆಸ್ಪತ್ರೆಯಲ್ಲಿ ಇರುವ ರೋಗಿಗಳಿಗೆ ಇನ್ಫೆಕ್ಷನ್ ಆಗದಂತೆ ಕ್ರಮ ವಹಿಸಲಾಗಿದೆ. ನಮ್ಮ ಆಸ್ಪತ್ರೆಗೆ ಬಂದ ರೋಗಿಗಳು ಮರಳಿ ಇನ್ಫೆಕ್ಷನ್ ಆಗಿದೆ ಎಂದು ಬಂದಿಲ್ಲ ಅಷ್ಟೊಂದು ಒಳ್ಳೆಯ ಸೇವೆ ನೀಡುತ್ತಿದ್ದೇವೆ ಎಂದರು.

ನಮ್ಮ ಆಸ್ಪತ್ರೆಯಲ್ಲಿ ಕವಚ ಎಂಬ ಸ್ಕೀಂ ಜಾರಿಗೆ ತಂದಿದ್ದೇವೆ ಇದರಲ್ಲಿ ನೋಂದಾಯಿಸಿದ ಕುಟುಂಬದ ನಾಲ್ವರಿಗೆ ರಿಯಾಯ್ತಿ ದರದಲ್ಲಿ ಚಿಕಿತ್ಸೆ ಬಿಲ್‌ದಲ್ಲಿಯೂ ಕಡಿಮೆ ಮಾಡುವ ಅವಕಾಶ ಇದೆ ಎಂದು ಹೇಳಿದರು.

ಆಸ್ಪತ್ರೆಯು ನಾರಾಯಣ ಹೃದಯಾಲಯದ ಜತೆಗೆ ಹೊಂದಾಣಿಕೆ ಮಾಡಿಕೊಂಡಿದ್ದು ಕಡಿಮೆ ದರದಲ್ಲಿ ಹೃದಯಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ ಕೂಡ ನಮ್ಮಲ್ಲಿ ಲಭ್ಯವಿದೆ ಎಂದರು.

ಡಾ.ವಿವೇಕಾನಂದ ಗಜಪತಿ, ಡಾ.ಗುರುಪ್ರಸಾದ ಡಾ.ಮುರುಳಿಧರ ನಾಯ್ಕ,ಡಾ.ಶಶಿಕುಮಾರ ಪಟ್ಟಣಶೆಟ್ಟಿ, ಡಾ.ವಿಜಯ ಸಿಂಗ್ ಇದ್ದರು.

'ನನ್ನ ಪಯಣ ವೃತ್ತಿ ಜೀವನದತ್ತ' ಕಾರ್ಯಕ್ರಮ: ಎತ್ತಿನ ಬಂಡಿ ಮೆರವಣಿಗೆ

ರನ್ನ ಬೆಳಗಲಿ: ಪಟ್ಟಣದ ಸಿದ್ಧಾರೂಢ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಮತ್ತು ಇಂಡಿಯಾ ಲಿಟರಸಿ ಪ್ರಾಜೆಕ್ಟ್(ಐಎಲ್‌ಪಿ) ಸಹಯೋಗದೊಂದಿಗೆ ಶುಕ್ರವಾರನನ್ನ ಪಯಣ ವೃತ್ತಿಜೀವನದತ್ತಎಂಬ ಕಾರ್ಯಕ್ರಮ ಎತ್ತಿನಬಂಡಿ ಭವ್ಯ ಮೆರವಣಿಗೆಯ ಮೂಲಕ ನಡೆಯಿತು.



ರೋಹಿಣಿ ಸಮೂಹ ಸಂಸ್ಥೆಯ ಸಂಸ್ಥಾಪಕ ಡಾ.ಮಲ್ಲಪ್ಪ ಕಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಯಾವುದೇ ವೃತ್ತಿಯಲ್ಲಿ ಯಶಸ್ಸು ಸಿಗಬೇಕಾದರೆ ಪ್ರತಿಯೊಂದು ವಿಷಯದ ಆಳವಾದ ಅಧ್ಯಯನ ಮಾಡಬೇಕಾಗುತ್ತದೆ. ಸಾಧಿಸುವವರಿಗೆ ಸಾಕಷ್ಟು ಹಾದಿಗಳಿವೆ. ಪ್ರತಿ ಹಂತದ ಉದ್ಯೋಗದಲ್ಲಿ ಹೊಸತನ ವಿರುತ್ತದೆ. ವೃತ್ತಿಯನ್ನು ಗೌರವಿಸಿದಾಗ ಮಾತ್ರ ಪ್ರವೃತ್ತಿ ಬೆಳೆಯುತ್ತದೆ ಎಂದರು.

ಅಧ್ಯಯನದ ಕೆಲಸಕ್ಕೆ ಯಾವುದೇ ಪದವಿಗಳು ಬೇಕಾಗುವುದಿಲ್ಲ, ದಡ್ಡ ಅಂತ ಸಂಕೋಚ ಪಟ್ರೆ, ಯಾವುದೇ ಸಾಧನೆ ಮಾಡಕ್ ಆಗುವುದಿಲ್ಲ, ಸಾಧಿಸುವ ಛಲವೊಂದಿದ್ದರೆ ಬೆಟ್ಟ ಕಡಿದು ದಾರಿ ಮಾಡಬಹುದು. ಹೈನುಗಾರಿಕೆ ಕೃಷಿಯಲ್ಲಿ ಅಗಾಧವಾದ ಆರೋಗ್ಯವನ್ನು ಜನರಿಗೆ ನಮ್ಮ ರೋಹಿಣಿ ಸಂಸ್ಥೆಯಿಂದ ಹಾಲಿನ ಮೂಲಕ ನೀಡುತ್ತಾ ಬಂದಿದೆ ಎಂದರು. ವಿದ್ಯಾರ್ಥಿಗಳು ವಿವಿಧ ರೀತಿಯ ಉದ್ಯೋಗದವೇಷಭೂಷಣ ಧರಿಸಿ ದ್ದರು. ಟ್ರ್ಯಾಕ್ಟರ್ ಎತ್ತಿನ ಬಂಡಿಯ ಭವ್ಯ ಮೆರವಣಿಗೆ ಉದ್ದಕ್ಕೂ ಮೆರಗನ್ನು ತಂದಿತು. ಜಮಖಂಡಿಯ ವೃತ್ತಿ ಮಾರ್ಗದರ್ಶನದ ಮಾರ್ಗದರ್ಶಕಿ ಶ್ರುತಿ ಮಾಳಿ ಪ್ರಸ್ತಾವಿಕವಾಗಿ ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಗಿರೀಶ ಸಂಕ್ರಟ್ಟಿ, ಎಂ.ಎ.ಮುಗಳಖೋಡ, ಎಂ.ಬಿ. ಮುರಗೋಡ, ಎಂ.ವಿ.ಹೊಸೂರ, ಎಸ್.ಎಂ.ಮೇಗಾಡಿ, ಲಕ್ಷ್ಮಿ ಶಾಸ್ತ್ರಿ, ಲಕ್ಷ್ಮೀ ಮಂಟೂರ, ಕಿರಣ ಪವಾರ, ರವಿ ಹಿರೇಕಲ್ಲಠ, ಬಾಲಕೃಷ್ಣ ಚೋಪಡೆ ಉಪಸ್ಥಿತರಿದ್ದರು.

ಕಲ್ಲು ತೂರಾಟ ಖಂಡಿಸಿ ಮುಧೋಳದಲ್ಲಿ ಪ್ರತಿಭಟನೆ

ಮುಧೋಳ: ಶಿವಾಜಿ ಜಯಂತಿ ಮೆರವಣಿಗೆ ವೇಳೆ ಬಾಗಲಕೋಟೆಯಲ್ಲಿ ನಡೆದ ಕಲ್ಲು ತೂರಾಟ ಖಂಡಿಸಿ ನಗರದ ಶಿವಾಜಿ ವೃತ್ತದಲ್ಲಿ ಹಿಂದೂಪರ ಸಂಘಟನೆ ಕಾರ್ಯಕರ್ತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಹಿಂದೂ ಮುಖಂಡ ಹಾಗೂ ಮಾತೃ ಸುರಕ್ಷಾ ಉತ್ತರ ಪ್ರಾಂತ ಪ್ರಮುಖ ವೆಂಕಣ್ಣ ಕಳ್ಳಿಗುದ್ದಿ ಅವರು, ನಿನ್ನೆ ನಡೆದ ಘಟನೆಯ ಆರೋಪಿಗಳನ್ನು ಬಂಧಿಸದಿದ್ದರೆ ಕಾರ್ಯಕರ್ತರ ನಡೆ ಜಿಲ್ಲೆಯ ಕಡೆ ಎಂದು ಕರೆಯನ್ನು ನೀಡಲಾಗುವುದು ಎಂದು ಎಚ್ಚರಿಸಿದರು.

ನಿನ್ನೆ ನಡೆದ ಘಟನೆವು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ವೈಫಲ್ಯದಿಂದ ಈ ಘಟನೆ ನಡೆದಿದೆ, ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದೂ ಮುಖಂಡ ಶಂಕರಗೌಡ ಪಾಟೀಲ ಮಾತನಾಡಿ, ಶಾಂತ ರಿತಿಯಿಂದ ನಡೆದ ಶಿವಾಜಿ ಮಹಾರಾಜರ ಮೆರವಣಿಗೆಯಲ್ಲಿ ಪಂಕ ಮಸೂತಿಯಿಂದ ಹಿಂದೂ ಕಾರ್ಯಕರ ಮೇಲೆ ಕಲ್ಲು ಹಾಗೂ ಚಪ್ಪಲಿ ಎಸೆದಿದ್ದು ಇದು ಹಿಂದೂ ಧರ್ಮಕ್ಕೆ ಮಾಡಿದ ಅಪಮಾನ, ಹಿಂದುಗಳನ್ನು ಹತ್ತಿಕ್ಕುವ ಹುನ್ನಾರ, ಅಲ್ಲದೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ವೈಫಲ್ಯ ಎದ್ದು ಕಾಣುತ್ತಿದೆ



ಮಸೀದಿಯಲ್ಲಿ ಇದ್ದಂತ 200 ಇಂದ 300 ಜನರನ್ನು ಬಂಧಿಸಬೇಕು ಬಂಧಿಸದಿದ್ದರೆ ಹೋರಾಟ ಮಾಡಲಾಗುವುದು ಎಂದು ಹೇಳಿದರು.

ಮೆರವಣಿಗೆ ಮೇಲೆ ಕಲ್ಲು ತೋರಾಟ ನಡೆಸಿದ ಹಾಗೂ ಅದಕ್ಕೆ ಕುಮ್ಮಕ್ಕು ನೀಡಿದ ಎಲ್ಲರನ್ನೂ ಬಂಧಿಸಬೇಕು ಎಂದು ಆಗ್ರಹಿಸಿದರು. ದಿಢೀರನೆ ರಸ್ತೆ ಸಂಚಾರ ತಡೆದ ಪರಿಣಾಮ ಕೆಲಹೊತ್ತು ವಾಹನ ಸವಾರರು ಪರದಾಡುವಂತಾಯಿತು.

ಸ್ಥಳದಲ್ಲಿ ಕೃಷ್ಣ ಹಸರಡ್ಡಿ, ಕೃಷ್ಣ ಸುಲಾಕೆ, ಶಂಕರಗೌಡ ಪಾಟೀಲ್, ಆನಂದ್ ಬನ್ನೂರು, ಸತೀಶ್ ಹಡಪದ, ಪುಂಡಲಿಕ ಮೆಹತೆ, ಮುತ್ತು ಕದಂಬ, ಹಿಂದೂ ಕಾರ್ಯಕರ್ತರು ಇದ್ದರು.

ಮರೆಮಾಚಿದ ಮಾನವೀಯತೆ: ಹೆಗಡೆ

ಜಮಖಂಡಿ: ತಂತ್ರಜ್ಞಾನ ಬೆಳೆದಂತೆ ಮಾನವೀಯತೆ ಮರೆಮಾಚಿದೆ. ಜಾತೀಯತೆ ತಾಂಡವಾಡುತ್ತಿದೆ. ನಮ್ಮೊಳಗಿನ ಮಲೀನತೆ ತೊಲಗದೇ ಹೋದರೆ ಯಾವ ತಂತ್ರಜ್ಞಾನಗಳು ಏನು ಮಾಡಲಾಗದು ಎಂದು ಸಂತಕವಿ ಕನಕದಾಸ ಮತ್ತು ತತ್ವಪದಕಾರ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿ ಭಾರತಿ ಹೆಗಡೆ ಹೇಳಿದರು.

ನಗರದ ಬಿಎಲ್‌ಡಿಇ ಕಾಲೇಜಿನಲ್ಲಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಹಾಗೂ ಬಿಎಲ್‌ಡಿಇ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಬಸವಣ್ಣ ಮತ್ತು ಕನಕದಾಸರ ತೌಲನಿಕ ನೋಟ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು. ಬಸವಣ್ಣ ಮತ್ತು ಕನಕದಾಸರು ಜಾತಿರಹಿತ, ಸಮಾನತೆ, ಕಾಯಕ ಆಧಾರಿತ ಸಮಾಜವನ್ನು ನಿರ್ಮಿಸಿದ ದಾರ್ಶನಿಕರು. ಬಸವಣ್ಣನವರ ದಯೆ-ಅನುಭವ ಮಂಟಪ ಹಾಗೂ ಕನಕದಾಸರ ಸಮಾನತೆಯ ಕೀರ್ತನೆಗಳು ಸಮಾಜಕ್ಕೆ ಶಾಶ್ವತ ಸ್ಫೂರ್ತಿಯಾಗಿವೆ ಎಂದರು.



ಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಎಸ್.ಎಚ್.ಲಗಳಿ ಕಾರ್ಯಕ್ರಮ ಉದ್ಘಾಟಿಸಿದರು. ಪ್ರಾಂಶುಪಾಲ ಡಾ.ಪಿ.ಡಿ.ಪೋಳ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಚಾರ ಗೋಷ್ಠಿಯಲ್ಲಿ ನೇಸರಗಿಯ ಡಾ.ವಿನಯ ನಂದಿಹಾಳ, ಕೊಪ್ಪಳದ ಡಾ.ಪಾರ್ವತಿ ಕನಕಗಿರಿ, ರಾಣೆಬೆನ್ನೂರಿನ ಡಾ.ರವಿ ಎಂ ವಿಚಾರ ಮಂಡಿಸಿದರು. ಡಾ.ಆನಂದ ಉಪ್ಪಾರ, ಉಪಪ್ರಾಂಶುಪಾಲ ಡಾ.ಡಿ.ಎಸ್ .ನಿಟ್ಟೂರ, ಡಾ.ರವಿಶಂಕರ, ಪ್ರೊ. ಮಲ್ಲಿಕಾರ್ಜುನ ಬೀರಣ್ಣ, ನಾಗಪ್ಪ ಸನದಿ, ಬಿ.ಎನ್.ಅಸ್ಕಿ, ಎಸ್.ಪಿ.ಮಟೋಳಿ, ಡಾ.ಉತ್ತಮ ವಡಗೊಲೆ, ಡಾ.ಎಲ್.ಎಸ್ .ಪಡತಾರೆ, ಪ್ರೊ.ಶ್ರೀನಿವಾಸ ಕಟ್ಟಿಮನಿ, ಪ್ರೊ.ಎಸ್.ಪಿ.ಗದ್ಯಾಳ, ಉತ್ತಮ ಕಾಂಬಳೆ ಇದ್ದರು.

ವಿಶಿಷ್ಟಚೇತನರಿಗೆ ವಿಶೇಷ ಸಾಧನ-ಸಲಕರಣೆ ವಿತರಣೆ

ಬೀಳಗಿ: ವಿಶಿಷ್ಟಚೇತನರಿಗೆ ಕೇವಲ ಅನುಕಂಪ ತೋರದೆ, ಅವರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಮಾಜಿ ಸಚಿವ ಎಸ್.ಆರ್.ಪಾಟೀಲ ಹೇಳಿದರು.

ತಾಲೂಕಿನ ಕೊರ್ತಿ ಪುನರ್ವಸತಿ ಕೇಂದ್ರದ ಸಮುದಾಯ ಭವನದಲ್ಲಿ ಬೀಳಗಿ ಪಟ್ಟಣದ ಮಾತೃಶಕ್ತಿ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಎಪಿಡಿ ಸಂಸ್ಥೆಯ ಸಹಯೋಗದಲ್ಲಿ ವಿಶೇಷ ಸಾಧನ-ಸಲಕರಣೆಗಳ ವಿತರಣೆ ಮತ್ತು ಅಳತೆ ಹಾಗೂ ಮಾಪನ ಶಿಬಿರದಲ್ಲಿ ಪಾಲ್ಗೊಂಡು 20 ಮಕ್ಕಳಿಗೆ ಅಗತ್ಯತೆಯುಳ್ಳ ವಿಶೇಷ ಸಾಧನ-ಸಲಕರಣೆಗಳನ್ನು ವಿತರಿಸಿ ಮಾತನಾಡಿ, ಸಂಸ್ಥೆಯ ಸೇವೆ ಶ್ಲಾಘಿಸಿದರು.

ಅನೇಕ ವಿಕಲಚೇತನರು ಈ ಶಿಬಿರದ ಸದುಪಯೋಗ ಪಡೆದು



ಕೊಂಡಿದ್ದು, ಸಂಸ್ಥೆಯ ಈ ಜನಪರ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತಪಡಿಸಿದರು.

ಎಪಿಡಿ ಸಂಸ್ಥೆಯ ನಾಗೇಶ, ಸಸ್ಮಿತಾ, ಮನೋಜ ಹಾದಿಮನಿ, ಕಿರಣ ಪಾಟೀಲ, ಎಂಆರ್ ಡಬ್ಲ್ಯೂ ಕಾವ್ಯಾ ಛಬ್ಬಿ ಅವರು ಶಿಬಿರದ ತಾಂತ್ರಿಕ ಪ್ರಕ್ರಿಯೆಗಳನ್ನು ನಡೆಸಿಕೊಟ್ಟರು. ಈ ವಿಕಲಚೇತನರ ದೈಹಿಕ ಅಗತ್ಯಕ್ಕೆತಕ್ಕಂತೆ ಅಳತೆಗಳನ್ನು ಪಡೆದು, ಅವರಿಗೆ ಸೂಕ್ತವಾದ ಸಾಧನಗಳನ್ನು ಒದಗಿಸುವ ಕುರಿತು ಮಾಹಿತಿ ನೀಡಲಾಯಿತು.

ಸಂಸ್ಥೆಯು ಸಿಬ್ಬಂದಿಗಳಾದ ಭಾಗ್ಯಶ್ರೀ ಧೂಪದ, ಭಾಗ್ಯಾ ಭಗವತಿ, ಹುಲಿಗೆಮ್ಮ ಹುಲಗನ್ನವರ ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದರಲ್ಲದೇ, ವಿವಿಧ ಗ್ರಾಮಗಳಿಂದ ಆಗಮಿಸಿದ್ದ ವಿಆರ್ ಡಬ್ಲ್ಯೂ ಪ್ರತಿನಿಧಿಗಳು ವಿಕಲಚೇತನರಿಗೆ ಮಾರ್ಗದರ್ಶನ ನೀಡುವಲ್ಲಿ ಸಹಕರಿಸಿದರು.

ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ಶ್ರೀದೇವಿಪ್ಯಾಟಿಮಠ, ಡಾ.ಪಾರ್ವತಿ ಚಟ್ಟೇರ, ಬಸವರಾಜ ಮಂಟೂರ, ಮಾತೃಶಕ್ತಿ ಸಂಸ್ಥೆ ಅಧ್ಯಕ್ಷ ರವಿಕುಮಾರ ನಾಗನಗೌಡರ, ಸದಸ್ಯರು ಉಪಸ್ಥಿತರಿದ್ದರು. ಅಕ್ಷಯ ನಾಯ್ಕರ ನಿರೂಪಿಸಿ, ವಂದಿಸಿದರು.

ಕಿರುಸುದ್ದಿ

ಸ್ಮಾರ್ಟ್‌ಕಾರ್ಡ್ ಹೆಸರಿನಲ್ಲಿ ಶಕ್ತಿ ಯೋಜನೆ ದುರ್ಬಲ: ಕೊಂಡಗೂಳಿ

ವಿಜಯಪುರ: ಸ್ಮಾರ್ಟ್‌ಕಾರ್ಡ್ ಹೆಸರಿನಲ್ಲಿ ಶಕ್ತಿ ಯೋಜನೆ ದುರ್ಬಲಗೊಳಿಸುವ ಹುನ್ನಾರ ನಡೆಯುತ್ತಿದ್ದು, ಕೂಡಲೇ ಈ ಪ್ರಕ್ರಿಯೆಯನ್ನು ಕೈ ಬಿಡಬೇಕು ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಜಿಲ್ಲಾ ಘಟಕದ ಕಾರ್ಯದರ್ಶಿ ಶಿವಬಾಳಮ್ಮ ಕೊಂಡಗೂಳಿ ಒತ್ತಾಯಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಕಲ್ಪಿಸುವ ಶಕ್ತಿ ಯೋಜನೆಯಿಂದಾಗಿ ಮಹಿಳೆಯರ ಆದಾಯ ಮತ್ತು ಉಳಿತಾಯ ಹೆಚ್ಚಾಗಿದೆ. ಆಧಾರ್‌ಕಾರ್ಡ್ ತೋರಿಸಿ ಈ ರಾಜ್ಯದ ಪ್ರಜೆ ಎಂದು ಖಾತ್ರಿಪಡಿಸಿದರೆ ಸಾಕು, ರಾಜ್ಯದ ಎಲ್ಲ ಮಹಿಳೆಯರು ಶಕ್ತಿ ಯೋಜನೆಯ ಪ್ರಯೋಜನ ಪಡೆಯಬಹುದು ಎಂಬುದು ನಿಯಮ. ಆದರೆ ರಾಜ್ಯ ಸರ್ಕಾರ ಸದ್ಯ ವಿತರಿಸಲು ಹೊರಟಿರುವ ಸ್ಮಾರ್ಟ್‌ಕಾರ್ಡ್‌ನಿಂದ ಮಹಿಳೆಯರಿಗೆ ಅದರಲ್ಲೂ ಗ್ರಾಮಾಂತರ ಹಾಗೂ ನಗರ ಪ್ರದೇಶದ ಬಡ ಮತ್ತು ಅಶಿಕ್ಷಿತ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶವನ್ನು ಕೈತಪ್ಪಿಸುವ ಸಾಧ್ಯತೆ ಹೊಂದಿದೆ. ಹಾಗೆಯೇ ಭ್ರಷ್ಟರಿಗೆ ದುಡ್ಡು ಮಾಡಲು ಅವಕಾಶ ಕಲ್ಪಿಸಿದಂತಾಗುತ್ತದೆ. ರಾಜ್ಯದ ಮಹಿಳೆಯರಿಗೆ ಯಾವುದೇ ರೀತಿಯ ವರ್ಗ, ಶ್ರೇಣಿಯನ್ನು ನೋಡದೆ ಘೋಷಿಸಿರುವ ಈ ಯೋಜನೆಯನ್ನು ಸ್ಮಾರ್ಟ್‌ಕಾರ್ಡ್ ಹೆಸರಿನಲ್ಲಿ ಕುಚೇಷ್ಟೆ ಮಾಡಿದಂತಾಗುತ್ತದೆ. ಹೀಗಾಗಿ ರಾಜ್ಯ ಸರ್ಕಾರ ಈ ಕೂಡಲೇ ಸ್ಮಾರ್ಟ್‌ಕಾರ್ಡ್ ವಿತರಿಸುವ ಕೆಲಸವನ್ನು ಕೈ ಬಿಡಬೇಕು, ರಾಜ್ಯದ ಎಲ್ಲ ಮಹಿಳೆಯರಿಗೂ ಈ ಮೊದಲಿನಂತೆಯೇ ಆಧಾರ್ ಆಧರಿಸಿ ಸೌಲಭ್ಯ ಪಡೆಯಲು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಕೈ ಕಾರ್ಯಕರ್ತರ ವರ್ತನೆ ಖಂಡನೀಯ: ಕಾರಜೋಳ

ವಿಜಯಪುರ: ಅತ್ಯಂತ ಮಹತ್ವದ ಎಐ ಶೃಂಗಸಭೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಅಸಂಬದ್ಧ ರೀತಿಯಲ್ಲಿ ಪ್ರತಿಭಟನೆ ಮಾಡಿರುವುದು ಅಕ್ಷಮ್ಯ ಅಪರಾಧ ಹಾಗೂ ದೇಶದ್ರೋಹದ ಕೃತ್ಯವಾಗಿದೆ. ಭಾರತೀಯ ಭವ್ಯ ಜ್ಞಾನಪರಂಪರೆ ಹಾಗೂ ಘನತೆಗೆ ಕುಂದು ತರುವ ಕೆಲಸವಾಗಿದ್ದು, ಇದು ಕೇವಲ ರಾಜಕೀಯ ಪ್ರತಿಭಟನೆಯಲ್ಲ,



ಅದು ವ್ಯವಸ್ಥಿತವಾಗಿ ನಡೆದ ರಾಷ್ಟ್ರೀಯ ಅವಮಾನ ಎಂದು ಬಿಜೆಪಿ ಎಸ್.ಸಿ.ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ನಮ್ಮ ಭವ್ಯ ಭಾರತ ತಾಂತ್ರಿಕವಾಗಿ ದಿಗ್ಗಜ ರಾಷ್ಟ್ರಗಳಲ್ಲಿ ಒಂದಾಗಿದೆ, ಈ ಮಹತ್ವಕಾಂಕ್ಷೆಯ ಸಾಕಾರ ರೂಪದ ಭಾಗವಾಗಿ ಎಐ ಶೃಂಗ ಸಭೆ ನಡೆಯುತ್ತಿತ್ತು. ಆದರೆ ಈ ಮಹತ್ವದ ಸಭೆಗೆ ಕಾಂಗ್ರೆಸ್ ಕಾರ್ಯಕರ್ತರು ಅಡ್ಡಿ, ಅದರಲ್ಲೂ ಅಸಂಬದ್ಧವಾಗಿ ಅಡ್ಡಿಪಡಿಸಿರುವುದು ಸ್ಪಷ್ಟವಾದ ದೇಶದ್ರೋಹ. ದೇಶದ ಜನತೆಗೆ ಮಾಡಿದ ದೊಡ್ಡ ದ್ರೋಹ, ದೇಶದ ತಾಂತ್ರಿಕ ಪರಿಣಿತರಿಗೆ ಮಾಡಿದ ಘೋರ ಅಪಮಾನ. ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಾಗೂ ಅವರಿಗೆ ಪ್ರೇರಣೆ ನೀಡಿದವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಸುಳ್ಳು ದಾಖಲೆಗಳ ಮೂಲಕ ಪಾಸ್ ಪಡೆದು ವಂಚನೆ ಸಹ ಮಾಡಿದ್ದಾರೆ. ಇದರ ಹಿಂದೆ ದೊಡ್ಡ ಸಂಚು ಅಡಗಿದ್ದು ರಾಷ್ಟ್ರದ ವರ್ಚಸ್ಸಿಗೆ ಧಕ್ಕೆ ತರುವ ಇಂತಹ ಕೃತ್ಯಗಳನ್ನು ಕ್ಷಮಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ.

ಹಿರಿಯ ಸಂಶೋಧಕ ಹುದ್ದೆಗೆ ಅರ್ಜಿ ಆಹ್ವಾನ

ವಿಜಯಪುರ: ನಗರ ಹೊರ ವಲಯ ಹಿಟ್ಟಿನಹಳ್ಳಿಯ ಕೃಷಿ ಮಹಾವಿದ್ಯಾಲಯದ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದ ಅಖಿಲ ಭಾರತ ಜೋಳ ಅಧ್ಯಯನ ಕೇಂದ್ರದಲ್ಲಿ ಯೋಜನೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಲು ಹಿರಿಯ ಸಂಶೋಧಕ (ಸಿನಿಯರ್ ರಿಸರ್ಚ್ ಫೆಲೋ) ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಕೃಷಿಯಲ್ಲಿ ಸ್ನಾತಕೋತ್ತರ ಪದವಿ ಹೊಂದಿದ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತ ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ದ್ವಿಪ್ರತಿಯಲ್ಲಿ ಅರ್ಜಿ ಸಲ್ಲಿಕೆ ಮಾಡಬಹುದಾಗಿದ್ದು, ಫೆ.26 ರಂದು ಬೆಳಗ್ಗೆ 10.30 ಕ್ಕೆ ಪ್ರಾದೇಶಿಕ ಕೃಷಿ ಕೇಂದ್ರದ ಸಹ ಸಂಶೋಧನಾ ನಿರ್ದೇಶಕರ ಕೊಠಡಿಯಲ್ಲಿ ಸಂದರ್ಶನ ನಡೆಯಲಿದೆ. ಆಸಕ್ತರು ಪೂರಕ ಮೂಲ ದಾಖಲಾತಿ, ಧೃಢೀಕೃತ ದಾಖಲಾತಿ, ಫೋಟೋ ಸೇರಿದಂತೆ ಎಲ್ಲ ದಾಖಲಾತಿಗಳೊಂದಿಗೆ ಹಾಜರಾಗಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಗುರುಬಾಯಿ ಕೆಲೂರ ನಿಧನ



ಮುದ್ದೇಬಿಹಾಳ: ಬಾಗಲಕೋಟೆ ಜಿಲ್ಲೆಯ ಬೇವೂರು ಗ್ರಾಮದ ಗುರುಬಾಯಿ ಶಿವಲಿಂಗಪ್ಪ ಕೆಲೂರ(85) ನಿಧನರಾದರು. ನಗರದ ವೀರೇಶ್ವರ ನಗರದ ಸ್ವಗೃಹದಲ್ಲಿ ದಿ.ಚನ್ನಪ್ಪ.ಸಿ.ಕಂಠಿ ಅವರ ಕಿರಿಯ ಸಹೋದರಿಯಾಗಿದ್ದರು.



ನಾಲತವಾಡ: ಸಮೀಪದ ನಾಗಬೇನಾಳ ಗ್ರಾಪಂ ಕಚೇರಿಯಲ್ಲಿ ಸರ್ವಜ್ಞನ ಜಯಂತಿ ನಿಮಿತ್ತ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಪಿಡಿ ಮುರಿಗೆಮ್ಮ ಪೀರಾಪೂರ, ಕಾರ್ಯಕರ್ತೆಯರಾದ ಮಹಾದೇವಿ ಹವಾಲ್ದಾರ, ಬಸಮ್ಮ, ಅನ್ನಪೂರ್ಣ ಕುಂಬಾರ, ಮಲ್ಲಪ್ಪ ಹಡಪದ, ಸಂಗಪ್ಪ ಹುಂಡಿ, ನಾವದಗಿ, ನಾಗಪ್ಪ ಇದ್ದರು.

ಸರ್ವಜ್ಞನ ಸಂದೇಶ ಅರಿಯಿರಿ: ಬಿರಾದಾರ

ದೇವರಹಿಪ್ಪರಗಿ: ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿರುವ ಅಸಮಾನತೆಯನ್ನು ಸಂತ ಕವಿ ಸರ್ವಜ್ಞರು ತ್ರಿಪದಿ ವಚನಗಳ ಮೂಲಕ ತಿದ್ದಿದರು. ಅವರ ವಚನಗಳು ಇಂದಿಗೂ ಪ್ರಸ್ತುತವಾಗಿದ್ದು, ಪ್ರತಿಯೊಬ್ಬರೂ ವಚನಗಳ ಸಂದೇಶವನ್ನು ಅರಿತುಕೊಳ್ಳುವ ಅಗತ್ಯವಿದೆ ಎಂದು ತಹಶೀಲ್ದಾರ್ ನಿಂಗಣ್ಣ ಬಿರಾದಾರ ಹೇಳಿದರು. ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಂತಕವಿ ಸರ್ವಜ್ಞ ಜಯಂತ್ಯುತ್ಸವದಲ್ಲಿ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಸಮಾಜದಲ್ಲಿ ಬದಲಾವಣೆ ಬರಬೇಕಾದರೆ ಮೊದಲು ಪ್ರತಿಯೊಬ್ಬರ ಮನಸ್ಥಿತಿ ಬದಲಾಗಬೇಕು. ಲಿಂಗ, ಜಾತಿ ತಾರತಮ್ಯ ಹೋಗಲಾಡಿಸಿ, ಸಮಾಜದಲ್ಲಿ ಸಮಾನತೆ ತರುವ ಸಲುವಾಗಿ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ತ್ರಿಪದಿ ವಚನಗಳನ್ನು ರಚಿಸಿದ್ದಾರೆ. ಅಂತಹ ಪ್ರತಿಯೊಂದು ವಚನಗಳನ್ನು ಮಕ್ಕಳಿಗೆ ಕಲಿಸಬೇಕು. ಜೊತೆಗೆ ಉತ್ತಮ ಶಿಕ್ಷಣ ನೀಡಬೇಕು ಎಂದು ಸಲಹೆ ನೀಡಿದರು. ಕಸಾಪ ನಿಕಟಪೂರ್ವ ಅಧ್ಯಕ್ಷ ಜಿ.ಪಿ.ಬಿರಾದಾರ ಉಪನ್ಯಾಸ ನೀಡಿ, ಸರ್ವಜ್ಞನು ಗರ್ವದಿಂದ ಕಲಿತವನಲ್ಲ, ಸರ್ವರೊಳು ಒಂದೊಂದು ನುಡಿ ಕಲಿತು ಸರ್ವಜ್ಞನಾದನು. 16ನೇ ಶತಮಾನದಲ್ಲಿ ಸರಳ ಭಾಷೆಯ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಮ್ಮ ತ್ರಿಪದಿಯ ವಚನಗಳ ಮೂಲಕ ತಿದ್ದುವ ಕೆಲಸ ಮಾಡಿದವರಲ್ಲಿ ಕವಿ ಸರ್ವಜ್ಞ ಒಬ್ಬರಾಗಿದ್ದಾರೆ. ಸರ್ವಜ್ಞ ಎಂಬುವುದು ಸರ್ವವನ್ನು ತಿಳಿದವರು ಎಂದರು. ಉಪತಹಸೀಲ್ದಾರ್ ಗಿರಿಜಾಬಾಯಿ ಸಜ್ಜನ ಇದ್ದರು.



ದೇವರಹಿಪ್ಪರಗಿ: ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಭವನದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಂತಕವಿ ಸರ್ವಜ್ಞ ಜಯಂತ್ಯುತ್ಸವ ನಡೆಯಿತು. ಶಿರಸ್ತೇದಾರಗಳಾದ ಸುರೇಶ ಮ್ಯಾಗೇರಿ, ದಶರಥ ಭೋವಿ, ಸಮುದಾಯದ ಮುಖಂಡರಾದ ಶಿವಾನಂದ ಕುಂಬಾರ, ಭೀಮರಾಯ ಕುಂಬಾರ, ಕಾಶಿನಾಥ ಕುಂಬಾರ, ಮಡಿವಾಳಪ್ಪ ಕುಂಬಾರ, ರಮೇಶ ಕುಂಬಾರ, ಬಸವರಾಜ ಕುಂಬಾರ, ಕಾಸಪ್ಪ ಕುಂಬಾರ, ಮಡಿವಾಳಪ್ಪ ಕುಂಬಾರ(ಮುಳಸಾವಳಗಿ), ಚಿದಾನಂದ ಕುಂಬಾರ, ಬಸವರಾಜ ಕುಂಬಾರ, ಬಸವರಾಜ ಭದ್ರಗೊಂಡ, ರವಿ ಮೆಟಗಾರ ಸೇರಿದಂತೆ ಸಾರ್ವಜನಿಕರು ಇದ್ದರು.

ಕಾಂಗ್ರೆಸ್ ಕಚೇರಿ ಮುತ್ತಿಗೆಗೆ ಯತ್ನ | ಬಿಜೆಪಿಗರ ಬಂಧನ-ಬಿಡುಗಡೆ

ಎಐ ಶೃಂಗಸಭೆ ವೇಳೆ ಅಸಂಬದ್ಧ ನಡೆಗೆ ಖಂಡನೆ

ವಿಜಯಪುರ: ಎಐ ಶೃಂಗಸಭೆಗೆ ಅಸಂಬದ್ಧವಾಗಿ ಅಡ್ಡಿಪಡಿಸಿದ ಕಾಂಗ್ರೆಸ್ ನಡೆಯನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ನಗರದ ಕಾಂಗ್ರೆಸ್ ಕಚೇರಿ ಮುತ್ತಿಗೆ ಹಾಕಲು ಯತ್ನಿಸಿದ ವೇಳೆ, 50 ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ಕೆಲಕಾಲ ಬಂಧಿಸಿ, ಬಳಿಕ ಬಿಡುಗಡೆಗೊಳಿಸಿದರು.

ಯುವ ಮೋರ್ಚಾ ಜಿಲ್ಲಾಧ್ಯಕ್ಷ ರಾಘವೇಂದ್ರ ಕಾಪಸೆ, ಕಾಂಗ್ರೆಸ್ ಒಂದು ರೀತಿ ಕ್ಯಾನ್ಸರ್ ಇದ್ದಂತೆ, ಕೃತ್ರಕ ಬುದ್ಧಿಮತ್ತೆಯಲ್ಲಿ ಭಾರತ ಸಾರ್ವಭೌಮತೆಯನ್ನು ಸಾಧಿಸುವ ನಿಟ್ಟಿನಲ್ಲಿ ಮಹತ್ವಾಕಾಂಕ್ಷೆಯ ಶೃಂಗಸಭೆಗೆ ಅಡ್ಡಿಪಡಿಸಿರುವ ಕಾಂಗ್ರೆಸ್ ನಡೆ ಖಂಡನಾರ್ಹ, ಅದು ಅಸಂಬದ್ಧ ರೀತಿಯಲ್ಲಿ ಅಡ್ಡಿಪಡಿಸಿರುವುದು ಖಂಡನಾರ್ಹ, ಇದು ದೇಶಕ್ಕೆ ಮಾಡಿದ ಅವಮಾನ ಎಂದರು.

ಅಂತಾರಾಷ್ಟ್ರೀಯ ಮಟ್ಟದ ಸಮ್ಮೇಳನದಲ್ಲಿ ಇಂತಹ ಘಟನೆಗಳು ನಡೆಯುವುದು ಖಂಡನೀಯ, ಕಾಂಗ್ರೆಸ್ ದೇಶಕ್ಕೆ ನಿಷ್ಠೆ ತೋರಿಸುವುದು ನಿಜವೇ ಆಗಿದ್ದಿದ್ದರೆ ಇಂದು ಜಾಗತಿಕ ಅತಿಥಿಗಳ ಮುಂದೆ ಜಾಗತಿಕ ಎಐ ಸಮ್ಮೇಳನದಲ್ಲಿ ಅರೆಬೆತ್ತಲೆ ಕುಣಿಯುತ್ತಿರಲಿಲ್ಲ, ರಾಜಕೀಯ ವಿರೋಧಕ್ಕಾಗಿ ಇಂತಹ ಕೃತ್ಯ ನಡೆಸಿದವರಿಗೆ ಸಾರ್ವಜನಿಕರೇ ಸರಿಯಾಗಿ ಬುದ್ಧಿ ಕಲಿಸಲಿದ್ದಾರೆ, ಸೋನಿಯಾ ಗಾಂಧಿಗೆ ಜ್ವರ ಬಂದರೆ ಉರುಳುಸೇವೆ



ಮಾಡುವ ಕಾಂಗ್ರೆಸ್ಸಿಗರು ಭಾರತ ಮಾತೆಗೆ ಅವಮಾನ ಮಾಡುತ್ತಿರುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷ ಭಾರತ ಮಾನ ಹರಾಜು ಹಾಕುವ ಪ್ರಯತ್ನ ಮಾಡುವ ಮೂಲಕ ಭಾರತದ ಸಾಂಸ್ಕೃತಿಕತೆ ಹಾಗೂ ತಾಂತ್ರಿಕತೆಯನ್ನೂ ಸಹ ಅಪಮಾನ ಮಾಡಿದೆ ಎಂದರು.ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಳುಗೌಡ ಪಾಟೀಲ, ಈರಣ್ಣ ರಾವೂರ, ಉಮೇಶ ಕಾರಜೋಳ, ಮಹೇಂದ್ರ ನಾಯಕ್, ವಿಜಯಕುಮಾರ ಕುಡಿಗನೂರು, ಭೀಮಾಶಂಕರ ಹದನೂರು, ರಮೇಶ ಬಿದನೂರ, ರಾಜು ಬಿರಾದಾರ, ರವಿಕಾಂತ್ ಬಗಲಿ, ನಗರ ಮಂಡಲ ಅಧ್ಯಕ್ಷ ಸಂದೀಪ ಪಾಟೀಲ, ವಿಜಯ ಜೋಶಿ, ಕೃಷ್ಣ ಗುನ್ನಾಳಕರ, ರಾಜೇಶ್ ತಾವಸೆ, ಚಿನ್ನು ಚಿನಗುಂಡಿ, ಅಶೋಕ ರಾಠೋಡ, ಭೀಮಸಿಂಗ್ ರಾಠೋಡ, ಸಚಿನ್ ಬೊಂಬಳೆ, ಭರತ ಕೋಳಿ, ಭರತ ಕುಲಕರ್ಣಿ, ಚೇತನ ಸಂಗಮು, ರಾಜಕುಮಾರ ಸಗಾಯಿ, ಭಾರತಿ ಬುಯ್ಯಾರ, ವಿಕಾಸ್ ಪದಕಿ, ಬಸಮ್ಮ ಗುಜರಿ, ಜಯಶ್ರೀ ಅಫಜಲಪುರ, ಮಂಥನ ಗಾಯಕವಾಡ, ಅನಿಲ್ ಉಪ್ಪಾರ್, ಸಂಗಮೇಶ ಉಕ್ಕಲಿ, ಶೇಖರ್ ಬಾಗಲಕೋಟ, ರಾಜಶೇಖರ ಬಾಗಲಕೋಟ, ಸ್ವರೂಪ ಸಪ್ತಾಳೆ, ವಿನೋದ ಪತ್ತಾರ, ಶಿವರಾಜ ಮಡಿವಾಳರ ಇದ್ದರು.

> ನಕಲಿ ಗಾಂಧಿ ಮನೆತನಕ್ಕೆ ಮೆಚ್ಚಿಸಲಿಕ್ಕೆ ಈ ಕಾಂಗ್ರೆಸ್ ಕಾರ್ಯಕರ್ತರು ಯಾವ ಮಟ್ಟಕ್ಕೆ ಬೇಕಾದರೂ ಇಳಿಯುತ್ತಾರೆ ಎನ್ನಲು ಇದು ಮತ್ತೊಂದು ನಿದರ್ಶನ. ಕಾಂಗ್ರೆಸ್ ಕಾರ್ಯಕರ್ತರ ಅರೆ ಬೆತ್ತಲೆ ಕುಣಿಯುವುದನ್ನು ಕಂಡು ಸಾರ್ವಜನಿಕರೇ ದಂಡಿಸಿ ಬುದ್ಧಿ ಕಲಿಸಿದ್ದಾರೆ. ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ಕಾಂಗ್ರೆಸ್ ಪಕ್ಷ ಇಡೀ ರಾಷ್ಟ್ರದಿಂದಲೇ ಅಳಿದು ಹೋಗುವ ಸಮಯ ಇನ್ನೂ ದೂರ ಇಲ್ಲ.
>
> ■ ರಾಘವೇಂದ್ರ ಕಾಪಸೆ ಜಿಲ್ಲಾಧ್ಯಕ್ಷ, ಬಿಜೆಪಿ ಯುವ ಮೋರ್ಚಾ

ಮಹಾಯೋಜನೆ ಸಮಗ್ರ ಮಾಹಿತಿ ಒದಗಿಸಿ

ವಿಜಯಪುರ: ವಿಜಯಪುರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅಮೃತ ಯೋಜನೆಯಡಿ ಜಿಐಎಸ್ ಆಧಾರಿತ ತಾತ್ಕಾಲಿಕ ಮಹಾಯೋಜನೆ-2041 (ಪ-11)ರ ಅನುಮೋದನೆಗೊಂಡಿದ್ದು, ಅದರಂತೆ ಅಮೃತ ಯೋಜನೆಯಡಿ ಜಿಐಎಸ್ ಆಧರಿತ ಮಹಾಯೋಜನೆ 2041ರ ಅವಧಿಯವರೆಗಿನ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸಮನ್ವಯತೆ ಸಾಧಿಸಿಕೊಂಡು ಸಮಗ್ರ ಮಾಹಿತಿ ಒದಗಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿಜಯಪುರ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅಮೃತ ಯೋಜನೆಯಡಿ ಜಿಐಎಸ್ ಆಧಾರಿತ ತಾತ್ಕಾಲಿಕ ಮಹಾಯೋಜನೆ-2041ರ ಸಿದ್ಧಪಡಿಸುವ ಕುರಿತು ಕೈಗೊಳ್ಳಬೇಕಾಗಿರುವ ವಿವಿಧ ಕಾಮಗಾರಿಗಳ ಯೋಜನೆಯ ಸಿದ್ಧಪಡಿಸುವ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಭಾರತ ಸರ್ಕಾರದ ಅಮೃತ ಯೋಜನೆಯಲ್ಲಿ ಮೂಲಭೂತ ನಾಗರಿಕ ಸೌಕರ್ಯಗಳಾದ ನೀರು ಸರಬರಾಜು, ಒಳ ಚರಂಡಿ, ನಗರ ಸಾರಿಗೆ, ಉದ್ಯಾನವನಗಳು, ವಿಶೇಷವಾಗಿ ಬಡವರಿಗೆಮತ್ತು ಹಿಂದುಳಿದವರ್ಗದವರ ಗುಣಮಟ್ಟ ಸುಧಾರಣೆ ಉದ್ದೇಶದಿಂದ ನಾಗರಿಕರಿಗೆ ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ದೇಶದ 500 ನಗರಗಳನ್ನು ಗುರುತಿಸಲಾಗಿದೆ. ರಾಜ್ಯದ 26 ನಗರಗಳಲ್ಲಿ ವಿಜಯಪುರ ನಗರವನ್ನು ಅಮೃತ ಯೋಜನೆಯಡಿ ಗುರುತಿಸಿ ಆಯ್ಕೆಯಾಗಿರುತ್ತದೆ. ಮಾಹಿತಿ ಕೈಬಿಟ್ಟು ಹೋಗದಂತೆ ನೋಡಿಕೊಂಡು ಜಿಐಎಸ್ ಆಧಾರಿತ ಮಹಾ ಯೋಜನೆ 2041ಕ್ಕೆ ಸಮಗ್ರ ಮಾಹಿತಿ ಒದಗಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಆದಷ್ಟು ಶೀಘ್ರವಾಗಿ ನಿಖರ ಮಾಹಿತಿ ವಿವರ ಸಲ್ಲಿಸುವಂತೆ ಸೂಚಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗಂಗಾಧರ ಸಂಬಣ್ಣಿ, ಜಲಮಂಡಳಿಯ ಕಾರ್ಯನಿರ್ವಾಹಕ ಅಭಿಯಂತರ ಗೋವಿಂದ, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ, ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಹೆಸ್ಕಾಂ ಅಧೀಕ್ಷಕ ಅಭಿಯಂತರ ಸಿದ್ದಪ್ಪ ಬಿಂಜಗೇರಿ, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ವಿದ್ಯಾಧರ ನ್ಯಾಮಗೊಂಡ ಇತರರು ಇದ್ದರು.



ದೇವಾಲಯ ಮರು ನಿರ್ಮಾಣಕ್ಕೆ ಭೂಮಿಪೂಜೆ ಇಂದು

ಮುದ್ದೇಬಿಹಾಳ: ತಾಲೂಕಿನ ಹಂಡರಗಲ್ ಗ್ರಾಮದ ತ್ರಿಕೂಟೇಶ್ವರ (ಸಂಗಮನಾಥ) ದೇವಾಲಯ ಪುನರ್ ನಿರ್ಮಾಣಕ್ಕಾಗಿ ಕರ್ನಾಟಕ ಸರ್ಕಾರದಿಂದ ಪುರಾತತ್ವ ಇಲಾಖೆ ಹಾಗೂ, ಪ್ರವಾಸೋದ್ಯಮ ಇಲಾಖೆಯ ಇಲಾಖೆಯಿಂದ ಅನುದಾನ ಮಂಜೂರು ಆಗಿದ್ದು ಪುನರ್ ನಿರ್ಮಾಣ ಕಾರ್ಯ ಕೈಗೊಂಡಿದ್ದು ಫೆ.22ರಂದು ಭಾನುವಾರ ದೇವಾಲಯದ ಭೂಮಿಪೂಜೆಗೆ ಆಗಮಿಸುತ್ತಿರುವ ಪುರಾತತ್ವ ಇಲಾಖೆಯ ಡಿವೈಎಸ್ಪಿ ಕರ್ನಾಟಕ ಲೋಕಾಯುಕ್ತ ಬಾಗಲಕೋಟೆ, ವಿಜಯಪುರ ಅಧಿಕಾರಿ ಸುರೇಶ ರೆಡ್ಡಿ ಆಗಮಿಸುತ್ತಿದ್ದಾರೆ. ಗುತ್ತಿಗೆದಾರರು ಹಾಗೂ ಹಂಡರಗಲ್ಲ ಗ್ರಾಮದ ಹಿರಿಯರು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಆಗಮಿಸುತ್ತಿದ್ದಾರೆ ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತ್ರಿಪದಿಗಳಿಂದ ಸಮಾಜಕ್ಕೆ ಬೆಳಕಾದ ಸರ್ವಜ್ಞ

ಚಡಚಣ: ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ-2, ಮರಡಿ ಶಾಲೆಯಲ್ಲಿ ಸರ್ವಜ್ಞರ ಫೋಟೊ ಪೂಜೆ ಮಾಡುವದರ ಮುಖಾಂತರ ಸರ್ವಜ್ಞರ ಜಯಂತಿ ಆಚರಿಸಲಾಯಿತು.

ಬಳಿಕ ಮಾತನಾಡಿದ ಶಿಕ್ಷಕ ಬಸವರಾಜ ಕರಜಗಿ, ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ಮಾತಿಲ್ಲ? ಎಂಬಂತೆ ಸಮಾಜದ ಉದ್ಧಾರಕ್ಕಾಗಿ ಪ್ರತಿಯೊಂದು ವಿಷಯದ ಮೇಲೆ ತ್ರಿಪದಿಗಳ ಮೂಲಕ ಬೆಳಕು ಚೆಲ್ಲಿದ ಮಹಾನ್ ಕವಿ ಸರ್ವಜ್ಞರು ಎಂದು ಹೇಳಿದರು. ಅವರ ತ್ರಿಪದಿಗಳನ್ನು ಅಥೈಸಿಕೊಂಡು ವಿದ್ಯಾರ್ಥಿಗಳು ತಮ್ಮ ಜೀವನ ಹಸನಾಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರ್ವಜ್ಞರು ಸೌಜನ್ಯಶೀಲ ಮತ್ತು ಗೌರವದ ಬದುಕನ್ನು ನಡೆಸಿ ಸಮಾಜ ತಿದ್ದುವ ಕೆಲಸ ಮಾಡಿದರು. ಹಳ್ಳಿಯ ಜಾನಪದ ಭಾಷಾಶೈಲಿಯಲ್ಲಿ ಸಾಮಾನ್ಯ ಜನರಿಗೆ ಮನವರಿಕೆಯಾಗುವ ರೀತಿಯಲ್ಲಿ ವಚನಗಳನ್ನು ರಚಿಸಿದರು. ಇಂದಿನ ಮಕ್ಕಳು ಮತ್ತು ಯುವಜನಾಂಗವು ಅವರ ತತ್ವಗಳನ್ನು ಅರ್ಥಮಾಡಿಕೊಂಡು ಉತ್ತಮ ಸಮಾಜ ನಿರ್ಮಾಣದತ್ತ ಶ್ರಮಿಸಬೇಕು ಎಂದು ಕರಜಗಿ ಹೇಳಿದರು.

ಶಿಕ್ಷಕ ಜಗದೀಶ ಚಲವಾದಿ ಮಾತನಾಡಿ, ಸರ್ವಜ್ಞರ ವಚನಗಳು ಸಾಮಾಜಿಕ ಸುಧಾರಣೆ, ಜಾತ್ಯಾತೀತತೆ, ಮಾನವೀಯ ಮೌಲ್ಯಗಳು ಹಾಗೂ ಸರ್ವಕಾಲಿಕ ಸತ್ಯಗಳನ್ನು ಪ್ರತಿಪಾದಿಸುತ್ತವೆ. ಸರಳ ಮತ್ತು ಆದರ್ಶ ಸಮಾಜ ನಿರ್ಮಾಣಕ್ಕೆ ಅವರು ನಿರಂತರ ಶ್ರಮಿಸಿದ್ದರು ಎಂದು ತಿಳಿಸಿದರು.

ಅಧ್ಯಕ್ಷತೆ ಶಾಲಾ ಮುಖ್ಯ ಶಿಕ್ಷಕ ಮಹಾಂತೇಶ ಉಮರಾಣಿ ವಹಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯ ಲೋಕದಲ್ಲಿ ಸರ್ವಜ್ಞರು ತ್ರಿಪದಿಗಳ ಮೂಲಕ ಸಮಾಜಕ್ಕೆ ಜಾಗೃತಿ ಮೂಡಿಸಿದ ಜನಕವಿ, ಸರಳ ಭಾಷೆಯಲ್ಲಿ ಗಾಢವಾದ ತಾತ್ವಿಕ ಅರ್ಥಗಳನ್ನು ಒಳಗೊಂಡ ಅವರ ತ್ರಿಪದಿಗಳು ಜನಜೀವನಕ್ಕೆ ಹತ್ತಿರವಾಗಿವೆ. ನೈತಿಕ ಮೌಲ್ಯಗಳು, ಮಾನವೀಯತೆ, ಧರ್ಮ ಹಾಗೂ ದುರಾಚಾರಗಳ ವಿರುದ್ಧ ಸ್ಪಷ್ಟ ಸಂದೇಶ ನೀಡುವ ಅವರ ಕಾವ್ಯ ಇಂದಿಗೂ ಪ್ರಸ್ತುತವಾಗಿದೆ ಎಂದರು.

ಶಿಕ್ಷಕಿ ವಿ.ಎಸ್.ಪತ್ತಾರ ಪ್ರಾರ್ಥಿಸಿದರು. ಶಿಕ್ಷಕರಾದ ಮಹಾದೇವ ಐಹೊಳ್ಳಿ, ಮಹಾದೇವ ಆದಿಗೊಂಡೆ, ಸುನಂದಾ ಕೋಟಿ, ಜಯಶ್ರೀ ಗೋಟ್ಯಾಳ, ಅತಿಥಿ ಶಿಕ್ಷಕಿ ಪ್ರೇಮಾ ಧೋತ್ರೆ, ಪ್ರಶಿಕ್ಷಣಾರ್ಥಿ ವಿಜಯಲಕ್ಷ್ಮೀ ಕೋಳಿ ಹಾಗೂ ಅಡುಗೆ ಸಹೋದರಿಯರಾದ ಮಹಾನಂದಾ ಧೋತ್ರೆ, ಸಪೂರಾ ಲಟೋರಿ, ಸವಿತಾ ವಾಲಿಕಾರ, ರಕಮಾ ವಾಘಮೋರೆ, ಕಸ್ತೂರಿ ಸಾಲಮಂಟಪ ಭಾಗವಹಿಸಿದ್ದರು.



ಅಭಿವೃದ್ಧಿ ಕೆಲಸದ ಮೂಲಕ ಆರೋಪಗಳಿಗೆ ಉತ್ತರ: ಮನಗೂಳಿ

ಆಲಮೇಲ: ಮನಗೂಳಿ ಮನತೆನದವರು ಅಧಿಕಾರವದಿಯಲ್ಲಿ ಭೂ ಕಬಳಿಕೆ ಮಾಡಿದ್ದಾರೆ ಎಂದು ಮಾಜಿ ಶಾಸಕ ರಮೇಶ ಭೂಸನೂರ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅವರ ಆರೋಪಗಳಿಗೆ ಅಭಿವೃದ್ಧಿ ಕೆಲಸದ ಮೂಲಕ ಉತ್ತರಿಸುವೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಶುಕ್ರವಾರ ದೇವಣಗಾಂವ ಗ್ರಾಮದ ಹತ್ತಿರ ಬೀಮಾ ನದಿ ಬ್ರಿಜ್ ದುರಸ್ಥಿ ಕಾಮಗಾರಿಯ ಭೂಮಿಪೂಜೆ ನೆರವೇರಿಸಿ ಮಾತನಾಡಿ, ವಿರೋಧ ಪಕ್ಷದವರು ಮಾಧ್ಯಮಗಳ ಮುಂದೆ ಮನಗೂಳಿ ಮನೆತನದ ಮೇಲೆ ಯಾವುದೇ ಸಂಬಂಧವಿಲ್ಲದೆ ಇರುವ ದಾಖಲೆ ಪ್ರದರ್ಶಿಸುವ ಮೂಲಕ ಸುಳ್ಳು ಆರೋಪಗಗಳ ಮೂಲಕ ಟಿಕೆ ಮಾಡುತ್ತಿದ್ದು, ಯಾವದಕ್ಕೂ ಕಿವಿಗುಡುವದಿಲ್ಲ, ಅವರ ಆರೋಪಗಳಿಗೆ ಉತ್ತರಿಸುತ್ತ ಕುಳಿತು ಸಮಯ್ಯ ವ್ಯರ್ಥ ಮಾಡು ಬದಲಿಗೆ ಅಭಿವೃದ್ಧಿ ಕೆಲಸ ಮಾಡುವ ಮೂಲಕ ಉತ್ತರಿಸುತ್ತೇನೆ ಎಂದರು.

ಮಾಜಿ ಶಾಸಕ ರಮೇಶ ಭೂಸನೂರ ಅವರ 12 ವರ್ಷದ ಅಧಿಕಾರ ಅವದಿಯಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಹಾಗೂ ನನ್ನ 2.5 ವರ್ಷದಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಸಾರ್ವಜನಿಕರ ಮಧ್ಯೆ ಬಹಿರಂಗ ಚರ್ಚೆಗೆ ಬನ್ನಿ ಎಂದು ಎರಡು ಬಾರಿ ಸವಾಲು ಹಾಕಿದ್ದೆನೆ ಸವಾಲು



ಸ್ವಿಕರಿಸಿ ಚರ್ಚೆಗೆ ಬನ್ನಿ ಎಂದು ಮಾಜಿ ಶಾಸಕ ರಮೇಶ ಭೂಸನೂರ ಅವರ ಸ್ವ ಗ್ರಾಮದಲ್ಲೆ ಮತ್ತೆ ಸವಾಲು ಹಾಕಿದರು. ಯಾವುದೇ ಕ್ಷೇತ್ರದಲ್ಲಿ ಇರಲಿ ಸಂಘರ್ಷದ ಜೀವನ ಬದಲಿಗೆ ಸಾಮರಸ್ಯ ಜೀವನ ಮಾಡಬೇಕು, ಮುಖ್ಯವಾಗಿ ರಾಜಕಾರಣಿಗಳು ಸಾಮರಸ್ಯದಿಂದ ಕ್ಷೇತ್ರದ ಜನರ ಮನಸ್ಸು ಗೆಲ್ಲುವಂತ ಅಭಿವೃದ್ಧಿ ಕೆಲಾ ಮಾಡಬೇಕು ಎಂದರು. ಇನ್ನುಳಿದ 2.5 ವರ್ಷದಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿ ಮಾಡುತ್ತೆನೆ ಅಭಿವೃದ್ಧಿ ನನ್ನ ಮುಖ್ಯ ಉದ್ದೇಶ ಎಂದರು.

ಫೆ.25ರಂದು ತಾಳಿಕೋಟೆ ಬಂದ್‌ಗೆ ಕರೆ

ತಾಳಿಕೋಟೆ: ಮೇಲೆಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ನಿರ್ಮಾಣಕ್ಕೆ ಆಯ್ಕೆ ಮಾಡಿದ ಸ್ಥಳ ಪಟ್ಟಣದಿಂದ 4ರಿಂದ 5 ಕಿ.ಮೀ ದೂರ ಇರುವುದರಿಂದ ತಾಲೂಕಿನ ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗುತ್ತದೆ. ಇದನ್ನು ರದ್ದುಪಡಿಸಿ ತಾಳಿಕೋಟೆ ಪಟ್ಟಣದಲ್ಲಿಯೇ ಪ್ರಜಾಸೌಧ ನಿರ್ಮಾಣ ಮಾಡಬೇಕೆಂದು ತಾಳಿಕೋಟೆ ತಾಲೂಕು ಹೋರಾಟ ಸಮಿತಿಯ ಪದಾಧಿಕಾರಿಗಳು ಒತ್ತಾಯಿಸಿದರು.

ಇಲ್ಲಿನ ವಿಠ್ಠಲ ಮಂದಿರದಲ್ಲಿ ನಡೆದ ಶುಕ್ರವಾರದ ಪಟ್ಟಣದ ಸರ್ವ ಸಮಾಜದ ಗಣ್ಯರ ಹಾಗೂ ವ್ಯಾಪಾರಸ್ಥರ, ಅಸೋಷಿಯೇಷನಗಳ ಪೂರ್ವಭಾವಿ ಸಭೆಯಲ್ಲಿ ಫೆ.25ರಂದು ಸ್ವಯಂ ಪ್ರೇರಿತ ಸಂಪೂರ್ಣ ಬಂದ್‌ಗೆ ಕರೆ ನೀಡಿ ಅಂದಿನಿಂದಲೇ ಅನಿರ್ದಿಷ್ಟಾವಧಿಯವರೆಗೆ ಧರಣಿ ಸತ್ಯಾಗ್ರಹ ಆರಂಭಿಸುವುದಾಗಿ ನಿರ್ಣಯಿಸಿದರು.

ಸಭೆಯಲ್ಲಿ ಹೋರಾಟ ಸಮಿತಿಯ ಪ್ರಮುಖರಾದ ಕಾಶಿನಾಥ ಮುರಾಳ, ವಿಜಯಸಿಂಗ್ ಹಚೇರಿ, ರವಿ ಕಟ್ಟಿಮನಿ ಮಾತನಾಡಿ, ಅಂದು ಬೆಳಗ್ಗೆ 10 ಗಂಟೆಗೆ ಅಂಬೇಡ್ಕರ್ ವೃತದಿಂದ ಬೃಹತ್ ಮೆರವಣಿಗೆ ಮೂಲಕ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಬಸವೇಶ್ವರ ವೃತ್ತಕ್ಕೆ ತಲುಪಿ ಅಲ್ಲಿಯೇ ಧರಣಿ ಆರಂಭಿಸಲಾಗುವುದು. ಇದಕ್ಕೆ ಸರ್ವ ಸಮಾಜದವರೂ ಜ್ಯಾತ್ಯತೀತವಾಗಿ, ಪಕ್ಷಾತೀತವಾಗಿ ಈ ಹೋರಾಟಕ್ಕೆ ಸಹಕರಿಸಬೇಕೆಂದು ಕೇಳಿಕೊಂಡರು.



ಸಭೆಯಲ್ಲಿ ಕಾರ್ಯಕ್ರಮದ ವಿವಿಧ ಜವಾಬ್ದಾರಿ ವಹಿಸಿಕೊಡಲಾಯಿತು.

ಹೋರಾಟ ಸಮಿತಿಯ ಗೌರವ ಅಧ್ಯಕ್ಷ ಎಸ್.ಬಿ.ಕಟ್ಟಿಮನಿ, ಅಧ್ಯಕ್ಷ ದಶರತಸಿಂಗ್ ಮನಗೂಳಿ, ಉಪಾಧ್ಯಕ್ಷ ಎಂ.ಕೆ.ಚೋರಗಸ್ತಿ,ಮುತ್ತಪ್ಪ ಚಮಲಾಪುರ, ಮಾಸೂಮಸಾಬ ಕೆಂಭಾವಿ, ಪರಶುರಾಮ ತಂಗಡಗಿ, ವೆಂಕಣ್ಣ ತಾಳಪಲ್ಲೆ, ಎಂ.ಆರ್.ಕತ್ತಿ, ಶರಣಗೌಡ ಪಾಟೀಲ, ಪ್ರಕಾಶ ಹಚೇರಿ, ತಿಪ್ಪಣ್ಣ ಸಜ್ಜನ, ಚನ್ನಬಸ್ಸು ದೇಸಾಯಿ, ತಿರುಪತಿ ನವಲೆ, ಶ್ರೀಶೈಲ ಬಬಲೇಶ್ವರ, ಮನೋಹರ ಪತ್ತಾರ, ಗಂಗಾಧರ ಕಸ್ತೂರಿ, ಮಂಜು ಶೆಟ್ಟಿ, ಸಿರಸಕುಮಾರ ಹಚೇರಿ, ಸುರೇಶ ಹಚೇರಿ, ಅಮಿತ್ ಮನಗೂಳಿ, ಶ್ರೀನಿವಾಸ ಸೋನಾರ್, ರಾಮಪ್ಪ ಕಟ್ಟಿಮನಿ, ಜುಮ್ಮಣ್ಣ ನಾಲತವಾಡ ಯಂಕಪ್ಪ ಗೊಲ್ಲರ, ಸಂಜು ಬರದೇನಾಳ, ನಾರಾಯಣ ಹಿಂಗಮೋರೆ, ಬಸ್ಸು ಕೊಡೇಕಲ್, ಹಾಗೂ ಸರ್ವ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಬೃಹತ್ ಹಿಂದೂ ಸಮ್ಮೇಳನ ಇಂದು: ಪಟ್ಟಣಶೆಟ್ಟಿ

ಬಸವನಬಾಗೇವಾಡಿ: ಪಟ್ಟಣದಲ್ಲಿ ಫೆ.22ರಂದು ಬೃಹತ್ ಹಿಂದೂ ಸಮ್ಮೇಳನ ಮತ್ತು ಶೋಭಾಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಹಿಂದೂ ಸಮ್ಮೇಳನ ಸಂಚಾಲನ ಸಮಿತಿ ಮಂಡಲ ಅಧ್ಯಕ್ಷ ಚಂದ್ರಕಾಂತ ಪಟ್ಟಣಶೆಟ್ಟಿ(ಅಶ್ವಿನಿ) ಹೇಳಿದರು.

ಪಟ್ಟಣದ ಕಾಳಿಕಾದೇವಿ ದೇವಸ್ಥಾನದ ಸಭಾಭವನದಲ್ಲಿ ಶುಕ್ರವಾರ ಬಸವನಬಾಗೇವಾಡಿ ಮಂಡಲ ಹಿಂದೂ ಸಮ್ಮೇಳನ ಸಂಚಾಲನ ಸಮಿತಿಯಿಂದ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೃಹತ್ ಹಿಂದೂ ಸಮ್ಮೇಳನದ ಯಶಸ್ಸಿಗೆ ಈಗಾಗಲೇ ಮಂಡಲದ ಎಲ್ಲಾ 23ವಾರ್ಡಗಳಲ್ಲಿ ಪ್ರಚಾರ ಕಾರ್ಯ ಹಾಗೂ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಫೆ.22ರಂದು ಮಧ್ಯಾಹ್ನ 3ಗಂಟೆಗೆ ವಿವಿಧ ಕಲಾತಂಡಗಳು, ವಾದ್ಯ ಮೇಳಗಳೊಂದಿಗೆ ಪಟ್ಟಣದ ಐತಿಹಾಸಿಕ ಬಸವೇಶ್ವರ



ದೇವಸ್ಥಾನದಿಂದ ಸಾಂಸ್ಕೃತಿಕ ಶೋಭಾಯಾತ್ರೆ ಚಾಲನೆಗೊಂಡು ಬಸ್ ನಿಲ್ದಾಣ, ಅಗಸಿ, ವಿವೇಕಾನಂದ ಗಲ್ಲಿ ಬಸವಸ್ಮಾರಕ, ಶಿವಾಜಿ ವೃತ್ತದ ಮಾರ್ಗವಾಗಿ ವೀರಭದ್ರೇಶ್ವರ ನಗರದ ಉದ್ಯಾನವನದಲ್ಲಿ ಸಾರ್ವಜನಿಕ ಸಭಾ ಕಾರ್ಯಕ್ರಮದ ವೇದಿಕೆವರೆಗೂ ಶೋಭಾಯಾತ್ರೆ ವೈಭವದಿಂದ ಜರುಗುವುದು ಎಂದರು.

ಸ್ಥಳೀಯ ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿ, ಹಿರೇಮಠದ ಶಿವಪ್ರಕಾಶ ಶಿವಾಚಾರ್ಯರು, ಈರಕಾರ ಮುತ್ಯಾರವರು, ಮನಗೂಳಿ ಅಭಿನವ ಸಂಗನಬಸವ ಸ್ವಾಮೀಜಿ, ಮುತ್ತಗಿಯ ನರಹರಿ ಆಚಾರ್ಯರು, ಹೂವಿನಹಿಪ್ಪರಗಿ ಪತ್ರಿಮಠದ ದ್ರಾಕ್ಷಿಯಿಣಿ ಅಮ್ಮನವರು, ನರಸಲಗಿಯ ಶ್ರೀಕಾಂತ ಮಹಾರಾಜರು, ಹಿಂದೂ ಜಾಗರಣಾ ವೇದಿಕೆಯ ಉತ್ತರ ಪ್ರಾಂತ ಸಹ ಸಂಯೋಜಕ ಶ್ರೀಕಾಂತ ಅವರು ಮುಖ್ಯವಕ್ತಾರರಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು. ಪ್ರಮುಖರಾದ ಎಸ್.ಎ.ದೇಗಿನಾಳ, ಶಿವಪುತ್ರ ಕೆಂಭಾವಿ, ಕೃಷ್ಣಾ ಬಡಿಗೇರ, ದಯಾನಂದ ಸಾರವಾಡ, ವಿವೇಕಾನಂದ ಕಲ್ಯಾಣಶೆಟ್ಟಿ, ಡಾ.ಬಸವರಾಜ ಚವ್ಹಾಣ, ರವಿಗೌಡ ಚಿಕ್ಕೊಂಡ, ಸಿದ್ದನಗೌಡ ಪಾಟೀಲ (ಹಂಚಿನಾಳ), ಶ್ರೀಶೈಲ ಶಿರಗುಪ್ಪಿ, ರುದ್ರಮುನಿ ಸಾರಂಗಮಠ, ಗುರು ಕುಂಟೋಜಿ, ಶಶಿಕಾಂತ ಸ್ಥಾವರಮಠ, ನಾಗೇಶ ನಾಗೂರ ಇದ್ದರು.

ಸಮಾಜದ ಡೊಂಕು ತಿದ್ದಿದ ಕವಿ ಸರ್ವಜ್ಞ

ಮುದ್ದೇಬಿಹಾಳ: ಮನುಕುಲಕ್ಕೆ ಮಾರ್ಗದರ್ಶಿಯಾದ ಸರ್ವಜ್ಞರ ತ್ರಿಪದಿಗಳು ಇಂದಿಗೂ ಸಾರ್ವಕಾಲಿಕ ಸತ್ಯಗಳಾಗಿವೆ. ತಮ್ಮ ಸರಳ ಸಾಹಿತ್ಯದ ಮೂಲಕ ಸಮಾಜದ ಅಂಕು ಡೊಂಕುಗಳನ್ನು ತಿದ್ದುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು ಎಂದು ತಹಶೀಲ್ದಾರ್ ಕೀರ್ತಿ ಚಾಲಕ ಹೇಳಿದರು.

ತಹಶೀಲ್ದಾರ್ ಕಚೇರಿಯಲ್ಲಿ ಶುಕ್ರವಾರ ತಾಲೂಕು ಆಡಳಿತದ ವತಿಯಿಂದ ಏರ್ಪಡಿಸಲಾಗಿದ್ದ ನಾಡಿನ ಶ್ರೇಷ್ಠ ತ್ರಿಪದಿ ಕವಿ ಸರ್ವಜ್ಞರ ಜಯಂತಿ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿ, ಕನ್ನಡ ಸಾಹಿತ್ಯ ಲೋಕಕ್ಕೆ ಸರ್ವಜ್ಞರ ಕೊಡುಗೆ ಅಪಾರ ಎಂದು ಸ್ಮರಿಸಿದರು, ಅವರೊಬ್ಬ ಕವಿಯಷ್ಟೇ ಅಲ್ಲ, ಒಬ್ಬ ಮಹಾನ್ ದಾರ್ಶನಿಕರೂ ಆಗಿದ್ದರು. ಅವರ ಜೀವನದ ಮೌಲ್ಯಗಳು ಮತ್ತು ಸಂದೇಶಗಳು ಇಂದಿನ ಆಧುನಿಕ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ ಎಂದು ಹೇಳಿದರು.

ಪತ್ರಕರ್ತರಾದ ಕೆ.ಎಂ.ರಿಸಲದ್ದಾರ, ಮುತ್ತು ಟಕ್ಕಳಕಿ, ಬಸವರಾಜ ಕುಂಬಾರ (ಚವನಬಾವಿ) ಉಪ ತಹಶೀಲ್ದಾರದಾರ ಎನ್.ಬಿ.ಮಾವಿನಮಟ್ಟಿ, ಎಂ.ಎಸ್. ಗೋನಾಳ, ಹಾಗೂ ಶಿರಸ್ತೇದಾರರಾದ ಎಸ್.ಎಂ.ಸಜ್ಜನ, ಜಿ.ಎನ್.ಕಟ್ಟಿ, ಬಿ.ಎಸ್. ಮುದ್ದೇಬಿಹಾಳ, ಕುಂಬಾರ ಸಮಾಜದ ಮುಖಂಡರಾದ ಸಂಗಣ್ಣ ಕುಂಬಾರ, ಸಿದ್ರಾಮಪ್ಪ ಕುಂಬಾರ,ಅಂಬಣ್ಣ ಕುಂಬಾರ, ಮಹಾಂತೇಶ ಕುಂಬಾರ, ಶ್ರೀಶೈಲ ಕುಂಬಾರ, ಶಂಕ್ರಪ್ಪ ಕುಂಬಾರ, ಸುಭಾಸ ಕುಂಬಾರ, ಹಣಮಂತ ಕುಂಬಾರ, ಮಲ್ಲಣ್ಣ ಕುಂಬಾರ ನಂದವಾಡಗಿ ಸೇರಿದಂತೆ ಸಿಬ್ಬಂದಿ ಹಾಗೂ ಸಮಾಜದ ಪ್ರಮುಖರು ಭಾಗವಹಿಸಿದ್ದರು.



ಪ್ರತಿ ಮನೆಯಲ್ಲಿ ಶಿವಾಜಿ ಹುಟ್ಟಲಿ: ಹಾರಿಕಾ



ಝಳಕಿ: ಹಿಂದೂ ಸನಾತನ ಧರ್ಮ ಉಳಿವಿಗಾಗಿ ಮನೆ ಮನೆಯಲ್ಲಿ ಶಿವಾಜಿಯಾಗಿ ಹುಟ್ಟಬೇಕು. ನಾವೆಲ್ಲ ಹಿಂದೂ, ಇನ್ನು ಯಾವಾಗ ಒಂದು ಎಂದು ಹಿಂದೂ ಯುವ ವಾಗ್ಮಿ ಭಾಷಣಗಾರ್ತಿ ಹಾರಿಕಾ ಮಂಜುನಾಥ ಬೆಂಗಳೂರು ಹೇಳಿದರು.

ಸಮಿಪದ ಹಲಸಂಗಿ ಗ್ರಾಮದಲ್ಲಿ ನಡೆದ ಛತ್ರಪತಿ ಶಿವಾಜಿ ಮಹಾರಾಜ ಜಯಂತೋತ್ಸವ ನಿಮಿತ್ತ ಮಾತನಾಡಿದರು. ಹಿಂದೂ ಸನಾತನ ಧರ್ಮ ಉಳಿಬೇಕಾದರೆ ನಾವು ಎಲ್ಲರೂ ಒಂದಾರೆ ಮಾತ್ರ ಹಿಂದೂ ಧರ್ಮ ಉಳಿಯುತ್ತದೆ. ಮನೆ ಮನೆಗಳಲ್ಲಿ ಯುವಕರು ಶಿವಾಜಿ ಆಗಬೇಕು. ಮನೆ ಮನೆಯಲ್ಲಿ ಜಿಜಾಮಾತಾ ಆಗಬೇಕು ಆಗ ಮಾತ್ರ ಹಿಂದೂ ಧರ್ಮ ಉಳಿಯಲು ಸಾಧ್ಯ ಎಂದರು.

ಶಿವಾಜಿ ಹಿಂದೂ ಧರ್ಮ ರಕ್ಷಣೆಗಾಗಿ ಸಂಘ ಸಂಘಟನೆ ಮಾಡಿ ಧರ್ಮ ರಕ್ಷಣೆಗೆ ಜಾಗೃತರಾಗಿ. ಹಿಂದೂಗಳ ಭಾವನೆ ಒಂದಾಗಿ ಇರಲಿ. ಈಗೀನ ದಿನಮಾನಗಳಲ್ಲಿ ತಾಯಿಯಿಂದಿರ ಪಾತ್ರ ಮುಖ್ಯವಾಗಿದ್ದು, ಮಕ್ಕಳನ್ನು ಶಿವಾಜಿಯಾಗಿ ಬೆಳೆಸಿ ಎಂದು ಹೇಳಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮಹೇಂದ್ರ ನಾಯಕ ಮಾತನಾಡಿ, ಹಿಂದೂ ಸನಾತನ ಧರ್ಮದ ಉಳಿಗಾಗಿ ಶಿವಾಜಿ ಮಹಾರಾಜರ ಕೊಡುಗೆ ಅಪಾರವಾದದ್ದು ಎಂದರು. ಬಸರಾಜ ಪೂಜಾರಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಗ್ರಾಪಂ ಅಧ್ಯಕ್ಷ ನಿತೀಶ ಮನಮಿ, ಚನ್ನಬಸಯ್ಯ ಹಿರೇಮಠ, ಆರ್.ಎಸ್.ಗೋಡೆಕಾರ, ಪಿ.ವಿ.ಪರೀಟ, ಜಗದೀಶ ರಾಂಪುರ, ತಿಪ್ಪಣ್ಣ ಪೊದ್ದಾರ, ವಿರುಪಾಕ್ಷಿ ಬಡಗೇರ, ರಾಜಶೇಖರ ಮಧಬಾವಿ, ಸಿದ್ದು ಕೊಟ್ಟಲಗಿ, ಶಿವಾನಂದ ಸಾಳುಂಕೆ, ವಿಠ್ಠಲ ಸಾಳುಂಕೆ, ಶಿವರಾಜ ಸಾಳುಂಕೆ, ತಾನು ಜಾಧವ ಉಪಸ್ಥಿತರಿದ್ದರು.

ಕಿರುಸುದ್ದಿ

ಕಬ್ಬಿಣಾಂಶದ ಕೊರತೆಯೇ ರಕ್ತಹೀನತೆಗೆ ಕಾರಣ



◆ಸಿಂಧನೂರು: ಮನುಷ್ಯನ ದೇಹದಲ್ಲಿ ಕಬ್ಬಿಣಾಂಶದ ಕೊರತೆಯೇ ರಕ್ತಹೀನತೆಗೆ ಕಾರಣವಾಗಿದೆ ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಹೇಳಿದರು.

ಇಲ್ಲಿನ ಬಡಿಬೇಸ್ ಅಂಗನವಾಡಿ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯದ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಆರೋಗ್ಯವಂತ ತಾಯಿ, ಆರೋಗ್ಯವಂತ ಮಗು ಅಭಿಯಾನ ಅಂಗವಾಗಿ ತಾಯಂದಿರ ಸಭೆಯಲ್ಲಿ ಅವರು ಮಾತನಾಡಿದರು. ಎಲ್ಲ ವಯಸ್ಸಿನವರು ತಮ್ಮ ದಿನನಿತ್ಯದ ಆಹಾರ ಸೇವನೆಯಲ್ಲಿ ಕಬ್ಬಿಣಾಂಶದ ಫೋಲಿಕ್ ಆಮ್ಲ ಮಾತ್ರೆ ಹಾಗೂ ಬಿ12 ವಿಟ್ ಹೆಚ್ಚಾಗಿರುವ ಆಹಾರ ಪದಾರ್ಥಗಳನ್ನು ತಪ್ಪದೇ ಸೇವಿಸಬೇಕು. ಗರ್ಭಿಣಿಯರು 2ನೇ ತ್ರೈಮಾಸಿಕದಲ್ಲಿ ಜಂತುಹುಳು ನಿವಾರಕ ಮಾತ್ರೆಗಳ ಜೊತೆಯಲ್ಲಿ ಶೇಂಗಾ, ಎಳ್ಳು, ಬೆಲ್ಲ, ಹಸಿರು ತರಕಾರಿ, ಖರ್ಜೂರಾ, ಒಣ ದ್ರಾಕ್ಷಿ ಸೇವನೆ ಮಾಡುವುದರಿಂದ ದೇಹದಲ್ಲಿ ಉಂಟಾಗುವ ಹಲವು ತೊಂದರೆಗಳನ್ನು ನಿಯಂತ್ರಿಸಬಹುದು' ಎಂದು ಹೇಳಿದರು.

ಪಿಎಸಿಒ ಶಮೀನಾ, ಆಶಾ ಕಾರ್ಯಕರ್ತೆ ಶೈನಜಾ, ಅಂಗನವಾಡಿ ಕಾರ್ಯಕರ್ತೆ ದಿಶಾದ್, ಅಂಗನವಾಡಿ ಸಹಾಯಕಿ ಸಾವಿತ್ರಿ ಹಾಗೂ ಗರ್ಭಿಣಿ ಮಹಿಳೆಯರು ಭಾಗವಹಿಸಿದ್ದರು.

ನಾಗರಾಜ ಶೆಟ್ಟಿ ನಿಧನಕ್ಕೆ ನುಡಿನಮನ



◆ಮಸ್ಕಿ: ಶುಕ್ರವಾರ ಹಠಾತ್ ಹೃದಯಾಘಾತದಿಂದ ಮೃತಪಟ್ಟ ಶಿಕ್ಷಣ ಪ್ರೇಮಿ ಹಾಗೂ ಉದ್ಯಮಿ ಸಹೃದಯ ಸಂಪನ್ನರಾದ ದಿ.ನಾಗರಾಜ ಶೆಟ್ಟಿ ಅವರಿಗೆ ವಿದ್ಯಾರ್ಥಿಗಳಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಟ್ಟಣದ ವಿದ್ಯಾನಿಕೇತನ ಸ್ವತಂತ್ರ ಪದವಿ ಪೂರ್ವ ಕಾಲೇಜು ಸಂಸ್ಥೆಯ ಸಂಸ್ಥಾಪಕರಾದ ದಿ.ನಾಗರಾಜ ಶೆಟ್ಟಿ ಅವರ ನಿಧನಕ್ಕೆ ಸಂಸ್ಥೆಯ ಪ್ರಾಚಾರ್ಯರು, ಉಪನ್ಯಾಸಕರು ಮತ್ತು ಸಮಸ್ತ ವಿದ್ಯಾರ್ಥಿ ಬಳಗ ನುಡಿ ನಮನ ಹಾಗೂ 2 ನಿಮಿಷಗಳ ಮೌನಾಚರಣೆ ಮಾಡುವ ಮೂಲಕ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿದರು. ನುಡಿ ನಮನ ಕಾರ್ಯಕ್ರಮದ ವೇಳೆ ಪ್ರಾಚಾರ್ಯರು, ಪ್ರಾಧ್ಯಾಪಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾವುಕರಾದರು.

ಯಾಂತ್ರಿಕ ಬದುಕಿನಲ್ಲಿ ಅಧ್ಯಾತ್ಮ ಜ್ಞಾನ ಆಶಾಕಿರಣ



◆ಕೊಪ್ಪಳ: ಮನುಷ್ಯನ ಯಾಂತ್ರಿಕ ಬದುಕಿನಲ್ಲಿ ಅಧ್ಯಾತ್ಮ ಜ್ಞಾನ ಆಶಾಕಿರಣವಾಗಿದೆ ಎಂದು ಡಾ. ಸುರೇಶ್ ಬಿ ಇಟ್ನಾಳ್ ತಿಳಿಸಿದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಮಹಾಶಿವರಾತ್ರಿ ಪ್ರಯುಕ್ತ ಏರ್ಪಡಿಸಿದ ಅಧ್ಯಾತ್ಮ ಮಹೋತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಾರ್ವಜನಿಕರು ಶಾರೀರಿಕ ಮತ್ತು ಮಾನಸಿಕ ಆರೋಗ್ಯ ಸದೃಢವಾಗಿಟ್ಟುಕೊಳ್ಳಲು ಮೆಡಿಟೇಶನ್ ಅತ್ಯವಶ್ಯಕವಾಗಿದೆ ಎಂದು ಕರೆ ನೀಡಿದರು. ಸಾನಿಧ್ಯ ವಹಿಸಿ ಮಾತನಾಡಿದ ಯೋಗಿನಿ ಅಕ್ಕ ಮನುಷ್ಯ ಜೀವನದಲ್ಲಿ ಹಣ ಆಸ್ತಿ ಅಂತಸ್ತು ಅಧಿಕಾರ ಗಳಿಸಬಹುದು ಇವುಗಳ ಜೊತೆಗೆ ಮನಸ್ಸಿಗೆ ಶಾಂತಿ ನೆಮ್ಮದಿಯನ್ನು ಪಡೆದಾಗ ವ್ಯಕ್ತಿಯ ಜೀವನ ಪರಿಪೂರ್ಣ ಎನಿಸಿಕೊಳ್ಳುತ್ತದೆ ಎಂದರು. ಚಂದ್ರಕಾಂತ ಬೆಟ್ಗೇರಿ, ಸಂಗಮೇಶ್ ಕಲ್ಹಾಳ್, ರಮೇಶ್ ಕೌಲೂರ್, ಶೇಖರಪ್ಪ ಉಪಸ್ಥಿತರಿದ್ದರು.



ಕುಷ್ಟಗಿ: ತಾಲೂಕಿನ ತಾವರಗೇರಾ ಕುಂಬಾರ ಓಣಿಯಲ್ಲಿ ಶುಕ್ರವಾರ ತ್ರಿಪದಿ ಕವಿ ಸರ್ವಜ್ಞನ ವೃತ್ತದ ನಾಮಫಲಕವನ್ನು ಪಪಂ ಅಧ್ಯಕ್ಷರಾದ ನಾರಾಯಣಗೌಡ ಮದಿಕೇರಿ ಅನಾವರಣ ಮಾಡಿದರು. ಸಿದ್ದಾರೂಢ ಮಠದ ಕುಮಾರಸ್ವಾಮಿ, ಪಪಂ ಸದಸ್ಯರಾದ ಶ್ಯಾಮೂರ್ತಿ ಹಂಚಿ, ಸಮುದಾಯದ ಮುಖಂಡರಾದ ಹಾಗೂ ಅಧ್ಯಕ್ಷರಾದ ಚಂದ್ರಶೇಖರ, ಖಜಾಂಚಿ ಶರಣಪ್ಪ, ಉಪಾಧ್ಯಕ್ಷ ದತ್ತು ಮೂರ್ತಿ, ಶ್ರೀಧರ ಕಾರ್ಯದರ್ಶಿ ಇತರರಿದ್ದರು.

ಅಕ್ರಮ ಮದ್ಯ ಮಾರಾಟ ತಡೆಯಲು ಆಗ್ರಹ

◆ಕುಷ್ಟಗಿ: ತಾಲೂಕಿನಾದ್ಯಂತ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಡೆಯುವಂತೆ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕ ವತಿಯಿಂದ ಸಿಪಿಐ ವಿಶ್ವನಾಥ ಹಿರೇಗೌಡ್ರ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ಕುಷ್ಟಗಿ, ತಾವರಗೇರಾ, ಹನಮಸಾಗರ, ಹನಮನಾಳ ಹೋಬಳಿ ಕೇಂದ್ರಗಳು ಸೇರಿದಂತೆ ಗ್ರಾಮೀಣ ಭಾಗದಲ್ಲೂ ಅಕ್ರಮವಾಗಿ ಮದ್ಯ ಮಾರಾಟ ಹೆಗ್ಗಿಲ್ಲದೇ ಸಾಗಿದೆ. ಸಂಬಂಧಿಸಿದ ಅಬಕಾರಿ ಇಲಾಖೆಯಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಎಂ.ಆರ್.ಪಿ. ದರಗಳಿಗಿಂತ ಹೆಚ್ಚಿನ ದರಕ್ಕೆ ಮದ್ಯವನ್ನು ಪಾನ್ ಬೀಡಾ ಅಂಗಡಿ, ಚಹಾದ ಅಂಗಡಿ, ಕಿರಾಣಿ ಅಂಗಡಿ ಸೇರಿದಂತೆ ಅನೇಕ ಕಡೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಮದ್ಯ ಸುಲಭವಾಗಿ ಕೈಗೆ ಸಿಗುವುದರಿಂದ ಹದಿಹರೆಯದ ಯುವಕರು ಮದ್ಯದ ದಾಸ್ಯಕ್ಕೆ ಬಲಿಯಾಗುತ್ತಿದ್ದಾರೆ. ಅನೇಕ ಬಡ ಸಂಸಾರಗಳು ಹಾಳಾಗಿ ಮಹಿಳೆಯರು, ಮಕ್ಕಳು ಬೀದಿಪಾಲಾಗುವ ಪರಿಸ್ಥಿತಿ ಬಂದಿರುತ್ತದೆ. ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಬೇಕು. ಎಲ್ಲೆಂದರಲ್ಲಿ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಮತ್ತು ಕುಡಿತದ ಚಟಕ್ಕೆ ಹಾಳಾಗುವುದನ್ನು ತಡೆಯಬೇಕೆಂದು ಮನವಿ ಸಲ್ಲಿಸಿದರು.

ಕರವೇ ತಾಲೂಕಾ ಗೌರವಾಧ್ಯಕ್ಷ ಆದಪ್ಪ ಉಳ್ಳಾಗಡ್ಡಿ, ಉಪಾಧ್ಯಕ್ಷ ಚನ್ನಪ್ಪ ನಾಲಗಾರ, ಸಂಗಮೇಶ ಗುರಿಕಾರ, ಪ್ರಕಾಶ ಮನ್ನೆರಾಳ, ಪರಸಪ್ಪ ಅಳ್ಳಿ, ಸುರೇಶ ಪಾಟೀಲ್, ಹನಮಂತಪ್ಪ, ಮಹೇಶಗೌಡ ಸೇರಿದಂತೆ ಪದಾಧಿಕಾರಿಗಳು ಇದ್ದರು.



ಕುಷ್ಟಗಿ: ತಾಲೂಕಿನಾದ್ಯಂತ ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಡೆಯುವಂತೆ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕ ವತಿಯಿಂದ ಸಿಪಿಐ ವಿಶ್ವನಾಥ ಹಿರೇಗೌಡ್ರ ಅವರಿಗೆ ಶನಿವಾರ ಮನವಿ ಸಲ್ಲಿಸಿದರು.

ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಕಾರ್ಯಾಗಾರ

ಮಾಹಿತಿ ಹಕ್ಕು ಜನಪರ, ಪ್ರಬಲ ಕಾಯ್ದೆ

◆ಕೊಪ್ಪಳ: ಮಾಹಿತಿ ಹಕ್ಕು ಕಾಯ್ದೆ ಜನಪರ ಮತ್ತು ಪ್ರಬಲ ಕಾಯ್ದೆಯಾಗಿದ್ದು, ಪಾರದರ್ಶಕ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸುವಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸುತ್ತದೆ. ಸಾರ್ವಜನಿಕ ಸೇವೆಯಲ್ಲಿರುವವರಿಗೆ ಮಾಹಿತಿ ಹಕ್ಕು ಕಾಯ್ದೆಯು ರಕ್ಷಣೆಯೂ ಹೌದು, ಎಚ್ಚರಿಕೆಯೂ ಹೌದು ಎಂದು ರಾಜ್ಯ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತ ಬಿ. ವೆಂಕಟ್ ಸಿಂಗ್ ಹೇಳಿದರು.

ಶನಿವಾರ ಕೊಪ್ಪಳ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ನಲ್ಲಿ ಕೊಪ್ಪಳ ಜಿಲ್ಲೆಯ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆಯ ಕುರಿತು ಹಮ್ಮಿಕೊಂಡಿದ್ದ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಮಾಹಿತಿ ಹಕ್ಕು ಕಾಯ್ದೆಯ ಮುಖ್ಯ ಉದ್ದೇಶ ಸರ್ಕಾರದ ಆಡಳಿತದಲ್ಲಿ ಸಾರ್ವಜನಿಕರು ಭಾಗವಹಿಸುವುದಾಗಿದೆ. ಸರಕಾರದ ಯೋಜನೆ ಕುರಿತು ಸಾರ್ವಜನಿಕರು ಮಾಹಿತಿ ಪಡೆಯಲು ಈ ಕಾಯ್ದೆಯಡಿ ಅವಕಾಶವಿದೆ. ಇದರಿಂದ ಜನರಿಗೆ ಸರ್ಕಾರದ ಯೋಜನೆಗಳ ಮಾಹಿತಿ ತಿಳಿಯುವುದರ ಜೊತೆಗೆಆಡಳಿತದಲ್ಲಿಪಾರದರ್ಶಕತೆತರಬಹುದಾಗಿದೆ. ಈ ಕಾಯ್ದೆ ಬಂದು 20 ವರ್ಷಗಳಾದರೂ ಬಹಳಷ್ಟು ಅಧಿಕಾರಿಗಳಿಗೆ ಕಾಯ್ದೆ ಅನುಷ್ಠಾನದಲ್ಲಿ ಮಾಹಿತಿ ಕೊರತೆ ಇದೆ. ಹಾಗಾಗಿ ಜಿಲ್ಲಾ ಮತ್ತು ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ ಕುರಿತ ಪುಸ್ತಕವನ್ನು ಎಲ್ಲರಿಗೂ ತಲುಪಿಸುವ ಕೆಲಸ ಮಾಡಬೇಕು ಎಂದು ಹೇಳಿದರು.



10,423 ಪ್ರಕರಣ ವಿಲೇ

ಕಲಬುರಗಿ ಪೀಠ ಆರಂಭವಾದಾಗಿನಿಂದ ಇಲ್ಲಿಯವರೆಗೆ 10,423 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ನಾನು ಈ ಕಲಬುರಗಿ ಪೀಠದ ಮಾಹಿತಿ ಆಯುಕ್ತನಾಗಿ ಅಧಿಕಾರ ಸ್ವೀಕರಿಸಿದ 3 ತಿಂಗಳ ಅವಧಿಯಲ್ಲಿ 1,400 ಪ್ರಕರಣಗಳನ್ನು ವಿಚಾರಣೆ ಮಾಡಿ 605 ಪ್ರಕರಣಗಳನ್ನು ವಿಲೇವಾರಿ ಮಾಡಿದ್ದೇನೆ. 6,655 ಪ್ರಕರಣಗಳು ಇನ್ನೂ ವಿಲೇವಾರಿಗೆ ಬಾಕಿ ಇದ್ದು, ಕೊಪ್ಪಳ ಜಿಲ್ಲೆಯಲ್ಲಿ 764 ಪ್ರಕರಣಗಳು ಬಾಕಿ ಇವೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಮತ್ತು ಬೀದರ ಜಿಲ್ಲೆಯಲ್ಲಿ ಅತಿ ಕಡಿಮೆ ಪ್ರಕರಣಗಳು ಇವೆ.

ರಾಜ್ಯ ಮಾಹಿತಿ ಆಯೋಗ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತ ಡಾ. ಹರೀಶಕುಮಾರ ಅವರು ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆಯು ಸ್ವತಂತ್ರ ಭಾರತದಲ್ಲಿ ಅತ್ಯಂತ ಕ್ರಾಂತಿಕಾರಕ ಕಾಯ್ದೆಯಾಗಿದೆ. ಸರ್ಕಾರದ ಯೋಜನೆಗಳು, ಸೌಲಭ್ಯಗಳ ಹಿತಾಸಕ್ತಿಗೆ ಸಂಬಂಧಿಸಿದಂತೆ ಮಾಹಿತಿ ಪಡೆಯುವುದು ದೇಶದ ಪ್ರತಿಯೊಬ್ಬ ಪ್ರಜೆಗಳ ಮೂಲಭೂತ ಹಕ್ಕಾಗಿದೆ.

ದೇಶದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆ ದಾರಿತಪ್ಪಿದಾಗ ಅಂತಿಮ ನಿರ್ಣಾಯಕರು ಜನರೇ ಆಗಿರುತ್ತಾರೆ. ಜನರಿಗಾಗಿ ತಂದ ಕಾಯ್ದೆ, ಕಾನೂನುಗಳ ಪಾಲಕರು ಅವರೇ ಆಗಿದ್ದಾರೆ. ಪ್ರಜಾಪ್ರಭುತ್ವ ಪ್ರಬಲವಾಗಬೇಕು. ಜನರಿಗೆ ಸರ್ಕಾರದ ಮಹಿತಿ ಲಭ್ಯವಾಗಬೇಕು ಎಂಬ ಉದ್ದೇಶದಿಂದ ನಮ್ಮ ದೇಶದಲ್ಲಿ 2005ರ ಅಕ್ಟೋಬರ್ 5 ರಂದು ಜಾರಿಗೆ ಬಂದ ಆರ್.ಟಿ.ಐ ಕಾಯ್ದೆಯನ್ನು ಅನುಷ್ಠಾನಗೊಳಿಸಿದ ಮೊಟ್ಟ ಮೊದಲ ರಾಜ್ಯ ನಮ್ಮ ಕರ್ನಾಟಕವಾಗಿದೆ ಎಂದರು.

ರಾಜ್ಯ ಮಾಹಿತಿ ಆಯೋಗ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬದ್ರುದ್ದೀನ್ ಕೆ. ಅವರು ಮಾತನಾಡಿ, ಅಧಿಕಾರಿಗಳು ತಮ್ಮ ಸೇವಾವಧಿಯಲ್ಲಿ ಮಾಹಿತಿ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ನಿರ್ವಹಿಸಿದರೆ ಅದು ನಿವೃತ್ತಿ ನಂತರವೂ ನಿಮ್ಮ ಸಹಾಯಕ್ಕೆ ಬರುತ್ತದೆ. ಅಧಿಕಾರಿಗಳು ಆತ್ಮವಿಶ್ವಾಸದಿಂದಿರಬೇಕು. ಪಾರದರ್ಶಕ ಆಡಳಿತವಿದ್ದಾಗ ಆತ್ಮವಿಶ್ವಾಸ ಸಹಜವಾಗಿಯೇ ಬರುತ್ತದೆ. ಮಾಹಿತಿ ಹಕ್ಕು ಕಾಯ್ದೆಯನ್ನು ಸರಿಯಾಗಿ ಅರ್ಥೈಸಿಕೊಳ್ಳಿ ಎಂದರು.

ನಾಳೆ ಹಿರೇವಂಕಲಕುಂಟಾದಲ್ಲಿ ಹಿಂದೂ ಸಮ್ಮೇಳನ

◆ಯಲಬುರ್ಗಾ: ಹಿಂದೂ ಸಮಾಜವನ್ನು ಎಲ್ಲರೂ ಒಂದಾಗಿ ಸಂಘಟನೆ ಮಾಡುವ ಮೂಲಕ ಮುಂದಿನ ತಲೆಮಾರಿನ ಸುರಕ್ಷತೆ ಹಾಗೂ ನೆಮ್ಮದಿಯ ಬಾಳಿಗಾಗಿ ಹಿಂದೂಗಳಲ್ಲಿ ಸಂಘಟನೆಯ ಜಾಗೃತಿ ಮೂಡಿಸುವ ಉದ್ದೇಶದಿಂದ ಫೆ.23ರಂದು ಹಿಂದೂ ಸಮ್ಮೇಳನ ಹಿರೇವಂಕಲಕುಂಟಾದಲ್ಲಿ ಆಯೋಜಿಸಲಾಗಿದೆ ಎಂದು ಹಿರೇವಂಕಲಕುಂಟಾ ಹೋಬಳಿ ಹಿಂದೂ ಸಮ್ಮೇಳನ ಸಂಚಾಲಕ ಡಾ.ಶಿವಪ್ಪ ವಾದಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ತಾಲೂಕಿನ ಹಿರೇವಂಕಲಕುಂಟಾ ಗ್ರಾಮದಲ್ಲಿ ಹಿಂದೂ ಸಮ್ಮೇಳನ ನಿಮಿತ್ಯ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಫೆ,23ರಂದು ಮಧ್ಯಾನ್ಹ 3ಗಂಟಗೆ ಸ್ಥಳೀಯ ಈಶ್ವರ ದೇವಸ್ಥಾನದಿಂದ ಶೋಭಾಯಾತ್ರೆ ಮೆರವಣಿಗೆ ಪ್ರಾರಂಭಗೊಂಡು ಮುಖ್ಯವೇದಿಕೆಯ ಸ್ಥಳವಾದ ಗವಿಸಿದ್ದೇಶ್ವರ ಶಾಖಾಮಠ ಹಿರೇವಂಕಲಕುಂಟಾ ಗ್ರಾಮದಲ್ಲಿ ಹಿಂದೂ ಸಮ್ಮೇಳನ ಸಂಜೆ 6 ಗಂಟೆಗೆ ದಿಕ್ಸೂಚಿ ಸಾರ್ವಜನಿಕ ಭಾಷಣವನ್ನು ರಾಷ್ಟ್ರೀಯ ಯುವ ಚಿಂತಕ ಪ್ರಾಂತ ಪ್ರಚಾರ ಪ್ರಮುಖರಾದ ಕಿರಣಕುಮಾರ ವಿವೇಕವಂಶಿ ಅವರು ನಡೆಸಲಿದ್ದಾರೆ ಎಂದರು.

ಹಿಂದೂ ಸಮ್ಮೇಳನದ ಅಧ್ಯಕ್ಷ ಭೀಮನಗೌಡ ಮಾತನಾಡಿ ದೇಶದಲ್ಲಿ ಹಿಂದೂ ಶಕ್ತಿಯ ಅರಿವು ಮೂಡಿಸಲು ಹಿಂದೂಗಳೆಲ್ಲಾ ಸಹೋದರರೆಂಬ ಜಾಗೃತಿ ಮೂಡಿಸುವ ಜತೆಗೆ ಭಾ?, ವೇ?, ಪಂಥ, ಪಕ್ಷ, ಪೂಜೆ ವೈವಿಧ್ಯತೆ ನಡುವೆ ಏಕತೆ ಸಾರುವ ಭಾವ ಸ್ವಂತಕ್ಕೆ ಸ್ವಲ್ಪ,ಸಮಾಜಕ್ಕೆ ಸರ್ವಸ್ವವೆಂಬ ಸಂದೇಶ ಸಾರಲು ಮೇಲು ಕೀಳುಗಳ ಭಾವ ಅಳಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಹೂವಿನಹಡಗಲಿ ಗವಿಸಿದ್ದೇಶ್ವರ ಶಾಖಾ ಗವಿಮಠದ ಡಾ.ಹಿರಿಶಾಂತವೀರ ಮಹಾಸ್ವಾಮಿಗಳು, ಕುಷ್ಟಗಿ- ಹಿರೇಮನ್ನಾಪೂರ ಮದ್ದಾನೇಶ್ವರಮಠ ಕರಿಬಸವ ಶಿವಾಚಾರ್ಯ ಮಹಾಸ್ವಾಮಿಗಳು, ಯಲಬುರ್ಗಾದ ಶ್ರೀಧರ ಮುರಡಿ ಹಿರೇಮಠದ ಬಸವಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಕುದ್ರಿಮೋತಿ ಶ್ರೀಗಳು ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಅಯ್ಯಪ್ಪ ಹುಡೇದ,ರಾಚಪ್ಪ ಹುಳ್ಳಿ, ವಿಜಕುಮಾರ ತಾಳಕೇರಿ ಮತ್ತಿತರರಿದ್ದರು.



ಪಟ್ಟಣ ಪಂಚಾಯಿತಿಗೆ ಲೀಲಾವತಿ ಅಧ್ಯಕ್ಷೆ, ಮಂಜುಳಾ ಕಲ್ಮನಿ ಉಪಾಧ್ಯಕ್ಷೆ

◆ಕುಕನೂರು: ಪಟ್ಟಣದ ಪಟ್ಟಣ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯು ಪ್ರಕ್ರಿಯೆಯು ಶನಿವಾರ ಜರುಗಿತು. ಚುನಾವಣೆಯಲ್ಲಿ ಅಧ್ಯಕ್ಷರಾಗಿ ಲೀಲಾವತಿ ಮುಧೋಳ್, ಉಪಾಧ್ಯಕ್ಷರಾಗಿ ಮಂಜುಳಾ ಕಲ್ಮನಿ ಆಯ್ಕೆಯಾದರು.

ಈ ಪ್ರಕ್ರಿಯೆಯು ತಹಶೀಲ್ದಾರ್ ಬಸವರಾಜ್ ಬೆಣ್ಣೆಶಿರೂರು ಅವರ ಸಮ್ಮುಖದಲ್ಲಿ ನಡೆಯಿತು. ಹಲವು ತಿಂಗಳಿಂದ ತೆರವಾದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಒಟ್ಟು ನಾಲ್ಕು ಜನ ಸದಸ್ಯರು ನಾಮಪತ್ರ ಸಲ್ಲಿಕೆ ಮಾಡಿದ್ದೂ, ಅದರಲ್ಲಿ ಕಾಂಗ್ರೆಸ್-ಬಿಜೆಪಿ ಪಕ್ಷದ ತಲಾ ಎರಡು ಎರಡೂ ಜನ ಸದಸ್ಯರು ನಾಮಪತ್ರ ಸಲ್ಲಿಕೆ ಮಾಡಿದ್ದಾರೆ.

ಅಧ್ಯಕ್ಷರಾಗಿ ಆಯ್ಕೆಯಾದ ಲೀಲಾವತಿ ಮುಧೋಳ್ ಅವರಿಗೆ 12 ಮತಗಳು, ಉಪಾಧ್ಯಕ್ಷರಾಗಿ ಆಯ್ಕೆಯಾದ ಮಂಜುಳಾ ಕಲ್ಮನಿ ಅವರಿಗೆ 12 ಮತಗಳು, ಪರಾಜಿತರಾದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಲಕ್ಷ್ಮಿ ಸಬರದ್ ಅವರಿಗೆ 9 ಮತಗಳು, ಅದೇ ರೀತಿ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಿದ್ದ ಕುಮಾರಿ ನೇತ್ರಾವತಿ ಮಾಲಗತ್ತಿಗೆ 9 ಮತಗಳು ಪಡೆದುಕೊಂಡಿದ್ದರು. ವೇಳೆಯಲ್ಲಿ ಶಾಸಕ ಬಸವರಾಜ ರಾಯರೆಡ್ಡಿ, ಸಂಸದರಾದ ರಾಜಶೇಖರ ಹಿಟ್ನಾಳ ಮತ ಚಲಾಯಿಸಿ, ಗೆದ್ದ ಅಭ್ಯರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಸಂದರ್ಭದಲ್ಲಿ ಅಧಿಕಾರಿಗಳಾದ ಪಪಂ ಮುಖ್ಯಾಧಿಕಾರಿ ಸೇರಿದಂತೆ ಕಂದಾಯ ಇಲಾಖೆ ಸಿಬ್ಬಂದಿಗಳು ಇದ್ದರು ಪೊಲೀಸ್ ಬಂದೋಬಸ್ತ್ ನಲ್ಲಿ ನಡೆಯಿತು

ನಂತರ ಶಾಸಕ ಬಸವರಾಜ್ ರಾಯರೆಡ್ಡಿ ಮಾತನಾಡಿ, ಪಪಂ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆಯಲ್ಲಿ ನಮ್ಮ ಪಕ್ಷದ ಸದಸ್ಯರುಗಳು ಉತ್ಸಾಹದಿಂದ ಹಾಗೂ ಒಗ್ಗಟ್ಟಿನಿಂದ ಪಾಲ್ಗೊಂಡು, ಮತಚಲಾಯಿಸಿ ನಮ್ಮ ಸದಸ್ಯರನ್ನು ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆ ಮಾಡಿದ್ದಾರೆ. ಪಟ್ಟಣದ ಅಭಿವೃದ್ಧಿಯ ಹಿತದೃಷ್ಟಿಯಿಂದ ಅಧ್ಯಕ್ಷರಿಗೆ ಹಾಗೂ ಉಪಾಧ್ಯಕ್ಷರಿಗೆ ಬಹಳಷ್ಟು ಸವಾಲುಗಳಿದ್ದು, ಸರ್ಕಾರದಿಂದ ಆಗಬೇಕಾದ ಅಭಿವೃದ್ಧಿಪರ ಕೆಲಸಗಳಿಗೆ ಬೆಂಬಲವನ್ನ ನೀಡಲಿದ್ದೇನೆ. ಅವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ ಎಂದರು.



ನ್ಯಾಯಬೆಲೆ ಅಂಗಡಿ ರದ್ದತಿ ಕ್ರಮ ಖಂಡಿಸಿ ಪ್ರತಿಭಟನೆ

◆ಗಂಗಾವತಿ: ಇಲ್ಲಿನ ನಗರಸಭೆ ವ್ಯಾಪ್ತಿಯ ವಿರುಪಾಪುರ ತಾಂಡಾದಲ್ಲಿರುವ ಹಲವು ವರ್ಷಗಳಿಂದ ನ್ಯಾಯಬೆಲೆ ಅಂಗಡಿಯನ್ನು ರದ್ದುಪಡಿಸಲು ಮುಂದಾದ ಅಧಿಕಾರಿಗಳ ಕ್ರಮವನ್ನು ಖಂಡಿಸಿ ಶ್ರೀಸೇವಾಲಾಲ್ ಮಹಾರಾಜ ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷರು ಸದಸ್ಯರು ಸೇರಿದಂತೆ ವಾರ್ಡಿನ ನಿವಾಸಿಗಳು ಬೃಹತ್ ಪ್ರತಿಭಟನೆ ನಡೆಸಿದರು.

ವಿರುಪಾಪುರ್ ತಂಡ ದಿಂದ ಹೊರಟ ಪ್ರತಿಭಟನೆಕಾರರು ಆಹಾರ ಇಲಾಖೆಯ ಅಧಿಕಾರಿಗಳ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗುತ್ತಾ ಆಗಮಿಸಿ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಪಾಂಡು ನಾಯ್ಕ್ ಮಾತನಾಡಿ. ಸರಸ್ವತಿ ನ್ಯಾಯಬೆಲೆ ಅಂಗಡಿಯ ಮಾಲೀಕರು ಯಾವುದೇ ದಾಖಲಾತಿಗಳನ್ನು ಸಮರ್ಪಕವಾಗಿ ನಿರ್ವಹಿಸದೆ ನಿರ್ಲಕ್ಷ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಜೊತೆಗೆ ಹಲವು ಲೋಪಗಳನ್ನು ವೆಸಗಿದ್ದಾರೆ ಎಂದು ಆರೋಪಿಸಿ ನ್ಯಾಯಬೆಲೆ ಅಂಗಡಿಯಲ್ಲೂ ರದ್ದುಗೊಳಿಸಿ ತಮಗೆ ಬೇಕಾದವರಿಗೆ ಅವಕಾಶ ನೀಡಲು ಮುಂದಾದ ಕ್ರಮ ಸೂಕ್ತದಾಯಕವಲ್ಲ ಈ ಹಿನ್ನೆಲೆಯಲ್ಲಿ ಈ ಎಂದಿನಂತೆಯೇ ನ್ಯಾಯಬೆಲೆ ಅಂಗಡಿಯನ್ನು ಮುಂದುವರಿಸಿ ಕೊಂಡು ಹೋಗಲು ಅವಕಾಶ



ಕಲ್ಪಿಸಬೇಕು ಯಾವುದೇ ಕಾರಣಕ್ಕೂ ರದ್ದುಪಡಿಸಲು ಮುಂದಾದಲ್ಲಿ ಉಗ್ರ ಸ್ವರೂಪದ ಹೋರಾಟಗಳನ್ನು ನಡೆಸಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಬಾಲಾಜಿ ಮೇಸ್ತ್ರಿ ಪ್ರಧಾನ ಕಾರ್ಯದರ್ಶಿ ಶಿವಪ್ಪ ಸಹಕಾರಿ. ಶಿವಪ್ಪ ರಾಥೋಡ್ ಮೇಸ್ತ್ರಿ ಸಂಘಟನಾ ಕಾರ್ಯದರ್ಶಿ ಹನುಮಂತಪ್ಪ ಮೇಸ್ತ್ರಿ ಹಾಗೂ ಖಜಾಂಚಿ ರವಿಚಂದ್ರ ಮೇಸ್ತ್ರಿ ಸೇರಿದಂತೆ ವಾರ್ಡಿನ ಮಹಿಳೆಯರು ಪುರುಷರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಉಪತಸಿಲ್ದಾರ್ ಮಹಾಂತಗೌಡ ಪಾಟೀಲ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಕಾರ್ಯಕಾರಿಣಿ ರಾಜ್ಯ ನಿರ್ದೇಶಕರಾಗಿ ಆಯ್ಕೆ

◆ಹನುಮಸಾಗರ: ಇಲ್ಲಿಯ ಕುರುಬಗೇರಾ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿರಿಯ ಶಿಕ್ಷಕ, ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷರೂ ಆಗಿರುವ ಚಂದಪ್ಪ ಹಕ್ಕಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿಣಿ ರಾಜ್ಯ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಕಚೇರಿಯಲ್ಲಿ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಿ ಅವರು ಚಂದಪ್ಪ ಹಕ್ಕಿ ಅವರಿಗೆ ಪ್ರಮಾಣ ಪತ್ರ ನೀಡಿ, ಸಿಹಿ ತಿನಿಸಿ, ಅಭಿನಂದಿಸಿದರು.

ನಂತರ ಹನುಮಸಾಗರ ಪಟ್ಟಣದಲ್ಲಿ ಚಂದಪ್ಪ ಹಕ್ಕಿ ರವರಿಗೆ ತಾಲೂಕಿನ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಕರ ಬಳಗ, ಕಸಾಪ ಪದಾಧಿಕರಿಗಳು ಹಾಗೂ ಕೆಪಿಎಸ್ ಶಾಲೆ, ಕುರುಬಗೇರಾ ಶಾಲೆ ಮದ್ನಾಳ ಶಾಲೆ ಸೇರಿದಂತೆ ವಿವಿಧ ಶಾಲೆಗಳಲ್ಲಿ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು.

ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು, ತಾಲೂಕಿನ ಜನತೆ ಸಂತಸ ವ್ಯಕ್ತಪಡಿಸಿದ್ದಾರೆ. ಕಾರ್ಯಕ್ರಮದಲ್ಲಿ ವಿರುಪಾಕ್ಷಪ್ಪ ಅಂಗಡಿ, ವಸಂತ ರಾಜೂರ, ಚಂದ್ರಪ್ಪ ಮಾದರ, ಕಳಕಮಲ್ಲೇಶ ಕೆಸರಬಾವಿ, ಶೇಖರಪ್ಪ



ಕುರಿ, ಸಿದ್ರಾಮಯ್ಯ ಕರಕಂಠಿಮಠ, ಬಸಪ್ಪ ಬಂಡಿವಡ್ಡರ, ಲೆಂಕಪ್ಪ ವಾಲಿಕಾರ, ಸದಾಶಿವಯ್ಯ ಹಿರೇಮಠ, ರಾಜಕುಮಾರ ನಾಯಕ, ವೀರಪ್ಪ ತೋಟದ, ಯಮನಪ್ಪ ಗುರಿಕಾರ, ಅಶೋಕ ಕಟ್ಟಿಮನಿ, ಭರಮಪ್ಪ ಕಂಡೇಕಾರ, ಶರಣಪ್ಪ ವಡ್ಡರ, ಶಂಕ್ರಪ್ಪ ಉಪ್ಪಾರ, ಶೇಖರಪ್ಪ ಮೇಟಿ, ಪರಶುರಾಮ ವಣಗೇರಿ ಇತರರು ಇದ್ದರು.

ಕನ್ನಡ-ಕನ್ನಡಿಗ ಕರ್ನಾಟಕ ಉಳಿಯಲಿ: ಡಾ.ಈರಣ್ಣ

◆ಮಾನ್ವಿ: ನಗರದ ಬಾಷುಮಿಯಾ ಸಾಹುಕಾರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಾನ್ವಿಯಲ್ಲಿ 'ಅಂತಾರಾಷ್ಟ್ರೀಯ ಮಾತೃಭಾಷೆ ದಿನ' ವನ್ನು ಆಚರಿಸಲಾಯಿತು.

ಈ ವೇಳೆ ಪ್ರಾಂಶುಪಾಲರಾದ ಜೆ.ಎಲ್.ಈರಣ್ಣ ಮಾತನಾಡಿ, ನಮ್ಮ ದೇಶವು ಬಹುಭಾಷೆಗಳ ದೇಶ, ನಾವೆಲ್ಲರೂ ಬಹು ಭಾಷಾ ಸಂಸ್ಕೃತಿಯನ್ನು ನಾವೆಲ್ಲರೂ ಗೌರವಿಸಬೇಕು. ಅದರೊಂದಿಗೆ ನಮ್ಮ ನಮ್ಮ ರಾಜ್ಯಗಳ ಮಾತೃಭಾಷೆಗಳನ್ನು ಪ್ರೀತಿಸಬೇಕು ಮಾತೃ ಭಾಷೆ ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಆದ್ದರಿಂದ ಶಿಕ್ಷಣ ಮಾತೃಭಾಷೆಯಲ್ಲಿ ನೀಡಬೇಕು. ಆದ್ದರಿಂದ ನಮ್ಮ ಮಾತೃಭಾಷೆಯಾದ ಕನ್ನಡದ ಭಾಷೆಯ ಮೇಲೆ ಪ್ರೀತಿ ಗೌರವ ಅಭಿಮಾನ ಬೆಳೆಸಿಕೊಳ್ಳಬೇಕು ಕರ್ನಾಟಕದಲ್ಲಿ ಕನ್ನಡ ಕನ್ನಡಿಗ ಕರ್ನಾಟಕ ಉಳಿಯಬೇಕಾದರೆ ಕನ್ನಡ ಉಳಿದರೆ ಎಲ್ಲವೂ ಉಳಿತವೆ ಆದರಿಂದ ನಾವೆಲ್ಲರೂ ಕನ್ನಡ ಮಾತನಾಡುವುದರಿಂದ ಇದು ಸಾಧ್ಯ ಎಂದರು.

ಕಾರ್ಯಕ್ರಮವು ಆಂತರಿಕ ಗುಣಮಟ್ಟ ಭರವಸಾ ಕೋಶ ಮತ್ತು ಆಂಗ್ಲ ಭಾಷಾ ವಿಭಾಗದ ಸಂಯುಕ್ತಾಶ್ರಯದಲ್ಲಿ ನಡೆಯಿತು.



ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥರಾದ ಸೈಯದ್ ಮುಜೀಬ್ ಅಹ್ಮದ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ಭಾಷೆ ಉಳಿವು ಬಹುಮುಖ್ಯ, 1952 ರಲ್ಲಿ ಬಾಂಗ್ಲಾದೇಶದಲ್ಲಿ ಬಂಗಾಳಿ ಭಾಷೆಗಾಗಿ ನಡೆದ ಢಾಕಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮತ್ತು ಹೋರಾಟಗಾರರ ಹೋರಾಟವು ಅಂದು ಬಹಳ ಜನರ ಸಾವಿಗೂ ಕಾರಣವಾಯಿತು. ಯುನೆಸ್ಕೋ ಈ ಘಟನೆಯನ್ನು ಗುರುತಿಸಿ ಫೆಬ್ರವರಿ 21 ರಂದು ಅಂತರರಾಷ್ಟ್ರೀಯ ಮಾತೃಭಾಷೆ ದಿನ ಎಂದು 1999 ರಲ್ಲಿ ಘೋಷಿಸಿತು, 2000 ಇಸ್ವಿಯಿಂದ ಇಲ್ಲಿಯವರಿಗೆ ಆಚರಣೆ ಮುಂದುವರೆದಿದೆ ಎಂದು ಐತಿಹಾಸಿಕ ಹಿನ್ನೆಲೆಯನ್ನು ತಿಳಿಸಿದರು.

ಪ್ರಾಧ್ಯಾಪಕರುಗಳಾದ ಸೈಯದ್ ಮಿನ್ಹಾಜ ಉಲ್ ಹಸನ್, ರವಿ.ಎಂ., ಚನ್ನಬಸವ ಮಾಡಗಿರಿ, ಶಶಿಧರ್, ಚನ್ನಬಸಪ್ಪ ಮತ್ತು ಇನ್ನಿತರ ವಿಭಾಗದ ಉಪನ್ಯಾಸಕರು ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆ ಮತ್ತು ಸ್ವಾಗತವನ್ನು ಕನ್ನಡ ವಿಭಾಗದ ಬಸವರಾಜ ಸುಂಕೇಶ್ವರ ಮತ್ತು ವಂದನಾರ್ಪಣೆಯನ್ನು ಇತಿಹಾಸ ವಿಭಾಗದ ಮಲ್ಲಿಕಾರ್ಜುನ ಮಡಿವಾಳ ಅವರು ಮಾಡಿದರು.

ಕಲೆ-ಸಂಗೀತಕ್ಕೆ ಕರ್ನಾಟಕ ಹೆಸರುವಾಸಿ: ಶಾಸಕ ಪಾಟೀಲ

◆ಕಲಬುರಗಿ: ಕಲೆ, ಸಾಹಿತ್ಯ, ರಂಗಭೂಮಿ, ಸಂಗೀತಕ್ಕೆ ಕರ್ನಾಟಕ ದೇಶದಲ್ಲಿಯೇ ಹೆಸರುವಾಸಿ. ನಮ್ಮ ಆಚಾರ-ವಿಚಾರ, ಸಂಸ್ಕೃತಿ ಯುವ ಪೀಳಿಗೆಗೆ ಪರಿಚಯಿಸಲು ಇಂತಹ ಕಲೆ, ಸಂಗೀತ, ನಾಟಕಕ್ಕೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಆರ್ಥಿಕ ಶಕ್ತಿ ನೀಡಿ ರಂಗಭೂಮಿಯನ್ನು ಪೋಷಿಸಬೇಕು ಎಂದು ಶಾಸಕ ಎಂ.ವೈ.ಪಾಟೀಲ ಹೇಳಿದರು.

ಶನಿವಾರ ಕಲಬುರಗಿ ಜಿಲ್ಲಾಡಳಿತ, ಕಲಬುರಗಿ ನೆಕ್ಸ್ಟ್ ಫೌಂಡೇಷನ್ ಸಂಸ್ಥೆಯು ಬೆಂಗಳೂರಿನ ರಂಗ ಶಂಕರ ಸಹಯೋಗದೊಂದಿಗೆ ಕಲಬುರಗಿ ನಗರದ ಡಾ. ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಇದೇ ಫೆಬ್ರವರಿ 21 ರಿಂದ 28 ರವರೆಗೆ ನಡೆಯಲಿರುವ ಕಲಬುರಗಿ ನಾಟಕೋತ್ಸವ-2026ಕ್ಕೆ ನಗಾರಿ ಬಾರಿಸುವ ಚಾಲನೆ ನೀಡಿ ಮಾತನಾಡಿದರು.

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್ ಮಾತನಾಡಿ, ರಂಗಶಂಕರ ಸಂಸ್ಥೆಯು ಪ್ಯಾಕೇಜ್ ರೀತಿಯಲ್ಲಿ ಏಳು ದಿನಗಳ ಕಾಲ ನಾಟಕೋತ್ಸವದ ರುಚಿ ಉಣಬಡಿಸಲು ಕಲಬುರಗಿಗೆ ಬಂದಿದೆ. ವಿಶೇಷವಾಗಿ ಯುವ ಸಮೂಹ ಮೊಬೈಲ್ ಗೀಳು, ಸಾಮಾಜಿಕ ಜಾಲತಾಣನಿಂದ ಹೊರಬಂದು ಇಂತಹ ರಂಗಚಟುವಟಿಕೆ ಕಾರ್ಯಕ್ರಮಗಳನ್ನು ವೀಕ್ಷಿಸಬೇಕು ಎಂದು ಕರೆ ನೀಡಿದರು.



> ಶಂಕರ ನಾಗ್ ಅವರ ಸವಿನೆನಪಿಗೆ ಬೆಂಗಳೂರಿನಲ್ಲಿ ರಂಗ ಶಂಕರ ಸಂಸ್ಥೆ ಸ್ಥಾಪಿಸಿದ್ದು, 21 ವರ್ಷದಿಂದ ನಿರಂತರ ರಂಗಭೂಮಿ ಚಟುವಟಿಕೆ ನಡೆಸಲಾಗುತ್ತಿದೆ. ಕೇವಲ 2,500 ರೂ. ಬಾಡಿಗೆ ಪಡೆದು ನಾಟಕ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. ಇಲ್ಲಿ ಮದುವೆ, ಪ್ಯಾಶನ್ ಗೆ ಅವಕಾಶ ಇಲ್ಲ, ಕೇವಲ ನಾಟಕ, ರಂಗಭೂಮಿಗೆ ವೇದಿಕೆ ಅವಕಾಶ ಕಲ್ಪಿಸಿದ್ದೇವೆ.
>
> ■ ಅರುಂಧತಿ ನಾಗ್ ರಂಗ ಶಂಕರ ಸಂಸ್ಥೆ, ಬೆಂಗಳೂರು

ಎಂಎಲ್ಸಿ ಜಗದೇವ ಗುತ್ತೇದಾರ್, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಗ್ಯಾರಂಟಿ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಪಾಲಿಕೆ ಮೇಯರ್ ವರ್ಷಾ ರಾಜೀವ ಜಾನೆ, ಡಿಸಿ ಬಿ.ಫೌಜಿಯಾ ತರನ್ನುಮ್, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಎಡಿಸಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತೆ ಸಾಹಿತ್ಯಾ ಆಲದಕಟ್ಟಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ, ರಂಗಾಯಣ ಆಡಳಿತಾಧಿಕಾರಿ ಸಿದ್ರಾಮ ಶಿಂಧೆ ಸೇರಿದಂತೆ ಅನೇಕ ಅಧಿಕಾರಿಗಳು ಉಪಸ್ಥಿತರಿದ್ದರು. ರಂಗಾಯಣ ನಿರ್ದೇಶಕಿ ಸುಜಾತಾ ಜಂಗಮಶೆಟ್ಟಿ ಸ್ವಾಗತಿಸಿದರು. ಶಿವಾನಂದ ಅಣಜಗಿ ನಿರೂಪಿಸಿದರು.

ಕಿರುಸುದ್ದಿ

ರಂಗಭೂಮಿಯ ತವರು ಕೊಟ್ಟೂರು

ಕೊಟ್ಟೂರು: ಕೊಟ್ಟೂರು ರಂಗ ಕಲಾವಿದರ ಹಾಗೂ ರಂಗಭೂಮಿಯ ತವರೂರಾಗಿದೆ ಎಂದು ಹಿರಿಯ ರಂಗಭೂಮಿ ಕಲಾವಿದರು ಕೆಬಿಆರ್ ಡ್ರಾಮಾ ಕಂಪನಿಯ ಮಾಲೀಕ ಶ್ರೀಚಿಂದೋಡಿ ಶ್ರೀಕಂಠೇಶ್ ಹೇಳಿದರು.

ಕೊಟ್ಟೂರೇಶ್ವರ ಕಲಾ ರಂಗ, ಕೊಟ್ಟೂರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯನಗರ ಜಿಲ್ಲೆ ಹಾಗೂ ಕನ್ನಡ ಕಲಾವಿದರ ಸಂಘ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ರಂಗ ಸಂಭ್ರಮದ ಪ್ರಯುಕ್ತ ಕರ್ನಾಟಕದ ಶ್ರೇಷ್ಠ ಕಲಾವಿದರಿಂದ ನಾಟಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು. ಕೊಟ್ಟೂರಿನ ಕೊಟ್ಟೂರೇಶ್ವರ ಕಲಾರಂಗದ ಅಧ್ಯಕ್ಷ ಎಂ.ಎಸ್. ಶಿವನಗುತ್ತಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಕನ್ನಡ ಸಂಸ್ಕೃತಿ ಇಲಾಖೆ ವಿಜಯನಗರ ಜಿಲ್ಲೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ವರ ರಂಗಣ್ಣನವರು, ಭರತ್‌ರಾಜ್ ತಾಳಿಕೋಟೆ, ದಾವಲ್ ತಾಳಿಕೋಟೆ, ಅಂಚೆ ಕೊಟ್ರೇಶ್, ಬಿ.ಎಂ.ಕೊಟ್ರಯ್ಯ, ದಾವಣಗೆರೆಯ ಉದ್ಯಮಿಗಳಾದ ಜೆ.ಎಸ್.ಪ್ರಶಾಂತ್ ಕುಮಾರ್, ಬೆಳಗಾವಿ ಕನ್ನಡ ಕಲಾವಿದರ ಸಂಘದ ಅಧ್ಯಕ್ಷರಾದ ಬಿ.ಕೆ.ಗಣೇಶ್ ಮಾತನಾಡಿದರು. ಕೊಟ್ಟೂರೇಶ್ವರ ಕಲಾ ರಂಗ ಕೊಟ್ಟೂರು ನ ಸರ್ವ ಸದಸ್ಯರು ಪದಾಧಿಕಾರಿಗಳು ಉಪಸ್ಥಿತರಿದ್ದರು. ಚಿಂದೋಡಿ ಶಂಭುಲಿಂಗಪ್ಪ ಸ್ವಾಗತಿಸಿ ನಿರೂಪಿಸಿದರು. ಅನಂತರ ನಾಟಕ ಪ್ರದರ್ಶನ ನಡೆಯಿತು.

ಬಳ್ಳಾರಿ ಜಿಲ್ಲೆಗೆ ಪ್ರಥಮ

ಬಳ್ಳಾರಿ: ಇತ್ತೀಚೆಗೆ ನಗರದಲ್ಲಿ ಸರ್ಕಾರಿ ನೌಕರರ ಸಂಘದ ವತಿಯಿಂದ ನಡೆದ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಸರ್ಕಾರಿ ಮಾಜಿ ಪುರಸಭೆ ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಟಿ. ತಿಮ್ಮಪ್ಪ ಜನಪದ ಗೀತೆ ಗಾಯನ ಸ್ಪರ್ಧೆಯಲ್ಲಿ ಜಿಲ್ಲೆಗೆ ಮೊದಲ ಸ್ಥಾನವನ್ನು ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಈ ಸಾಧನೆಗೆ ಉಪನ್ಯಾಸಕರ ಸಂಘ ಹಾಗೂ ಸಾರ್ವಜನಿಕ ಹಿತೈಶಿಗಳು ಮತ್ತು ಅವರ ಸಹ ಉದ್ಯೋಗಿಗಳು ಹರ್ಷ ವ್ಯಕ್ತಪಡಿಸಿ, ಅವರಿಗೆ ಚಿತ್ತಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಜನಪದ ಹಾಡುಗಳ ಸಂಸ್ಕೃತಿಗೆ ಮಾದರಿಯಾಗಿ ರಾಜ್ಯ ಮಟ್ಟದಲ್ಲೂ ಉತ್ತಮ ಸಾಧನೆ ಮಾಡಿ ಪ್ರಥಮ ಸ್ಥಾನಗಳಿಸಿ ಕಾಲೇಜು ಹಾಗೂ ಜಿಲ್ಲೆಗೆ ಕೀರ್ತಿ ತರಲಿ ಎಂದು ಸ್ನೇಹಿತರು ಮತ್ತು ಹಿತೈಷಿಗಳು ಶುಭ ಹಾರೈಸಿದ್ದಾರೆ.

ಹಗಲಲ್ಲೂ ಉರಿಯುತ್ತಿವೆ ಉತ್ಸವಕ್ಕೆ ಹಾಕಿದ್ದ ಬೀದಿ ದೀಪಗಳು

ಕುರುಗೋಡು: ಪಟ್ಟಣದಲ್ಲಿ ಫೆ.15 ಹಾಗೂ 16ರಂದು ಉತ್ಸವದ ಅಂಗವಾಗಿ ಪ್ರಮುಖ ಬೀದಿಯಲ್ಲಿ ವಿದ್ಯುತ್ ಅಲಂಕಾರ ಮಾಡಲಾಗಿತ್ತು.



ಕಾರ್ಯಕ್ರಮ ಮುಗಿದು 5 ದಿನಗಳಾದರೂ ಬೀದಿ ದ್ವೀಪಗಳ ಬಗ್ಗೆ ಹಗಲಿನಲ್ಲೂ ಉರಿಯುತ್ತಿರುವ ಬಗ್ಗೆ ಜೆಸ್ಕಾಂ ಇಲಾಖೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸಾರ್ವಜನಿಕರ ಆರೋಪವಾಗಿದೆ. ವಿದ್ಯುತ್ ಪೋಲು ತಡೆಗೆ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಆದರೆ, ನಿರ್ವಹಣೆ ಕೊರತೆಯಿಂದಾಗಿ ದೀಪಗಳು ಹಗಲು ಹೊತ್ತಿನಲ್ಲೂ ಉರಿಯುತ್ತಿವೆ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎನ್ನುವುದು ಸಾರ್ವಜನಿಕರ ಆರೋಪ. ಮುಷ್ಟಗಟ್ಟೆ ರಸ್ತೆಯಲ್ಲಿ ಹಾಕಿದ್ದ ವಿದ್ಯುತ್ ದೀಪಗಳು ನಿರ್ವಹಣೆ ಕೊರತೆಯಿಂದಾಗಿ ಹಗಲುಹೊತ್ತಿನಲ್ಲೂ ಉರಿಯುತ್ತಿದ್ದು ಸಂಬಂಧಪಟ್ಟ ಇಲಾಖೆ ಇತ್ತ ಗಮನ ಹರಿಸಬೇಕು ಎನ್ನುವುದು ಸಾರ್ವಜನಿಕರ ಅಭಿಪ್ರಾಯ.

ಮುಖ್ಯ ಶಿಕ್ಷಕ ಬಸವರಾಜ್‌ಗೆ ಪಿಎಚ್‌ಡಿ

ವಿಜಯನಗರ: 88-ಮುದ್ಲಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮುಖ್ಯಗುರು ಬಸವರಾಜ ಕೆ. ಅವರು ಮಂಡಿಸಿದ ಸಂಶೋಧನಾ ಮಹಾ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ಘೋಷಿಸಿದೆ. ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದಡಿ ಹೊಸಪೇಟೆಯ ಡಾ.ಮೃತ್ಯುಂಜಯ ರುಮಾಲೆ ಅವರ ಮಾರ್ಗದರ್ಶನದಲ್ಲಿ ನವೋದಯ ಕಥನ ಕವನಗಳು ವಸ್ತು, ಆಶಯ, ಮತ್ತು ಆಕೃತಿ ಎಂಬ ವಿಷಯಕ್ಕೆ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ಪ್ರಕಟಿಸಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಫೆ.24 ರಂದು ಏರ್ಪಡಿಸಿರುವ ಘಟಿಕೋತ್ಸವದಲ್ಲಿ ರಾಜ್ಯಪಾಲರ ಸಮ್ಮುಖದಲ್ಲಿ ಪಿಎಚ್‌ಡಿ ಪದವಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.





ಕೊಟ್ಟೂರು: ಕೊಟ್ಟೂರೇಶ್ವರ ಕಲಾ ರಂಗ, ಕೊಟ್ಟೂರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಜಯನಗರ ಜಿಲ್ಲೆ ಹಾಗೂ ಕನ್ನಡ ಕಲಾವಿದರ ಸಂಘ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ರಂಗ ಸಂಭ್ರಮದ ಪ್ರಯುಕ್ತ ಕರ್ನಾಟಕದ ಶ್ರೇಷ್ಠ ಕಲಾವಿದರಿಂದ ನಾಟಕ ಪ್ರದರ್ಶನವನ್ನು ಕೆಬಿಆರ್ ಡ್ರಾಮಾ ಕಂಪನಿಯ ಮಾಲೀಕ ಶ್ರೀಚಿಂದೋಡಿ ಶ್ರೀಕಂಠೇಶ್ ಉದ್ಘಾಟಿಸಿ ಮಾತನಾಡಿದರು.

ಸೌಹಾರ್ದ ಸಹಕಾರಿಗಳ ಜಾಥಾಕ್ಕೆ ಚಾಲನೆ

ಸಿರುಗುಪ್ಪ: ನಗರದ ಕೆಇಬಿ ಗಣೇಶ ದೇವಸ್ಥಾನದ ಆವರಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಹಾಗೂ ತಾಲೂಕಿನ ಸೌಹಾರ್ದ ಸಹಕಾರಿಗಳ ಆಶ್ರಯದಲ್ಲಿ ಶನಿವಾರ ನಡೆದ ರಜತ ಮಹೋತ್ಸವದ ನಿಮಿತ್ತ ಸೌಹಾರ್ದ ಸಹಕಾರಿಗಳ ಜಾಥಾಕ್ಕೆ ಸಂಯುಕ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ರಾಜ್ಯ ನಿರ್ದೇಶಕ ಎಚ್.ಜಿ.ಹನುಮಂತಯ್ಯ ಚಾಲನೆ ನೀಡಿದರು. ಸೌಹಾರ್ದ ಕಾಯ್ದೆ ಜಾರಿಗೆ ಬಂದು 25 ವರ್ಷ ಆಗಿರುವುದರಿಂದ ಸಂಯುಕ್ತ ಸಹಕಾರಿಯು ಸ್ಥಳೀಯ ಸೌಹಾರ್ದ ಸಹಕಾರಿಗಳ ಸಹಯೋಗದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಹಕಾರಿಗಳ ಸದಸ್ಯರಿಗೆ ಶುಕ್ರವಾರ ಮಧ್ಯಾಹ್ನ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ಶನಿವಾರ ಬೆಳಿಗ್ಗೆ ಸಿರುಗುಪ್ಪ ನಗರದ ಕೆಇಬಿ ಗಣೇಶ ದೇವಾಸ್ಥಾನದಿಂದ ಗಾಂಧಿಯ ವೃತ್ತದ ಮೂಲಕ 'ಸೌಹಾರ್ದ ಸಹಕಾರಿಗಳ ಜಾಥ'ವು ತಾಲ್ಲೂಕು ಕ್ರೀಡಾಂಗಣವರೆಗೆ ನಡೆಯಿತು.

ಬೆಳಿಗ್ಗೆ 9 ಗಂಟೆಗೆ ಸಹಕಾರಿ ಧ್ವಜರೋಹಣ ನೆರವೇರಿತು. 10 ಗಂಟೆಗೆ ಕ್ರಿಕೆಟ್ ಕೂಟಗಳಿಗೆ ಆರಂಭಕ್ಕೆ ಚಾಲನೆ ನೀಡಿದರು. ಬಲಕುಂದಿ ಬನ್ನಿ ಮಹಾಕಾಳಿ ಸೌಹಾರ್ದ ಸಹಕಾರಿಯ ಅಧ್ಯಕ್ಷ ಚಿಂತಕುಂಟೆ ಗಾದಿಲಿಂಗನಗೌಡ, ವಿಶ್ವ ಸಿರಿ ಕೇಡಿಟ್ ಸೌಹಾರ್ದ ಸಹಕಾರಿ ನಿ. ಅಧ್ಯಕ್ಷ ವಜ್ರಗಿರಿ ನಟರಾಜ, ವಿಷ್ಣು ವಿಲಾಸ್ ಸೌಹಾರ್ದ ಸಹಕಾರಿ ನಿ. ಮುಖ್ಯಕಾರ್ಯನಿರ್ವಹಕ ಅನೀಲ್ ಕುಮಾರ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ ವೀರಶೆಟ್ಟಿ, ರಾಘವೇಂದ್ರ ಆಚಾರ್ಯ ಭಾಗವಹಿಸಿದ್ದರು.



ಸಿರುಗುಪ್ಪ: ನಗರದ ಕೆಇಬಿ ಗಣೇಶ ದೇವಸ್ಥಾನದ ಆವರಣದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಹಾಗೂ ತಾಲೂಕಿನ ಸೌಹಾರ್ದ ಸಹಕಾರಿಗಳ ಆಶ್ರಯದಲ್ಲಿ ಶನಿವಾರ ನಡೆದ ರಜತ ಮಹೋತ್ಸವದ ನಿಮಿತ್ತ ಸೌಹಾರ್ದ ಸಹಕಾರಿಗಳ ಜಾಥಾಕ್ಕೆ ಸಂಯುಕ್ತ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ರಾಜ್ಯ ನಿರ್ದೇಶಕ ಎಚ್.ಜಿ.ಹನುಮಂತಯ್ಯ ಚಾಲನೆ ನೀಡಿದರು.

ಬೆಣಕಲ್ಲು ಸರ್ಕಾರಿ ಶಾಲೆಯಲ್ಲಿ ಶತಮಾನೋತ್ಸವದ ಸಂಭ್ರಮ

ಹಳೆ ವಿದ್ಯಾರ್ಥಿಗಳ ಆದರ್ಶ ಕಲಿಕೆಗೆ ಸ್ಫೂರ್ತಿ

ಹಗರಿಬೊಮ್ಮನಹಳ್ಳಿ: ಬೆಣಕಲ್ಲು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಹಲವು ಜನ ಕಷ್ಟದ ಜೀವನದಲ್ಲಿ ವ್ಯಾಸಂಗ ಮಾಡಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಜೀವನದಲ್ಲಿ ಯಶಸ್ಸು ಕಂಡಿದ್ದಾರೆ. ತಂದೆ, ತಾಯಿಗಳಿಗೆ, ಶಾಲೆಗೆ, ಊರಿಗೆ ಹೆಸರು ಕೀರ್ತಿ ಗೌರವ ತರುವಂತಹ ಕೆಲಸ ಮಾಡಿದ್ದಾರೆ. ಅವರನ್ನೇ ಆದರ್ಶವಾಗಿಟ್ಟುಕೊಂಡು ಜೀವನದ ಗುರಿ ಮುಟ್ಟುವ ಕೆಲಸ ಇಂದಿನ ವಿದ್ಯಾರ್ಥಿಗಳು ಮಾಡುವಂತಾಗಲಿ ಎಂದು ಕ್ಷೇತ್ರದ ಶಾಸಕ ಕೆ.ನೇಮಿರಾಜ್ ನಾಯ್ಕ್ ತಿಳಿಸಿದರು.

ಶನಿವಾರ ತಾಲೂಕಿನ ಬೆಣಕಲ್ಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಬೆಣಕಲ್ಲು ಗ್ರಾಮದಲ್ಲಿ 1925ರಲ್ಲಿ ಈ ಶಾಲೆ ಪ್ರಾರಂಭದ ಬಳಿಕ 27 ವರ್ಷದ ನಂತರದಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗುತ್ತದೆ. ಬ್ರಿಟಿಷ್ ಆಳ್ವಿಕೆಯಲ್ಲಿ ಅಷ್ಟೇನೂ ಸರ್ಕಾರಿ ಸೌಲಭ್ಯಗಳಿರಲಿಲ್ಲ. ಈ ಶಾಲೆಯಲ್ಲಿ ಸಿಗುತ್ತಿದ್ದ ಗುಣಮಟ್ಟದ ಶಿಕ್ಷಣ ಉತ್ತಮ ಜ್ಞಾನ ಪಡೆದು ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ಉತ್ತಮವಾಗಿ ಸೇವೆ ಸಲ್ಲಿಸಿ ಕೆಲವರು ನಿವೃತ್ತಿಯಾಗಿದ್ದಾರೆ.

ಅವರನ್ನು ಅನುಕರಿಸಿ ವಿದ್ಯಾರ್ಥಿಗಳು ಕಲಿಕೆಯ ಸಮಯದಲ್ಲಿ ಕಾಲ ಹರಣ ಮಾಡದೇ ಮೊಬೈಲ್‌ನಲ್ಲಿ ತಲ್ಲೀನರಾಗದೆ. ಚನ್ನಾಗಿ ಓದಿ ಉತ್ತಮ ಅಂಕ ಪಡೆದು ಉನ್ನತ ಹುದ್ದೆಗಳನ್ನು ಅಲಂಕರಿಸಿ ತಂದೆ ತಾಯಿಗಳಿಗೆ ಶಾಲೆಗೆ ಊರಿಗೆ ಕೀರ್ತಿ ತರುವ ಕೆಲಸ ಮಾಡಬೇಕು. ಪೋಷಕರು ಮಕ್ಕಳ ಕೆಲಸ ಕಾರ್ಯಗಳ ಬಗ್ಗೆ ನಿಗಾವಹಿಸಿ ಸಂಸ್ಕಾರವಂತರನ್ನಾಗಿಸಿ ಎಂದರು.



> **ಬಡವರ ಮಕ್ಕಳಿಗೆ ಅನುಕೂಲ ಕಲ್ಪಿಸಲು ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆ ಕಲಿಯಲು ಎಲ್‌ಕೆಜಿ ಮತ್ತು ಯುಕೆಜಿ ಪ್ರಾರಂಭಿಸಲಾಗಿದೆ. ಬೆಣಕಲ್ಲು ಗ್ರಾಮದಲ್ಲಿ ಕೆಪಿಎಸ್ ಶಾಲೆ ತೆರೆಯುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.**
> ■ **ಕೆ.ನೇಮಿರಾಜ್ ನಾಯ್ಕ್, ಶಾಸಕ**

ಜಿ.ಬಸವರಾಜ ಪ್ರಾಸ್ತಾವಿಕವಾಗಿ ಮಾತನಾಡಿ, ಶಾಲೆಯ ಹಳೆಯ ವಿದ್ಯಾರ್ಥಿಗಳ ಮತ್ತು ಗ್ರಾಮಸ್ಥರ ಸಹಕಾರದಿಂದ ಶತಮಾನೋತ್ಸವ ಸಂಭ್ರಮವನ್ನು ಹಬ್ಬದಂತೆ ಆಚರಿಸಲಾಗುತ್ತಿರುವುದು ಸಂತಸ ತಂದಿದೆ ಎಂದರು.

ಹಂಪಸಾಗರ ನವಲಿ ಹಿರೇಮಠದ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಮತ್ತು ಕಡಲಬಾಳು ಗವಿ ಮಠದ ಮರಿಶಾಂತ ವೀರ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು.

ವಿವಿಧ ವಾದ್ಯ ಮೇಳದೊಂದಿಗೆ ಶಾರದಾಂಬೆಯ ಭಾವಚಿತ್ರದ ಮೆರವಣಿಗೆ ಗ್ರಾಮದ ಪ್ರಮುಖ ರಸ್ತೆಯಲ್ಲಿ ಅದ್ದೂರಿಯಾಗಿ ನಡೆಯಿತು. ಹಳೆಯ ವಿದ್ಯಾರ್ಥಿಗಳು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ಮುಖಂಡರಾದ ಬಾದಾಮಿ ಮೃತ್ಯುಂಜಯ ಕನ್ನೇಹಳ್ಳಿ ಚಂದ್ರಶೇಖರ ಬ್ಯಾಟಿ ನಾಗರಾಜ ಸಿದ್ದರಾಜು ಕನಕಪ್ಪ, ಪ್ರಕಾಶ್, ತಳವಾರ. ಹನುಮಂತಪ್ಪ,ಜೆಸಿಬಿ ಮಾಬುಸಾಬು, ಕೋವಿ ಸೋಮಶೇಖರ, ನಿಂಗಪ್ಪ, ಎಚ್.ಸಣ್ಣ ಪ್ರಕಾಶ್, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಸ್.ಪ್ರಭಾಕರ ಸಮನ್ವಯ ಅಧಿಕಾರಿ ಮಲ್ಲಿಕಾರ್ಜುನ ಶಿಕ್ಷಣ ಸಂಯೋಜಕ ಗುರುಬಸವರಾಜ ಡಾ.ಪ್ರವೀಣ್ ಕುಮಾರ್, ಮುಖ್ಯ ಶಿಕ್ಷಕ ಹುಸೇನ್ ಸಾಬ್, ಗ್ರಾಪಂ ನಿಕಟ ಪೂರ್ವ ಅಧ್ಯಕ್ಷೆ ಬಿ.ಟಿ.ಲಕ್ಷ್ಮವ್ವ, ಎಸ್‌ಡಿಎಂಸಿ ಅಧ್ಯಕ್ಷ ಗುರು ಬಸವರಾಜ, ಪಿಡಿಒ ಚನ್ನ ನಾಯ್ಕ್, ಸಿಬ್ಬಂದಿ ಬಿ.ಟಿ.ಲಕ್ಷ್ಮಣ, ಎಸ್‌ಡಿಎಂಸಿ ಸರ್ವ ಸದಸ್ಯರು ನಿವೃತ್ತ ಶಿಕ್ಷಕರು, ಹಳೆಯ ವಿದ್ಯಾರ್ಥಿಗಳು ಬೆಣಕಲ್ಲು ಗ್ರಾಮದ ಮಹಿಳೆಯರು ಮಕ್ಕಳು ಹಿರಿಯ ನಾಗರಿಕರು ಯುವಕರು ಪಾಲ್ಗೊಂಡಿದ್ದರು.

ಶಾರದಮ್ಮ ಸೋಮನಾಥ ಸಂಗಡಿಗರು ಪ್ರಾರ್ಥಿಸಿದರು. ಶಾಲಾ ಶತಮಾನೋತ್ಸವ ಸಮಿತಿ ಅಧ್ಯಕ್ಷಕೆ.ಕೊಟ್ರೇಶಪ್ಪಸ್ವಾಗತಿಸಿದರು. ಕೆವಿ ಲೋಕೇಶ್, ಎಚ್.ಬಸವರಾಜ ಕೆ.ಬಸವರಾಜ ನಿರ್ವಹಿಸಿದರು.


ಕೊಟ್ಟೂರು ಎಪಿಎಂಸಿಗೆ ಅನುದಾನ ನೀಡಿ

ಕೊಟ್ಟೂರು: ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಆರ್‌ಐಡಿಎಫ್ ಯೋಜನೆಯ ಅಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೊಟ್ಟೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಐ.ಎಂ.ದಾರುಕೇಶ್ ಹಾಗೂ ಎಪಿಎಂಸಿ ಅಧ್ಯಕ್ಷ ಎ.ನಂಜಪ್ಪ ನೇತೃತ್ವದಲ್ಲಿ ಕರ್ನಾಟಕ ಸರ್ಕಾರದ ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರನ್ನು ಬೆಂಗಳೂರಿನ ಶಾಸಕರ ಭವನದ ಸಚಿವಾಲಯದಲ್ಲಿ ಭೇಟಿಯಾಗಿ ಮನವಿ ಸಲ್ಲಿಸಲಾಯಿತು.

ಕೊಟ್ಟೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಪ್ರಾಂಗಣದಲ್ಲಿ1000 ಎಂ.ಟಿ.ಸಾಮರ್ಥ್ಯದ ಗೋದಾಮು, ಸಿ ಬ್ಲಾಕ್‌ನಲ್ಲಿ ಎರಡು ಸಂಖ್ಯೆಯ ಮುಚ್ಚು ಹರಾಜು ಕಟ್ಟೆ ಮಾರುಕಟ್ಟೆ ಪ್ರಾಂಗಣದಲ್ಲಿ ಚರಂಡಿ ನಿರ್ಮಿಸುವುದು, ರಸ್ತೆಗಳಿಗೆ ಸಿ.ಸಿ.ಪೇವ್ ಮೆಂಟ್ ಮಾಡುವುದು, ಎರಡು ಶುದ್ಧ ಕುಡಿಯುವ ನೀರಿನ ಘಟಕ, ಏರಿಯಲ್ ಬಂಡಲ್ಡ್ ಕೇಬಲ್ ಅಳವಡಿಸಿಕೊಂಡು ವಿದ್ಯುದೀಕರಣ ಮಾಡುವುದು, ಮಾರುಕಟ್ಟೆ ಪ್ರಾಂಗಣದಲ್ಲಿ ಶ್ರಮಿಕ ಭವನ ನಿರ್ಮಾಣ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿ ಬರುವ ಕೆ.ಅಯ್ಯನಹಳ್ಳಿ, ರಾಂಪುರ, ದೂಪದಹಳ್ಳಿ, ಸಂಗಮೇಶ್ವರ, ಅಲಬೂರು, ತೂಲಹಳ್ಳಿ ಗ್ರಾಮಗಳಲ್ಲಿ 1000 ಎಂ.ಟಿ.ಸಾಮರ್ಥ್ಯದ ಗೋದಾಮುಗಳ ನಿರ್ಮಾಣ ಮಾಡಲು ಮನವಿ ಸಲ್ಲಿಸಲಾಯಿತು.

ಕೊಟ್ಟೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯಪ್ರಾಂಗಣದಲ್ಲಿ ಮೆಕ್ಕೆಜೋಳ ಆವಕವು ಹೆಚ್ಚಾಗಿ ಬರುತ್ತಿದ್ದು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 80 ಎಂ.ಟಿ.ಸಾಮರ್ಥ್ಯದ ವೇ ಬ್ರಿಡ್ಜ್ ಸ್ಥಾಪಿಸುವುದು ಅವಶ್ಯಕವಾಗಿರುವುದರಿಂದ ಸಮಿತಿಯ ನಿಧಿಯಲ್ಲಿ 303 ಲಕ್ಷಗಳಿದ್ದು 2024-25 ಹಾಗೂ 25-26ನೇ ಸಾಲಿನಲ್ಲಿ ವಾರ್ಷಿಕ ಕ್ರಿಯಾ ಯೋಜನೆ ಅಡಿಯಲ್ಲಿ ಮಂಜೂರಾದ ಅಭಿವೃದ್ಧಿ ಕಾಮಗಾರಿಗಳಿಗೆ 318.33 ಲಕ್ಷಗಳ ಅವಶ್ಯಕತೆ ಇದ್ದು ಉಳಿದ ಮೊತ್ತವನ್ನು ಕೃಷಿ ಮಾರಾಟ ಮಂಡಳಿಯ ಮಾರುಕಟ್ಟೆ ಅಭಿವೃದ್ಧಿ ನಿಧಿಯಿಂದ ರೂಪಾಯಿ 50 ಲಕ್ಷಗಳ ಅನುದಾನವನ್ನು ಒದಗಿಸಬೇಕೆಂದು ಮನವಿ ಸಲ್ಲಿಸಲಾಯಿತು.

ತಾಲೂಕು ಗ್ಯಾರಂಟಿ ಅನುಷ್ಠಾನಗಳ ಸಮಿತಿಯ ಅಧ್ಯಕ್ಷರಾದ ಅನಿಲ್ ಕುಮಾರ್ ಹೊಸಮನಿ, ಎಪಿಎಂಸಿಯ ಸದಸ್ಯರುಗಳಾದ ಚಿರಬಿ ಕೊಟ್ರೇಶ್, ಬಡಿಗೇರ್ ಕೊಟ್ರೇಶ್, ಸಂಗಮೇಶ್ವರದ ನಾಗರಾಜ ಹಾಜರಿದ್ದರು.



ಜಗ್ಗಜಟ್ಟಿ ಶ್ರೀವಿಶ್ವಾರಾಧ್ಯರ ರಥೋತ್ಸವ ಇಂದು

ಯಾದಗಿರಿ: ಅನುಗ್ರಹ ಕ್ಷೇತ್ರ ಅಬ್ಬೆತುಮಕೂರಿನ ಸಿದ್ಧಿ ಪುರುಷ ಶ್ರೀವಿಶ್ವಾರಾಧ್ಯರ ರಥೋತ್ಸವ ಭಾನುವಾರ ಸಂಜೆ 6:15ಕ್ಕೆ ಸಡಗರದಿಂದ ನಡೆಯಲಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ಭಾನುವಾರ ಬೆಳಗ್ಗೆ ಸೂರ್ಯೋದಯ ವಾಗುತ್ತಲೇ ವಿಶ್ವರಾಧ್ಯರ ಕರ್ತೃ ಗದ್ದುಗೆಗೆ ಗೋರಟಾ ಸಂಗೀತ ಬಳಗದವರಿಂದ ವಿಶೇಷ ರುದ್ರಾಭಿಷೇಕ ಜರುಗುವುದು. ನಂತರ ದುಧನಿಯ ಮೇತ್ರೆ ಕುಟುಂಬದವರಿಂದ ರಥೋತ್ಸವ ಮಹಾಪೂಜೆ ಮತ್ತು ರಥಾಂಗ ಹೋಮ ನಡೆಯುವುದು. ತರುವಾಯ ಶ್ರೀಗಳು ತೇರಿಗೆ ವಿಶೇಷ ಪೂಜೆಯನ್ನು ನೆರವೇರಿಸಿ, ಕಳಸವನ್ನು ಆರೋಹಣ ಮಾಡುವರು. ಸಂಜೆ 6-15ಕ್ಕೆವಿಶ್ವಾರಾಧ್ಯರ ರಥೋತ್ಸವಜರುಗುವುದು. ನಂತರ ರಾತ್ರಿ 8ಕ್ಕೆ ಮಾನವ ಧರ್ಮ ಸಮಾವೇಶ ಜರುಗುವುದು.

ಸ್ವಾಮೀಜಿಗಳ ದಂಡು: ಕೊಪ್ಪಳದ ಗವಿಸಿದ್ದೇಶ್ವರ ಮಹಾಸಂಸ್ಥಾನ ಮಠದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು, ಬೆಂಗಳೂರಿನ ವಿಭೂತಿ ಪೂರ ಸಂಸ್ಥಾನ ಮಠದ ಡಾ. ಮಹಾಂತಲಿಂಗ ಶಿವಾಚಾರ್ಯರು, ಡಾ.ಶಿವಾನಂದ ಮಹಾ ಸ್ವಾಮಿಗಳು ಸೊನ್ನ, ಮುನೀಂದ್ರ ಸ್ವಾಮಿಜಿ ಹಲಕರ್ಟಿ, ಶಾಂತಮಲ್ಲಿಕಾರ್ಜುನ ಸ್ವಾಮಿಜಿ ಹೆಡಗಿಮದ್ರಾ, ಸೂಗೂರೇಶ್ವರ ಸ್ವಾಮೀಜಿ ಶಹಾಪೂರ, ಮಳಖೇಡದ ಕಾರ್ತಿಕೇಶ್ವರ ಶಿವಾಚಾರ್ಯರು, ಶಿವಮೂರ್ತಿ ಸ್ವಾಮೀಜಿ ದೇವಾಪೂರ,ಹೊನ್ನಕೀರಣಗಿಯಚಂದ್ರಗುಂಡ ಶಿವಾಚಾರ್ಯರು, ಕುಕನೂರಿನ ಚನ್ನಮಲ್ಲ ಶಿವಾಚಾರ್ಯರು, ಗುಡುಗುಂಟಿಯ ಅಭಿವನ ಗಜದಂಡ ಶಿವಾಚಾರ್ಯರು, ಗೋಲಪಲ್ಲಿಯ ವರದಾನೇಶ್ವರ ಸ್ವಾಮಿಗಳು ಮುಂತಾದ ಪೂಜ್ಯರು ಪಾಲ್ಗೊಳ್ಳುವರು.

ರಾಜಕೀಯ ಮುಖಂಡರು: ಕಾನೂನು ಸಚಿವ ಎಚ್.ಕೆ ಪಾಟೀಲ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಣ್ಣ ಕೈಗಾರಿಕೆ ಸಚಿವ ಶರಣಪ್ಪಬಸಪ್ಪಗೌಡ ದರ್ಶಾನಪೂರ, ವೈದ್ಯಕೀಯ ಸಚಿವ ಡಾ ಶರಣಪ್ರಕಾಶ ಪಾಟೀಲ, ಅರಣ್ಯ ಸಚಿವ ಈಶ್ವರ್ ಖಂಡ್ರೆ, ಸಣ್ಣ ನೀರಾವರಿ ಎನ್.ಎಸ್ ಭೋಸರಾಜ ಮತ್ತು ಕ.ಕ.ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ ಅಜಯಸಿಂಗ, ಶಾಸಕರಾದ ಚೆನ್ನಾರೆಡ್ಡಿ ಪಾಟೀಲ ತುನ್ನೂರು, ಶರಣಗೌಡ ಕಂದಕೂರು, ರಾಜಾ ವೇಣೂಗೋಪಾಲ ನಾಯಕ, ಬಸವರಾಜ ಮತ್ತಿಮೂಡ, ಅಲ್ಲಮಪ್ರಭು ಪಾಟೀಲ, ಶಿವರಾಜ ಪಾಟೀಲ ಬಸನಗೌಡ ದದ್ದಲ್, ಬಿ.ಜಿ.ಪಾಟೀಲ, ಶಶಿಲ್ ನಮೋಶಿ ಸೇರಿದಂತೆ ಆನೇಕ ಗಣ್ಯರು ಪಾಲ್ಗೊಳ್ಳುವರು.



ವಿವಿಧ ಕಾಮಗಾರಿಗಳಿಗೆ ಶಾಸಕ ಭರತ್ ರೆಡ್ಡಿ ಭೂಮಿಪೂಜೆ

ಬಳ್ಳಾರಿ: ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು, ಶನಿವಾರ ನಗರದ ವಿವಿಧ ವಾರ್ಡುಗಳಲ್ಲಿ ನಾನಾ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದರು.



ನಗರದ 23ನೇ ವಾರ್ಡಿನ ಮಹಾ ನಂದಿಕೊಟ್ಟಂ ಸರ್ಕಾರಿ ಪ್ರಾಥಮಿಕ ಶಾಲೆಯನ್ನು ಅಂದಾಜು 1.32 ಕೋಟಿ ರೂ.ಗಳ ವೆಚ್ಚದಲ್ಲಿ ಮರು ನಿರ್ಮಾಣ ಮಾಡಲಾಗಿದ್ದು, 5 ನೂತನ ಕೊಠಡಿಗಳನ್ನು ಉದ್ಘಾಟಿಸಿದರು. 5 ಕೊಠಡಿಗಳು, ಒಂದು ಅಡುಗೆ ಕೋಣೆ, ಶೌಚಾಲಯ ಹಾಗೂ ಕಾಂಪೌಂಡ್, ಪೇವರ್ಸ್ ಅಳವಡಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸುಸಜ್ಜಿತವಾಗಿ ನಿರ್ಮಿಸಲಾಗಿದೆ.

ಉದ್ಘಾಟನಾ ಸಮಾರಂಭದಲ್ಲಿ ಮೇಯರ್ ಗಾದೆಪ್ಪ, ಆಯುಕ್ತರಾದ ಮಂಜು ನಾಥ್, ವಾರ್ಡ್ ಪ್ರಮುಖರಾದ ಸೋಮಶೇಖರ್, ಗೌತಮ್, ಬ್ರಹ್ಮಯ್ಯ, ಹುಲಿಗೆಪ್ಪ, ಕೆಂಚಪ್ಪ, ಮಾಜಿ ಮೇಯರ್ ಎಂ.ರಾಜೇಶ್ವರಿ, ಕಾಂಗ್ರೆಸ್ ಮುಖಂಡರಾದ ಸುಬ್ಬರಾಯುಡು, ಪರಶುರಾಮುಡು, ಥಿಯೇಟರ್ ಶಿವು ಇತರರಿದ್ದರು. ನಂತರ ನಗರದ 35ನೇ ವಾರ್ಡ್ ವ್ಯಾಪ್ತಿಯ ರಾಜೇಶ್ವರಿ ನಗರದಲ್ಲಿ ಅಂದಾಜು ವೆಚ್ಚ 20 ಲಕ್ಷ ರೂ.ಗಳಲ್ಲಿ ಮೇದಾರ ಸಮುದಾಯ ಭವನದ ನಿರ್ಮಾಣ ಕಾಮಗಾರಿ ಭೂಮಿ ಪೂಜೆ ನೆರವೇರಿಸಿದರು. ವಾರ್ಡಿನ ಸದಸ್ಯ ಮಿಂಚು ಶ್ರೀನಿವಾಸ, ಪಾಲಿಕೆಯ ಸದಸ್ಯ ಕುಬೇರಾ, ಮಾಜಿ ಮೇಯರ್ ರಾಜೇಶ್ವರಿ, ಮುಖಂಡರಾದ ಎಲ್.ಮಾರೆಣ್ಣ, ಶೇಖಣ್ಣ, ರಾಮಾಂಜನೇಯ, ದಾನಪ್ಪ, ಬಾನಕ್ಕ, ಪ್ರಸಾದ್, ಮಂಜು, ಶ್ಯಾಮ್, ದೇಗಲಪಾಡು ನಾರಾಯಣ ಸೇರಿದಂತೆ ಇತರರಿದ್ದರು.

ನಂತರ ವಾರ್ಡ್ ಸಂಖ್ಯೆ 3ರ ಭತ್ರಿ ಪ್ರದೇಶದಲ್ಲಿ 20 ಲಕ್ಷ ರೂ.ಗಳ ವೆಚ್ಚದಲ್ಲಿ ಅಂಗನವಾಡಿ ಕೇಂದ್ರ ನಂ.1ರ ನಿರ್ಮಾಣ ಕಾಮಗಾರಿಗೆ ಶಾಸಕ ನಾರಾ ಭರತ್ ರೆಡ್ಡಿ ಅವರು ಭೂಮಿಪೂಜೆ ನೆರವೇರಿಸಿದರು.

ವಾರ್ಡಿನ ಸದಸ್ಯೆ, ಮಾಜಿ ಮೇಯರ್ ಎಂ.ರಾಜೇಶ್ವರಿ ಸುಬ್ಬರಾಯಡು, ಕಾಂಗ್ರೆಸ್ ಮುಖಂಡರಾದ ವಿಷ್ಣು ಬೋಯ ಪಾಟಿ, ಪರಶುರಾಮುಡು, ಸುಬ್ಬರಾ ಯುಡು, ಭತ್ರಿ ಮಂಜು, ಸೋಮಪ್ಪ ಇತರರಿದ್ದರು.

ಮಲ್ಲಿಗೆ ನಾಡಿನಲ್ಲಿ ಅರಳಿದ ಸಂಗೀತ ಕಲಾವಿದೆ ಪ್ರತಿಭೆ

ಹೂವಿನಹಡಗಲಿ: ಇತ್ತೀಚಿಗೆ ವಿಜಯನಗರ ಜಿಲ್ಲೆ ಹಂಪಿಯಲ್ಲಿ ಆಯೋಜಿಸಿದ್ದ ಐತಿಹಾಸಿಕ ಹಂಪಿ ಉತ್ಸವ-2026ರ ಸಮಾರಂಭದಲ್ಲಿ ವಿರೂಪಾಕ್ಷೇಶ್ವರ ವೇದಿಕೆಯಲ್ಲಿ ಎಸ್.ಜಾನಕಮ್ಮ ಎಂದೇ ಖ್ಯಾತಿ ಪಡೆದಿರುವ ಪಾರಿ ಕಾವ್ಯ ಅವರು 'ನೀ ಸಿಗದೇ ಬಾಳೆಂಬ ಎಂಬ ಸುಗಮ ಸಂಗೀತದಲ್ಲಿ ಅದ್ದೂರಿ ಪ್ರದರ್ಶನ ತೋರಿ ಜನಮನ ಸೂರೆಗೊಂಡಿದ್ದಾರೆ.



ದುರದೃಷ್ಟ ಎಂದರೆ ಅವರು ಹುಟ್ಟಿನಿಂದಲೇ ಅಂಧರು. ಆದರೆ ಬಡತನ ಎಂಬುವುದು ಅವರಿಗೆ ಸ್ವಲ್ಪ ದಿನಗಳಕಾಲ ಕಷ್ಟದ ಸನ್ನಿವೇಶಗಳು ಎದುರಾದವು ಇವರು ವಿದ್ಯಾಭ್ಯಾಸವನ್ನು ಗದಗ ಜಿಲ್ಲೆಯಲ್ಲಿ ಗಾನಯೋಗಿ ಶ್ರೀಪಂಡಿತ್ ಪುಟ್ಟರಾಜ ಗವಾಯಿಗಳ ಇವರ ಸಂಗೀತ ಪಾಠಶಾಲೆಯಲ್ಲಿ ತಮ್ಮ ಸಂಗೀತ ಶಿಕ್ಷಣವನ್ನು ಕಲಿಯುತ್ತಿದ್ದಾರೆ. ಇವರ ಸಾಧನೆಗೆ ತಾಯಿ ಪಾರಿ ಶಾರದ ಬಸವರಾಜ ಇವರು ಕಾವ್ಯ ಇವರ ಯೋಗಕ್ಷೇಮಕ್ಕಾಗಿ ಹಗಲಿರುಳು ಶ್ರಮವಹಿಸುತ್ತಿದ್ದಾರೆ

ಅವರು ದೈಹಿಕವಾಗಿ ಅಂಧಗಾಯಕಿ ಆದರೂ ಕೂಡ ಇವರ ಧ್ವನಿಯಲ್ಲಿ (ಕಂಠ ಸಿರಿಯಲ್ಲಿ) ಸಂಗೀತ ಕೇಳಲು ಸಂಗೀತ ಪ್ರೇಮಿಗಳು, ಕಲಾ ರಸಿಕರು, ಜನ ಸಾಮಾನ್ಯರು, ಆಸಕ್ತಿ ವಹಿಸಿ ಮುಗಿಬಿದ್ದು ಇವರ ಸಂಗೀತವನ್ನು ಆಲಿಸುತ್ತಾರೆ. ಸಾಕಷ್ಟು ಅನುಭವವುಳ್ಳ ಅವರಿಗೆ ಮುಂದಿನ ದಿನಗಳಲ್ಲಿ ಇನ್ನೂ ದೊಡ್ಡಮಟ್ಟದ ವೇದಿಕೆಗಳು ಸಿಗಲಿ ಎಂದು ಅಭಿಮಾನಿಗಳ ಹಾರೈಕೆಯಾಗಿದೆ.

ಇಂಡಸ್ಟ್ರಿಯಲ್ ಕಾರಿಡಾರ್‌ಗೆ ಸಾವಿರ ಎಕರೆ ಮೀಸಲು: ಶಾಸಕ

ವಿಜಯನಗರ: ಜಿಲ್ಲೆಯಲ್ಲಿ ಇಂಡಸ್ಟ್ರಿಯಲ್ ಕಾರಿಡಾರ್ ಸ್ಥಾಪನೆಗೆ ಯೋಜನೆ ರೂಪಿಸಲಾಗಿದ್ದು, ಅದಕ್ಕಾಗಿ ಈಗಾಗಲೇ ಮರಿಯಮ್ಮನಹಳ್ಳಿ ವ್ಯಾಪ್ತಿಯಲ್ಲಿ 1 ಸಾವಿರ ಎಕರೆ ಸ್ಥಳ ಗುರುತಿಸಲಾಗಿದೆ. ಇದರಿಂದ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದೆ ಎಂದು ಶಾಸಕ ಎಚ್.ಆರ್. ಗವಿಯಪ್ಪ ಹೇಳಿದರು.

ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಹಾಗೂ ವಿಜಯನಗರ ಕಾಲೇಜು ರೈಟ್ ವೇ ಸಲ್ಯೂಷನ್ಸ್ ವತಿಯಿಂದ ಶನಿವಾರ ಹೊಸಪೇಟೆಯ ವಿಜಯನಗರ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಮೆಗಾ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಇಂತಹ ಕಾರಿಡಾರ್ ಯೋಜನೆಗಳ ಸ್ಥಾಪನೆಗೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಆದರೆ ದೂರದೃಷ್ಟಿಯಿಂದ ತುಂಬಾ ಅನುಕೂಲವಾಗಲಿದೆ. ಪ್ರತಿಷ್ಠಿತ ಕಂಪನಿಯೊಂದು ಜಿಲ್ಲೆಯಲ್ಲಿ ಉದ್ಯಮ ಸ್ಥಾಪಿಸಲು ಉತ್ಸುಕತೆ ತೋರುತ್ತಿದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾವುದು ಎಂದರು.



ಜಿಲ್ಲೆಯು ಪ್ರವಾಸೋದ್ಯಮ ತಾಣವಾಗಿದ್ದು ಮುಂದಿನ ದಿನಗಳಲ್ಲಿ ಬೃಹತ್ತಾಗಿ ಬೆಳೆಯುವ ಸಂಭವ ಹೆಚ್ಚಿದೆ. ಹಾಗೆಯೇ ಜಿಲ್ಲೆಯಲ್ಲಿ ವಸತಿ ಗೃಹಗಳ ಕೊರತೆ ಇದೆ. ಆದ್ದರಿಂದ ಜಿಲ್ಲೆಯಲ್ಲಿ ವಿವಿಧೆಡೆ 150 ರಿಂದ 200 ಎಕರೆ ಸರ್ಕಾರಿ ಸ್ಥಳ ಗುರುತಿಸಿ ಸುಸಜ್ಜಿತವಾದ ಗೆಸ್ಟ್‌ಹೌಸ್ ನಿರ್ಮಿಸಿ ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಲು ಯೋಜನೆ ರೂಪಿಸಲಾಗಿದೆ. ಅಖಂಡ ಬಳ್ಳಾರಿ ಜಿಲ್ಲೆಯಲ್ಲಿರುವ 64 ಸಣ್ಣ ಮಧ್ಯಮ ಮತ್ತು ಬೃಹತ್ ಸ್ಟೀಲ್ ಕೈಗಾರಿಕೆಗಳಲ್ಲಿ 1 ಲಕ್ಷ ಹಾಗೂ ಜಿಂದಾಲ್ ಕೈಗಾರಿಕಾ ಪ್ರದೇಶದಲ್ಲಿ 35 ರಿಂದ 40 ಸಾವಿರ ಉದ್ಯೋಗಗಳು ಸೃಷ್ಟಿಯಾಗಿದೆ. ಹೀಗೆ ಕಿರ್ಲೋಸ್ಕರ್, ಕಲ್ಯಾಣಿ ಕೈಗಾರಿಕೆಗಳು ಸೇರಿ 50 ಸಾವಿರ ಉದ್ಯೋಗ ಸೃಷ್ಟಿಯಾಗಲಿವೆ ಎಂದು ತಿಳಿಸಿದರು.

ಡಿಸಿ ಕವಿತಾ ಎಸ್.ಮನ್ನಿಕೇರಿ ಮಾತನಾಡಿದರು. ಜಿಪಂ ಸಿಇಒ ನೋಂಗ್ಜಾಯ್ ಮಹ್ಮದ್ ಅಲಿ ಅಕ್ರಂ ಷಾ ಸ್ವಾಗತಿಸಿದರು.

ಜಿಲ್ಲಾ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಚ್.ಎನ್.ಎಫ್.ಇಮಾಮ್ ನಿಯಾಜಿ, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ವಿಜಯನಗರ ಕಾಲೇಜು ಪ್ರಾಂಶುಪಾ ಮಹಾಂತೇಶ್ ಆರಾಧ್ಯಮಠ, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಅಶ್ವಿನ್ ಕೊತ್ತಂಬರಿ, ವಿವಿಧ ಕಂಪನಿಗಳ ಮುಖ್ಯಸ್ಥರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಇದ್ದರು.

> **ಶಾರ್ಟ್ ಲಿಸ್ಟ್‌ನಲ್ಲಿ 2800 ಜನರು**
> ಮೆಗಾ ಉದ್ಯೋಗ ಮೇಳದಲ್ಲಿ 80ಕ್ಕೂ ಹೆಚ್ಚು ಉದ್ಯೋಗದಾತ ಕಂಪನಿಗಳು ಪಾಲ್ಗೊಂಡಿದ್ದು, 7 ಸಾವಿರಕ್ಕಿಂತ ಹೆಚ್ಚು ಉದ್ಯೋಗಾಕಾಂಕ್ಷಿಗಳು ಹಾಜರಾಗಿದ್ದರು. ವಿವಿಧ ಕಂಪನಿಗಳ ಶಾರ್ಟ್ ಲಿಸ್ಟ್‌ನಲ್ಲಿ 2800 ಜನರಿದ್ದು, ನೇಮಕಾತಿ ಆದೇಶ ನೀಡುವುದಷ್ಟೇ ಬಾಕಿಯಿದೆ.

ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಿ: ಶಾಸಕ

ಕುರುಗೋಡು: ಅಪರೂಪವಾಗಿರುವ ಮನುಷ್ಯ ಜನ್ಮದಲ್ಲಿ ನಾವು ಜನಿಸಿರುವುದರಿಂದ ಮಕ್ಕಳಿಗೆ ಉತ್ತಮ ಶಿಕ್ಷಣ, ಪರಿಸರ ಪ್ರೇಮ ಹಾಗೂ ಸಂಸ್ಕಾರ ನೀಡಬೇಕು. ಪಾಲಕರಿಗೆ ಏನೇ ಕಷ್ಟ ಬರಲಿ ಮಕ್ಕಳಿಗೆ ಶಿಕ್ಷಣ ನೀಡಿದರೆ ಅವರು ಸ್ವಾಭಿಮಾನಿಗಳಾಗಿ ಬದಕಲು ಕಲೆಯುತ್ತಾರೆ ಎಂದು ಶಾಸಕ ಜೆ.ಎನ್. ಗಣೇಶ್ ಹೇಳಿದರು.

ತಾಲೂಕಿನ ಎಚ್.ವೀರಾಪುರ ಗ್ರಾಮದ ಶ್ರೀಕಲ್ಲೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಕಲಬುರಗಿ ಶರಣಬಸವೇಶ್ವರರ ಮಹಾತ್ಮೆ 50ನೇ ವರ್ಷದ ಪುರಾಣದಲ್ಲಿ ಶುಕ್ರವಾರ ರಾತ್ರಿ ಶರಣಬಸವೇಶ್ವರ ಮತ್ತು ಮಹಾದೇವಿ ಅಮ್ಮನವರ ಅದ್ದೂರಿ ಮದುವೆ ಸಮಾರಂಭ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಪಾಲಕರು ಆಸ್ತಿ ಗಳಿಸಲು ಯೋಚಿಸದೆ ಮಕ್ಕಳನ್ನು ಆಸ್ತಿಗಳನ್ನಾಗಿ ಮಾಡಿ. ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ.



ಶಾಲೆಗಳು ಶಿಕ್ಷಣ ಕಲಿಸುತ್ತದೆ, ಪಾಲಕರು ಸಂಸ್ಕಾರ ಕಲಿಸಬೇಕು. ಮಕ್ಕಳು ಹೇಳಿದ್ದನ್ನು ಕೇಳುವದಿಲ್ಲ ಮಾಡಿದ್ದನ್ನು ಕಲಿಯುತ್ತವೆ. ಆದ್ದರಿಂದ ಮನೆಯಿಂದ ಸಂಸ್ಕಾರ ಆರಂಭವಾಬೇಕು. ಇಂದಿನ ದಿನಗಳಲ್ಲಿ ಕೃಷಿ ಉತ್ತಮ, ವ್ಯಾಪಾರ ಮಧ್ಯಮ, ನೌಕರಿ ಕನಿಷ್ಠವಾಗಿದೆ ಎಂದು ಹೇಳಿದರು.

ಕಲ್ಲೇಶ್ವರ ದೇವಸ್ಥಾನ ಆವರಣದಲ್ಲಿ ರಾತ್ರಿ ಜರುಗಿದ ಮದುವೆಯ ವಧು ಮಹಾದೇವಿಯ ಕಡೆಯವರಾಗಿ ಶರಣ ದಂಪತಿಗಳಾದ ವನಿತಾ ನಾಗಲಿಂಗಸ್ವಾಮಿ ದಂಪತಿಗಳು ವಹಿಸಿಕೊಂಡರೆ, ವರನ ಕಡೆಯವರಾಗಿ ಹಿರೇಮಠದ ಶಾರದ ಮಂಜುನಾಥಸ್ವಾಮಿ ದಂಪತಿಗಳು ಮುಂದೇ ನಿಂತು ಮದುವೆ ಕಾರ್ಯಗಳನ್ನು ನಡೆಸಿಕೊಟ್ಟರು.

ಜೆ.ಎನ್.ಶ್ರೀದೇವಿ ಶಾಸಕ ಜೆ.ಎನ್. ಗಣೇಶ್ ವಿವಾಹ ಪೂಜೆಯಲ್ಲಿ ಭಾಗವಹಿಸದರು. ನಾನಾ ಬಾಜಾ ಭಜಂತ್ರಿಗಳೊಂದಿಗೆ ವಧುವಿನ ಮನೆಗೆ ತೆರಳಿ ವಧುವಿನ ಜತೆಗೆ ಬೀಗರನ್ನು ಮದುವೆ ಮಂಟಪಕ್ಕೆ ಕರೆತರಲಾಯಿತು.

ವಿಳ್ಯೆ ಎಲೆ, ಹಂಚುವ ಮೂಲಕ ಬೀಗ, ಬೀಗರು ಪರಸ್ಪರ ಸಿಹಿ ಹಂಚಿಕೊಂಡರು. ಮದುವೆಗೆ ಆಗಮಿಸಿದ ಮಹಿಳೆಯರು ಮದುವೆಯ ಪದಗಳನ್ನು ಹಾಡುವ ಮೂಲಕ ಉಡಿತುಂಬುವ ಕಾರ್ಯಕ್ರಮ ಜರುಗಿತು. ನಂತರ ವಧು ವರರಿಗೆ ಸುರಿಗೆ ಸುತ್ತಿ ಎಣ್ಣೆ ಅರಿಶಿಣ ಹಚ್ಚಿ ನೀರೆರೆಯುವ ಮೂಲಕ ಹಸೆ ಮಣೆಗೆ ಕರೆತಂದು ಮಾಂಗಲ್ಯಧಾರಣೆ ಮತ್ತು ಆರತಕ್ಷತೆ ನೆರವೇರಿಸಲಾಯಿತು.